ಭಾರತದ ಗೌರವ

ಭಾಗ- ೨

ಪ್ರಕಾಶನ ವಿಭಾಗ

ಭಾರತದ ಗೌರವ

ಭಾಗ - ೨

ಭಾರತ ಸರಕಾರದ
ಸಮಾಚಾರ ಮತ್ತು ಪ್ರಸಾರ ಸಚಿವಾಲಯದ
ಪ್ರಕಾಶನ ವಿಭಾಗ

ಜೇಷ್ಠ ೧೮೮೬ (ಜೂನ್ ೧೯೬೪)
Jeshtha 1886 (June 1964)

Bharat ke Gaurav Part II
(Kannada)

ಬೆಲೆ ರೂ. ೨.೨೫ ನಯೆ ಪೈಸೆ.
Price Rs. 2·25 nP.

ಪ್ರಕಾಶಕರು :
ಭಾರತ ಸರಕಾರದ ಪ್ರಕಾಶನ ವಿಭಾಗದ
ಮುಖ್ಯಾಧಿಕಾರಿಗಳು

ಮುದ್ರಕರು :
ಕೃಷ್ಣ ಪ್ರಿಂಟಿಂಗ್ ವರ್ಕ್ಸ್, ಕರೋಲ್ ಬಾಗ್, ಹೊಸ ದಿಲ್ಲಿ–೫

ವಿಷಯ ಸೂಚಿ

ಮುನ್ನುಡಿ

ರಾಷ್ಟ್ರವೊಂದರ ನಿರ್ಮಾಣವು ಅತ್ಯಂತ ದೀರ್ಘಕಾಲದ ಪ್ರಕ್ರಿಯೆ ಮತ್ತು ಅದರಲ್ಲಿ ಭಿನ್ನ ಭಿನ್ನ ಅಂಶಗಳು ಅಡಕವಾಗಿರುತ್ತವೆ ಎಂದು ಮೊದಲನೆಯ ಭಾಗದ ಮುನ್ನುಡಿಯಲ್ಲಿ ಹೇಳಲಾಗಿದೆ. ಈ ಬಗ್ಗೆ ರಾಷ್ಟ್ರವನ್ನು ವ್ಯಕ್ತಿಯೊಡನೆ ಹೋಲಿಸಬಹುದೆಂದೂ ಹೇಳಲಾಗಿದೆ. ಮನಸ್ಸಿನ ಮೇಲೆ ಉಂಟಾಗುವ ಬಗೆಬಗೆಯ ಘಾತ ಪ್ರತಿಘಾತಗಳಿಂದ ವ್ಯಕ್ತಿತ್ವದ ನಿರ್ಮಾಣವಾಗುವಂತೆ ಯಾವುದೊಂದು ರಾಷ್ಟ್ರದ ನಿರ್ಮಾಣದ ಮೇಲೂ ಭಿನ್ನ ಭಿನ್ನ ಪ್ರಕಾರದ ಘಟನೆಗಳು, ವಿಚಾರಗಳು ಮತ್ತು ವ್ಯಕ್ತಿಗಳು ತಮ್ಮ ಪ್ರಭಾವವನ್ನು ಬೀರುತ್ತಾರೆ. ಈ ಪ್ರಭಾವದ ಅಂಶಗಳು ಒಂದೊಂದು ಸಾರಿ ಏಕರೂಪವಾಗಿರುತ್ತವೆ; ಒಂದೊಂದು ಸಾರಿ ಒಂದನ್ನೊಂದು ಪೂರಕಗಳಾಗಿ, ಒಮ್ಮೊಮ್ಮೆ ಪರಸ್ಪರ ವಿರೋಧಿಗಳಾಗಿರುತ್ತವೆ.

ಕೆಲವು ಮಹಾನತೆಯುಳ್ಳ ವ್ಯಕ್ತಿಗಳು ಅಥವಾ ಮಹಾಪುರುಷರೇ ಒಂದು ರಾಷ್ಟ್ರವನ್ನು ನಿರ್ಮಿಸುವುದಿಲ್ಲವೆಂಬುದು ದಿಟವಾದ ಮಾತು. ರಾಷ್ಟ್ರದ ನಿರ್ಮಾಣದಲ್ಲಿ ಅನೇಕ ಅಂಶಗಳು ಅಡಗಿರುತ್ತವೆ. ಅದರಲ್ಲಿ ಮಹಾಪುರುಷರ ಅಂಶ ಮಹತ್ವದ್ದು.

ಪುಸ್ತಕದ ಈ ಭಾಗದಲ್ಲಿಯೂ ಕೂಡ ಅತ್ಯಂತ ಪ್ರಾಚೀನ ಕಾಲದಿಂದ ಹಿಡಿದು ಮಧ್ಯಯುಗದವರೆಗೆ ಬಂದಿದ್ದೇವೆ ಭಾರತ ದೇಶದ ಎಲ್ಲಾ ಭಾಗಗಳ ಮಹಾಪುರುಷರು ಮತ್ತು ಮಹತ್ವಪೂರಿತರಾದ ವ್ಯಕ್ತಿಗಳನ್ನು ಇದರಲ್ಲಿ ಸೇರಿಸಲು ಪ್ರಯತ್ನ ಮಾಡಲಾಗಿದೆ. ಈ ಜೀವನ ಚರಿತ್ರೆಗಳನ್ನು ಓದಿ ಮನನ ಮಾಡುವುದರಿಂದ ಪಾಠಕರು ತಮ್ಮ ತಮ್ಮ ಪ್ರಾಂತ ಮತ್ತು ಜಾತಿ ಸಂಪ್ರದಾಯಗಳ ಸಂಕುಚಿತ ದೃಷ್ಟಿಯನ್ನು ಬಿಟ್ಟು ಅವರಲ್ಲಿ ವಿಶಾಲ ದೃಷ್ಟಿಕೋನವು ಮೂಡುತ್ತದೆ ಎಂದು ನಾವು ಹಾರೈಸುತ್ತೇವೆ.

ರಾಮಾನುಜಾಚಾರ್ಯರು

ಶಂಕರಾಚಾರ್ಯರು ಕಾಲವಾಗಿ ಮುನ್ನೂರು ವರ್ಷಗಳಾದನಂತರ ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ರಾಮಾನುಜಾಚಾರ್ಯರು ಜನಿಸಿದರು. ಶಂಕರಾಚಾರ್ಯರು ಜ್ಞಾನ ಮಾರ್ಗಿಗಳಾಗಿದ್ದರೆ ರಾಮಾನುಜಾಚಾರ್ಯರು ಭಕ್ತಿ ಮಾರ್ಗಿಗಳು. ಆ ಕಾಲದ ವಿದ್ವಾಂಸರು ಈ ಇಬ್ಬರು ಮಹಾಪುರುಷರಿಗೂ ಹೆಚ್ಚು ಮಹತ್ವ ಕೊಟ್ಟಿದ್ದರು.

ಮದ್ರಾಸಿನ ಸಮೀಪದಲ್ಲಿ ಶ್ರೀಪೆರಂಬುದೂರ್ ಎಂಬ ಹಳ್ಳಿ ಇದೆ. ಇದನ್ನು ಹಿಂದಿನ ಕಾಲದಲ್ಲಿ ಭೂತಪುರ ಎಂದು ಕರೆಯುತ್ತಿದ್ದರು. ಈಗ ಪೆರಂಬೂರು ಎನ್ನುತ್ತಾರೆ. ಇಲ್ಲಿಯೇ ರಾಮಾನುಜರ ಜನನವಾಯಿತು. ಆಸೂರಿ ಕೇಶವ ದೀಕ್ಷಿತರು ಅವರ ತಂದೆ. ತಾಯಿ ಕಾಂತಿಮತಿಯು ಶ್ರೀ ಶೈಲಪೂರ್ಣರೆಂಬ ವೃದ್ಧ ತಪಸ್ವಿಯ ಸಹೋದರಿ, ಯಾಮುನಾಚಾರ್ಯರ ಮೊಮ್ಮಗಳು. ರಾಮಾನುಜರಿಗೆ ಎಂಟು ವರ್ಷಗಳು ತುಂಬಲು ಬ್ರಹ್ಮೋಪದೇಶವಾಯಿತು. ಅಂದಿನಿಂದ ಅವರು ವಿದ್ಯಾಭ್ಯಾಸಕ್ಕೆ ತೊಡಗಿದರು. ಬಾಲ್ಯದಲ್ಲೇ ರಾಮಾನುಜರ ಅಸಾಧಾರಣ ಬುದ್ಧಿವಂತಿಕೆ ಪ್ರಕಟವಾಯಿತು. ಒಮ್ಮೆ ಓದಿದ ಪಾಠವನ್ನು ಅವರು ಚೆನ್ನಾಗಿ ನೆನಪಿನಲ್ಲಿಡುತ್ತಿದ್ದರು. ಅವರಿಗೆ ೧೬ ವರ್ಷ ತುಂಬುತ್ತಿದ್ದಂತೆಯೇ ರಕ್ಷಾಂಬ ಎಂಬ ಬ್ರಾಹ್ಮಣ ಕನ್ಯೆಯೊಡನೆ ವಿವಾಹವಾಯಿತು. ಇದಾದ ಕೆಲವೇ ದಿನಗಳಲ್ಲಿ ಅವರ ತಂದೆ ದೈವಾಧೀನರಾದರು.

ತಂದೆ ಕಾಲವಾದನಂತರ ರಾಮಾನುಜರು ಸಂಸಾರ ಸಮೇತ ಪೆರಂಬೂದೂರಿನಿಂದ ಕಾಂಚಿಗೆ ಬಂದು ಅಲ್ಲೇ ಇರತೊಡಗಿದರು. ಆಗ ಕಾಂಚಿ ದೊಡ್ಡ ವಿದ್ಯಾ ಕೇಂದ್ರವಾಗಿದ್ದಿತು. ಉತ್ತರ ಭಾರತದಲ್ಲಿ ಕಾಶಿಗಿದ್ದ ಮಹತ್ವ ದಕ್ಷಿಣ ಭಾರತದಲ್ಲಿ ಕಾಂಚಿಗೂ ಇದ್ದಿತು. ಶಂಕರಾಚಾರ್ಯರ ಅನುಯಾಯಿಗಳಾದ ಯಾದವ ಪ್ರಕಾಶರೇ ಕಾಂಚಿಯ ವಿದ್ವಾಂಸರಲ್ಲಿ ಅಗ್ರಗಣ್ಯರು. ನಿರಾಕಾರ, ನಿರ್ಗುಣ ಬ್ರಹ್ಮನನ್ನು ಬಿಟ್ಟು ಉಳಿದ ಪ್ರಪಂಚದ ವಸ್ತುಗಳೆಲ್ಲವೂ ಮಿಥ್ಯೆ ಎಂಬುದು

ಅವರ ವಾದ. ಈ ಯಾದವ ಪ್ರಕಾಶರೇ ರಾಮಾನುಜರಿಗೆ ವೇದ ಮತ್ತು ಉಪನಿಷತ್ತಿನ ಜ್ಞಾನವಿತ್ತರು. ಆದರೆ ಕೆಲವೇ ದಿನಗಳಲ್ಲಿ ಗುರು ಶಿಷ್ಯರ ಮಧ್ಯೆ ಭಿನ್ನಾಭಿಪ್ರಾಯ ತಲೆದೋರಿತು. ಮೊದಮೊದಲು ಯಾದವ ಪ್ರಕಾಶರು ಶಿಷ್ಯನ ದೃಷ್ಟತೆಯನ್ನು ಮನ್ನಿಸಿದರು. ಆದರೆ ಅವರ ವ್ಯಾಖ್ಯಾನವೆಲ್ಲವನ್ನೂ ರಾಮಾನುಜರು ತಪ್ಪೆಂದು ಹೇಳಿದಾಗ ಅವರು ಕೋಪಗೊಂಡು ಮನೆಗೆ ಹಿಂತಿರುಗಬೇಕೆಂದು ಶಿಷ್ಯನಿಗೆ ಅಪ್ಪಣೆಯಿತ್ತರು. ಅಂದಿನಿಂದ ರಾಮಾನುಜರು ಗುರುವಿನ ಬಳಿ ಓದು ವುದನ್ನು ಬಿಟ್ಟು ಸ್ವತಃ ಅಧ್ಯಯನ ಮಾಡತೊಡಗಿದರು.

ಕಾಂಚೀಪೂರ್ಣ ಸ್ವಾಮಿಯವರನ್ನು ರಾಮಾನುಜರು ಭೇಟಿಯಾದುದ್ದು ಒಂದು ವಿಚಿತ್ರ ಸಂಗತಿ. ಕಾಂಚೀಪೂರ್ಣರ ತಂದೆ ಶೂದ್ರ ಜಾತಿಯವನು, ತಾಯಿ ಬೇಡರ ಜಾತಿಯವಳು. ಆದರೆ ಕಾಂಚೀಪೂರ್ಣರು ಮಾತ್ರ ಶ್ರೀ ವೈಷ್ಣವಧರ್ಮದ ಮಹಾಯತಿಗಳಾಗಿದ್ದರು. ಶ್ರೀ ವೈಷ್ಣವ ಧರ್ಮದ ಮಹಾತ್ಮ ಯಮುನಾ ಚಾರ್ಯರ ಐವರು ಶಿಷ್ಯರಲ್ಲಿ ಅವರೂ ಒಬ್ಬರು. ಪೆರಂಬೂದೂರಿನಲ್ಲಿ ಒಮ್ಮೆ ದಾರಿಯಲ್ಲಿ ರಾಮಾನುಜರು ಕಾಂಚೀಪೂರ್ಣ ಸ್ವಾಮಿಯವರನ್ನು ಕಂಡು ಆದರದಿಂದ ಅವರನ್ನು ಮನೆಗೆ ಕರೆದರು. ರಾತ್ರಿಯ ಊಟವಾದನಂತರ ಕಾಂಚೀಪೂರ್ಣ ಸ್ವಾಮಿಯವರು ಜಗಲಿಯಲ್ಲಿ ಮಲಗಿರಲು ರಾಮಾನುಜರು ಅವರ ಪಾದಗಳನ್ನು ಒತ್ತಲು ಹೋದಾಗ ಕಾಂಚೀಪೂರ್ಣರು ತಡೆದು "ನಾನು ನೀಚ ಕುಲದವ, ನೀನಾದರೋ ಬ್ರಾಹ್ಮಣ. ಬ್ರಾಹ್ಮಣರು ಶೂದ್ರರ ಕಾಲನ್ನು ಒತ್ತಬಾರದು" ಎಂದು ಹೇಳಿದರು. ಇದನ್ನು ಕೇಳಿ ರಾಮಾನುಜರು ಬಹಳ ದುಃಖಿತರಾಗಿ "ನಾನು ಅದೃಷ್ಟಹೀನ; ತಮ್ಮಂತಹ ಮಹಾತ್ಮರ ಸೇವೆ ಮಾಡುವ ಭಾಗ್ಯ ನನಗಿಲ್ಲ ದಾಯಿತು. ಕೇವಲ ಜನಿವಾರವನ್ನು ಧರಿಸುವುದರಿಂದ ಯಾರೂ ಬ್ರಾಹ್ಮಣರಾಗು ವುದಿಲ್ಲ. ಹರಿಭಕ್ತರೇ ಒಳ್ಳೆಯ ಬ್ರಾಹ್ಮಣರು" ಎಂದು ತಿಳಿಸಿದರು. ಈ ಮಾತಿ ನಿಂದ ಕಾಂಚೀಪೂರ್ಣ ಸ್ವಾಮಿಗಳು ಪ್ರಭಾವಿತರಾದರು. ಅವರಿಬ್ಬರಲ್ಲಿ ಪರಸ್ಪರ ಪ್ರೇಮ ಭಕ್ತಿಗಳು ಉದಿಸಿದುವು

ದಿನಕಳೆದಂತೆ ರಾಮಾನುಜರ ವಿದ್ವತ್ತಿನ ಕೀರ್ತಿ ಸುತ್ತಮುತ್ತಲೂ ಹರಡ ತೊಡಗಿತು. ಯಾಮುನಾಚಾರ್ಯರು ತಾವಾದ ಮೇಲೆ ರಾಮಾನುಜರೇ ಶ್ರೀವೈಷ್ಣವರ ಆಚಾರ್ಯರಾಗಬೇಕೆಂದು ಆಶಿಸಿದರು. ಆದರೆ ಸನ್ಯಾಸಿಯಾಗದೆ

ಯಾರೂ ಆಚಾರ್ಯರಾಗುವಂತಿರಲಿಲ್ಲ. ಈ ಕಾರಣದಿಂದಲೇ ರಾಮಾನುಜರನ್ನು ಕರೆಯಲು ಯಾಮುನಾಚಾರ್ಯರು ಮಹಾಪೂರ್ಣ ಸ್ವಾಮಿಯವರನ್ನು ಕಾಂಚಿಗೆ ಕಳುಹಿಸಿದರು. ಅಲ್ಲಿಯೇ ಮಹಾಪೂರ್ಣ ಸ್ವಾಮಿಯವರಿಂದ ರಾಮಾನುಜರಿಗೆ ಶ್ರೀವೈಷ್ಣವ ಧರ್ಮದ ದೀಕ್ಷೆ ಲಭಿಸಿತು.

ಇದಾದ ಕೆಲವು ದಿನಗಳ ಮೇಲೆ ಯಾಮುನಾಚಾರ್ಯರ ದರ್ಶನ ಪಡೆಯಲು ರಾಮಾನುಜರು ಶ್ರೀರಂಗಕ್ಕೆ ಹೊರಟರು. ಶ್ರೀರಂಗವನ್ನು ತಲುಪುತ್ತಿದ್ದಂತೆಯೇ ಯಾಮುನಾಚಾರ್ಯರು ವೈಕುಂಠವಾಸಿಗಳಾದ ಸಂಗತಿ ಅವರಿಗೆ ತಿಳಿಯಿತು. ಅವರು ಸಾಯುವ ಮೊದಲು ರಾಮಾನುಜರಿಗೆ ಒಂದು ಸಂದೇಶವನ್ನು ಬರೆದಿಟ್ಟಿದ್ದರು. ಅದೇನೆಂದರೆ (೧) ವೇದಾಂತ ಸೂತ್ರಗಳಿಗೆ ಭಾಷ್ಯವನ್ನು ಬರೆಯುವುದು. (೨) ಆಳ್ವಾರುಗಳ ಗೀತೆಗಳನ್ನು ದ್ರಾವಿಡ ಭಾಷೆಯಲ್ಲಿ ಸಂಗ್ರಹಿಸಿ ಅವುಗಳಿಗೆ ವೇದವೆಂದು ಹೆಸರಿಟ್ಟು ಐದನೆಯ ವೇದದ ಸ್ಥಾನ ಕೊಡುವುದು. (೩) ವಿಷ್ಣು ಪುರಾಣದ ಕರ್ತೃ ಶ್ರೇಷ್ಠಮುನಿ ಪರಾಶರರ ಜ್ಞಾಪಕಾರ್ಥವಾಗಿ ಶ್ರೀವೈಷ್ಣವ ಮಹಾಜ್ಞಾನಿಯೊಬ್ಬರಿಗೆ ಪರಾಶರರೆಂದು ನಾಮಕರಣ ಮಾಡುವುದು. ಈ ಸಂದೇಶವನ್ನು ಹೊತ್ತು ರಾಮಾನುಜರು ತಕ್ಷಣ ಕಾಂಚಿಗೆ ಹೊರಟರು.

ರಾಮಾನುಜರನ್ನು ಕರೆಯಲು ಬರುವಾಗ ಮಹಾಪೂರ್ಣರು ತಮ್ಮೊಡನೆ ತಮ್ಮ ಪತ್ನಿಯನ್ನೂ ಕರೆತಂದು ರಾಮಾನುಜರ ಮನೆಯಲ್ಲೇ ಸಪತ್ನೀಕರಾಗಿ ಆರು ತಿಂಗಳವರೆಗೆ ಇದ್ದರು. ಈ ಅವಕಾಶವನ್ನೇ ಸದುಪಯೋಗಪಡಿಸಿಕೊಂಡು ರಾಮಾನುಜರು ಅವರ ಸಹಾಯದಿಂದ ದ್ರಾವಿಡ ಭಾಷೆಯಲ್ಲಿರುವ ಆಳ್ವಾರುಗಳ ೪೦೦೦ ಸುಮಧುರ ಗೀತೆಗಳ ಸಂಗ್ರಹ (ಪ್ರಬಂಧ) ವನ್ನು ಅಭ್ಯಾಸ ಮಾಡಿ ಕಲಿತರು.

ಒಂದು ದಿನ ಅವರಿಬ್ಬರ ಪತ್ನಿಯರೂ ನೀರು ತರಲು ಹೊರಟರು. ಮಾರ್ಗದಲ್ಲಿ ಯಾವುದೋ ಮಾತಿಗೆ ಇಬ್ಬರಲ್ಲಿಯೂ ಮನಸ್ತಾಪ ಉಂಟಾಯಿತು. ಈ ಸಮಾಚಾರ ತಿಳಿದ ಕೂಡಲೇ ಮಹಾಪೂರ್ಣರು ಪತ್ನಿಯೊಡನೆ ಶ್ರೀರಂಗಕ್ಕೆ ಹೊರಟುಹೋದರು. ಅವರು ಹೊರಟಾಗ ರಾಮಾನುಜರು ಮನೆಯಲ್ಲಿರಲಿಲ್ಲ. ಅಂಗಡಿಗೆ ಹೋಗಿದ್ದರು. ಮನೆಗೆ ಬರುತ್ತಲೇ ನಡೆದ ಸಂಗತಿ ತಿಳಿದು ಅವರು ಬಹಳ ದುಃಖಿತರಾದರು. ಕೂಡಲೇ ಪತ್ನಿಯನ್ನು ತವರುಮನೆಗೆ ಕಳುಹಿಸಿ ತಾವು ಸನ್ಯಾಸವನ್ನು ಸ್ವೀಕರಿಸಿದರು.

ಯಾಮುನಾಚಾರ್ಯರಾದ ನಂತರ ಶ್ರೀವೈಷ್ಣವರಲ್ಲಿ ಸರಿಯಾದ ಮಾರ್ಗ ದರ್ಶಕರಿಲ್ಲದೆ ಅಶಾಂತಿ ತಲೆದೋರಿತು. ಜನರೆಲ್ಲರೂ ಈ ಸ್ಥಾನಕ್ಕೆ ರಾಮಾನುಜರೇ ತಕ್ಕವರೆಂದು ತಿಳಿದು ಅವರನ್ನು ಕರೆತರಲು ದೂತನೊಬ್ಬನನ್ನು ಕಾಂಚಿಗೆ ಕಳುಹಿಸಿ ದರು. ಈ ಮೊದಲೇ ಸನ್ಯಾಸಿಯಾಗಿದ್ದ ರಾಮಾನುಜರು ಆಹ್ವಾನವನ್ನು ಮನ್ನಿಸಿ ಶ್ರೀರಂಗಕ್ಕೆ ಬಂದು ಯಾಮುನಾಚಾರ್ಯರ ಪೀಠವನ್ನು ಅಲಂಕರಿಸಿದರು. ಆ ಪೀಠದಲ್ಲಿ ಕುಳಿತವರು ಶ್ರೀರಂಗನಾಥಸ್ವಾಮಿಯ ದೇವಸ್ಥಾನದ ರಕ್ಷಣೆಯ ಭಾರ ವನ್ನು ಹೊರಬೇಕಾಗಿದ್ದಿತು. ರಾಮಾನುಜರು ಬಹು ಪ್ರೀತಿಯಿಂದ ಆ ಕೆಲಸ ವನ್ನು ವಹಿಸಿಕೊಂಡರು. ದೇವಸ್ಥಾನದ ವರಮಾನದಲ್ಲಿ ಒಂದು ಬಿಡಿಗಾಸನ್ನೂ ಸ್ವಂತಕ್ಕಾಗಿ ಬಳಸದೆ ದೇವರ ಪೂಜೆಗಾಗಿಯೇ ಉಪಯೋಗಿಸುತ್ತಿದ್ದರು. ಭಿಕ್ಷಾನ್ನದಿಂದ ಅವರ ಉದರ ಪೋಷಣೆ ನಡೆಯುತ್ತಿತ್ತು.

ಶ್ರೀರಂಗದಲ್ಲಿ ಯಾಮುನಾಚಾರ್ಯರು ಹೇಳಿದ್ದ ಮಂತ್ರಗಳ ನಿಜವಾದ ಅರ್ಥ ಅವರ ಶಿಷ್ಯರಿಂದ ದೊರೆಯಿತು. ಈ ಸಂಬಂಧದಲ್ಲಿ ಮಹತ್ವಪೂರ್ಣವಾದ ಘಟನೆಯೊಂದು ನೆನಪಾಗುವುದು. ಯಾಮುನಾಚಾರ್ಯರಿಗೆ ಐವರು ಮುಖ್ಯ ಶಿಷ್ಯರಿದ್ದರೆಂದು ಮೊದಲೇ ಹೇಳಿದೆ. ಅವರಲ್ಲಿ ಒಬ್ಬರ ಹೆಸರು ಗೋಷ್ಠೀಪೂರ್ಣ ರೆಂದು. ಮಹಾಪೂರ್ಣರ ಹೇಳಿಕೆಯ ಮೇಲೆ ಯಾಮುನಾಚಾರ್ಯರು ಹೇಳಿದ ರಹಸ್ಯ ಮಂತ್ರಗಳನ್ನು ತಿಳಿಯಲು ರಾಮಾನುಜರು ಗೋಷ್ಠೀಪೂರ್ಣ ಸ್ವಾಮಿಯ ಬಳಿ ಹೊರಟರು. ಆ ಮಂತ್ರದ ಅರ್ಥ ಕೇವಲ ಗೋಷ್ಠೀಪೂರ್ಣರಿಗೆ ಮಾತ್ರ ತಿಳಿದಿದ್ದಿತು. ಅವರಾದರೋ ರಾಮಾನುಜರ ಪ್ರಾರ್ಥನೆಯನ್ನು ಹದಿನೆಂಟು ಬಾರಿ ತಳ್ಳಿಹಾಕಿದರು. ಕಡೆಗೆ ಹತ್ತೊಂಬತ್ತನೆಯ ಬಾರಿ ಆ ರಹಸ್ಯ ಮಂತ್ರವನ್ನು ಅಧಿಕಾರವಿಲ್ಲದ ಅಥವಾ ಸಾಧಾರಣ ವ್ಯಕ್ತಿಗೆ ಹೇಳಕೂಡದೆಂಬ ಶರತ್ತಿನ ಮೇಲೆ ತಿಳಿಸಿದರು. ರಹಸ್ಯ ಮಂತ್ರವನ್ನು ತಿಳಿದುಕೊಂಡು ರಾಮಾನುಜರು ರಂಗನಾಥ ಸ್ವಾಮಿಯ ದೇವಸ್ಥಾನದ ಕಡೆ ಹೋಗುತ್ತಿದ್ದಾಗ ದಾರಿಯಲ್ಲಿ ನರಸಿಂಹ ಸ್ವಾಮಿಯ ಉತ್ಸವ ನಡೆಯುತ್ತಿರುವುದನ್ನು ನೋಡಿದರು. ಅದರಲ್ಲಿ ಅನೇಕ ಮಂದಿ ಶ್ರೀವೈಷ್ಣವರು ಭಾಗವಹಿಸಿದ್ದರು. ಜನಗಳ ಗುಂಪನ್ನು ನೋಡಿದ ಮೇಲಂತೂ ಮನಸ್ಸು ತಡೆಯದೆ ರಾಮಾನುಜರು ಎತ್ತರವಾದ ಜಾಗದಲ್ಲಿ ನಿಂತು ಗುರುಗಳಿಂದ ಕಲಿತ ಮಂತ್ರವನ್ನು ಜೋರಾಗಿ ಉಚ್ಚರಿಸತೊಡಗಿದರು. ಗೋಷ್ಠೀ

ಪೂರ್ಣ ಸ್ವಾಮಿಗಳಿಗೆ ಈ ಸಮಾಚಾರ ತಿಳಿಯುತ್ತಲೇ ಕೋಪ ನೆತ್ತಿಗೇರಿ ರಾಮಾನುಜರನ್ನು ಕರೆಸಿದರು. ಅವರಿಬ್ಬರ ಮಧ್ಯೆ ನಡೆದ ಸಂವಾದವನ್ನು ನಾವೆಂದೂ ಮರೆಯುವಂತಿಲ್ಲ.

ಗೋಷ್ಠೀಪೂರ್ಣರು—ಗುರು ಆಜ್ಞೆಯನ್ನು ಮೀರಿದರೆ ಏನಾಗುವುದೆಂದು ನಿನಗೆ ತಿಳಿದಿದೆಯೊ?

ರಾಮಾನುಜರು—ಗೊತ್ತಿದೆ ಗುರುವರ್ಯರೆ. ಹತ್ತು ಸಾವಿರ ವರುಷ ನರಕದಲ್ಲಿರಬೇಕಾಗುವುದು.

ಗೋಷ್ಠೀಪೂರ್ಣರು—ಹಾಗೂ ನೀನು ನನ್ನ ಆಜ್ಞೆಯನ್ನು ಉಲ್ಲಂಘಿಸಿ ರಹಸ್ಯ ಮಂತ್ರವನ್ನು ಎಲ್ಲರ ಮುಂದೆ ತಿಳಿಸಿದ ಕಾರಣವೇನು?

ರಾಮಾನುಜರು—ಸ್ವಾಮಿ, ನನ್ನಿಂದ ದೊಡ್ಡ ಅಪರಾಧವೇನೋ ಆಯಿತು. ಆದರೆ ಮಂತ್ರವನ್ನು ಕೇಳಿದವರು ಸ್ವರ್ಗಕ್ಕೆ ಹೋಗುವರೆಂದು ತಾವೇ ತಿಳಿಸಿದ್ದಿರಿ. ಜನಗಳ ಗುಂಪನ್ನು ನೋಡಿ ಅವರೆಲ್ಲರಿಗೂ ಸ್ವರ್ಗ ಸಿಗಲಿ ಎಂಬ ಉದ್ದೇಶದಿಂದ ನಾನು ಮಂತ್ರೋಚ್ಚಾರಣೆ ಮಾಡಿದೆ. ನನಗೆ ನರಕ ದೊರೆತರೂ ಚಿಂತೆಯಿಲ್ಲ. ಹೀಗೆ ಮಾಡುವುದೇ ಉಚಿತ ವೆಂದು ನನಗೆ ತೋರಿತು. ತಮ್ಮ ಅಪ್ಪಣೆಯನ್ನು ಮೀರಿದ ಅಪರಾಧಕ್ಕೆ ಯಾವ ವಿಧವಾದ ಶಿಕ್ಷೆಯಿತ್ತರೂ ಸ್ವೀಕರಿಸಲು ಸಿದ್ಧ ನಿದ್ದೇನೆ.

ಇದನ್ನು ಕೇಳುತ್ತಲೇ ಗೋಷ್ಠೀಪೂರ್ಣ ಸ್ವಾಮಿಯ ಕೋಪ ಶಾಂತವಾಯಿತು. ಅವರು ರಾಮಾನುಜರನ್ನು ಆಲಿಂಗಿಸಿಕೊಂಡು ನೀವೇ ನನ್ನ ಗುರು ನಾನು ನಿಮ್ಮ ಶಿಷ್ಯ ಎಂದು ತಿಳಿಸಿದರು.

ಯಾಮುನಾಚಾರ್ಯರು ರಾಮಾನುಜರಿಗಿತ್ತ ಮೂರು ಆದೇಶದ ವಿಷಯ ಮೊದಲೇ ಹೇಳಲಾಗಿದೆಯಲ್ಲವೆ? ಅವುಗಳನ್ನು ಪೂರ್ಣಗೊಳಿಸುವೆನೆಂದು ರಾಮಾನುಜರು ಪ್ರತಿಜ್ಞೆ ಮಾಡಿ ಅಂತೆಯೇ ಕೆಲಸವನ್ನು ನಿರ್ವಹಿಸಿದ ಸಂಗತಿ ಜಗತ್ಪ್ರಸಿದ್ಧವಾಗಿದೆ. ಆಳ್ವಾರುಗಳ ಕವಿತೆಗಳ ಸಂಗ್ರಹವನ್ನು ರಾಮಾನುಜರು ಐದನೇ ವೇದವೆಂದು ಘೋಷಿಸಿದರು. ಅವರ ಶಿಷ್ಯರಾದ ಕುರೇಶರ ಪುತ್ರನಿಗೆ

ಪರಾಶರ ಭಟ್ಟ ಎಂದು ಹೆಸರಿಟ್ಟರು. ವೇದಾಂತ ಸೂತ್ರಗಳ ಮೇಲೆ ಶ್ರೀಭಾಷ್ಯವನ್ನು ರಚಿಸಿದರು.

ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ ಅದ್ವೈತ ವಾದವನ್ನು ಖಂಡಿಸಿ ವೇದ ಮತ್ತು ಉಪನಿಷತ್ತಿನ ಮಂತ್ರಗಳ ಸರಿಯಾದ ಅರ್ಥ ಹೇಳಿ ವೇದಾಂತ ಸೂತ್ರಗಳಲ್ಲಿ ಎಲ್ಲೂ ನಿರಾಕಾರ ಬ್ರಹ್ಮನ ಉಪಾಸನೆಯ ವಿಷಯವಿಲ್ಲವೆಂದು ವಾದಿಸಿದ್ದಾರೆ. ಆ ಸೂತ್ರಗಳಲ್ಲಿ ಸಾಕಾರ ಬ್ರಹ್ಮನ ಉಪಾಸನೆಯ ಚರ್ಚೆಯಿದೆ. ಮುಕ್ತಿಯ ಸಾಧನ ಜ್ಞಾನವಲ್ಲ, ಭಕ್ತಿ ಎಂದು ಹೇಳಿದ್ದಾರೆ. ಶಂಕರರು ಬೌದ್ಧರ ಯುಕ್ತಿಗಳನ್ನೇ ತಮ್ಮ ಶಾಸ್ತ್ರಗಳಲ್ಲಿ ಬಳಸಿರುವ ಕಾರಣ ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ ಅವರನ್ನು ಪ್ರಚ್ಛನ್ನ ಬೌದ್ಧರೆಂದಿದ್ದಾರೆ.

ಶ್ರೀಭಾಷ್ಯವನ್ನು ಬರೆದ ನಂತರ ರಾಮಾನುಜರು ತಮ್ಮ ಶಿಷ್ಯರೊಡನೆ ದೇಶಾಟನೆಗೆ ಹೊರಟರು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕ ಮಂದಿ ಪಂಡಿತರೊಡನೆ ಅವರ ಚರ್ಚೆ ನಡೆಯಿತು. ಎಲ್ಲಾ ಕಡೆಗಳಲ್ಲೂ ಅವರೇ ಜಯಶೀಲರಾದರೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ದಿಗ್ವಿಜಯದ ಆಸೆಯಿಂದ ಅವರು ಉತ್ತರ ಭಾರತದಲ್ಲಿ ಕಾಶ್ಮೀರದವರೆಗೂ ಹೋಗಿಬಂದರು. ಕಾಶಿ ಮತ್ತು ಕಾಶ್ಮೀರದಲ್ಲಿ ಅವರ ವಿದ್ವತ್ತಿನ ಮುಂದೆ ತಲೆಬಾಗಿ ಅನೇಕ ಮಂದಿ ಸ್ತ್ರೀ ಪುರುಷರೂ ರಾಜ ಮಹಾರಾಜರೂ ಅವರ ಶಿಷ್ಯ ಶಿಷ್ಯೆಯರಾದರು. ಹೀಗೆ ಸಂಪೂರ್ಣ ಭಾರತವನ್ನೇ ಬಳಸಿಕೊಂಡು ಅವರು ಪೆರಂಬೂದೂರಿನ ಮೂಲಕ ಶ್ರೀರಂಗಕ್ಕೆ ಹಿಂತಿರುಗಿದರು.

ಆಗ ಕಾಂಚಿಯಲ್ಲಿ ಚೋಳರಾಜನಿದ್ದ. ಆತ ಶೈವ ಮತಾವಲಂಬಿ. ಶ್ರೀವೈಷ್ಣವ ಧರ್ಮದ ಅಭಿವೃದ್ಧಿಯನ್ನು ನೋಡಿ ಅವನಿಗೆ ಬಹಳ ಕೋಪ ಬಂದಿತು. "ಶಿವಾತ್ಪರೋ ನಾಸ್ತಿ" (ಶಿವನಲ್ಲದೆ ಬೇರೆಯಿಲ್ಲ) ಎಂದು ಬರೆದಿರುವ ಧ್ವಜವನ್ನು ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನದ ಮೇಲೆ ಆತ ಹಾರಿಸಿದ. ಶೈವ ಮತವನ್ನು ವಿರೋಧಿಸಿದವನಿಗೆ ಮರಣದಂಡನೆ ಕೊಡಲು ಆತ ಹಿಂದು ಮುಂದು ನೋಡುತ್ತಿರಲಿಲ್ಲ. ಹೀಗೆ ಶ್ರೀವೈಷ್ಣವರ ಮೇಲೆ ದೊಡ್ಡ ಅತ್ಯಾಚಾರವೇ ನಡೆಯಲು ಪ್ರಾರಂಭವಾಯಿತು. ಅವನು ರಾಮಾನುಜರನ್ನು ಕೊಲ್ಲಲು ಮೋಸದಿಂದ ಅವರನ್ನು ಕಾಂಚಿಗೆ ಬರಮಾಡಿಸಿದ. ರಾಮಾನುಜರಿಗೆ ಇದು ಹೇಗೋ ತಿಳಿದು ೧೨ ವರುಷಗಳವರೆಗೆ ಅಂದರೆ ಆ ರಾಜ ಜೀವಿಸಿರುವ ತನಕ ಅವರು

ಮೈಸೂರು ರಾಜ್ಯದ ಸಾಲಿಗ್ರಾಮದಲ್ಲಿಯೇ ಇದ್ದು ವೈಷ್ಣವ ಧರ್ಮವನ್ನು ಪ್ರಚಾರ ಮಾಡುತ್ತಿದ್ದರು. ಆ ಕಾಲದಲ್ಲಿ ಯಾದವಾದ್ರಿ (ಮೇಲುಕೋಟೆ) ಯಲ್ಲಿ ಒಂದು ದೇವಸ್ಥಾನದ ನಿರ್ಮಾಣ ಮಾಡಿಸಿದರು. ಇಲ್ಲಿ ಭಗವಂತನ ಮೂರ್ತಿಯನ್ನು ಸ್ಥಾಪಿಸಿದರು. ಈ (ತಾವು ಕನಸು ಕಂಡನಂತರ ಭೂಮಿಯಿಂದ) ಮೂರ್ತಿ ರಾಮಾನುಜರು ಅಗೆದು ತೆಗೆದುದಾಗಿತ್ತು.

ರಾಮಾನುಜರು ಶ್ರೀಭಾಷ್ಯವಲ್ಲದೆ ಶ್ರೀಭಗವದ್ಗೀತೆಯ ಮೇಲೆಯೂ ಭಾಷ್ಯವನ್ನು ರಚಿಸಿರುವರು. "ವೇದಾರ್ಥ ಸಂಗ್ರಹ"ವೆಂಬ ತಮ್ಮ ಗ್ರಂಥದಲ್ಲಿ ಅವರು ಮಾಯಾವಾದವನ್ನು ಖಂಡಿಸಿದ್ದಾರೆ. "ವೇದಾಂತ ದೀಪ" ಎಂಬ ಗ್ರಂಥದಲ್ಲಿ ತಮ್ಮ ಪ್ರಸಿದ್ಧವಾದ ಶ್ರೀ ಭಾಷ್ಯಕ್ಕೆ ಸಂಕ್ಷಿಪ್ತವಾಗಿ ವ್ಯಾಖ್ಯಾನ ಮಾಡಿದರು. ವೇದಾಂತಸಾರವೆಂಬ ಗ್ರಂಥದಲ್ಲಿ ಅವರ ಸಿದ್ಧಾಂತಗಳನ್ನು ಸರಳ ರೀತಿಯಲ್ಲಿ ವರ್ಣಿಸಿದ್ದಾರೆ.

ಶಂಕರರು ಅದ್ವೈತ ಮತದ ಪ್ರಚಾರಕರು. ಸರ್ವಗುಣರಹಿತ, ಜ್ಞಾನ ಸ್ವರೂಪ, ನಿರ್ಗುಣ, ನಿರಾಕಾರ, ಬ್ರಹ್ಮ ಒಬ್ಬನೇ ಸತ್ಯ, ವಿಶ್ವದಲ್ಲಿ ನಾವು ನೋಡುವ ಜಡಚೇತನ ವಸ್ತುವೆಲ್ಲವೂ ಸುಳ್ಳೆಂಬುದು ಶಂಕರರ ಮತ. ಶ್ರುತಿ (ವೇದ ಮತ್ತು ಉಪನಿಷತ್ತು)ಯ ಪ್ರಕಾರ ಬ್ರಹ್ಮ ಜ್ಞಾನಸ್ವರೂಪ, ನಿತ್ಯ ಮತ್ತು ಅನಂತ. ಜೀವ ಮತ್ತು ಬ್ರಹ್ಮನಲ್ಲಿ ಭೇದವೇನೂ ಇಲ್ಲ. ಭೇದವಿರುವಂತೆ ಕಾಣಲು ಅವಿದ್ಯೆಯೇ ಕಾರಣ. ಮುಕ್ತಿಯ ಸಾಧನೆ ಎಂದರೆ ಸತ್‌ಜ್ಞಾನ ಮತ್ತು ಅವಿದ್ಯೆಯ ನಾಶ ಎಂದು ಹೇಳಿದರು. [ಶಂಕರರ ದೃಷ್ಟಿಯಲ್ಲಿ ಭಗವತ್‌ಪ್ರೇಮ ಮತ್ತು ಸೇವೆಗೆ ಯಾವ ಸ್ಥಾನವೂ ಇಲ್ಲ.]

ಶಂಕರರ ಈ ಮತ ವೈಷ್ಣವ ಮತಕ್ಕೆ ಪೂರ್ಣ ವಿರೋಧವಾಗಿದೆ. ಯಾವ ಉಪನಿಷತ್ತಿನ ಪ್ರಮಾಣಗಳ ಮೂಲಕ ಶಂಕರರು ಅದ್ವೈತ ಮತವನ್ನು ಸ್ಥಾಪಿಸಿದರೋ ಅದೇ ಪ್ರಮಾಣಗಳಿಂದ ಮಾಯಾವಾದವನ್ನು ಖಂಡಿಸಿ ವೈಷ್ಣವ ಧರ್ಮದ ಸತ್ಯವನ್ನು ಸ್ಥಾಪಿಸಬೇಕೆಂದು ವೈಷ್ಣವರು ಯತ್ನಿಸಿದರು. ರಾಮಾನುಜರು ತಮ್ಮ ಶ್ರೀ ಭಾಷ್ಯದಲ್ಲಿ ಶಂಕರಾಚಾರ್ಯರ ಮತವನ್ನು ಖಂಡಿಸಿ ವೈಷ್ಣವ ಧರ್ಮವನ್ನು ಸಮರ್ಥಿಸಿದ್ದಾರೆ.

ಈಶ್ವರ ನಿರ್ಗುಣನಲ್ಲ, ಸಗುಣ. ಆತ ಉತ್ತಮೋತ್ತಮ. ಅವನಲ್ಲಿ ಯಾವ

ವಿಧವಾದ ಕ್ಲೇಶವೂ ಇರುವುದಿಲ್ಲ. ದೋಷರಹಿತ, ಶುದ್ಧ, ಸರ್ವಶ್ರೇಷ್ಠ, ನಿರ್ಮಲ, ಏಕರೂಪ ಬ್ರಹ್ಮನನ್ನು ಯಾವುದರ ಮೂಲಕ ಪಡೆಯಬಹುದೋ ಅದೇ ಸರಿಯಾದ ಜ್ಞಾನ ಎಂದು ರಾಮಾನುಜರು ಹೇಳಿದ್ದಾರೆ.

ಶಂಕರರ ಬ್ರಹ್ಮ ನಿರ್ಗುಣನಾದರೆ, ರಾಮಾನುಜರ ಬ್ರಹ್ಮ ಸಗುಣ. ಶಂಕರರಿಗೆ ಬ್ರಹ್ಮ ನಿರಾಕಾರ, ರಾಮಾನುಜರಿಗೆ ಸಾಕಾರ. ಶಂಕರಾಚಾರ್ಯರು ಮುಕ್ತಿಯ ಮಾರ್ಗ ಜ್ಞಾನವೆಂದರು. ರಾಮಾನುಜರು ಮುಕ್ತಿಯ ಸಾಧನೆ ಭಕ್ತಿ ಎಂದು ಸಾಧಿಸಿದರು. ಆದ್ದರಿಂದಲೇ ಶಂಕರರನ್ನು ಜ್ಞಾನಮಾರ್ಗಿ ಎಂದೂ, ರಾಮಾನುಜರನ್ನು ಭಕ್ತಿಮಾರ್ಗಿ ಎಂದೂ ಕರೆಯುತ್ತೇವೆ.

ಕಲ್ಹಣ

ಹನ್ನೊಂದನೇ ಶತಮಾನದ ಕೊನೆಯ ಭಾಗದಲ್ಲಿ ಉತ್ತರ ಭಾರತದಲ್ಲಿ ಹರ್ಷ ನೆಂಬ ರಾಜ ರಾಜ್ಯವಾಳುತ್ತಿದ್ದ. ಆತ ಸಿಂಹಾಸನಕ್ಕೆ ಬಂದ ಕೂಡಲೇ ಪ್ರಜೆ ಗಳನ್ನು ಹಿಂಸಿಸಲು ತೊಡಗಿದ. ಪ್ರಜೆಗಳು ಅವನ ತೊಂದರೆಯನ್ನು ತಡೆಯ ಲಾರದೆ ದಂಗೆಯೆದ್ದರು. ಏಳು ವರ್ಷಗಳ ಪರ್ಯಂತ ದಂಗೆ ನಡೆಯಿತು. ಕೊನೆಗೆ ಒಳಸಂಚಿನಿಂದ ಆ ರಾಜನ ಪ್ರಾಣವನ್ನು ತೆಗೆಯಲಾಯಿತು.

ಹರ್ಷನ ಆಸ್ಥಾನದಲ್ಲಿ ಸ್ವಾಮಿಭಕ್ತನಾದ ಚಂಪಕನೆಂಬ ಬ್ರಾಹ್ಮಣ ಮಂತ್ರಿ ಇದ್ದ. ಆ ಮಂತ್ರಿಯ ಪುತ್ರನೇ ಕಲ್ಹಣ. ರಾಜನು ಕಣ್ಮುಚ್ಚಿದಾಗ ಕಲ್ಹಣ ಇನ್ನೂ ಬಾಲಕನಾಗಿದ್ದ. ಆದ್ದರಿಂದಲೇ ಆತ ಕ್ರಿ. ಶ. ೧೧೦೦ರಲ್ಲಿ ಜನಿಸಿರ ಬೇಕೆಂಬುದು ಕೆಲವರ ಅಭಿಪ್ರಾಯ. ರಾಜನ ಮರಣದಿಂದ ಚಂಪಕನ ಜೀವನವೂ ಬದಲಿಸಿತು. ಆತ ರಾಜ್ಯದ ಆಡಳಿತ ಚಟುವಟಿಕೆಗಳಲ್ಲಿ ಉದಾಸೀನನಾದ.

ಕಲ್ಹಣನ ತಂದೆಯಂತೆಯೇ ಅವನ ಚಿಕ್ಕಪ್ಪನೂ ಒಳ್ಳೆಯ ಹುದ್ದೆಯಲ್ಲಿದ್ದ. ಆತ ಒಳ್ಳೆಯ ಸಂಗೀತಗಾರ. ಮಹಾರಾಜನ ಕೃಪಾದೃಷ್ಟಿ ಅವನ ಮೇಲಿತ್ತು. ರಾಜ್ಯದ ಕಡೆಯಿಂದ ಅವನಿಗೆ ಆಗಾಗ ಪುರಸ್ಕಾರ ದೊರೆಯುತ್ತಿತ್ತು. ರಾಜನ ಆಸ್ಥಾನದ ಸಿರಿತನದ ನಡುವೆ ಕಣ್ಣು ತೆರೆದ ಕಲ್ಹಣನಿಗೆ ಇತಿಹಾಸದ ಪರಿಚಯ ಚೆನ್ನಾಗಿಯೇ ಇತ್ತು. ಕಲ್ಹಣನ "ರಾಜ ತರಂಗಿಣಿ"ಯಿಂದ ಕಾಶ್ಮೀರದ ಪ್ರಾಚೀನ ಇತಿಹಾಸದ ಪರಿಚಯ ದೊರಕುವುದು.

ಸಾಮಾನ್ಯವಾಗಿ ಭಾರತದ ಪ್ರಾಚೀನ ಕವಿಗಳು ತಮ್ಮ ವಿಷಯವಾಗಿ ಏನನ್ನೂ ಹೇಳಿಕೊಂಡಿಲ್ಲ. ಅವರು ಐತಿಹಾಸಿಕ ಘಟನೆಗೂ ಬಣ್ಣ ಹಚ್ಚಿ ಅದರ ನೈಜ ಇತಿಹಾಸವನ್ನೇ ಮರೆಸಿ ಮುಂದಿಡುತ್ತಿದ್ದರು. ಕಲ್ಹಣನಲ್ಲಿ ಮಾತ್ರ ಈ ಎರಡು ಅಂಶವೂ ಕಡಿಮೆ ಪ್ರಮಾಣದಲ್ಲಿದೆ. ಅವನ ಕೃತಿಗಳಿಂದ ಆ ಕಾಲದ ಇತಿಹಾಸ ಮತ್ತು ಅವನಿಗೆ ಸಂಬಂಧಿಸಿದ ಕೆಲವು ಸಂಗತಿಗಳು ತಿಳಿದು ಬರುತ್ತವೆ.

ಕಾವ್ಯದ ರೂಪದಲ್ಲಿ ಕಾಶ್ಮೀರದ ಇತಿಹಾಸವನ್ನು ಬರೆದು ಕಲ್ಹಣ ಒಂದು ಮಹತ್ ಕಾರ್ಯವನ್ನೇ ಮಾಡಿದ್ದಾನೆ.

ಸಂಸ್ಕೃತದ "ತರಂಗ" ಶಬ್ದದಾರ್ಥ "ಅಲೆ" ಎಂದು. "ರಾಜತರಂಗಿಣಿ" ಯಲ್ಲಿ ಕಲ್ಹಣ ಎಂಟು ತರಂಗಗಳಲ್ಲಿ ಕಾಶ್ಮೀರದ ಅರಸು ಮನೆತನದ ಏಳುಬೀಳು ಗಳನ್ನು ಚಿತ್ರಿಸಿದ್ದಾನೆ. ಆತನಿಗೆ ಸಿರಿತನ ಬೇಕಿರಲಿಲ್ಲ. ಆನೆಗಳ ಮೇಲೆ ಕುಳಿತವ ನನ್ನಾಗಲೀ, ಶ್ರೀಮಂತನನ್ನಾಗಲೀ, ಸಾವಿರಾರು ಸುಂದರ ರಾಣಿಯರಿಂದ ತುಂಬಿದ ಅಂತಃಪುರದ ಒಡೆಯನನ್ನಾಗಲೀ ಯಾರೂ ಸ್ಮರಿಸುವುದಿಲ್ಲ. ಆದರೆ ಕವಿ ಅಮರ. ಆತನೇ ಪ್ರಪಂಚದ ಮಾರ್ಗದರ್ಶಕ. ಈ ಕಾರಣಗಳಿಂದಲೇ ಇಂದೂ ಕಲ್ಹಣನ 'ರಾಜತರಂಗಿಣಿ' ಲೋಕಪ್ರಿಯವಾಗಿದೆ.

ಕಲ್ಹಣನ ತಂದೆ ಶಿವಭಕ್ತನಾಗಿದ್ದು ಪ್ರತಿ ವರುಷವೂ ಬಟೇಶ್ವರದ ಯಾತ್ರೆಗೆ ಹೋಗುತ್ತಿದ್ದ. ಆಗ ಕಲ್ಹಣನೂ ತಂದೆಯ ಜೊತೆಯಲ್ಲಿರುತ್ತಿದ್ದ. ಇದರಿಂದ ತಂದೆಯ ಧಾರ್ಮಿಕ ವಿಚಾರದ ಪ್ರಭಾವ ಮಗನ ಮೇಲೂ ಬಿದ್ದಿತು. ಆದರೂ ಕಲ್ಹಣ ಬೌದ್ಧ ಧರ್ಮವನ್ನು ಗೌರವಿಸುತ್ತಿದ್ದ. ಶಾಕ್ತ ಮಾರ್ಗಾನುಯಾಯಿಗಳು ಕೊಡುತ್ತಿದ್ದ ಬಲಿ ಮತ್ತು ಆಹುತಿ ಅವನಿಗೆ ಸರಿಹೋಗಲಿಲ್ಲ. ಆತ ಅಹಿಂಸೆಯ ಪೂಜಾರಿ.

ಕಲ್ಹಣ ಬಹಳ ಪರಿಶ್ರಮಪಟ್ಟು 'ರಾಜ ತರಂಗಿಣಿ'ಯನ್ನು ಒಂದೇ ವರುಷ ದಲ್ಲಿ ಜನಗಳ ಮುಂದಿಟ್ಟನು. ಇದನ್ನು ರಚಿಸಲು ಆತ ಸಾಕಷ್ಟು ಜ್ಞಾನಾರ್ಜನೆ ಮಾಡಿಕೊಳ್ಳಬೇಕಾಯಿತು. ಕಾಳಿದಾಸನ 'ರಘುವಂಶ', ಬಾಣಭಟ್ಟನ 'ಹರ್ಷ ಚರಿತೆ', ಬಿಲ್ಹಣನ 'ವಿಕ್ರಮಾಂಕ ದೇವ ಚರಿತೆ', ರಾಮಾಯಣ, ಮಹಾಭಾರತ ಮತ್ತು ವರಾಹಮಿಹಿರನ 'ಬೃಹತ್ ಸಂಹಿತಾ' ಮುಂತಾದ ಗ್ರಂಥಗಳನ್ನು ಆತ ಓದಿ ಮುಗಿಸಿದ. ಅಲ್ಲದೆ ಇತಿಹಾಸಕಾರನಂತೆ ಆತನೂ ಪ್ರಾಚೀನ ಶಾಸನ ಮುಂತಾದವುಗಳ ಅಧ್ಯಯನ ಮಾಡಿ ಐತಿಹಾಸಿಕ ಸಾಮಗ್ರಿಯನ್ನು ಒಂದುಗೂಡಿಸಿ ಅವುಗಳನ್ನು ಉಪಯೋಗಿಸಿಕೊಂಡಿದ್ದ.

ಬ್ರಾಹ್ಮಣ ಕುಲದಲ್ಲಿ ಜನಿಸಿದ ಕಾರಣ ಆ ಯುಗದ ಬ್ರಾಹ್ಮಣರ ಕುಂದು ಕೊರತೆಗಳ ಪರಿಚಯವೂ ಅವನಿಗಿದ್ದಿತು. ಬ್ರಾಹ್ಮಣರು ಹಿಂದಿನಂತೆ ಕಷ್ಟಪಟ್ಟು ಓದುವುದೂ ಇಲ್ಲ, ಹೇಳಿಕೊಡುವುದೂ ಇಲ್ಲ. ಜೊತೆಗೆ ಅಹಂಕಾರಿಗಳಾಗಿ

ವ್ಯರ್ಥವಾಗಿ ರಾಜಕಾರ್ಯದಲ್ಲಿ ಕೈಹಾಕುವರೆಂದು ತಿಳಿದು ಆತ ಅವರನ್ನು ತಿರಸ್ಕರಿಸುತ್ತಿದ್ದ.

'ರಾಜತರಂಗಿಣಿ' ಇತಿಹಾಸವೂ ಹೌದು, ಕವಿತೆಯೂ ಹೌದು ಎಂಬ ಜವಾಹರಲಾಲ ನೆಹರೂ ಅವರ ಹೇಳಿಕೆ ನಿಜ. ರಾಜತರಂಗಿಣಿ ಎಂಟುನೂರು ವರುಷಗಳ ಹಿಂದಿನ ಕೃತಿ. ಇದರಲ್ಲಿ ಸುಮಾರು ಸಾವಿರ ವರುಷಗಳ ಇತಿಹಾಸ ಇದೆ. ಎರಡನೇ ಭಾಗವು ಮೊದಲನೇ ಭಾಗಕ್ಕಿಂತಲೂ ಸುಂದರವಾಗಿದೆ. ರಾಜ ಪ್ರಾಸಾದದೊಳಗಿನ ಒಳಸಂಚು, ಹತ್ಯೆ, ಮೋಸ, ಕಪಟ, ಜಗಳ, ಅತ್ಯಾಚಾರ ಮುಂತಾದುವುಗಳ ವಿಸ್ತಾರವಾದ ವರ್ಣನೆ ಇದರಲ್ಲಿ ದೊರಕುವುದು. ಮೊದಲೇ ಹೇಳಿದಂತೆ ಇದು ಅರಸನ ಕಥೆ. ಸಾಧಾರಣ ಜನಗಳ ಕಥೆಯಲ್ಲ. ಆ ಕಾಲದ ರಾಜನೈತಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕಲ್ಹಣ ನೈಜವಾಗಿ ಚಿತ್ರಿಸಿದ್ದಾನೆ. ಹೆಂಗಸರು ಸಭೆಗಳಲ್ಲಿ ಸದಸ್ಯರಾಗುತ್ತಿದ್ದರು ಮತ್ತು ಸಿಪಾಯಿ ಗಳಂತೆ ಯುದ್ಧಭೂಮಿಗೂ ಹೋಗುತ್ತಿದ್ದರೆಂಬುದು ಇದರಿಂದ ತಿಳಿದುಬರುವುದು.

ಕಲ್ಹಣ ರಾಜಾಸ್ಥಾನದ ಅನೇಕ ಒಳಗುಟ್ಟುಗಳನ್ನು ಅರಿತಿದ್ದ. ಆತನ ತಂದೆ ಹರ್ಷನ ಕಾಲವಾದನಂತರ ಅರಮನೆಯಿಂದ ದೂರ ಸರಿದಿದ್ದ. ಆತನ ಚಿಕ್ಕಪ್ಪ ನಾದ ಕನಕನೂ ಕಾಶಿಯಲ್ಲಿರುತ್ತಿದ್ದ. ಕಲ್ಹಣ ಇಷ್ಟಪಟ್ಟಿದ್ದೇ ಆದರೆ ಸರಕಾರಿ ಕೆಲಸ ಸುಲಭವಾಗಿ ದೊರೆಯುತ್ತಿತ್ತು. ಇಷ್ಟೇಕೆ ಮಂತ್ರಿಯೂ ಆಗುತ್ತಿದ್ದ. ಆದರೆ ಆತ ಆಸ್ಥಾನದ ಹುದ್ದೆ ಪಡೆಯಲು ಎಂದೂ ಆಶಿಸಲಿಲ್ಲ. ಸಾಹಿತ್ಯಪ್ರೇಮಿ ಯಾದ ಕಾರಣ ತನ್ನ ಸಮಯವನ್ನು ಓದಿ ಬರೆಯುವುದರಲ್ಲೇ ಕಳೆಯುತ್ತಿದ್ದ.

ಕಲ್ಹಣ ಕಾಶ್ಮೀರದ ಇತಿಹಾಸವನ್ನು ಕಾದಂಬರಿಯ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಕಾಶ್ಮೀರದ ಪ್ರತಿಯೊಬ್ಬ ರಾಜನ ಆಡಳಿತ ಕಾಲದ ಮಹತ್ವಪೂರ್ಣ ಘಟನೆ ಯನ್ನೇ ಸಜೀವವಾಗಿ ವರ್ಣಿಸಿರುವನು. ಕೆಲವು ಪ್ರಸಂಗಗಳಂತೂ ಮರ್ಮಸ್ಪರ್ಶಿ ಯಾಗಿವೆ. ಉದಾಹರಣೆಗೆ ಹಸಿವಿನಿಂದ ಒದ್ದಾಡುವ ತನ್ನ ಪ್ರಿಯ ಕಂದನನ್ನೂ, ಪರರ ಮನೆಯಲ್ಲಿ ಜೀತ ಮಾಡುವ ಮಡದಿಯನ್ನೂ, ಆಪತ್ತಿನಲ್ಲಿ ಒದ್ದಾಡುವ ಗೆಳೆಯನನ್ನೂ, ಮೇವು ಸಿಗದೆ ಹಸಿದಿರುವ ಹಸುವನ್ನೂ, ಔಷಧೋಪಚಾರ ದೊರಕದೆ ಹಾಸಿಗೆಯಲ್ಲಿ ಬಿದ್ದು ಒದ್ದಾಡುತ್ತಿರುವ ತಂದೆತಾಯಿಗಳನ್ನೂ, ಶತ್ರು ಗಳಿಂದ ಪರಾಜಿತನಾದ ಸ್ವಾಮಿಯನ್ನೂ ನೋಡಿದವರಿಗೆ ಇನ್ನಾವ ನರಕ ಬೇಕು–ಮುಂತಾದುವು.

ಗಳನ್ನು ನೋಡಲಿಲ್ಲ. ಅಭಾವದ ಪರಿಚಯವಿರದ ಕಾರಣ ಅವನಿಗೆ ಹಣದಾಸೆಯೂ ಇರಲಿಲ್ಲ. ಯಾವ ಬಡ ಅರಸನ ಹೆಸರೂ ಅವನ ಕೃತಿಯಲ್ಲಿ ಕಾಣಬರುವುದಿಲ್ಲ. ಅವನ ಲೇಖನಿ ಕೇವಲ ರಾಜಮಹಾರಾಜರನ್ನು ಮಾತ್ರ ಚಿತ್ರಿಸಲು ಕಲಿತಿದ್ದಿತು. ಅಂದಿನ ಇತಿಹಾಸದ ದೃಷ್ಟಿಯೂ ಹಾಗೆಯೇ ಇತ್ತು. ರಾಜನನ್ನೇ ಕೇಂದ್ರ ವಾಗಿರಿಸಿಕೊಂಡು ಇತಿಹಾಸವನ್ನು ಹೆಣೆಯುತ್ತಿದ್ದರು. ಮಹಾಭಾರತದಲ್ಲೂ 'ರಾಜಾ ಕಾಲಸ್ಯ ಕಾರಣಮ್' ಅಂದರೆ ರಾಜ ಕಾಲ ನಿರ್ಮಾಪಕ ಎಂಬ ಉಲ್ಲೇಖ ಇದೆ. ಕಲ್ಹಣ ಹಿಂದಿನ ಕಾಶ್ಮೀರದ ಹನ್ನೊಂದು ಇತಿಹಾಸಗಳನ್ನೂ ಓದಿ ಮುಗಿಸಿದ್ದನು. ಆದರೆ ಅವುಗಳಲ್ಲಿ ಯಾವುದೂ ಈಗ ದೊರಕುವುದಿಲ್ಲ. ಆದ್ದರಿಂದಲೇ ಕಲ್ಹಣನ ಮಹತ್ವ ಇನ್ನೂ ಹೆಚ್ಚಾಗುವುದು.

ಕಲ್ಹಣ ರಾಜ ಹರ್ಷನ ಮೃತ್ಯುವಿನ ವರ್ಣನೆಯನ್ನು ವಿಸ್ತಾರವಾಗಿ ಮಾಡಿದ್ದಾನೆ. ಹರ್ಷನ ಕೊಲೆಯಾದಾಗ ಅವನ ಬಳಿ ಇದ್ದ ಮುಕ್ತನೆಂಬ ಸ್ವಾಮಿಭಕ್ತ ಸೇವಕ ಶತ್ರುಗಳ ಕೈಯಿಂದ ಹೇಗೋ ಪಾರಾಗಿ ಹರ್ಷನ ಹತ್ಯೆಯ ಎಲ್ಲ ಸಮಾಚಾರವನ್ನೂ ಕಲ್ಹಣನಿಗೆ ತಿಳಿಸಿದ.

ಕಲ್ಹಣ ತನ್ನ ಚಿಕ್ಕಪ್ಪ ಕನಕ ಕಾಶಿಯುಲ್ಲಿದ್ದನೆಂದು ಬರೆದಿರುವನು. ಆದರೆ ಆತನ ಜನನ ಸ್ಥಾನ ಪರಿಹಾಸಪುರ. ಮುಕ್ಕಾಲುಪಾಲು ಕಲ್ಹಣ ತನ್ನ ತಂದೆ ವಾಸ ವಾಗಿದ್ದ ಪರಿಹಾಸಪುರದಲ್ಲೇ ಜನಿಸಿರಬೇಕು.

ಸ್ವರ್ಗಕ್ಕೆ ಹೋಗುವ ಮುನ್ನ ರಾಮ ತನ್ನ ಮಕ್ಕಳನ್ನು ಕರೆದು ರಾಜ್ಯವನ್ನು ಹಂಚಿದನೆಂಬುದನ್ನು ರಾಮಾಯಣದಲ್ಲಿ ಓದಿರುವೆವು. ಈ ಹಂಚಿಕೆಯಲ್ಲಿ ಆತ ತನ್ನ ಮಕ್ಕಳಾದ ಲವಕುಶರಿಗೆ ಕಾಶ್ಮೀರದಲ್ಲಿ ಲವಪುರಿ ಮತ್ತು ಕುಶಪುರಿ ಎಂಬ ರಾಜ್ಯಗಳನ್ನಿತ್ತ. ಕಲ್ಹಣ ಕಾಶ್ಮೀರದ ಅರಸುಗಳ ವರ್ಣನೆಯಲ್ಲಿ ಲವಕುಶರನ್ನೂ ಸೇರಿಸಿರುವನು.

ಕಲ್ಹಣನ ವೈಯಕ್ತಿಕ ಜೀವನದ ಅಂಶ ಗೊತ್ತಿರುವುದು ಅಲ್ಪ. ಅದರ ವಿಷಯವಾಗಿ ಈಗ ಸಾಕಷ್ಟು ಅನ್ವೇಷಣೆಗಳು ನಡೆಯುತ್ತಿವೆ. ಹೇಗಾದರಾಗಲಿ ಕಾಶ್ಮೀರದ ಇತಿಹಾಸಕಾರನ ರೂಪದಲ್ಲಿ ಸಾಹಿತ್ಯದ ಈ ಅಮರ ವ್ಯಕ್ತಿ ಸದಾ ಕಾಲ ತನ್ನ ಪ್ರಕಾಶವನ್ನು ಹರಡುತ್ತಿರುವನು.

ಜಯದೇವ

ವಿಶ್ವದ ಗಣನೀಯ ಭಾಷೆಗಳಲ್ಲಿ ಸಂಸ್ಕೃತವೂ ಒಂದು. ಈಗ ನಮ್ಮ ದೇಶದಲ್ಲಿ ಸಂಸ್ಕೃತ ಮಾತಾಡುವವರ ಸಂಖ್ಯೆ ಕಡಿಮೆ ಇದ್ದರೂ ಒಂದಾನೊಂದು ಕಾಲದಲ್ಲಿ ಸಂಸ್ಕೃತವೇ ವಿದ್ವಾಂಸರ ಭಾಷೆಯಾಗಿತ್ತು. ಜಯದೇವ ಈ ಭಾಷೆಯ ಅತ್ಯಂತ ಮಧುರ ಕವಿ. ವಿಷಾದದ ಸಂಗತಿ ಎಂದರೆ ಆತ 'ಗೀತಾಗೋವಿಂದ' ಒಂದನ್ನು ಬಿಟ್ಟು ಮತ್ತಾವ ಕಾವ್ಯವನ್ನೂ ರಚಿಸಲಿಲ್ಲ. ಗೀತಾಗೋವಿಂದ ಒಂದರಿಂದಲೇ ಅಮರನಾದ ಜಯದೇವನ ಸಮಾನನಾದ ಕವಿ ಸಂಸ್ಕೃತದಲ್ಲಿ ಪ್ರಪಂಚದ ಮತ್ತಾವ ಭಾಷೆಯಲ್ಲೂ ದೊರೆಯುವುದು ಕಡಿಮೆ. ಗೀತಾ ಗೋವಿಂದ ಅಮೃತದ ಧಾರೆಯನ್ನೇ ಹರಿಸುತ್ತದೆ.

ಜಯದೇವ ಬಂಗಾಳದ "ಕೇಂದು ಬಿಲ್ವ"ವೆಂಬ ಸಣ್ಣ ಹಳ್ಳಿಯಲ್ಲಿ ಜನಿಸಿದ. ಅವನು ಹುಟ್ಟಿದ ದಿನ ಯಾವುದೆಂದು ಹೇಳಲಾಗದಿದ್ದರೂ ಹನ್ನೆರಡನೆ ಶತಮಾನಕ್ಕೆ ಸೇರಿದವನೆಂದು ಧಾರಾಳವಾಗಿ ಹೇಳಬಹುದು. ಆ ಕಾಲದಲ್ಲಿ ಬಂಗಾಳದಲ್ಲಿ ಸೇನ ವಂಶದ ರಾಜ ಲಕ್ಷ್ಮಣಸಿಂಹ ರಾಜ್ಯವಾಳುತ್ತಿದ್ದನು. ದೆಹಲಿಯ ಸಿಂಹಾಸನದಲ್ಲಿ ಚೌಹಾನ ವಂಶದ ಬಾದಶಹನಿದ್ದನು.

ಜಯದೇವನ ತಂದೆ ಭೋಜದೇವ. ತಾಯಿ ರಾಮದೇವಿ. ಬಾಲ್ಯದಲ್ಲೇ ಆತ ತಂದೆ ತಾಯಿಗಳ ವಾತ್ಸಲ್ಯದಿಂದ ವಂಚಿತನಾದ. ಇಬ್ಬರೂ ಅಲ್ಪ ಕಾಲದಲ್ಲೇ ದೈವಾಧೀನರಾದರು. ಈ ಘಟನೆ ಅವನ ಜೀವನದ ದಿಕ್ಕನ್ನೇ ಬದಲಿಸಿತು. ಪದ್ಮಾವತಿ ಎಂಬ ಕನ್ಯೆಯೊಡನೆ ಆತನ ವಿವಾಹವಾಯಿತು. ಜಯದೇವನ ವಿವಾಹ ಸಂಗತಿಯೂ ಕುತೂಹಲಕಾರಿಯಾಗಿದೆ. ಪದ್ಮಾವತಿಯ ತಂದೆಯ ಕನಸಿನಲ್ಲಿ ಜಗನ್ನಾಥಸ್ವಾಮಿ ಬಂದು ಜಯದೇವನಿಗೆ ನಿನ್ನ ಮಗಳನ್ನು ಕೊಡು ಎಂದು ಹೇಳಿದಂತಾಗಲು ಆತ ಊರಿನ ಒಂದು ವೃಕ್ಷದ ಕೆಳಗೆ ಮಗಳನ್ನು ಜಯದೇವನಿಗೆ ಒಪ್ಪಿಸಿದನೆಂದು ಹೇಳುವರು.

ಪದ್ಮಾವತಿಯೂ ಧಾರ್ಮಿಕ ವಿಚಾರದಲ್ಲಿ ಶ್ರದ್ಧೆಯುಳ್ಳವಳು. ವೈವಾಹಿಕ

ಜೀವನ ನೆಮ್ಮದಿಯಾಗಿಯೇ ಕಳೆಯಿತು. ಪರಸ್ಪರ ಅನುರಾಗದಿಂದಿರುತ್ತಿದ್ದರು. ಒಬ್ಬರನ್ನು ಬಿಟ್ಟು ಮತ್ತೊಬ್ಬರು ಇರುತ್ತಲೇ ಇರಲಿಲ್ಲ. ಪದ್ಮಾವತಿಯು ಜಯದೇವನ ಜೀವನದಲ್ಲಿ ಆಳವಾದ ಪ್ರಭಾವವನ್ನು ಬೀರಿದಳು. ಕಾವ್ಯಶಕ್ತಿಗೆ ಆಕೆಯಿಂದಲೇ ಪ್ರೇರಣೆ ದೊರೆಯಿತು.

ಕೆಲವು ಕಾಲದ ನಂತರ ಜಯದೇವ ಬೃಂದಾವನ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶಗಳನ್ನು ನೋಡಲು ಹೊರಟ. ಕೃಷ್ಣನ ಬಾಲ್ಯವು ಬೃಂದಾವನದಲ್ಲೇ ಕಳೆದಿತ್ತು. ಅಲ್ಲೇ ಆತ ಗೋಪಿಯರೊಡನೆ ಆಟವಾಡುತ್ತಿದ್ದನು ಮತ್ತು ರಾಧೆಯ ಅನುರಾಗ ಉದಯಿಸಿದ್ದೂ ಅಲ್ಲೇ. ಕೃಷ್ಣ ದೊಡ್ಡವನಾದ ಮೇಲೆ ಬೃಂದಾವನದಿಂದ ಮಥುರಾ ಮತ್ತು ಅಲ್ಲಿಂದ ದ್ವಾರಕೆಗೆ ತಲುಪಿದನು. ಗೀತಾ ಗೋವಿಂದದಲ್ಲಿ ಜಯದೇವ ಕೃಷ್ಣನ ಲೀಲಾ ವಿನೋದವನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಬೃಂದಾವನದ ಯಮುನಾ ನದಿ, ಗಿಡ ಮರಗಳು ಮುಂತಾದುವನ್ನು ನೋಡಿದಾಗ ಪರವಶನಾಗುತ್ತಿದ್ದ. ಅವನ ಗೀತಾಗೋವಿಂದದಲ್ಲಿ ಈ ದೃಶ್ಯವೇ ಸಾಕಾರಗೊಂಡಿದೆ.

ಜಯದೇವ ಬಂಗಾಳಕ್ಕೆ ಬಂದು ಅಲ್ಲಿಯ ರಾಜಾಸ್ಥಾನದ ಪಂಚರತ್ನಗಳಲ್ಲಿ ಒಬ್ಬನಾಗಿ ರಾಜನ ಕೀರ್ತಿಯನ್ನು ಹೆಚ್ಚಿಸಿದನು. ಒಮ್ಮೆ ಜಯದೇವ ಬೇರೆಲ್ಲೋ ಹೋಗಿರುವಾಗ ರಾಣಿಗೆ ಒಂದು ತಮಾಷೆ ಮಾಡಬೇಕೆಂದು ಹೊಳೆಯಿತು. ಜಯದೇವ ಮಡಿದನೆಂದು ಆಕೆ ಪದ್ಮಾವತಿಗೆ ತಿಳಿಸಿದಳು. ಪದ್ಮಾವತಿ ಜಯದೇವನನ್ನು ಹೆಚ್ಚು ಪ್ರೀತಿಸುತ್ತಿದ್ದಳು. ಆ ಸಮಾಚಾರ ಕೇಳುತ್ತಲೇ ಅತೀವ ದುಃಖದಿಂದ ಜ್ಞಾನ ತಪ್ಪಿ ಕೆಳಗುರುಳಿದಳು. ತಕ್ಷಣ ಆಕೆಯ ಪ್ರಾಣಪಕ್ಷಿ ಹಾರಿತು.

ಜಯದೇವನಿಗೆ ಈ ಸಂಗತಿ ತಿಳಿದಾಗ ಆತನ ಮನಸ್ಸೂ ಒಡೆಯಿತು. ರಾಜನ ಬಳಿ ಇರುವುದೇ ಬೇಡವೆಂದು ತೀರ್ಮಾನಿಸಿ ತನ್ನ ಹಳ್ಳಿಗೆ ಹಿಂತಿರುಗಿದನು. ಆತ ತನ್ನ ಜೀವನದ ಉಳಿದ ಸಮಯವನ್ನು ಅಲ್ಲೇ ಒಂಟಿಯಾಗಿ ಕಳೆದನು. ಆತನ ಮೃತ್ಯುವಾದ ಮೇಲೆ ಅನೇಕ ಶತಮಾನಗಳವರೆಗೆ ಕೇಂದು ಬಿಲ್ವದಲ್ಲಿ ಪ್ರತಿ ವರುಷವೂ ಆತನ ಜನನ ದಿನದಂದು ಉತ್ಸವ ನಡೆಸಿ ರಾತ್ರಿ ಅವನು ರಚಿಸಿದ ಗೀತೆಗಳನ್ನು ಶ್ರದ್ಧೆಯಿಂದ ಹಾಡುತ್ತಿದ್ದರು.

ಆತ ತನ್ನ ಅಮೂಲ್ಯ ಗ್ರಂಥವಾದ ಗೀತಾಗೋವಿಂದವನ್ನು ಪುರಿಯಲ್ಲಿ

ರಚಿಸಿದನು. ಇದರಲ್ಲಿ ರಾಧಾ ಮತ್ತು ಕೃಷ್ಣನ ಪ್ರೇಮ ಕಥೆ ಇರುವುದು. ಗೀತಾಗೋವಿಂದದಂತಹ ಪ್ರೇಮಕಾವ್ಯ ಪ್ರಪಂಚದ ಮತ್ತಾವ ಭಾಷೆಯಲ್ಲೂ ದೊರಕಲಾರದು. ಅದರ ಪ್ರತಿಯೊಂದು ಪಂಕ್ತಿಯಲ್ಲೂ ನೂಪುರದ ಝುಂಕಾರ ಕೇಳಿಬರುವುದು. ಉದಾಹರಣೆಗೆ ನೋಡಿ—

ಲಲಿತ ಲವಂಗ ಲತಾ ಪರಿಶೀಲನ ಕೋಮಲ ಮಲಯ ಸಮೀರೇ
ಮಧುಕರ ನಿಕರಕರಂಬಿತ ಕೋಕಿಲ ಕೂಜಿತ ಕುಂಜ ಕುಟೀರೇ
ವಿಹರತಿ ಹರಿರಿತಿ ಸರಸ ವಸಂತೇ ||
ನೃತ್ಯತಿ ಯುವತಿ ಜನೇನ ಸಮಂ ಸಖಿ! ವಿರಹಿಜನಸ್ಯ ದುರಂತೇ ||

ಗೀತಾಗೋವಿಂದದಲ್ಲಿ ಕೇವಲ ಮೂರು ಪಾತ್ರಗಳಿವೆ. ರಾಧೆ, ಕೃಷ್ಣ ಮತ್ತು ಅವರ ಸಂದೇಶಗಳನ್ನೊಯ್ಯುವ ಸಖಿ. ಕೃಷ್ಣ ರಾಧೆಯಿಂದ ಬೇರೆಯಾದಾಗ, ರಾಧೆ ಕುಪಿತಳಾದಾಗ ಇಬ್ಬರೂ ವಿರಹದಿಂದ ಒದ್ದಾಡುವರು. ಒಬ್ಬರನ್ನು ಬಿಟ್ಟು ಮತ್ತೊಬ್ಬರು ಇರಲಾರರೆಂದು ಇಬ್ಬರಿಗೂ ತಿಳಿದಿದ್ದರೂ ಕೋಪಗೊಂಡವರಂತೆ ನಟಿಸುವರು. ಆ ಸಮಯದಲ್ಲಿ ಅವರ ಮನದ ವಾಸ್ತವಿಕ ಭಾವವನ್ನು ವ್ಯಕ್ತಪಡಿಸುವಳು ಆ ಸಖಿ.

ಗೀತಾಗೋವಿಂದದ ಮೊದಲನೇ ಶ್ಲೋಕದಲ್ಲೇ ಕೃಷ್ಣ ದಿನವೆಲ್ಲಾ ರಾಧೆ ಮತ್ತು ಗೋಪಿಗಳೊಡನೆ ಆಟವಾಡುತ್ತಾ ಗಲಭೆ ಮಾಡುತ್ತಿರುವನು. ಸೂರ್ಯ ಕಣ್ಮರೆಯಾದ ಕೂಡಲೇ ಮನೆಗೆ ಹೋಗಬೇಕಾಯಿತು. ಆಗ ಕೃಷ್ಣ ಕೇವಲ ಎಂಟು ವರುಷದವನು. ಕತ್ತಲೆ ಕವಿಯುತ್ತಿರುವಾಗ ಕೃಷ್ಣ ಒಬ್ಬನನ್ನೇ ಕಳುಹಿಸುವುದು ಉಚಿತವಲ್ಲ. ರಾಧೆಯೂ ಜೊತೆಗೆ ನಡೆದಳು. ಯಮುನಾ ನದಿಯ ದಂಡೆಯಲ್ಲಿ ನಿರ್ಜನ ಪ್ರದೇಶದಲ್ಲಿ ಗಿಡಮರಗಳ ನಡುವೆ ರಾಧೆ ಮತ್ತು ಕೃಷ್ಣ ಇಬ್ಬರೇ ಹೋಗುತ್ತಿರುವರು. ಆಗ ಅವರಲ್ಲಿ ಪ್ರೇಮಾಂಕುರವಾಯಿತು.

ಅನಂತರ ಕವಿ ರಸಗಳ ವರ್ಣನೆ ಮಾಡಿದ್ದಾನೆ. ಅನ್ಯ ಗೋಪಿಯರೊಡನೆ ಕೃಷ್ಣ ಕುಣಿಯುತ್ತಿರುವುದು ರಾಧೆಗೆ ಸರಿಹೋಗುವುದಿಲ್ಲ. ಆಕೆ ಕೋಪಗೊಂಡು ಸಮೀಪದ ಕುಂಜವೊಂದಕ್ಕೆ ಪ್ರವೇಶಿಸಿದಳು. ಹಿಂದೆ ಹಿಂದೆ ಆಕೆಯ ಸಖಿಯೂ ಬರುವಳು. ಕೃಷ್ಣನನ್ನು ನೋಡಬೇಕೆಂದು ಆಕೆಯೊಡನೆ ರಾಧೆ ಮನಬಿಚ್ಚಿ ಕೇಳಿದಳು.

ಗೋಪಿಯರ ಮಧ್ಯೆ ರಾಧೆ ಇಲ್ಲದಿರುವುದನ್ನು ಕಂಡಾಗ ಕೃಷ್ಣನಿಗೂ ಬೇಸರ ವಾಯಿತು. ಒಬ್ಬನೇ ವಾಟಿಕೆಯೊಂದರಲ್ಲಿ ಕುಳಿತು ಅನ್ಯಾಯವಾಗಿ ರಾಧೆಗೆ ಕೋಪ ಉಂಟುಮಾಡಿದೆನಲ್ಲಾ ಎಂದು ಪಶ್ಚಾತ್ತಾಪಪಟ್ಟನು. ಆಗ ಸಖಿ ಅವರಿಬ್ಬರ ಮನೋಭಾವವನ್ನೂ ಹೊರಗೆಡವಿದಳು. ರಾಧೆಯೂ ನಾನಿಲ್ಲದೆ ಬೇಸತ್ತಿರುವಳೆಂದು ತಿಳಿದು ಕೃಷ್ಣನಿಗೂ ಸಂತೋಷವಾಯಿತು. ಪ್ರೇಮಿಗಳಿಬ್ಬರೂ ಒಂದುಗೂಡಿದರು.

ರಾಧೆ ಮತ್ತು ಕೃಷ್ಣನ ಪ್ರೇಮಚಿತ್ರ ಗೀತಾಗೋವಿಂದದಲ್ಲಿ ಚಿತ್ರಿಸಿರುವಂತೆ ಅಲೌಕಿಕವಾದುದು. ಕಾರಣ ಅಲ್ಲಿ ಚಿತ್ರಿತನಾಗಿರುವ ಬಾಲಕ ಕೃಷ್ಣನಿಗೆ ಕೇವಲ ಎಂಟು ವರುಷ ವಯಸ್ಸು. ಆತನ ಮುರಳೀನಾದಕ್ಕೆ ಆಕರ್ಷಿತರಾಗಿ ಬರುವ ವ್ರಜದ ಗೋಪಿಯರು ಸಾಧಾರಣ ಸ್ತ್ರೀಯರಲ್ಲ. ಅವರಿಗೊಂದು ವಿಧದ ಹುಚ್ಚು. ಕೃಷ್ಣನ ಪ್ರೇಮದಲ್ಲಿ ಅವರೆಷ್ಟು ಮುಳುಗಿದ್ದರೆಂದರೆ ಯಾವ ವೇಷದಲ್ಲೇ ಇರಲಿ, ಯಾವ ಕೆಲಸವೇ ಮಾಡುತ್ತಿರಲಿ ಎಲ್ಲವನ್ನು ಮರೆತು ಮುರಳಿಯ ಧ್ವನಿಯ ಹಿಂದೆ ಓಡುತ್ತಿದ್ದರು. ಜಯದೇವ ಪ್ರಾರಂಭಿಸಿದ ಕೃಷ್ಣಭಕ್ತಿ ಶಾಖೆಯಿಂದ ಮುಂದೆ ಅನೇಕ ಕವಿಗಳು ಪ್ರಭಾವಿತರಾದರು. ವಿದ್ಯಾಪತಿ ಮತ್ತು ಚಂಡೀದಾಸರು ಇವರಲ್ಲಿ ಪ್ರಮುಖ ವ್ಯಕ್ತಿಗಳು. ವಿದ್ಯಾಪತಿಯ ಮೇಲೆ ಜಯದೇವನ ಪ್ರಭಾವ ಯಾವ ಪ್ರಮಾಣದಲ್ಲಿ ಇದ್ದಿತೆಂದರೆ ಆತನ ಆಶ್ರಯ ರಾಜ ಶಿವಸಿಂಹನು 'ಅಭಿನವ ಜಯದೇವ'ನೆಂಬ ಬಿರುದನ್ನು ಕೊಟ್ಟನು. ಸಾಮಾನ್ಯವಾಗಿ ಗೀತಾಗೋವಿಂದದ ಗೀತೆಗಳು ಭಾರತದಲ್ಲೆಲ್ಲಾ ಪ್ರಚಲಿತವಾಗಿದ್ದರೂ ದಕ್ಷಿಣ ಭಾರತದಲ್ಲಿ ಹೆಚ್ಚು ಜನಪ್ರಿಯವಾಗಿವೆ ಇಂದೂ ಅನೇಕರು ಅವುಗಳನ್ನು ಉತ್ಸಾಹದಿಂದ ಹಾಡುತ್ತಾರೆ.

ಗೀತಾಗೋವಿಂದದ ಗೀತೆಗಳಲ್ಲಿ ಮಂತ್ರಮುಗ್ಧಗೊಳಿಸುವ ಪ್ರಭಾವವಿದೆ. ಈ ಬಗ್ಗೆ ಘಟನೆಯೊಂದು ಹೀಗಿದೆ—ಬೆಳಗಿನಜಾವ ದಿನಕರನಿನ್ನೂ ಉದಯಿಸಿರ ಲಿಲ್ಲ. ಮಾವಿನ ಸುಗಂಧವನ್ನು ಹೊತ್ತ ವಸಂತ ಸಮೀರ ಸುಳಿಯುತ್ತಿತ್ತು. ಚೈತನ್ಯ ಮಹಾಪ್ರಭುವು ಆಗ ಪುರಿಯಲ್ಲಿ ದಿನ ಕಳೆಯುತ್ತಿದ್ದರು. ಅವರು ಜಗನ್ನಾಥನ ದೇವಸ್ಥಾನದ ಬಳಿ ಹೋಗುತ್ತಿರುವಾಗ ಒಂದು ಮಧುರ ಗೀತೆಯು ಕೇಳಿಬಂದಿತು. ಆ ಗೀತೆ ಜಯದೇವನ–ಲಲಿತ ಲವಂಗಲತಾ ಪರಿಶೀಲನ ಕೋಮಲ ಮಲಯ ಸಮೀರೇ—ಯಾಗಿದ್ದಿತು.

ಗೀತೆ ಕೇಳಿಬರುತ್ತಲೇ ಇತ್ತು. ಚೈತನ್ಯ ಮಹಾಪ್ರಭು ಅದರಲ್ಲೇ ಮಗ್ನರಾಗಿದ್ದರು. ಕಡೆಗೆ ಅದು ಕೇಳಿಬರುತ್ತಿದ್ದ ದಿಕ್ಕಿನತ್ತ ಓಡತೊಡಗಿದರು. ಅವರು ಹಾಡುತ್ತಿದ್ದ ವ್ಯಕ್ತಿಯನ್ನು ತಬ್ಬಿಕೊಳ್ಳುವುದರಲ್ಲಿದ್ದರು. ಅಷ್ಟರಲ್ಲಿ ಜನಗಳು ಅವರನ್ನು ದೂರ ಎಳೆದರು. ಹಾಡುತ್ತಿದ್ದವಳು ದೇವದಾಸಿ. ಚೈತನ್ಯರಾದರೋ ಸನ್ಯಾಸಿ. ಸನ್ಯಾಸಿಯು ದೇವದಾಸಿಯನ್ನು ಮುಟ್ಟಬಹುದೇ ?

ಜಯದೇವ ಕೇವಲ ಕವಿಗಳು ಮತ್ತು ಸಂತರ ಮೇಲೆ ಪ್ರಭಾವವನ್ನು ಬೀರಲಿಲ್ಲ. ಚಿತ್ರಕಾರರೂ ಪ್ರಭಾವಿತರಾದರು. ಪುರಿಯಿಂದ ಆಚೆ ಇರುವ ಜಮ್ಮು ಮತ್ತು ಕಾಂಗಡದಲ್ಲಿ ಚಿತ್ರಕಾರರು ಗೀತಾಗೋವಿಂದದ ಘಟನೆಗಳ ಆಧಾರದ ಮೇಲೆ ಚಿತ್ರವನ್ನು ನಿರ್ಮಿಸಿರುವರು. ಆ ಚಿತ್ರಗಳು ಬಹಳ ಸುಂದರವಾಗಿವೆ. ಅವನ್ನು ಬಸಾಲಿ ಶೈಲಿಯ ಚಿತ್ರವೆನ್ನುವರು. ಬಸಾಲಿ ಪಂಜಾಬಿನ ಒಂದು ಜಹಗೀರಾಗಿದ್ದಿತು. ಅಲ್ಲಿಯ ರಾಣಿ ಮಾಲಿನಿ ಚಿತ್ರಕಲೆಯ ಪ್ರೇಮಿಯಾಗಿದ್ದಳು. ಅವಳ ಹೇಳಿಕೆಯ ಮೇಲೆ ಈ ಚಿತ್ರಗಳನ್ನು ಚಿತ್ರಿಸಿರುವರೆಂದು ಹೇಳುವರು.

ಗೀತಾಗೋವಿಂದ ಕಾವ್ಯವಾದರೂ ನಾಟಕದ ಗುಣವೂ ಅದರಲ್ಲುಂಟು. ಅದನ್ನು ಭಾರತವೇ ಅಲ್ಲದೆ ಅನೇಕ ಪರದೇಶದವರೂ ಪ್ರಶಂಸಿಸಿರುವರು. ಲ್ಯಾಟಿನ್, ಇಂಗ್ಲಿಷ್, ಜರ್ಮನ್, ಫ್ರೆಂಚ್ ಮುಂತಾದ ಅನೇಕ ವಿದೇಶೀ ಭಾಷೆಗಳಲ್ಲಿ ಅದರ ಅನುವಾದ ದೊರೆಯುವುದು.

ಬಸವಣ್ಣ

ಬಸವೇಶ್ವರರು ಅಥವಾ ಬಸವಣ್ಣನವರು ಆರಾಧ್ಯ ಸಂಪ್ರದಾಯದ ಮಾದಿರಾಜನೆಂಬ ವಿದ್ವಾಂಸನಾದ ಬ್ರಾಹ್ಮಣನ ಪುತ್ರರು. ಅವರ ತಾಯಿಯ ಹೆಸರು ಮಾದಲಾಂಬೆ. ಬಸವಣ್ಣನವರು ಮೈಸೂರು ರಾಜ್ಯದ ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ಅವರ ಸೋದರಮಾವ ಬಲದೇವ ಕಲ್ಯಾಣದ ರಾಜ ಬಿಜ್ಜಳರಾಯ (ಕ್ರಿ.ಶ. ೧೧೫೭-೧೧೬೭)ನ ಮಂತ್ರಿಯಾಗಿದ್ದನು. ಬಸವಣ್ಣನವರು ಮಾವನ ಮನೆಯಲ್ಲೇ ಇದ್ದು ಅವನಿಂದ ರಾಜಕೀಯ ಮರ್ಮವನ್ನು ಕಲಿತರು. ಬಲದೇವನ ಮೃತ್ಯುವಾದನಂತರ ಬಿಜ್ಜಳರಾಯ ಬಸವಣ್ಣನವರ ದಕ್ಷತೆಗೆ ಮಾರುಹೋಗಿ ಅವರನ್ನು ಮಂತ್ರಿಯನ್ನಾಗಿ ಮಾಡಿಕೊಂಡನು.

ಬಸವಣ್ಣನವರು ಅತ್ಯಂತ ಧಾರ್ಮಿಕ ವ್ಯಕ್ತಿ. ರಾಜಕಾರ್ಯದಿಂದ ಬಿಡುವು ದೊರಕಿದಾಗ ಸಾಧುಸಜ್ಜನರ ಸೇವೆ ಮಾಡುತ್ತಿದ್ದರು. ರಾಜಕೋಶವೇ ಅವರ ಅಧೀನದಲ್ಲಿತ್ತು. ಶೈವ ಸಾಧುಗಳಿಗಾಗಿ ಅದರ ಹಣವೆಲ್ಲಾ ವೆಚ್ಚವಾಗುತ್ತಿತ್ತು. ಇದನ್ನೇ ನೆಪ ಮಾಡಿಕೊಂಡು ಅವರ ವೈರಿಗಳು ರಾಜನಿಗೆ ಚಾಡಿ ಹೇಳಲು ಪ್ರಾರಂಭಿಸಿದರು. ಕ್ರಮೇಣ ರಾಜನ ಮನಸ್ಸೂ ಬದಲಿಸಿತು. ಬಸವಣ್ಣನವರ ಮಿತ್ರರೇ ಶತ್ರುಗಳಾದರು. ತಮ್ಮನ್ನು ಹಿಡಿಯಲು ಪ್ರಯತ್ನಿಸುತ್ತಿರುವರೆಂದು ತಿಳಿಯುತ್ತಲೇ ಬಸವಣ್ಣನವರು ಅಲ್ಲಿಂದ ಓಡಿಹೋದರು. ರಾಜನ ಕಡೆಯವರು ಅವರನ್ನು ಹಿಂಬಾಲಿಸಿ ನಿರಾಶರಾಗಲು ಸ್ವತಃ ರಾಜನೇ ದೊಡ್ಡ ಸೈನ್ಯದೊಡನೆ ಹೊರಟನು. ಪ್ರಜೆಗಳು ಬಸವಣ್ಣನವರನ್ನು ಬಹಳ ಪ್ರೀತಿಸುತ್ತಿದ್ದರು. ಆದುದರಿಂದ ರಾಜನೂ ಅವರ ಮುಂದೆ ನಿಲ್ಲಲಾರದೆ ಹೋದನು. ಸೋತು ಅಪಮಾನಗೊಂಡ ಆ ರಾಜ ಮುಂದೆ ಕೆಲವು ಕಾಲದ ನಂತರ ಬಸವಣ್ಣನವರನ್ನು ಕಲ್ಯಾಣಕ್ಕೆ ಆಹ್ವಾನಿಸಿದನು. ಹೀಗೆ ಬಸವಣ್ಣನವರು ಮತ್ತೆ ಶಿವಭಕ್ತರನ್ನು ಪೂಜಿಸುತ್ತಾ ಶೈವ ಮತವನ್ನು ದೃಢಪಡಿಸಿದರು.

ಕೆಲವು ಇತಿಹಾಸಕಾರರು ಬಸವಣ್ಣನವರನ್ನು ವೀರಶೈವ ಮತದ ಸಂಸ್ಥಾಪಕ

ರೆನ್ನುವರು. ಆದರೆ ವೀರಶೈವರು ತಮ್ಮ ಧರ್ಮವನ್ನು ಬಹಳ ಪ್ರಾಚೀನಕಾಲದ್ದೆಂದು ನಂಬಿರುವರು. ಬಸವಣ್ಣನವರು ಆ ಧರ್ಮದ ಸಮರ್ಥಕರೆಂದು ಮಾತ್ರ ಹೇಳ ಬಹುದು. ಬಸವ ಪುರಾಣದ ಹೇಳಿಕೆಯ ಪ್ರಕಾರ ಒಮ್ಮೆ ನಾರದ ಮಹರ್ಷಿ ಶಿವನ ಬಳಿ ಹೋಗಿ ಭೂಲೋಕದಲ್ಲಿ ವಿಷ್ಣುಭಕ್ತರು, ಬೌದ್ಧರು, ಜೈನರು ಮುಂತಾದ ವಿವಿಧ ಧರ್ಮದ ಅನುಯಾಯಿಗಳಿರುವರು. ಆದರೆ ಶಿವಭಕ್ತನೊಬ್ಬನೂ ಇಲ್ಲ. ಹಿಂದೆ ವಿಶ್ವೇಶ್ವರಾರಾಧ್ಯ, ಪಂಡಿತಾರಾಧ್ಯ, ಏಕೋರಾಮ ಮುಂತಾದವರು ಶಿವಭಕ್ತಿಯನ್ನು ಹರಡಿದ್ದರು. ಈಗ ಶೈವಗುರುಗಳೊಬ್ಬರೂ ಇಲ್ಲ ಎಂದು ಹೇಳಲು ಶಿವನು ಭೂಲೋಕದಲ್ಲಿ ಅವತರಿಸಿ ವೀರಶೈವ ಸಿದ್ಧಾಂತಗಳನ್ನು ಪ್ರಚಾರ ಮಾಡಲು ನಂದಿಗೆ ಅಪ್ಪಣೆ ಇತ್ತನು.

ಮೊದಲೇ ಹೇಳಿದಂತೆ ವೀರಶೈವ ಧರ್ಮವು ಬಸವಣ್ಣನವರ ಮೊದಲೇ ಜನಿಸಿತ್ತು. ಸಾಮರ್ಥ್ಯವುಳ್ಳ ವ್ಯಕ್ತಿಯೊಬ್ಬನ ಆವಶ್ಯಕತೆ ಇತ್ತು. ಕರ್ಣಾಟಕದ ಸುತ್ತಮುತ್ತ ಜೈನರು ಪ್ರಬಲರಾಗಿದ್ದರು. ಸಾಕಷ್ಟು ಸಂಖ್ಯೆಯಲ್ಲಿ ವೈಷ್ಣವರೂ ಇದ್ದಿರಬೇಕು. ಶೈವರಲ್ಲಿ ಅನೇಕರು ಎಲ್ಲಾ ದೇವರನ್ನೂ ಪೂಜಿಸುತ್ತಿದ್ದರು. ಕೇವಲ ಶಿವನನ್ನೇ ಆರಾಧಿಸುವ ಶೈವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರು.

ಶಿವಭಕ್ತಿಯಲ್ಲಿ ನಂಬಿಕೆ ಇಟ್ಟಿದ್ದ ಶೈವರ ಆಚಾರ ವಿಚಾರಗಳು ಅನ್ಯಧರ್ಮಕ್ಕೆ ಭಿನ್ನವಾಗಿದ್ದವು. ಶಿವನು ಸಚ್ಚಿದಾನಂದನಾಗಿದ್ದಾನೆ. 'ಸ್ಥಳ'ವೆಂಬುದು ಅವನ ಪಾರಿಭಾಷಿಕ ಹೆಸರು. ಈಶ್ವರನ ಶಕ್ತಿಯು ಕಂಪನದ ಕಾರಣ ಈ ಸ್ಥಳವೇ ಲಿಂಗಸ್ಥಳ ಮತ್ತು ಅಂಗಸ್ಥಳ ಎಂಬ ಎರಡು ರೂಪ ಹೊಂದುವುದು. ಲಿಂಗಸ್ಥಳ ಆರಾಧ್ಯದೇವ ಶಿವ. ಅಂಗಸ್ಥಳ ಜೀವ. ಹೀಗೆ ಶಕ್ತಿಗೆ ಎರಡು ರೂಪಗಳು. ರುದ್ರನ ಬಳಿ ಅದು ಯಮುನ ರೂಪದಲ್ಲಿದ್ದರೆ ಜೀವದ ಬಳಿ ಭಕ್ತಿಯ ರೂಪದಲ್ಲಿದೆ. ಈ ಭಕ್ತಿಯ ಸಹಾಯದಿಂದಲೇ ಜೀವವು ಪ್ರಪಂಚದ ಮಾಯಾ ಮೋಹದಿಂದ ದೂರವಿದ್ದು ಕೊನೆಗೆ ಶಿವೈಕ್ಯವನ್ನು ಪಡೆಯುವುದು. ಲಿಂಗವು ಶಿವನ ಪ್ರತೀಕ. ಶಿವನನ್ನು ಅನೇಕ ರೂಪದಲ್ಲಿ ಧ್ಯಾನಿಸಬಹುದು. ಶ್ರೀಪತಿಯು ಬ್ರಹ್ಮಸೂತ್ರದ ಮೇಲೆ ಭಾಷ್ಯ ಬರೆದು ವೀರಶೈವ ಮತದ ದಾರ್ಶನಿಕ ವಿಚಾರಗಳನ್ನು ಪ್ರತಿ ಪಾದಿಸಿರುವನು.

ವೀರಶೈವ ಮತದಲ್ಲಿ ಉಪನಯನದ ಸ್ಥಾನವನ್ನು ದೀಕ್ಷೆ ಪಡೆದಿದೆ. ಅ[illegible]ರ

ಮಂತ್ರ "ಓಂ ನಮಃ ಶಿವಾಯ". ಅವರು ಯಜ್ಞೋಪವೀತದ ಬದಲು ಲಿಂಗ ವನ್ನು ಧರಿಸುವರು. ಈ ಕಾರಣದಿಂದಲೇ ವೀರಶೈವರು ಲಿಂಗಾಯತರೆಂಬ ಹೆಸರಿನಿಂದಲೂ ಪ್ರಸಿದ್ಧರಾಗಿರುವರು. ಸ್ತ್ರೀ ಪುರುಷರಿಬ್ಬರೂ ದೀಕ್ಷೆ ಪಡೆದು ಲಿಂಗ ಧಾರಣೆ ಮಾಡಬಹುದು.

ವೀರಶೈವ ಮತದ ಅನೇಕ ದಾರ್ಶನಿಕ ಆಚಾರ ವಿಚಾರಗಳು ಬಸವಣ್ಣನವರ ಹಿಂದೆಯೇ ಇದ್ದವು. ಬಸವಣ್ಣನವರು ಶೈವ ಮತವನ್ನು ದೃಢಪಡಿಸಲು ಮತ್ತು ಹೆಚ್ಚು ವಿಸ್ತಾರಗೊಳಿಸಲು ರಾಜನೈತಿಕ ದೃಷ್ಟಿಯಿಂದ ಕೆಲವು ಬದಲಾವಣೆ ಮಾಡಿದರು. ಸಿಕ್ಕರು ಬದಲಾವಣೆ ಮಾಡಿಕೊಳ್ಳಲಿಲ್ಲವೇ ಹಾಗೆಯೇ. ಗುರು ನಾನಕದೇವನಿತ್ತ ಉಪದೇಶ ಸಿಕ್ಕರಿಗೆ ಪ್ರಾಣಕ್ಕೆ ಸಮಾನ. ಈಗಲೂ ಅದನ್ನು ಗೌರವಿಸುವರು. ಆದರೆ ಹತ್ತನೇ ಗುರುಗೋವಿಂದ ಸಿಂಹ ಆ ಧರ್ಮದಲ್ಲಿ ಕೆಲವು ಬದಲಾವಣೆ ಮಾಡಿ ಅದಕ್ಕೆ ಹೊಸ ರೂಪವನ್ನೇ ಇತ್ತು ಬೇರೆ ದಿಕ್ಕಿಗೆ ತಿರುಗಿಸಿದ. ಬಸವಣ್ಣನವರು ಮಾಡಿದುದೂ ಹೀಗೆಯೇ.

ಈಗಿನ ಲಿಂಗಾಯತರು ಮೂರ್ತಿ ಪೂಜಕರಲ್ಲ. ಅವರು ಲಿಂಗ ಮತ್ತು ಗುರುವನ್ನು ಪೂಜಿಸುವರು. ದೇವಸ್ಥಾನಕ್ಕೆ ಹೋಗಲೇಬೇಕೆಂಬ ನಿಯಮವಿಲ್ಲ. ಅವರ ಶ್ರೇಷ್ಠ ಐದು ಮಠಗಳು ಪ್ರಾಚೀನ ಆಚಾರ್ಯರಿಗೆ ಸಂಬಂಧಿಸಿದುವು. ಏಕೋರಾಮ ಮಠ ಹಿಮಾಚಲ ಪ್ರದೇಶದ ಕೇಧಾರನಾಥದಲ್ಲೂ, ಪಂಡಿತಾರಾಧ್ಯರದು ಶ್ರೀ ಶೈಲದಲ್ಲೂ, ರೇವಣರದು ಬಾಳೆ ಹಳ್ಳಿಯಲ್ಲೂ, ಮರುಳರದು ಉಜ್ಜಯಿನಿಯಲ್ಲೂ ಮತ್ತು ವಿಶ್ವಾರಾಧ್ಯರದು ಕಾಶಿಯಲ್ಲೂ ಇವೆ. ಸಾಮಾನ್ಯವಾಗಿ ಹೆಚ್ಚು ಸಂಖ್ಯೆಯಲ್ಲಿ ಲಿಂಗಾಯತರು ಇರುವ ಕಡೆ ಒಂದು ಮಠವಿರುವುದು. ಅದು ಈ ಐದು ಮಠಗಳಲ್ಲಿ ಒಂದರ ಶಾಖೆ. ಲಿಂಗಾಯತರಲ್ಲಿ ಎರಡು ಪಂಗಡವಿದೆ. ಜಂಗಮರು ಮತ್ತು ಅವರ ಅನುಯಾಯಿಗಳು ಒಂದು ಗುಂಪು. ಜಂಗಮರಲ್ಲೂ ಎರಡು ವಿಧ. ವಿರಕ್ತ ಜಂಗಮರು ಬ್ರಹ್ಮಚಾರಿಯಾಗಿದ್ದು ಮಠದಲ್ಲಿರುವರು. ಗೃಹಸ್ಥ ಜಂಗಮರು ಪೂಜೆ ದೀಕ್ಷೆ ಮುಂತಾದವನ್ನು ಮಾಡುವರು. ಲಿಂಗಾಯತರು ಶಾಕಾಹಾರಿಗಳು, ಸುರಾಪಾನ ಮಾಡುವುದಿಲ್ಲ. ಇವರಲ್ಲಿ ವಿಧವಾ ವಿವಾಹ ಪದ್ಧತಿ ಇದೆ. ಆದರೆ ಬಾಲ್ಯ ವಿವಾಹವಿಲ್ಲ. ಒಂದೇ ಜನ್ಮದಲ್ಲಿ ಮುಕ್ತಿ ಪಡೆಯಬಹುದೆಂಬ ನಂಬಿಕೆ ಇವರಿಗಿದೆ. ಜಾತಿ ಭೇದ ಇವರಲ್ಲಿಲ್ಲ.

ಇವುಗಳಲ್ಲಿ ಎಷ್ಟು ಸಿದ್ಧಾಂತಗಳು ಮತ್ತು ವಿಚಾರಗಳು ಬಸವಣ್ಣನವರದು ಎಂದು ಹೇಳುವುದು ಕಷ್ಟ. ಅನೇಕ ರೀತಿಯಲ್ಲಿ ಬಸವಣ್ಣನವರು ಲಿಂಗಾಯತ ಧರ್ಮವನ್ನು ಬ್ರಾಹ್ಮಣ ಧರ್ಮದಿಂದ ಬೇರೆ ಮಾಡಲು ಯತ್ನಿಸಿದರೆಂಬುದು ಬಹುಮಂದಿ ವಿದ್ವಾಂಸರ ಮತ. ಬಸವಣ್ಣನವರಿಂದಲೇ ಸ್ತ್ರೀಯರಿಗೆ ಅನೇಕ ಅಧಿಕಾರಗಳು ದೊರೆತಿರಬೇಕು. ಬ್ರಾಹ್ಮಣ, ಜೈನ ಮುಂತಾದ ಮತದವರು ಈ ಬಗ್ಗೆ ಆಕ್ಷೇಪವೆತ್ತಿ ಅವರನ್ನು ಅಪವಿತ್ರರೆಂದು ಸಾರಿದರು. ಲಿಂಗಾಯತ ಧರ್ಮದಲ್ಲಿ ಪುರುಷಗಿರುವ ಸರ್ವ ಅಧಿಕಾರವೂ ಸ್ತ್ರೀಯರಿಗೂ ಇವೆ. ಸ್ತ್ರೀಯೂ ಪುರುಷನಷ್ಟೇ ಪರಿಶುದ್ಧಳು. ಶೂದ್ರ ವೈಶ್ಯ ಮುಂತಾದ ಜಾತಿಯ ಜನಗಳಿಗೂ ಮುಕ್ತಿಯ ಬಾಗಿಲು ತೆರೆಯಿತು. ಶಿವದೀಕ್ಷೆ ಪಡೆಯುವ ಅಧಿಕಾರ ದೊರೆಯಿತು. ಜಾತಿ ಭೇದದಿಂದ ಕೂಡಿದ ಬ್ರಾಹ್ಮಣ ಧರ್ಮವು ಜೈನಧರ್ಮದ ಮುಂದೆ ನಿಲ್ಲಲಾರದಾಯಿತು. ಕಡೆಗೆ ವೀರಶೈವ ಧರ್ಮದ ಮುಂದೆ ಜೈನಧರ್ಮವು ನಿಲ್ಲಲಾರ ದಾಯಿತು. ವೀರಶೈವರು ಸುರಾಪಾನವನ್ನಾಗಲೀ, ಮಾಂಸ ಭಕ್ಷಣೆಯನ್ನಾಗಲೀ ಮಾಡುತ್ತಿರಲಿಲ್ಲ. ಈ ಕಾರಣ ಜೈನರಿಗೆ ಶೈವ ಧರ್ಮದ ಪಾಲನೆ ಕಷ್ಟವಾಗಿ ಕಂಡಿತು. ಬಸವಣ್ಣನವರು ಜೈನಧರ್ಮದ ವಿರುದ್ಧ ಬಲಪ್ರಯೋಗ ಮಾಡಿದ ರೆಂದೂ ಹೇಳುವುದುಂಟು. ಮುಂದೆಯೂ ಲಿಂಗಾಯಿತರನ್ನು ಒಟ್ಟುಗೂಡಿಸಲು ಭಾರತದ ಅನೇಕ ಮತಗಳೊಡನೆ ಸಮಾಜ ಸಂಘಟನೆಯ ಪದ್ಧತಿಯನ್ನು ಬಸವಣ್ಣ ನವರು ಜೈನರಿಂದ ಕಲಿತರೆಂಬುದು ಒಬ್ಬ ಆಂಗ್ಲ ವಿದ್ವಾಂಸನ ಅಭಿಪ್ರಾಯ. ವಾಸ್ತವವಾಗಿ ಇದು ನಮ್ಮ ದೇಶದ ಒಂದು ಪರಿಪಾಠ. ಶಾಕ್ತ ಧರ್ಮದ ಸಂಘಟನೆಯನ್ನು ಶಾಕ್ತ ಪೀಠಗಳು ಮಾಡುತ್ತಿದ್ದುವು. ಅದ್ವೈತಮತದ ಪ್ರವರ್ತಕ ರಾದ ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಬಸವಣ್ಣನವರು ಮುಂದೆ ಶಂಕರರು ಆದರ್ಶವಿತ್ತ ಜನಗಳ ಆವಶ್ಯಕತೆಯನ್ನು ಪೂರ್ಣಗೊಳಿಸುವ ಸಮಸ್ತ ಸಾಧನೆಗಳಿಗಿರುವ ಒಂದು ಸಮಾಜವನ್ನು ಒಂದುಗೂಡಿಸಿದರು.

ಬಸವಣ್ಣನವರು ದೃಢ ಪ್ರತಿಜ್ಞೆಯುಳ್ಳ ಕ್ರಿಯಾಶೀಲ ವ್ಯಕ್ತಿ. ತಮ್ಮ ಕಾಲದ ಆವಶ್ಯಕತೆಗಳನ್ನು ತಿಳಿದು ಅವುಗಳನ್ನು ಪೂರ್ಣಗೊಳಿಸಲು ಯತ್ನಿಸಿದರು. ಜಾತಿ ಭೇದದಲ್ಲಿ ಮುಳುಗಿದ್ದ ಹಿಂದೂ ಜಾತಿಯನ್ನು ಮೇಲೆತ್ತಲು ಯತ್ನಿಸಿದರು.

ಅವರ ಉಪದೇಶ ಕ್ರಾಂತಿಕಾರಿಯಾದುದು. ಈಶ್ವರ ಒಬ್ಬನೆಂದೂ ಆತನಿಗೆ ಆಕಾರವಿಲ್ಲವೆಂದೂ ಅವರು ಸಾರಿದರು. ತಾವೇ ಬ್ರಾಹ್ಮಣರಾಗಿದ್ದರೂ ಬ್ರಾಹ್ಮಣರ ವಿಶೇಷ ಅಧಿಕಾರಕ್ಕೆ ಕಂಟಕರಾದರು. ಸಮಾಜ ನಿರ್ಮಾಣಕ್ಕೆ ಬಸವಣ್ಣ ಎಂತಹ ಅಡಿಪಾಯ ಹಾಕಿದರೆಂಬುದಕ್ಕೆ ಲಿಂಗಾಯತರ ಈಗಿನ ಸ್ಥಿತಿಯೇ ಸಾಕ್ಷಿ. ಅವರಿಂದ ಕೆಲವು ತಪ್ಪೂ ಆಗಿರಬಹುದು. ಕೆಲವು ಅನುಚಿತ ಕೆಲಸ ಅವರಿಂದ ಜರುಗಿತು. ಆದರೆ ಅವರ ರಚನಾತ್ಮಕ ಕಾರ್ಯಗಳು ಮಹತ್ವಪೂರ್ಣವಾದವು. ಈ ಕಾರಣದಿಂದಲೇ ಅವರು ಭಾರತದ ಶ್ರೇಷ್ಠ ಧಾರ್ಮಿಕ ನಾಯಕರಲ್ಲಿ ಒಬ್ಬ ರೆಂದು ಪ್ರಸಿದ್ಧಿ ಪಡೆದಿರುವರು.

ಬಸವಣ್ಣನವರ ವಚನಗಳು ಕರ್ನಾಟಕದಲ್ಲಿ ಪ್ರಸಿದ್ಧಿಯಷ್ಟೇ ಅಲ್ಲ ಲೋಕ ಪ್ರಿಯವೂ ಆಗಿವೆ. ಎಲ್ಲಾ ಜಾತಿಯ ಮತ್ತು ಧರ್ಮದ ಜನಗಳೂ ಅವರ ವಚನ ಗಳನ್ನು ಗೌರವದ ದೃಷ್ಟಿಯಿಂದ ನೋಡುವರು. ತಮ್ಮ ಆದರ್ಶ ಮತ್ತು ಸಿದ್ಧಾಂತಗಳನ್ನು ವ್ಯಕ್ತಪಡಿಸಲು ಅವರು ಸರಳ ಕನ್ನಡ ಭಾಷೆಯನ್ನು ಪ್ರಯೋ ಗಿಸಿದರು. ಅವರ ವಚನಗಳು ಎಷ್ಟು ಲೋಕಪ್ರಿಯವಾದುವೆಂದರೆ ಕನ್ನಡ ಸಾಹಿತ್ಯದಲ್ಲಿ ಅವರಿಗೆ ಒಂದು ವಿಶಿಷ್ಟ ಸ್ಥಾನವೇ ದೊರೆಯಿತು. ಅವರ ಜೀವನ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಅವರ ವಿಚಾರಗಳು ಬಹಳ ಮಟ್ಟಿಗೆ ಕ್ರಾಂತಿಕಾರಿಯಾಗಿವೆ. ಅವರು ಜಾತಿಭೇದವಳಿಸಿ, ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂದು ಸಾರಿ, ಸ್ತ್ರೀಯರಿಗೂ ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಕೊಡಿಸಿದರು.

ಬಸವಣ್ಣನವರ ವಚನಗಳು ಹೀಗಿವೆ ನೋಡಿ :—

ನಾದಪ್ರಿಯ ಶಿವನೆಂಬರು–ನಾದಪ್ರಿಯ ಶಿವನಲ್ಲಯ್ಯಾ
ವೇದಪ್ರಿಯ ಶಿವನೆಂಬರು–ವೇದಪ್ರಿಯ ಶಿವನಲ್ಲವಯ್ಯಾ
ನಾದವ ಮಾಡಿದ ರಾವಳಿಂಗೆ ಅರೆಯಾಯುಷ್ಯವಾಯಿತ್ತು
ವೇದವ ನೋದಿದ ಬ್ರಹ್ಮನ ಶಿರ ಹೋಯಿತ್ತು!

ನಾದ ಪ್ರಿಯನೂ ಅಲ್ಲ, ವೇದ ಪ್ರಿಯನೂ ಅಲ್ಲ,
ಭಕ್ತಿ ಪ್ರಿಯ ನಮ್ಮ ಕೂಡಲ ಸಂಗಮದೇವ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ !

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ,
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ,
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲ ಸಂಗಮದೇವಾ ||

ಕಂಬನ್

ಹಿಂದಿಯಲ್ಲಿ ರಾಮಾಯಣವನ್ನು ರಚಿಸಿರುವ ಗೋಸ್ವಾಮಿ ತುಳಸೀದಾಸರ ವಿಚಾರವನ್ನು ತಾವು ಕೇಳಿರುವಿರಲ್ಲವೇ? ಅಂತೆಯೇ ದಕ್ಷಿಣ ಭಾರತದಲ್ಲಿ ಕಂಬನ್ ಎಂಬುವರು ತಮಿಳು ಭಾಷೆಯಲ್ಲಿ ರಾಮಾಯಣವನ್ನು ರಚಿಸಿರುವರು.

ಕಂಭರು ತಮಿಳುನಾಡಿನ ಚೋಳ ರಾಜ್ಯದ ತಿರುವಲಂದೂರಿನಲ್ಲಿ ಜನಿಸಿದರು. ಅವರ ಕಾಲ ಹನ್ನೆರಡನೆ ಶತಮಾನ. ಕೆಲವರು ಅವರು ಒಂಬತ್ತನೇ ಶತಮಾನ ದವರೆನ್ನುವರು.

ಕಂಬರ ಜೀವನಕ್ಕೆ ಸಂಬಂಧಿಸಿದ ವಿಶೇಷ ಸಂಗತಿಗಳಾವುವೂ ದೊರೆಯು ವುದಿಲ್ಲ. ಅವರ ನಿಜವಾದ ಹೆಸರೇನೆಂಬುದೇ ತಿಳಿಯದು. ಕಂಬನ್ ಎಂಬುದು ಅವರ ಅಡ್ಡ ಹೆಸರು. ಅವರ ತಂದೆ ತಾಯಿಗಳು ಕಂಬರನ್ನು ಬಾಲ್ಯದಲ್ಲೇ ಅನಾಥ ರನ್ನಾಗಿ ಮಾಡಿ ಕಣ್ಮುಚ್ಚಿದರು. ನೆಂಟರಿಷ್ಟರಾರೂ ಅನಾಥ ಮಗುವಿನ ಭಾರ ಹೊರಲು ಸಿದ್ಧರಿರಲಿಲ್ಲ. ವಲ್ಲಸುರನೆಂಬ ನೆಂಟನೊಬ್ಬನು ಅವರನ್ನು ತಿರುವೆಣ್ಣೆ ನೆಲ್ಲೂರಿನ (ದಕ್ಷಿಣ ಭಾರತದ ಅರ್ಕಾಟಕದಲ್ಲಿನ ಜಿಲ್ಲೆ) ಸಡೆಯಪ್ಪ ವಲ್ಲಲನ ಮನೆಯ ಬಳಿ ಬಿಟ್ಟುಹೋದರು.

ಸಡೆಯಪ್ಪ ವಲ್ಲಲ ಶ್ರೀಮಂತ ರೈತನಾಗಿದ್ದ. ದಾನ ಮಾಡುವುದರಲ್ಲಿ ಆತ ಎತ್ತಿದ ಕೈ. ಅವನ ತಾತ ಮುತ್ತಾತಂದಿರು ಪಾಂಡುಚೆರಿ ಬಂದರಿನ ಮೂಲಕ ವ್ಯಾಪಾರ ನಡೆಸುತ್ತಿದ್ದರು.

ಸಡೆಯಪ್ಪ ವಲ್ಲಲ್ಲ ಮನೆಯಿಂದ ಹೊರಗೆ ಬಂದಾಗ ಬಾಲಕ ಕಂಬನ್ ಕಣ್ಣಿಗೆ ಬಿದ್ದರು. ಆತ ತಕ್ಷಣ ಅವರನ್ನು ಒಳಕ್ಕೆ ಕರೆದೊಯ್ದ. ಅಂದಿನಿಂದ ಕಂಬನ್‌ನನ್ನು ತನ್ನ ಬಳಿ ಇರಿಸಿಕೊಂಡು ತನ್ನ ಮಕ್ಕಳಂತೆಯೇ ಸಾಕತೊಡಗಿದ. ಅವರೊಡನೆ ಕಂಬನ್ ವಿದ್ಯಾಭ್ಯಾಸವೂ ಆಯಿತು. ಬಾಲ್ಯದಿಂದಲೇ ಅವರು ಓದಿನಲ್ಲಿ ಚುರುಕಾಗಿದ್ದರು. ಅವರ ಆಸಕ್ತಿಯನ್ನು ನೋಡೇ ಸಡೆಯಪ್ಪ ವಲ್ಲಲ ತನ್ನ

ಮಕ್ಕಳ ಜೊತೆ ಅವರನ್ನೂ ಓದಿಸಿದನು. ಕೆಲವು ಕಾಲದ ನಂತರ ಕಂಬರು ವಿದ್ವಾಂಸರಾದರು. ಕವಿತೆ ಬರೆಯುವ ಹುಚ್ಚು ಅವರಿಗಿದ್ದಿತು. ಅವರ ಕವಿತ್ವ ಶಕ್ತಿಯನ್ನು ನೋಡಿ ಸಡೆಯಪ್ಪ ವಲ್ಲಲ ತನಗೆ ಸರಿಸಮಾನ ಪೀಠದಲ್ಲಿ ಅವರನ್ನೂ ಕುಳ್ಳಿರಿಸುತ್ತಿದ್ದನು.

ಸಡೆಯಪ್ಪ ವಲ್ಲಲ ದಕ್ಷಿಣ ಭಾರತದ ಚೋಳರಾಜ್ಯಕ್ಕೆ ಆಗಾಗ ಹೋಗಿ ಬರುತ್ತಿದ್ದ. ಕಂಬರು ಅವನ ಜೊತೆ ಹೋಗುತ್ತಿದ್ದರು. ಒಮ್ಮೆ ಚೋಳರಾಜನು ಕಂಬರ ಕವಿತೆ ಕೇಳಿ ಪ್ರಭಾವಿತನಾಗಿ ಅವರನ್ನು ಆಸ್ಥಾನ ಕವಿಯಾಗಿ ಮಾಡಿಕೊಂಡ. ಅಂದಿನಿಂದ ಕಂಬರು ಚೋಳರಾಜನ ಆಸ್ಥಾನದಲ್ಲಿದ್ದು ಒಳ್ಳೊಳ್ಳೆಯ ಕವಿತೆಗಳನ್ನು ಕಟ್ಟಿ ಆಸ್ಥಾನದ ಗೌರವವನ್ನು ಹೆಚ್ಚಿಸಿದರು.

ಅವರ ಕವಿತೆಗಳನ್ನು ನೋಡಿ ಮುಗ್ಧರಾದ ಸಡೆಯಪ್ಪ ವಲ್ಲಲ ಮತ್ತು ಚೋಳ ರಾಜರಿಬ್ಬರೂ ವಾಲ್ಮೀಕಿ ರಾಮಾಯಣವನ್ನು ತಮಿಳು ಭಾಷೆಗೆ ಅನುವಾದ ಮಾಡಲು ಕಂಬರಿಗೆ ಹೇಳಿದರು. ಕಂಬರು ಹದಿನಾರಾಣೆ ವೈಷ್ಣವರು. ಈ ಮಾತು ಅವರ ಕಾವ್ಯಗಳಲ್ಲಿ ಸ್ಪಷ್ಟವಾಗಿ ಕಂಡುಬರುವುದು. ಅವರು ರಾಜಾಜ್ಞೆಯಂತೆ ತಮಿಳಿನಲ್ಲಿ ರಾಮಾಯಣವನ್ನು ರಚಿಸಿದರು. ಅವರ ರಾಮಾಯಣದಲ್ಲಿ ಸುಮಾರು ಹನ್ನೆರಡು ಸಾವಿರ ಪದ್ಯಗಳಿವೆ.

ರಾಮಾಯಣವೇ ಅಲ್ಲದೆ ಇನ್ನೂ ಅನೇಕ ಒಳ್ಳೆಯ ಗ್ರಂಥಗಳನ್ನೂ ಕಂಬರು ರಚಿಸಿದರು. ಆದರೆ ಅವರ ರಾಮಾಯಣ ಹೆಚ್ಚು ಲೋಕಪ್ರಿಯವಾಗಿದೆ. ವಿದ್ವಾಂಸರು ಮತ್ತು ಮಹಾರಾಜರು ಅವರಿಗೆ ಕವಿ ಸಮ್ರಾಟನೆಂಬ ಬಿರುದನ್ನು ದಯಪಾಲಿಸಿದರು.

ಕಂಬರು ಕೊನೆಯವರೆಗೂ ಬಾಲ್ಯದಲ್ಲಿ ತಮಗೆ ಆಶ್ರಯ ನೀಡಿದ ಸಡೆಯಪ್ಪ ವಲ್ಲಲನನ್ನು ಮರೆಯಲಿಲ್ಲ. ಕೊನೆ ಗಳಿಗೆಯಲ್ಲೂ ಅವನನ್ನು ಪ್ರಶಂಸಿಸುತ್ತಲೇ ಪ್ರಾಣ ತ್ಯಜಿಸಿದರು.

ಗೋಸ್ವಾಮಿ ತುಳಸಿದಾಸರು ಮತ್ತು ಕಂಬರು ಇಬ್ಬರೂ ತಮ್ಮ ರಾಮಾಯಣದ ಮೂಲಕವೇ ಭಾರತೀಯ ಸಂಸ್ಕೃತಿ, ಮನುಷ್ಯರ ಕರ್ತವ್ಯ, ಸಹೋದರರ ಕರ್ತವ್ಯ, ರಾಜ ಪ್ರಜೆಗಳ ಕರ್ತವ್ಯ, ಪತಿ ಪತ್ನಿಯರ ಕರ್ತವ್ಯ ಮುಂತಾದುವುಗಳ ವ್ಯಾಖ್ಯೆ ಮಾಡಿರುವರು.

ಕಂಬರಾಮಾಯಣದ ವಿಶೇಷತೆ ಎಂದರೆ ಅದರ ಪಾತ್ರಗಳಲ್ಲಿ ನಿಷಾದ ರಾಜನ ಪಾತ್ರ ಉಜ್ಜ್ವಲವಾಗಿದೆ. ಗುಹ ಗಂಗಾತಟದಲ್ಲಿರುವ ನಿಷಾದರ ಸರದಾರ ಮತ್ತು ವೀರ. ಆತ ಶೂದ್ರನಾಗಿದ್ದರೂ ತನ್ನನ್ನು ಕೀಳೆಂದು ತಿಳಿದಿರ ಲಿಲ್ಲ. ಸ್ವಾಭಿಮಾನ ಅವನಲ್ಲಿ ತುಂಬಿ ತುಳುಕುತ್ತಿತ್ತು. ಸಾಮಾನ್ಯವಾಗಿ ನಾವು ಲಕ್ಷ್ಮಣನನ್ನು ಕ್ಷತ್ರಿಯ ರಾಜಕುಮಾರನ ರೂಪದಲ್ಲಿ ನೋಡಿರುವೆವು. ಆದರೆ ಕಂಬ ರಾಮಾಯಣದಲ್ಲಿ ಆತ ಗುಹನ ವಿಷಯವಾಗಿ ರಾಮನಿಗೆ "ಎಲೆ ವಿಜಯ ಸಂಪನ್ನನೇ! ಮಾತೆಗಿಂತಲೂ ಹೆಚ್ಚು ಸ್ನೇಹಸ್ವಭಾವದ ಗುಹನೆಂಬ ಪುರುಷ ನಿಮ್ಮನ್ನು ನೋಡಬಂದಿರುವನು" ಎಂದು ಹೇಳುವನು.

ಗುಹನೂ ರಾಮನನ್ನು ತಂದೆತಾಯಿಯಂತೆ ಪ್ರೀತಿಸುವನು. ಎಂದೂ ಒಂದು ಹೆಜ್ಜೆಯೂ ಇಡದ, ಇಪ್ಪತ್ತನಾಲ್ಕು ಗಂಟೆಯೂ ಅವನ ಆಜ್ಞೆಯನ್ನು ಪರಿಪಾಲಿ ಸಲು ಆಳ-ಕಾಳುಗಳು ಇರುತ್ತಿದ್ದರು. ರಾಮ ಇರುಳಿನಲ್ಲಿ ಒಬ್ಬನೇ ಹೇಗಿರುವನು? ಬಾಯಾರಿದರೆ ಏನು ಮಾಡುವನು? ಯಾರು ನೀರು ತಂದುಕೊಡುವರು? ಎಂದು ಆತನು ನಾನಾ ವಿಧವಾಗಿ ಚಿಂತಿಸುತ್ತಿದ್ದನು.

ಅವನ ಪ್ರೇಮದ ಪ್ರಭಾವ ರಾಮನ ತಾಯಿ ಕೌಸಲ್ಯೆಯ ಮೇಲೂ ಎಷ್ಟು ಪ್ರಭಾವ ಬೀರುವುದೆಂದರೆ, ರಾಮ ಅಯೋಧ್ಯೆಗೆ ಹಿಂತಿರುಗಿದಾಗ ಆಕೆ ತನ್ನ ನಾಲ್ವರು ಮಕ್ಕಳಿಗೆ—ರಾಮಲಕ್ಷ್ಮಣರು ವನಕ್ಕೆ ಹೋದದ್ದು ಒಳ್ಳೆಯದೇ ಆಯಿತು. ಗುಹನಂತಹ ಒಳ್ಳೆಯ ಗೆಳೆಯ ದೊರಕಿದನು. ಈ ಗುಹನೊಡನೆ ನೀವು ಸಹೋದರ ರೆಲ್ಲರೂ ಒಂದುಗೂಡಿ ರಾಜ್ಯವಾಳಿ ಎಂದು ಹೇಳುವಳು.

ರಾಮ ಮತ್ತು ನಿಷಾದನ ಪ್ರೇಮ ಅದ್ಭುತವಾದುದು. ಕಂಬರು ತಮ್ಮ ರಾಮಾಯಣದಲ್ಲಿ ಹೀಗೆ ಜಾತಿ ಭೇದದ ಕಟ್ಟನ್ನು ಮುರಿದು ಮನುಷ್ಯರ ಪರಸ್ಪರ ಪ್ರೀತಿಯ ಸುಂದರ ಉದಾಹರಣೆಯನ್ನು ಕೊಟ್ಟಿರುವರು.

ಆಗಸದಲ್ಲಿ ಚಂದ್ರ ಪ್ರಕಾಶಿಸುವಂತೆ ತಮಿಳು ಸಾಹಿತ್ಯದಲ್ಲಿ ಕಂಬರು ಕಂಗೊಳಿಸುತ್ತಿರುವರು. ಅವರ ರಾಮಾಯಣವನ್ನು 'ಕಂಬ ರಾಮಾಯಣ' ವೆನ್ನುವರು. ಅದರ ಸರಳ ಪರಿಚಯ ಹೀಗಿದೆ.

ಬಾಲಕಾಂಡದಲ್ಲಿ ಕಂಬರು ಅಯೋಧ್ಯಾ ಪಟ್ಟಣವನ್ನು ವರ್ಣಿಸುವರು.

ಅಯೋಧ್ಯಾನಗರ ಅವರಿಗೆ ಸ್ವರ್ಗಕ್ಕಿಂತಲೂ ಮಿಗಿಲಾದುದು. ಈ ಭಾವಗಳಿಂದ ತುಂಬಿದ ಅವರ ಒಂದು ಪದ್ಯದ ಅರ್ಥ ನೋಡಿ—

ಸತ್ಕರ್ಮ ಮಾಡುವಾತ ಸ್ವರ್ಗಕ್ಕೆ ಹೋಗುವನೆಂದು ವೇದದಲ್ಲಿ ಹೇಳಲಾಗಿದೆ. ಅಯೋಧ್ಯೆಯಲ್ಲಾದರೋ ಮರ್ಯಾದಾ ಪುರುಷೋತ್ತಮ ರಾಮಚಂದ್ರ ಸತ್ಕರ್ಮಿಷ್ಠರಲ್ಲಿ ಸರ್ವಶ್ರೇಷ್ಠ. ಅವನ ಪ್ರಜೆಗಳೂ 'ರಾಜನಂತೆ ಪ್ರಜೆಗಳು'. ಎಂಬಂತೆ ರಾಮಚಂದ್ರನಂತೆಯೇ ಇದ್ದರು. ರಾಮಚಂದ್ರನಂತಹ ಶ್ರೇಷ್ಠ ಪುರುಷ ನಿರುವ ಅಯೋಧ್ಯಾ ರಾಜ್ಯಕ್ಕಿಂತಲೂ ಮಿಗಿಲಾದ ಸ್ವರ್ಗ ಬೇರೆ ಯಾವುದು ಇರಲು ಸಾಧ್ಯ? ಅಂದರೆ ಸ್ವರ್ಗಾಧಿಪತಿ, ಶ್ರೀಮನ್ನಾರಾಯಣನೇ ರಾಮನ ಅವತಾರದಲ್ಲಿ ಅಯೋಧ್ಯೆಗೆ ಬಂದಿರುವಾಗ ಸ್ವರ್ಗದಲ್ಲಿ ಯಾರಿರುವರು? ಆದ್ದರಿಂದ ಅಯೋಧ್ಯೆಯೇ ಸ್ವರ್ಗ.

ಇನ್ನೊಂದು ಉದಾಹರಣೆ ನೋಡಿ :—

—ಅಯೋಧ್ಯೆಯಲ್ಲಿ ಯಾರೂ ಶ್ರೀಮಂತರಿರಲಿಲ್ಲ. ಕಾರಣ ಅಲ್ಲಿ ಬಡವ ರಿರಲಿಲ್ಲ. ಅಂದರೆ ಬಡವ ಬಲ್ಲಿದರೆಂಬ ಹೆಸರೇ ಅಯೋಧ್ಯಾವಾಸಿಗಳಿಗೆ ತಿಳಿದಿರ ಲಿಲ್ಲ. ಎಲ್ಲರೂ ಸರಿಸಮಾನರಾಗಿದ್ದರು.

—ಅಯೋಧ್ಯೆಯಲ್ಲಿ ಯಾವ ಪುರುಷನೂ ಶಕ್ತಿಶಾಲಿಯಾಗಿರಲಿಲ್ಲ. ಅವನನ್ನು ಎದುರಿಸುವಂತಹ ವೀರನಿಲ್ಲದಿರುವುದೇ ಇದಕ್ಕೆ ಕಾರಣ. ಅಂದರೆ ಎಲ್ಲರೂ ಸಮಾನ ಬಲಶಾಲಿಗಳಾಗಿದ್ದರು. ಶಕ್ತಿಯ ಹೆಸರೇ ಅವರಿಗೆ ತಿಳಿದಿರಲಿಲ್ಲ.

—ಅಲ್ಲಿ ಸತ್ಯದ ಆವಶ್ಯಕತೆ ಇರಲಿಲ್ಲ. ಅಲ್ಲಿ ಸುಳ್ಳು ಹೇಳುವವರಿದ್ದರೆ ತಾನೆ? ಅವರು ಅಸತ್ಯದ ಹೆಸರೇ ಕೇಳಿರಲಿಲ್ಲ. ಎಲ್ಲರೂ ಸತ್ಯವಂತರಾಗಿದ್ದರು.

—ಅಯೋಧ್ಯೆಯಲ್ಲಿ ಅಜ್ಞಾನಿಗಳ ಅಭಾವದ ಕಾರಣ ಜ್ಞಾನಿಗಳಿರಲಿಲ್ಲ. ಅರ್ಥಾತ್ ಎಲ್ಲರೂ ಜ್ಞಾನಿಗಳಾಗಿದ್ದರು.

ಹೀಗೆ ಅಯೋಧ್ಯೆಯು ಆದರ್ಶ ಸಮಾಜದ ಕಲ್ಪನೆಯಾಗಿತ್ತು. ಕಂಬರು ವೈಷ್ಣವ ಧರ್ಮದ ನಮ್ಮಾಳ್ವಾರರ ಭಕ್ತರು. ವಾಲ್ಮೀಕಿ ರಾಮಾಯಣಕ್ಕೂ ಅವರ ರಾಮಾಯಣಕ್ಕೂ ಸಾಕಷ್ಟು ಅಂತರವಿದೆ. ಕಂಬರು ತಮ್ಮ ರಾಮಾಯಣ ದಲ್ಲಿ ತಮಿಳು ನಾಗರಿಕತೆಯನ್ನು ವಿಶೇಷವಾಗಿ ವರ್ಣಿಸಿರುವರು.

ಕಂಬರು ರಾಮಾಯಣವೇ ಅಲ್ಲದೆ ಇನ್ನೂ ಹನ್ನೊಂದು ಪುಸ್ತಕಗಳನ್ನು ಬರೆದಿದ್ದರೆಂದು ಹೇಳುವರು. ಅವುಗಳಲ್ಲಿ ಶಡಗೋಪ ರಂದಾದಿ, ಸರಸ್ವತೀ ರಂದಾದಿ, ಐರ ಎಲು ಪತ್, ಶಿಲೈ ಎಲುಪತ್ ಮುಂತಾದವು ಮುಖ್ಯವಾದುವು. ಅವರನ್ನು ಅಮರರನ್ನಾಗಿಸಿದುದು ರಾಮಾಯಣವೇ.

ಸಂಸ್ಕೃತ ಸಾಹಿತ್ಯದಲ್ಲಿ ವಾಲ್ಮೀಕಿಗಿರುವ ಸ್ಥಾನವೇ ತಮಿಳು ಸಾಹಿತ್ಯದಲ್ಲಿ ಕಂಬರಿಗಿದೆ. ತಮಿಳಿನವರೇ ಅಲ್ಲ ಭಾರತದವರೇ ಆ ಮಹಾಕವಿಯ ವಿಷಯದಲ್ಲಿ ಹೆಮ್ಮೆ ಪಡುವರು.

ಪೃಥ್ವೀರಾಜ

ಸುಮಾರು ಎಂಟುನೂರು ವರ್ಷಗಳ ಹಿಂದೆ ಅತ್ಯಂತ ಶೂರನಾದ ಪೃಥ್ವೀರಾಜ ಚೌಹಾನನೆಂಬ ರಾಜನು ರಾಜ್ಯವಾಳುತ್ತಿದ್ದನು. ಆತನು ಅತ್ಯಂತ ಯೋಗ್ಯ, ವೀರ ಮತ್ತು ಪ್ರಭಾವಶಾಲಿ ರಾಜನಾಗಿದ್ದನು. ದೂರ ದೂರದ ರಾಜರೂ ಆತನಿಗೆ ತಲೆಬಾಗುತ್ತಿದ್ದರು.

ಪೃಥ್ವೀರಾಜನು ಶಾಕಂಭರಿ ಚೌಹಾನ ವಂಶದಲ್ಲಿ ಜನಿಸಿದನು. ಆ ವಂಶದವರು ಬಹಳ ಕಾಲದಿಂದ ತಮ್ಮ ಶೌರ್ಯಕ್ಕೆ ಪ್ರಸಿದ್ಧರಾಗಿದ್ದರು. ಪೃಥ್ವೀರಾಜನ ತಂದೆ ಅರ್ಣೋರಾಜನಿಗೆ ಗುಜರಾತಿನ ಚಾಳುಕ್ಯರಾಜ ಜಯಸಿಂಹನ ಕನ್ಯೆ ಕಾಂಚನ ದೇವಿಯಲ್ಲದೆ ಸುಧವಾ ಎಂಬ ರಾಣಿಯೂ ಇದ್ದಳು. ಕಾಂಚನ ದೇವಿಗೆ ಒಬ್ಬ ಮಗನೂ, ಸುಧವಾಗೆ ಮೂವರು ಪುತ್ರರೂ ಇದ್ದರು. ಕಾಂಚನ ದೇವಿಯ ಪುತ್ರ ಸೋಮೇಶ್ವರನ ಮಗನೇ ಪೃಥ್ವೀರಾಜ.

ಅರ್ಣೋದಯ ಕಾಲವಾದನಂತರ ಅವನ ಮಗ ವಿಶಾಲದೇವ (ಇನ್ನೊಂದು ಹೆಸರು ವಿಗ್ರಹರಾಜ)ನು ರಾಜನಾದ. ವಿಗ್ರಹರಾಜ ಅತ್ಯಂತ ಪರಾಕ್ರಮಿಯಾದ ರಾಜನಾಗಿದ್ದ. ಸುಮಾರು ಹತ್ತು ವರುಷಗಳವರೆಗೆ ರಾಜ್ಯಭಾರ ಮಾಡಿ ಆತ ಅನೇಕ ಸಣ್ಣಪುಟ್ಟ ರಾಜರನ್ನು ಸೋಲಿಸಿ ಒಂದು ವಿಶಾಲ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದ. ಆತ ಡಿಲ್ಲಿಯ ತೋಮರ ರಾಜನನ್ನೂ ಸೋಲಿಸಿ ವಶಪಡಿಸಿಕೊಂಡಿದ್ದ. ಪಂಜಾಬಿನ ಹಿಸಾರ ಜಿಲ್ಲೆಯ ಹಾಂಸಿಯಿಂದ ಹಿಡಿದು ಉತ್ತರದಿಕ್ಕಿನ ಸಹಾರನಪುರ ಮತ್ತು ಜಯಪುರದವರೆಗೂ ಅವನ ರಾಜ್ಯ ವ್ಯಾಪಿಸಿದ್ದಿತು. ವಿಗ್ರಹ ರಾಜನಾದನಂತರ ಮತ್ತೆ ಇಬ್ಬರು ಮಕ್ಕಳು ಸಿಂಹಾಸನದಲ್ಲಿ ಕುಳಿತರು. ಅವರಾದ ನಂತರ ಸೋಮೇಶ್ವರ ಅರಸನಾದ.

ಸೋಮೇಶ್ವರ ಹೈಹವ ವಂಶದ ರಾಜಕುಮಾರಿ ಕರ್ಪೂರ ದೇವಿಯನ್ನು ವಿವಾಹವಾದ. ಅವಳಿಗೆ ಇಬ್ಬರು ಮಕ್ಕಳು ಜನಿಸಿದರು. ಹಿರಿಯುವನಿಗೆ ಪೃಥ್ವೀರಾಜನೆಂದೂ, ಕಿರಿಯುವನಿಗೆ ಹರಿರಾಜನೆಂದೂ ನಾಮಕರಣ ಮಾಡಿದರು.

ಪೃಥ್ವೀರಾಜ ಚುರುಕು ಬುದ್ಧಿಯವ, ಬಾಲ್ಯದಲ್ಲೇ ಆತ ಕುದುರೆ ಸವಾರಿ ಮತ್ತು ಯುದ್ಧವಿದ್ಯೆಯ ಶಿಕ್ಷಣದ ಜೊತೆಗೆ ರಾಜ್ಯಾಡಳಿತದ ಕೆಲಸಗಳನ್ನೂ ಕಲಿತನು. ಪೃಥ್ವೀರಾಜನ ತಂದೆ ಸೋಮೇಶ್ವರನೂ ಯೋಗ್ಯ ಮತ್ತು ವೀರ ರಾಜನಾಗಿದ್ದನು. ಅವನ ರಾಜ್ಯದಲ್ಲಿ ಪ್ರಜೆಗಳು ಬಹಳ ಸಂತುಷ್ಟರೂ ನಿರ್ಭೀತರೂ ಆಗಿದ್ದರು. ಆತ ತನ್ನ ಮಗ ಪೃಥ್ವೀರಾಜನೂ ತನ್ನಂತೆಯೇ ಯೋಗ್ಯರಾಜನಾಗ ಬೇಕೆಂದು ಆಶಿಸಿದ. ಆದ್ದರಿಂದ ಚಿಕ್ಕವಯಸ್ಸಿನಲ್ಲೇ ಪೃಥ್ವೀರಾಜನನ್ನು ಯುವರಾಜನನ್ನಾಗಿ ಮಾಡಿ ರಾಜಕಾರ್ಯದಲ್ಲಿ ನಿಯೋಗಿಸಿದನು. ಪೃಥ್ವೀರಾಜ ಬಾಲಕನಾಗಿರುವಾಗಲೇ ಇದ್ದಕ್ಕಿದ್ದ ಹಾಗೆ ಸೋಮೇಶ್ವರ ಮೃತ್ಯುವಶನಾದ. ಕ್ರಿ.ಶ. ೧೧೭೭ರಲ್ಲಿ ಪೃಥ್ವೀರಾಜ ತಂದೆಯ ಸ್ಥಾನದಲ್ಲಿ ಆರೂಢನಾದ.

ಪೃಥ್ವೀರಾಜ ಎಳೆಯವನಾದ ಕಾರಣ ರಾಜ್ಯದ ಇಷ್ಟು ದೊಡ್ಡ ಹೊರೆ ಹೊರಲಾರದಾದ. ಆತನ ತಾಯಿ ಕರ್ಪೂರದೇವಿಯೇ ಮಗನ ಹೆಸರಿನಲ್ಲಿ ರಾಜ್ಯವಾಳ ತೊಡಗಿದಳು. ಒಂದು ವರುಷದವರೆಗೆ ಆಕೆ ಹೆಚ್ಚು ನೈಪುಣ್ಯದಿಂದ ಮತ್ತು ಯೋಗ್ಯತೆಯಿಂದ ರಾಜ್ಯಸೂತ್ರವನ್ನು ಹಿಡಿದಿದ್ದಳು. ಕದಂಬ ವಾಸ ಪೃಥ್ವೀರಾಜನ ಮಂತ್ರಿ. ಕದಂಬವಾಸ ಸ್ವಾಮಿನಿಷ್ಠ, ಅನುಭವಸ್ಥ ವ್ಯಕ್ತಿ. ಭುವನಾಯಕ ಮಲ್ಲ ನೆಂಬುವನನ್ನು ಕರ್ಪೂರದೇವಿ ಸೇನಾಪತಿಯನ್ನಾಗಿ ಮಾಡಿದಳು. ಭುವನಾಯಕ ಮಲ್ಲ ಒಳ್ಳೆಯ ಸೈನ್ಯವೊಂದನ್ನು ಕೂಡಿಸಿಕೊಂಡು ಸುತ್ತಮುತ್ತಲಿನ ರಾಜರು ಗಳನ್ನೆಲ್ಲಾ ಸೋಲಿಸಿ ಪೃಥ್ವೀರಾಜನಿಗೆ ಶತ್ರುಗಳೇ ಇಲ್ಲದಂತೆ ಮಾಡಿದನು. ಕರ್ಪೂರದೇವಿಯೂ ರಾಜಧಾನಿಯಾದ ಅಜಯ ಮೇರುವನ್ನು ಅಭಿವೃದ್ಧಿ ಗೊಳಿಸಿದಳು.

ಒಂದು ವರ್ಷ ಕಾಲ ತಾಯಿ ರಾಜ್ಯವನ್ನು ಕಾಪಾಡಿದನಂತರ ಪೃಥ್ವೀರಾಜ ರಾಜಸೂತ್ರವನ್ನು ತಾನು ತೆಗೆದುಕೊಂಡನು. ಕಣ್ಣುಬಿಡುವುದರೊಳಗೆ ನಾಲ್ಕು ದಿಕ್ಕುಗಳಿಂದ ಭಯಂಕರ ಸರ್ಪಗಳು ಭುಸುಗುಟ್ಟತೊಡಗಿದವು. ಕ್ರಿ.ಶ. ೧೧೭೮ ರಲ್ಲಿ ಶಹಾಬುದ್ದೀನ್ ಗೋರಿಯು ಮುಲ್ತಾನ ಮತ್ತು ಕಚ್ಛಿನ್ ಮೂಲಕ ಮರಳುಕಾಡನ್ನು ದಾಟಿ ಗುಜರಾತಿನ ಕಡೆ ಬರುತ್ತಿರುವ ಸಮಾಚಾರ ತಿಳಿಯಿತು.

ಶಹಾಬುದ್ದೀನ್ ಗೋರಿ ತನ್ನ ವಿಶಾಲ ಸೈನ್ಯದಿಂದ ಮಾರವಾಡದ ಚೌಹಾನರ ರಾಜ್ಯವನ್ನು ಆಕ್ರಮಣ ಮಾಡಿ ಅದರ ರಾಜಧಾನಿಯಾದ ನಾಡೋಲವನ್ನು

ವಶಪಡಿಸಿಕೊಂಡು ಗುಜರಾತಿನತ್ತ ಪ್ರಯಾಣ ಬೆಳಸಿದ. ಸಹೋಲ ಶಹಾಬುದ್ದೀನನ ವಶವಾದ, ಸೋಮೇಶ್ವರ ದೇವಸ್ಥಾನವನ್ನು ಹಾಳು ಮಾಡಿದ ಸುದ್ದಿ ಕೇಳಿ ಪೃಥ್ವೀರಾಜ ಕ್ರುದ್ಧನಾಗಿ ಅವನನ್ನು ಎದುರಿಸಲು ಸಿದ್ಧನಾದ. ಪೃಥ್ವೀರಾಜನ ಮಂತ್ರಿ ಕದಂಬವಾಸ ಬಹಳ ಚತುರ. ಶಹಾಬುದ್ದೀನ ಮೊದಲು ಗುಜರಾತಿ ನೊಡನೆ ಹೋರಾಡಿ ಸ್ವಲ್ಪ ಆಯಾಸಗೊಳ್ಳಲಿ ಆಗ ಅವನ ಮೇಲೆ ಆಕ್ರಮಣ ಮಾಡಿದರೆ ಬೇಗ ಶರಣಾಗತನಾಗುವನೆಂದು ಸೂಚಿಸಿದನು. ಪೃಥ್ವೀರಾಜ ಹೀಗೆ ಮಾಡಲು ಒಪ್ಪಿದ. ಕೆಲವೇ ದಿನಗಳಲ್ಲಿ ಗುಜರಾತಿನ ರಾಜ ಶಹಾಬುದ್ದೀನನನ್ನು ಸೋಲಿಸಿದ ಶುಭ ಸಮಾಚಾರ ತಿಳಿಯಿತು.

ಇದೇ ಸಮಯದಲ್ಲಿ ಪೃಥ್ವೀರಾಜನ ಚಿಕ್ಕಪ್ಪನ ಮಗ ನಾಗಾರ್ಜುನ ದಂಗೆ ಎದ್ದನು. ಬಾಲಕನಾಗಿದ್ದ ಪೃಥ್ವೀರಾಜನನ್ನು ಸುಲಭವಾಗಿ ಸೋಲಿಸಿ ತಾನೇ ರಾಜನಾಗಬಹುದೆಂದು ಆಲೋಚಿಸಿದ್ದನು. ಆದರೆ ಪೃಥ್ವೀರಾಜನ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾಗಿದ್ದಿತು. ಆತ ಸ್ವತಃ ದೊಡ್ಡ ಸೈನ್ಯದೊಡನೆ ನಾಗಾರ್ಜುನನ ಮೇಲೆ ಆಕ್ರಮಣ ಮಾಡಿ ಅವನನ್ನು ನಾಲ್ಕು ಕಡೆಯಿಂದಲೂ ಮುತ್ತಿದ. ನಾಗಾರ್ಜುನ ಹೇಗೋ ಪಾರಾದ. ಅವನ ಸೈನ್ಯಗಳೆಲ್ಲ ಪೃಥ್ವೀರಾಜನ ಕತ್ತಿಗೆ ಆಹುತಿಯಾದುವು.

ಇದಾದನಂತರ ಪೃಥ್ವೀರಾಜ ತನ್ನ ರಾಜ್ಯವನ್ನು ವಿಸ್ತರಿಸಲು ಆರಂಭಿಸಿದನು. ರೇವಾಡಿ, ಭಿವಾಸಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಅವನ ಆಕ್ರಮಣ ನಡೆಯಿತು. ಆ ಪ್ರದೇಶಗಳಲ್ಲಿ ಭಾಡಾನರ ವಂಶದ ಸರದಾರ ರಾಜ ನಾಗಿದ್ದ. ಭಾಡಾನರ ಸರದಾರ ಆನೆಗಳ ದೊಡ್ಡ ಸೈನ್ಯವೊಂದನ್ನು ತೆಗೆದುಕೊಂಡು ಪೃಥ್ವೀರಾಜನನ್ನು ಎದುರಿಸಿದ. ಆದರೆ ಅವನ ಬೇಳೆ ಬೇಯಲಿಲ್ಲ. ಅವನ ಪ್ರದೇಶ ಗಳು ಪೃಥ್ವೀರಾಜನ ವಶವಾದುವು.

ಪೃಥ್ವೀರಾಜ ಇನ್ನೂ ಅನೇಕ ಸಣ್ಣಪುಟ್ಟ ರಾಜ್ಯಗಳನ್ನು ಗೆದ್ದು ಅಧೀನಪಡಿಸಿ ಕೊಂಡನು. ಕ್ರಿ.ಶ. ೧೧೮೨ರಲ್ಲಿ ಚಂಡೇಲ ರಾಜ ಪರಮಾಳನೊಡನಾದ ಯುದ್ಧ ಬಹಳ ಪ್ರಸಿದ್ಧವಾದುದು. ಜೇಜಾಕ ಭುಕ್ತಿಯ ಪ್ರದೇಶಗಳನ್ನೇ ಇಂದು ಬುಂದೇಲ ಖಂಡವೆಂದು ಕರೆಯುವುದು.

ರಾಜ ಪರಮಾಳನ ಸೈನ್ಯದಲ್ಲಿ ಆಲ್ಹಾ ಮತ್ತು ಬಾಲದನೆಂಬ ಇಬ್ಬರು

ಪರಾಕ್ರಮಿ ಸಹೋದರರಿದ್ದರು. ಅವರಿಬ್ಬರೂ ಧೈರ್ಯವಾಗಿ ಪೃಥ್ವೀರಾಜನನ್ನು ಎದುರಿಸಿದರು. ಭಯಂಕರ ಯುದ್ಧವೇ ನಡೆಯಿತು. ಎರಡೂ ಕಡೆಯ ಅನೇಕ ಶ್ರೇಷ್ಠ ಸರದಾರರು ಮೃತ್ಯುವಶವಾದರು. ಆಲ್ಹ ಬಾದಲರೂ ಕಾಲವಾದ ನಂತರ ಅಂತ್ಯದಲ್ಲಿ ಪೃಥ್ವೀರಾಜನಿಗೆ ವಿಜಯ ದೊರಕಿತು. ಈ ಯುದ್ಧದಲ್ಲಿ ಆಲ್ಹ ಬಾದಲರು ತೋರಿಸಿದ ಅದ್ಭುತ ಪರಾಕ್ರಮದ ಕೀರ್ತಿ ಎಲ್ಲಾ ಕಡೆಯಲ್ಲೂ ಹಬ್ಬಿತು. ಹಳ್ಳಿ ಮತ್ತು ನಗರಗಳಲ್ಲೂ ಇಂದು ಅನೇಕ ಕಡೆ ಅವನ ಕೀರ್ತಿಗೀತೆ ಯನ್ನು ಜನರು ಹಾಡುವರು.

ಚಂಡೋಳದ ಪರಮಾಳನನ್ನು ಸೋಲಿಸಿ ಅವನ ರಾಜಧಾನಿ ಮಹೋಬಾ ವನ್ನು ವಶಪಡಿಸಿಕೊಂಡ ನಂತರ ಪೃಥ್ವೀರಾಜ ಗುಜರಾತಿನತ್ತ ದೃಷ್ಟಿಯೋಡಿಸಿ ದನು. ಆ ಕಾಲದಲ್ಲಿ ಗುಜರಾತು ಶಕ್ತಿಶಾಲಿಯಾಗಿಯೇ ಇತ್ತು. ದ್ವಿತೀಯ ಭೀಮನೆಂಬುವನು ಅದನ್ನು ಆಳುತ್ತಿದ್ದನು. ಕ್ರಿ. ಶ ೧೧೮೭ರ ಸುಮಾರಿನಲ್ಲಿ ಪೃಥ್ವೀರಾಜ ಗುಜರಾತಿನ ಮೇಲೆ ದಂಡೆತ್ತಿ ಹೋದನು. ಅಲ್ಪ ಸ್ವಲ್ಪ ಯುದ್ಧವೂ ನಡೆಯಿತು. ಗುಜರಾತಿನ ರಾಜ ಪೃಥ್ವೀರಾಜನ ಶಕ್ತಿಗೆ ತಲೆಬಾಗಿ ಸಂಧಿ ಮಾಡಿಕೊಳ್ಳಲು ಒಪ್ಪಿದನು.

ಪೃಥ್ವೀರಾಜನ ರಾಜ್ಯ ವಾಯುವ್ಯ ದಿಕ್ಕಿನ ಹಿಸಾರದಿಂದ ಹಿಡಿದು ಸರಹದ್ದಿನ ವರೆಗೂ, ಉತ್ತರ ದಿಕ್ಕಿನ ದೆಹಲಿಯ ವರೆಗೂ ಹರಡಿದ್ದಿತು. ಅವನ ರಾಜ್ಯದ ದಕ್ಷಿಣ ದಿಕ್ಕಿನ ಎಲ್ಲೆ ಮೇವಾಡ ಮತ್ತು ನಾಡೋಲ ಪ್ರಾಂತ್ಯಗಳಲ್ಲೂ ಪೂರ್ವದ ಎಲ್ಲೆ ಗ್ವಾಲಿಯರ್ ಮತ್ತು ಕನೌಜ್ ರಾಜ್ಯದ ಎಲ್ಲೆಯಲ್ಲೂ ಸೇರಿದ್ದಿತು. ಆಗ ಲಾಹೋರಿನಲ್ಲಿದ್ದ ಯಾಮಿನಿ ರಾಜ್ಯದ ಎಲ್ಲೆಯೂ ಪೃಥ್ವೀರಾಜನ ರಾಜ್ಯದಲ್ಲಿ ಸೇರಿಹೋಗಿದ್ದಿತು. ಪೃಥ್ವೀರಾಜನ ಕಾಲದ ಸುಮಾರು ಆರು ಶಿಲಾಲೇಖನಗಳು ಮತ್ತು ಬೆಳ್ಳಿ ನಾಣ್ಯಗಳು ದೊರಕುವುವು.

ಪೃಥ್ವೀರಾಜ ಯುದ್ಧಪ್ರೇಮಿಯಷ್ಟೇ ಅಲ್ಲ, ಕವಿಗಳನ್ನೂ ಸನ್ಮಾನಿಸು ತ್ತಿದ್ದನು. ಅವನ ಆಸ್ಥಾನದಲ್ಲಿ ಜಯಾನಕನೆಂಬ ಅತ್ಯಂತ ಯೋಗ್ಯ ಕಾಶ್ಮೀರದ ಕವಿಯೊಬ್ಬನಿದ್ದನು. ಪೃಥ್ವೀರಾಜ ಅನ್ಯ ರಾಜರೊಡನೆ ಮಾಡಿದ ಯುದ್ಧದ ಮೇಲೆ ಜಯಾನಕ 'ಪೃಥ್ವೀರಾಜ ವಿಜಯ'ವೆಂಬ ಕಾವ್ಯಗ್ರಂಥವನ್ನು ರಚಿಸಿರುವನು. ಅವನಲ್ಲದೆ ಆಶಾಧರನೆಂಬ ಜೈನ ವಿದ್ವಾಂಸನೂ ಅವನ ರಾಜ್ಯದಲ್ಲಿದ್ದು ಅನೇಕ ಗ್ರಂಥಗಳನ್ನು ರಚಿಸಿರುವನು.

ಭಾರತದ ಹೊಸಲಿನ ಬಳಿ ವಿದೇಶಿ ಆಕ್ರಮಣಕಾರಿಗಳು ಹೊಂಚುಹಾಕುತ್ತಲೇ ಇದ್ದ ಕಾರಣ ಪೃಥ್ವೀರಾಜ ಹೆಚ್ಚು ಕಾಲ ಶಾಂತಿಪೂರ್ವಕವಾಗಿ ರಾಜ್ಯವಾಳಲಾರದೆ ಹೋದ. ಕ್ರಿ.ಶ. ೧೧೭೮ರಲ್ಲಿ ಗುಜರಾತಿನ ರಾಜನಿಂದ ಸೋತು ಅಪಮಾನಗೊಂಡು ಓಡಿದ್ದ ಗೋರಿಯು ಮತ್ತೆ ಕ್ರಿ.ಶ. ೧೧೫೬ರಲ್ಲಿ ಗಜನಿಯ ಅಂತಿಮ ಯಾಮಿನಿ ರಾಜ ಖುರಸವ ಮಲಿಕನನ್ನು ಸೋಲಿಸಿ ಗಜನಿಯ ಸಿಂಹಾಸನದ ಮೇಲೆ ಕುಳಿತನು. ಅನಂತರ ಭಾರತದ ಮೇಲೆ ಆಕ್ರಮಣ ಮಾಡಿ ತನ್ನ ಸಾಮ್ರಾಜ್ಯ ಸ್ಥಾಪಿಸಲು ಬಿರುಸಿನಿಂದ ಸಜ್ಜಾಗುತ್ತಿದ್ದ. ಮೊದಲು ಆತ ದೊಡ್ಡ ಸೈನ್ಯದೊಡನೆ ಸರಹದ್ದಿನ ಮೇಲೆ ಆಕ್ರಮಣ ಮಾಡಿದ. ಸರಹಿಂದು ಪೃಥ್ವೀರಾಜನ ರಾಜ್ಯದೊಳಗೆ ಸೇರಿದ್ದಿತು. ಗೋರಿ ಸರಹಿಂದಿನ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಮಲ್ಲಿಕ ಜಿಯಾಲುದ್ದೀನನೆಂಬ ಸರದಾರನಿಗೆ ೧೨೦೦ ಸವಾರರನ್ನು ಒಪ್ಪಿಸಿ ಕೋಟೆಯನ್ನು ರಕ್ಷಿಸಲು ಅಪ್ಪಣೆ ಇತ್ತು ಗಜನಿಗೆ ಹಿಂತಿರುಗಿದ್ದ. ಮತ್ತೆ ಹೆಚ್ಚು ಶಕ್ತಿಶಾಲಿಯಾಗಿ ಬರಬೇಕೆಂದು ನಿಶ್ಚಯಿಸಿದ.

ಗೋರಿಯ ಈ ಕೆಲಸದಿಂದ ಪೃಥ್ವೀರಾಜರ ಸಾಮಂತರಲ್ಲಿ ಅಶಾಂತಿ ತಲೆದೋರಿತು. ಪೃಥ್ವೀರಾಜನೇನೋ ಅಜಮೀರಿನಲ್ಲಿದ್ದ. ಅವನ ಸಾಮಂತ ಗೋವಿಂದರಾಜ ದೆಹಲಿಯ ರಾಜ್ಯಪಾಲನಾಗಿದ್ದ. ಗೋರಿ ಸರಹಿಂದನ್ನು ವಶಪಡಿಸಿಕೊಂಡ. ಅದನ್ನು ಹಾಳು ಮಾಡುತ್ತಿರುವ ಸುದ್ದಿಯನ್ನು ಆತ ತನ್ನ ಮಗ ಚಂದ್ರರಾಜನ ಮೂಲಕ ಪೃಥ್ವೀರಾಜನಿಗೆ ತಿಳಿಸಿದ.

ರಜಪೂತರ ಮತ್ತು ಸಣ್ಣಪುಟ್ಟ ಸರದಾರರ ಕಷ್ಟಗಳನ್ನು ಕೇಳಿ ರೋಷಗೊಂಡು ಪೃಥ್ವೀರಾಜ ಅವರಿಗೆ ಸಹಾಯ ಮಾಡಿ ಗೋರಿಯನ್ನು ತುಳಿಯಲು ಹೊರಟ.

ಕ್ರಿ.ಶ. ೧೧೯೦-೯೧ರಲ್ಲಿ ದೆಹಲಿಗೆ ಎಂಬತ್ತು ಮೈಲಿ ದೂರವಿರುವ ತರಾಯಿನ ಮೈದಾನದಲ್ಲಿ ಯುದ್ಧ ನಡೆಯಿತು. ಪೃಥ್ವೀರಾಜನ ಸೈನ್ಯದಲ್ಲಿ ಎರಡು ಲಕ್ಷ ಕುದುರೆ ಸವಾರರೂ ಮೂರು ಸಾವಿರ ಆನೆಗಳೂ ಇದ್ದುವು. ಗೋರಿಯ ಸೈನ್ಯವೂ ಸಾಕಷ್ಟು ದೊಡ್ಡದಾಗಿಯೇ ಇದ್ದಿತು.

ರಜಪೂತರ ವೀರತೆಗೆ ಈ ತರಾಯಿನ ಯುದ್ಧ ಒಂದು ನಮೂನೆ ಭಯಂಕರ ಯುದ್ಧವೇನೋ ಆಯಿತು. ಆದರೆ ಶೀಘ್ರವೇ ರಜಪೂತರು ಗೋರಿಯ ಸೈನ್ಯ

ವನ್ನು ಕತ್ತರಿಸಿ ಹಾಕಿದರು. ಸರದಾರನೊಬ್ಬ ತಲೆತಪ್ಪಿಸಿಕೊಂಡು ಹೋಗಲು ಗೋರಿಗೆ ಸೂಚನೆ ಇತ್ತ. ಆದರೂ ಗೋರಿಯೂ ಸಾಹಸಿ ವ್ಯಕ್ತಿ. ಓಡಿ ಹೋಗುವ ಬದಲು ತನ್ನ ಸೈನ್ಯವನ್ನು ಬಲಪಡಿಸಿಕೊಂಡು ಧೈರ್ಯದಿಂದ ಮುನ್ನುಗ್ಗಲು ಉತ್ಸಾಹವಿತ್ತು ತಾನೂ ಕತ್ತಿಯನ್ನು ಹಿರಿದು ರಜಪೂತರ ಮೇಲೆ ಬಿದ್ದ. ದೆಹಲಿಯ ರಾಜ್ಯಪಾಲ ಗೋವಿಂದರಾಜನ ಮೇಲೆ ಗೋರಿ ಭರ್ಜಿಯನ್ನು ಎಸೆದ ಕಾರಣ ಅವನ ಮುಂದಿನ ಎರಡು ಹಲ್ಲುಗಳು ಮುರಿದುಹೋದವು. ಗಾಯ ವಾದರೂ ಬದಲಾಗಿ ಆತ ಎಸೆದ ಭರ್ಜಿಯಿಂದ ಶಹಾಬುದ್ದೀನ್ ಗೋರಿಗೆ ಬಹಳ ಗಾಯವಾದವು. ಇನ್ನೇನು ಅವನು ಕುದುರೆಯಿಂದ ಬೀಳಬೇಕು ಅಷ್ಟರಲ್ಲಿ ಆತನ ಸರದಾರನೊಬ್ಬ ಪ್ರಾಣವನ್ನು ಲೆಕ್ಕಿಸದೆ ತನ್ನ ಕುದುರೆಯ ಮೇಲೆ ಗೋರಿ ಯನ್ನು ಕುಳ್ಳಿರಿಸಿಕೊಂಡು ನಾಗಾಲೋಟದಿಂದ ಓಡಿದ. ಗೋರಿಯೇ ಹಿಮ್ಮೆಟ್ಟು ತ್ತಿರುವುದನ್ನು ನೋಡಿದ ಮೇಲಂತೂ ಮುಸಲ್ಮಾನರ ಸೈನ್ಯ ದಿಕ್ಕೇ ತೋರದಾಗಿ ಓಡಿತು.

ತರಾಯಿನ ಯುದ್ಧದಲ್ಲಿ ಪೃಥ್ವೀರಾಜನ ಸೇನಾಪತಿ ಸ್ಕಂದನು ತೋರಿಸಿದ ಸಾಹಸದಿಂದ ಭಾರತಕ್ಕೆ ಜಯ ಲಭಿಸಿತು. ಇದಾದ ಬಳಿಕ ಪೃಥ್ವೀರಾಜನು ಮುನ್ನುಗ್ಗಿ ಸರಹಿಂದ ಕೋಟೆಯನ್ನು ವಶಪಡಿಸಿಕೊಂಡ. ಮುಸಲ್ಮಾನ್, ಸರದಾರ ಜಿಯಾಲುದ್ದೀನನು ಹದಿಮೂರು ತಿಂಗಳ ಪರ್ಯಂತ ಕೋಟೆಯನ್ನು ರಕ್ಷಿಸಿದ. ಆದರೆ ಕೊನೆಗೂ ಅವನು ಸೋತು ಶರಣಾಗತನಾದ. ಹೀಗೆ ಪಂಜಾಬು ಮತ್ತೆ ಪೃಥ್ವೀರಾಜನ ವಶವಾಯಿತು.

ಯುದ್ಧದಲ್ಲಿ ಸೋತರೂ ಗೋರಿ ಧೈರ್ಯಗುಂದಲಿಲ್ಲ. ಘಜನಿಗೆ ಹೋಗಿ ಮತ್ತೆ ಸೈನ್ಯವನ್ನು ಒಂದುಗೂಡಿಸಿ ಪೃಥ್ವೀರಾಜನ ಮೇಲೆ ಹಗೆ ತೀರಿಸಲು ಪ್ರಯತ್ನಿಸಿ, ಒಂದು ಲಕ್ಷದ ಹತ್ತು ಸಾವಿರ ಸೈನಿಕರನ್ನು ಕರೆದುಕೊಂಡು ಪೇಶಾವರ ಮತ್ತು ಮುಲ್ತಾನಿನ ಮೂಲಕ ಲಾಹೋರಿಗೆ ತಲುಪಿದ.

ಗೋರಿಯು ಎರಡನೆ ಬಾರಿ ಆಕ್ರಮಣ ಮಾಡಲು ಸನ್ನಾಹ ನಡೆಸುವ ಸುದ್ದಿ ತಿಳಿದ ಕೂಡಲೇ ಪೃಥ್ವೀರಾಜ ತಾನೂ ಸಜ್ಜಾಗತೊಡಗಿದ. ರಜಪೂತ ರಾಜ ರೆಲ್ಲರೂ ಸಹಾಯ ಮಾಡಿ ಗೋರಿಯನ್ನು ಹೊಡೆದೋಡಿಸಬೇಕೆಂದು ಎಲ್ಲರಿಗೂ ಸಂದೇಶ ಕಳುಹಿಸಿದ. ಅಂತೆಯೇ ಅನೇಕ ರಾಜರು ತಮ್ಮ ತಮ್ಮ ಸೈನ್ಯದೊಡನೆ

ಬಂದು ಸೇರಿದರು. ಪೃಥ್ವೀರಾಜನ ಬಳಿ ಮೂರು ಲಕ್ಷ ಕುದುರೆ ಸವಾರರೂ, ಮೂರು ಸಾವಿರ ಆನೆಗಳೂ ಮತ್ತು ಅಸಂಖ್ಯ ಕಾಲಾಳುಗಳೂ ಇದ್ದರು.

ಪೃಥ್ವೀರಾಜ ತರಾಯಿನ ಮೈದಾನದಲ್ಲಿ ಬಿಡಾರ ಹಾಕಿ ಗೋರಿಯನ್ನು ಪ್ರತೀಕ್ಷೆಮಾಡತೊಡಗಿದ. ಆದರೆ ಗೋರಿಯು ಸರಹಿಂದನ್ನು ಮತ್ತೆ ವಶಪಡಿಸಿ ಕೊಂಡು ತರಾಯಿನತ್ತ ಸಾಗಿದ. ಯುದ್ಧದಿಂದಾಗುವ ಪ್ರಾಣಹಾನಿಯನ್ನು ತಪ್ಪಿಸಲು, ಸರಹಿಂದು ಮತ್ತು ಪಂಜಾಬನ್ನು ಮಾತ್ರ ವಶಪಡಿಸಿಕೊಂಡು, ಹಿಂದೆ ಹೋಗುವುದಾದರೆ ಸಂಧಿ ಮಾಡಿಕೊಳ್ಳಬಹುದೆಂದು ಪೃಥ್ವೀರಾಜನು ಗೋರಿಗೆ ಹೇಳಿಕಳುಹಿಸಿದ. ಇದರಿಂದ ಇನ್ನೊಂದು ರೀತಿಯ ಆಟ ಆಡಲು ಗೋರಿಗೆ ಅವಕಾಶ ದೊರಕಿತು. ತನ್ನ ತಮ್ಮನನ್ನು ವಿಚಾರಿಸಿ ಉತ್ತರ ಹೇಳುವ ವರೆಗೆ ಯುದ್ಧ ಮುಂದುವರಿಸಬಾರದೆಂದು ತೀರ್ಮಾನಿಸಿ ಪೃಥ್ವಿರಾಜನಿಗೆ ಮಾರುತ್ತರ ಕಳುಹಿಸಿದ.

ಗೋರಿ ಬಹಳ ಕಪಟಿ. ರಜಪೂತರು ಯುದ್ಧ ನಿಂತುಹೋಗುವುದೆಂದು ತಿಳಿದು ಒಂದು ರಾತ್ರಿ ವಿಲಾಸದಲ್ಲಿ ಮುಳುಗಿರುವಾಗ ಗೋರಿಯು ತನ್ನ ಸೈನ್ಯದ ಒಂದು ಸಣ್ಣ ಭಾಗವನ್ನು ರಜಪೂತರ ಮುಂದೆ ನಿಲ್ಲಿಸಿ, ಮಿಕ್ಕ ಸೈನ್ಯದೊಡನೆ ತಾನು ಪೃಥ್ವೀರಾಜನ ಬೆನ್ನಟ್ಟಿ ಬೆಳಗಾಗುವುದರಲ್ಲಿ ರಜಪೂತರ ಮೇಲೆ ಇದ್ದಕ್ಕಿದ್ದಂತೆ ಆಕ್ರಮಣ ನಡೆಸಿದನು.

ಈ ಆಕ್ರಮಣದಿಂದ ರಜಪೂತರ ಸೈನ್ಯದಲ್ಲಿ ಕೋಲಾಹಲವೆದ್ದಿತು. ಪೃಥ್ವೀರಾಜನಾದರೋ ವೀರಪುತ್ರ. ಅವನಿಗೆ ಮೋಸವೇ ತಿಳಿಯದು. ಗೋರಿಯ ಆಕ್ರಮಣದಿಂದ ಸೈನ್ಯದ ವ್ಯವಸ್ಥೆ ಕೆಟ್ಟಿದ್ದರೂ ಆತ ಧೈರ್ಯದಿಂದ ಕುದುರೆ ಸೈನ್ಯವೊಂದರ ಸಹಾಯದಿಂದ ಗೋರಿಯನ್ನು ಸೋಲಿಸಿ ಹಿಮ್ಮೆಟ್ಟಿಸಿದ. ತನ್ನ ಸೈನ್ಯವನ್ನು ಬಲಪಡಿಸಲು ಪ್ರಯತ್ನ ನಡೆಸಿದ. ಅತ್ತ ಗೋರಿಯು ತನ್ನ ಕುದುರೆ ಸೈನ್ಯವನ್ನು ನಾಲ್ಕು ಭಾಗ ಮಾಡಿ ಪೃಥ್ವೀರಾಜನ ಸೈನ್ಯದ ಮೇಲೆ ನಾಲ್ಕು ದಿಕ್ಕಿನಿಂದಲೂ ಆಕ್ರಮಣ ಮಾಡಲು ಆದೇಶವಿತ್ತ. ಮಧ್ಯಾಹ್ನದ ವರೆಗೂ ಯುದ್ಧ ನಡೆಯಿತು. ಒಂದು ಲಕ್ಷ ರಜಪೂತರು ಪ್ರಾಣ ಒಪ್ಪಿಸಿದರು. ಪೃಥ್ವೀರಾಜನೂ ಈ ಯುದ್ಧದಲ್ಲೇ ಕಾಲವಾಗಿರಬೇಕು.

ತರಾಯಿನದ ಈ ಎರಡನೆ ಯುದ್ಧ ಕ್ರಿ. ಶ. ೧೧೯೨ರಲ್ಲಾಯಿತು. ಭಾರತದ

ಇತಿಹಾಸದಲ್ಲಿ ಈ ಯುದ್ಧಕ್ಕೆ ಮಹತ್ವಪೂರ್ಣ ಸ್ಥಾನವಿದೆ. ಇದೇ ಸಮಯದಲ್ಲೇ ಉತ್ತರ ಭಾರತದಲ್ಲಿ ಚೌಹಾನ ಸಾಮ್ರಾಜ್ಯದ ಅಂತ್ಯವಾಯಿತು. ಪೃಥ್ವೀರಾಜನ ಸೋಲಿನಿಂದ ದೇಶದಲ್ಲೆಲ್ಲಾ ಗಲಾಟೆಯಾಗಿ ರಜಪೂತರ ಶಕ್ತಿ ಕುಂದಿತು. ಇದರಿಂದ ಭಾರತದಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಲು ಗೋರಿಗೆ ಸುಲಭವಾಯಿತು.

ಪೃಥ್ವೀರಾಜನು ಆ ಕಾಲದ ಅತ್ಯಂತ ಯೋಗ್ಯ ಮತ್ತು ವೀರ ಸೇನಾಪತಿ ಅಲ್ಲದೆ ಒಳ್ಳೆಯ ಆಡಳಿತಗಾರನೂ ಹೌದು. ಆತ ಉತ್ತರ ಭಾರತದ ಅನೇಕ ಸಣ್ಣಪುಟ್ಟ ರಜಪೂತ ರಾಜ್ಯವನ್ನು ಒಂದುಗೂಡಿಸಿದ. ಕುಶಲ ರಾಜನೀತಿಜ್ಞ ನಾಗದುದೇ ಅವನ ದೋಷ. ಭಾರತದ ಪಶ್ಚಿಮ ಎಲ್ಲೆಯ ರಕ್ಷಣೆಯನ್ನು ಅಚ್ಚುಕಟ್ಟಾಗಿ ಮಾಡಿದ್ದರೆ ಗೋರಿಗೆ ಭಾರತಕ್ಕೆ ಪ್ರವೇಶಿಸಲು ಆಗುತ್ತಿರಲಿಲ್ಲ. ಮುಸಲ್ಮಾನರ ಸಾಮ್ರಾಜ್ಯವೂ ನೆಲೆಗೊಳ್ಳುತ್ತಿರಲಿಲ್ಲ.

ಪೃಥ್ವೀರಾಜನ ಅಂತ್ಯದೊಡನೆ ಚೌಹಾನ ವಂಶದ ಸೂರ್ಯನು ಅಸ್ತನಾದ. ಕುತುಬುದ್ದೀನನೆಂಬ ಸಾಮಂತ ಸುಬೇದಾರ ದೆಹಲಿಯಲ್ಲಿ ನಿಯುಕ್ತನಾದ. ಆತ ಒಂದು ಹೊಸ ಸಾಮ್ರಾಜ್ಯಕ್ಕೆ ತಳಹದಿ ಹಾಕಿದ. ಕೊನೆಗೆ ಅಜಮೀರು ಸಹ ಅವನ ವಶವಾಯಿತು. ಹೀಗೆ ಚೌಹಾನ ವಂಶವು ಹೇಳಹೆಸರಿಲ್ಲದಂತೆ ನಾಶವಾಯಿತು.

ಮಧ್ವಾಚಾರ್ಯರು

ದಕ್ಷಿಣ ಭಾರತದ ಕನ್ನಡನಾಡಿನ ಉಡುಪಿಯ ಸಮೀಪದ ಹಳ್ಳಿಯಲ್ಲಿ ಮಧ್ಯಗೇಹಭಟ್ಟನೆಂಬ ಬ್ರಾಹ್ಮಣನಿದ್ದನು. ಆತ ತನ್ನ ಬಳಿ ಇದ್ದ ಸ್ವಲ್ಪ ಹೊಲ ದಿಂದಲೇ ಜೀವಿಸುತ್ತಿದ್ದನು. ಮಧ್ಯಗೇಹಭಟ್ಟನು ಒಳ್ಳೆಯ ವಿದ್ವಾಂಸ. ಅವನ ವಿದ್ವತ್ತಿಗೆ ಮೆಚ್ಚಿ ಜನರು ಅವನನ್ನು ಕೊಂಡಾಡುತ್ತಿದ್ದರು.

ಮಧ್ಯಗೇಹನ ಮಡದಿ ವೇದವತಿ ಸುಶೀಲೆ ಮತ್ತು ಸುಂದರಿ. ಆಕೆಗೆ ಒಬ್ಬ ಬಾಲಕನೂ ಇಬ್ಬರು ಬಾಲಕಿಯರೂ ಇದ್ದರು. ಆದರೆ ವಿಧಿವಶದಿಂದ ಆ ಗಂಡು ಮಕ್ಕಳಿಬ್ಬರೂ ಅಲ್ಪ ಕಾಲದಲ್ಲೇ ಮೃತರಾದರು. ಗಂಡು ಮಕ್ಕಳಿಲ್ಲದಿದ್ದರೆ ವಂಶವೆಂತು ಮುಂದುವರಿಯುವುದೆಂದು ಮಧ್ಯಗೇಹನಿಗೆ ಚಿಂತೆಯಾಯಿತು. ಹನ್ನೆರಡು ವರುಷಗಳ ಪರ್ಯಂತ ಪತಿ ಪತ್ನಿಯರಿಬ್ಬರೂ ಉಡುಪಿಯ ಅನಂತೇಶ್ವರನನ್ನು ಅನವರತ ಪೂಜಿಸಿ ಗಂಡು ಮಗುವಾಗುವಂತೆ ವರ ನೀಡಲು ಮೊರೆ ಇಟ್ಟರು. ಕೊನೆಗೆ ಅವರ ಇಷ್ಟಾರ್ಥ ನೆರವೇರಿ ಕ್ರಿ.ಶ. ೧೧೯೭ರಲ್ಲಿ ನವರಾತ್ರಿಯಂದು ವೇದವತಿಗೆ ಗಂಡು ಮಗು ಜನಿಸಿತು. ತಂದೆಯು ಮಗನಿಗೆ ವಾಸುದೇವನೆಂದು ನಾಮಕರಣ ಮಾಡಿದನು. ಆ ಬಾಲಕನೇ ಮುಂದೆ ಮಧ್ವಾಚಾರ್ಯರೆಂದು ಭಾರತದಲ್ಲೆಲ್ಲಾ ಪ್ರಸಿದ್ಧರಾದನು.

ವಾಸುದೇವನ ಬಾಲ್ಯದ ಅನೇಕ ಸಂಗತಿಗಳು ಪ್ರಚಲಿತವಾಗಿವೆ. ಒಂದು ಘಟನೆಯು ಈ ರೀತಿ ಇದೆ. ವಾಸುದೇವ ಐದು ವರ್ಷದವನಾಗಿದ್ದಾಗ ಒಮ್ಮೆ ಇದ್ದಕ್ಕಿದ್ದಂತೆ ಮನೆಯಲ್ಲಿ ಅದೃಶ್ಯನಾದ. ತಂದೆ ತಾಯಿಗಳು ಬಹಳ ಹುಡುಕಾಡಿ ದರೂ ಮಗ ದೊರೆಯಲಿಲ್ಲ. ಮೂರು ದಿನಗಳಾದನಂತರ ವಾಸುದೇವ ಉಡುಪಿಯ ಅನಂತೇಶ್ವರ ದೇವಸ್ಥಾನದಲ್ಲಿರುವ ಸುದ್ದಿ ಮಧ್ಯಗೇಹನಿಗೆ ತಿಳಿಯಿತು. ಇಬ್ಬರೂ ಉಡುಪಿಗೆ ಓಡಿದರು. ಅಲ್ಲಿ ಅನಂತೇಶ್ವರನ ವಿಗ್ರಹದ ಮುಂದೆ ಭಕ್ತರು ಕಿಕ್ಕಿರಿದು ತುಂಬಿದ್ದರು. ಹಸುಳೆ ವಾಸುದೇವ ವಿಷ್ಣುವಿನ ಪೂಜಾಕ್ರಮವನ್ನು ಎಲ್ಲರಿಗೂ

ವಿವರಿಸಿ ಹೇಳುತ್ತಿದ್ದ. ಇದಾದನಂತರ ವಾಸುದೇವ ಸಾಧಾರಣ ಬಾಲಕನಲ್ಲ ಅವತಾರ ಪುರುಷನೆಂದು ತೀರ್ಮಾನವಾಯಿತು.

ಇದಾದ ಕೆಲವೇ ದಿನಗಳಲ್ಲಿ ವಾಸುದೇವನಿಗೆ ಬ್ರಹ್ಮೋಪದೇಶವಾಯಿತು. ಹಳ್ಳಿಯ ಪಾಠಶಾಲೆಗೆ ಆತ ಹೋಗತೊಡಗಿದನು. ಕುಸ್ತಿ, ಜಗಳ, ಕುಣಿತ, ಹಾರುವುದು, ಈಜುವುದು ಮುಂತಾದ ಆಟಗಳಲ್ಲಿ ಆತ ಯಾವಾಗಲೂ ಮುಂದು. ಆ ಎಳೆ ವಯಸ್ಸಿನಲ್ಲೇ ಅವನಿಗಿದ್ದ ಗಟ್ಟಿಮುಟ್ಟಾದ ದೇಹವನ್ನು ನೋಡಿ ಜನರು ಅವನನ್ನು ಭೀಮನೆಂದು ಕರೆಯುತ್ತಿದ್ದರು. ಅವನ ಅಸಾಧಾರಣ ಶಕ್ತಿಯ ಕಾರಣದಿಂದಲೇ ಅವನನ್ನು ಪವನ ಕುಮಾರನ ಅವತಾರವೆಂದು ಹೇಳಿ ಕೊನೆಗೆ ಜನರು ಅದನ್ನೇ ನಂಬಿರಬೇಕು.

ವಾಸುದೇವ ಆಟದಲ್ಲಿ ಸಹಪಾಠಿಗಳಲ್ಲೆಲ್ಲಾ ಮುಂದಿದ್ದರೂ ಪಾಠದಲ್ಲಿ ಮಾತ್ರ ಎಂದೂ ಹಿಂದೆ ಇದ್ದನು. ಕೊನೆಗೆ ಅಧ್ಯಾಪಕರು ಹೇಳಿ ಮಾಡಿ ಸರಿಯಾದ ದಾರಿಗೆ ಎಳೆಯುವ ಪ್ರಯತ್ನಬಿಡಬೇಕಾಯಿತು. ವಾಸುದೇವ ಪಾಠಶಾಲೆ ಬಿಟ್ಟು ಮನೆಯ ದಾರಿ ಹಿಡಿದನು. ಮನೆಯಲ್ಲಿ ಸ್ವತಃ ತಾನೇ ಓದಿ ಶೀಘ್ರವೇ ವೇದ ಮತ್ತು ಶಾಸ್ತ್ರಗಳ ಸಂಪೂರ್ಣಜ್ಞಾನವನ್ನು ಸಂಪಾದಿಸಿದನು. ತರ್ಕಶಾಸ್ತ್ರ ಮತ್ತು ವ್ಯಾಕರಣದಲ್ಲಂತೂ ಆತ ಪ್ರಚಂಡ ಪಂಡಿತನಾದ.

ಪಾಠಶಾಲೆಯನ್ನು ಬಿಟ್ಟ ಬಳಿಕ ಅವನ ಮನಸ್ಸು ವೇದಾಂತದ ಕಡೆಗೆ ತಿರುಗಿತು. ಸಂಸಾರ ಹೂಡುವ ಯೋಚನೆಯಂತೂ ಇರಲಿಲ್ಲ. ವೇದ, ವೇದಾಂಗ, ಶಾಸ್ತ್ರಗಳ ಅಧ್ಯಯನ ಮಾಡಿ ಧರ್ಮ ಪ್ರಚಾರದ ಕಾರ್ಯದಲ್ಲಿ ತೊಡಗಬೇಕೆಂದು ತೀರ್ಮಾನವಾಯಿತು. ಹದಿನೈದನೇ ವರ್ಷದಲ್ಲಂತೂ ಸನ್ಯಾಸಿಯಾಗಲೇಬೇಕೆಂದು ನಿಶ್ಚಯವಾಯಿತು. ಸನ್ಯಾಸಿಯಾಗಲು ಒಬ್ಬ ಗುರುವಿನ ಸಹಾಯಬೇಕಿತ್ತು. ಬಹಳ ಹುಡುಕಿದ ಮೇಲೆ ಅಚ್ಯುತ ಪ್ರೇಕ್ಷರೆಂಬ ಯತಿಗಳೊಬ್ಬರು ದೊರಕಿದರು. ಅವರನ್ನೇ ಗುರುವನ್ನಾಗಿ ಮಾಡಿಕೊಳ್ಳಲಾಯಿತು.

ಸನ್ಯಾಸಾಶ್ರಮ ಸ್ವೀಕರಿಸಲು ಉಳಿದಿದ್ದ ಕೊನೆಯ ಕೆಲಸ ಎಂದರೆ ತಂದೆ ತಾಯಿಗಳ ಅಪ್ಪಣೆ. ಮಧ್ಯಗೇಹ ಮತ್ತು ವೇದವತಿಗೆ ಇದ್ದ ಮಗ ಈತನೊಬ್ಬನೇ ಮಗನಿಗೆ ಸನ್ಯಾಸಿಯಾಗುವ ಹುಚ್ಚು. 'ನೀನು ಸನ್ಯಾಸಿಯಾದರೆ ನಮ್ಮ ಅಂತ್ಯ ಸಂಸ್ಕಾರ ಮಾಡುವವರಾರು ? ಅಂತಿಮ ಸಂಸ್ಕಾರವಿಲ್ಲದಿದ್ದರೆ ಪ್ರೇತ ಯೋನಿಯಲ್ಲಿ

ಕೊಳೆಯಬೇಕಾಗುವುದು' ಎಂದು ಹೇಳಿ ವಾಸುದೇವನನ್ನು ತಡೆದರು. ಆದರೆ ಆತ ಸನ್ಯಾಸಿಯಾಗಲು ನಿಶ್ಚಯಿಸಿಬಿಟ್ಟಿದ್ದಾನೆ. ನಾನಲ್ಲದೆ ಇನ್ನೂ ಒಬ್ಬ ಮಗ ಹುಟ್ಟುವನೆಂದು ತಂದೆತಾಯಿಗಳಿಗೆ ಆಶ್ವಾಸನೆ ಇತ್ತಂತೆ ಅವರಿಗೆ ಕೆಲವೇ ದಿನಗಳಲ್ಲಿ ಒಬ್ಬ ಮಗನೂ ಜನಿಸಿದನು. ಅವನಿಗೆ ವಿಷ್ಣುತೀರ್ಥನೆಂದು ಹೆಸರಿಡ ಲಾಯಿತು. ವಿಷ್ಣುತೀರ್ಥ ಹುಟ್ಟುವವರೆಗೂ ವಾಸುದೇವ ಸನ್ಯಾಸಿಯಾಗಲಿಲ್ಲ. ಪುಟ್ಟ ತಮ್ಮನನ್ನು ನೋಡುತ್ತಲೇ ಇನ್ನಾವ ಅಡ್ಡಿ ಆತಂಕವೂ ಇಲ್ಲವೆಂದು ವೈಭವ ದಿಂದ ಅವನು ಸನ್ಯಾಸ ದೀಕ್ಷೆ ಪಡೆದನು. ಅವನಿಗೆ 'ಪೂರ್ಣ ಪ್ರಜ್ಞ'ನೆಂಬ ಬಿರುದೂ ದೊರಕಿತು. ಜನರು ವಾಸುದೇವನಿಗೆ ಬದಲಾಗಿ ಪೂರ್ಣಪ್ರಜ್ಞ ಎಂದೇ ಕರೆಯತೊಡಗಿದರು.

ಪೂರ್ಣಪ್ರಜ್ಞರು ತಮ್ಮ ಗುರು ಅಚ್ಯುತ ಪ್ರೇಕ್ಷರೊಡನೆ ಮಠದಲ್ಲೇ ಇದ್ದು ಪೂಜಾಪಾಠ ಮುಂತಾದುವನ್ನು ಮಾಡುತ್ತಿದ್ದರು. ಅಚ್ಯುತ ಪ್ರೇಕ್ಷರು ವೇದಾಂತ ದಲ್ಲಿ ಮಹಾ ಪಂಡಿತರಾಗಿದ್ದರು. ಪೂರ್ಣಪ್ರಜ್ಞರು ಕೂಡ ವೇದ, ವೇದಾಂಗ ಮತ್ತು ಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಅವರಿಗೆ ವೇದಾಂತದ ಅಧ್ಯಯನ ಮತ್ತು ಅದರ ಮೇಲೆ ಚರ್ಚಿಸುವ ಸುಯೋಗ ಲಭಿಸಿತು. ಆದರೆ ಕೆಲವೇ ದಿನಗಳಲ್ಲಿ ಗುರು ಶಿಷ್ಯರ ಮಧ್ಯೆ ಭಿನ್ನಾಭಿಪ್ರಾಯ ತಲೆದೋರಿತು. ಕ್ರಮೇಣ ಪೂರ್ಣಪ್ರಜ್ಞರ ಪ್ರತಿಭೆಯು ಹೊಳೆಯತೊಡಗಿತು. ಆ ಸುತ್ತಮುತ್ತ ಅವರ ಯೋಗ್ಯತೆ ಮತ್ತು ಪಾಂಡಿತ್ಯದ ಚರ್ಚೆ ಹರಡಿತು. ಪ್ರಾರಂಭದಲ್ಲಿ ಅಚ್ಯುತ ಪ್ರೇಕ್ಷರು ಪೂರ್ಣಪ್ರಜ್ಞರ ತರ್ಕವನ್ನು ಒಪ್ಪದಿದ್ದರೂ ಕೊನೆಕೊನೆಗೆ ಅವರು ಯೋಚಿಸುವ ರೀತಿ ನವೀನ ಮತ್ತು ಅದ್ಭುತವಾದುದೆಂದು ಒಪ್ಪಲೇಬೇಕಾಯಿತು.

ಅಚ್ಯುತ ಪ್ರೇಕ್ಷರು ಅವರನ್ನು ಮಠಾಧೀಶರನ್ನಾಗಿ ಮಾಡಿದರು. ಪೂರ್ಣ ಪ್ರಜ್ಞರು ಅನಂತೇಶ್ವರ ದೇವಸ್ಥಾನದ ಶ್ರೇಷ್ಠ ಪೀಠದಲ್ಲಿ ಆರೂಢರಾದರು. ಮಠಾಧೀಶರಾಗುತ್ತಲೇ ಅವರಿಗೆ ಆನಂದತೀರ್ಥ ಅಥವಾ ಮಧ್ವಾಚಾರ್ಯರೆಂದು ಹೆಸರಾಯಿತು. ಮುಂದೆ ಮಧ್ವಾಚಾರ್ಯರೆಂಬ ಹೆಸರೇ ಹೆಚ್ಚು ಬಳಕೆಗೆ ಬಂದಿತು.

ಪ್ರಪಂಚದಲ್ಲಿ ಈಶ್ವರನೊಬ್ಬನನ್ನು ಬಿಟ್ಟು ಮಿಕ್ಕ ವಸ್ತುವೆಲ್ಲಾ ಮಿಥ್ಯ. ಈಶ್ವರನನ್ನು ಕೇವಲ ಜ್ಞಾನ ಮಾರ್ಗದ ಮೂಲಕ ಪಡೆಯಬಹುದೆಂದು ಶಂಕರಾಚಾರ್ಯರು ವಾದಿಸಿದ್ದರು. ಮಧ್ವಾಚಾರ್ಯರಿಗೆ ಶಂಕರರ ಈ ವಾದ

ಸರಿಬೀಳಲಿಲ್ಲ. ಶಂಕರರ ಶಿಷ್ಯರು ಜನರನ್ನು ಸರಿಯಾದ ಮಾರ್ಗದಿಂದ ಎಳೆಯುತ್ತಿರುವುದನ್ನು ನೋಡಿ ಮಧ್ವಾಚಾರ್ಯರಿಗೆ ಅತೀವ ದುಃಖವಾಯಿತು. ಅವರು ದೇಶದಲ್ಲೆಲ್ಲಾ ಧರ್ಮ ಮತ್ತು ಈಶ್ವರನಿಗೆ ಸಂಬಂಧಿಸಿದ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸುವೆನೆಂದು ನಿಶ್ಚಯಿಸಿದರು.

ಇದೇ ಉದ್ದೇಶದಿಂದ ಮಧ್ವಾಚಾರ್ಯರು ದೇಶಾಟನೆ ಹೊರಟು ಮೊತ್ತ ಮೊದಲು ದಕ್ಷಿಣ ಭಾರತದ ರಾಜ್ಯಗಳಿಗೆ ಹೋದರು. ಅವರ ಜೊತೆ ಅಚ್ಯುತ ಪ್ರೇಕ್ಷರ ಕೆಲವು ಶಿಷ್ಯರೂ ಇದ್ದರು. ಆ ಕಾಲದಲ್ಲಿ ದಕ್ಷಿಣ ಭಾರತವು ಹರಿದುಹಂಚಿ ಹೋಗಿದ್ದಿತು. ರಾಜರುಗಳು ಪರಸ್ಪರ ಕಾದಾಡುತ್ತಿದ್ದರು ಆದರೆ ಆ ರಾಜ್ಯಗಳ ರಾಜರು ವಿದ್ವಾಂಸರನ್ನು ಬಹಳ ಗೌರವಿಸುತ್ತಿದ್ದರು. ತುಂಬಿದ ಸಭೆಯಲ್ಲಿ ಒಬ್ಬ ವಿದ್ವಾಂಸ ಅನ್ಯ ವಿದ್ವಾಂಸನ ಮತ ಅಥವಾ ಸಂಪ್ರದಾಯ ತಪ್ಪೆಂದು ವಾದಿಸಿ ಸೋಲಿಸಿದರೆ ಗೆದ್ದ ವಿದ್ವಾಂಸನ ಸಂಪ್ರದಾಯವನ್ನೇ ರಾಜನು ಮತ್ತು ಪ್ರಜೆಗಳು ನಂಬುತ್ತಿದ್ದರು.

ಮಧ್ವಾಚಾರ್ಯರು ಮೊದಲು ಮಂಗಳೂರಿನ ಹತ್ತಿರದ ಕಣ್ವತೀರ್ಥಕ್ಕೆ ತಲಪಿದರು. ಅಲ್ಲಿ ಅವರ ವಿರೋಧಿಗಳು ಶಾಸ್ತ್ರದ ಚರ್ಚೆಯಲ್ಲಿ ಸುಲಭವಾಗಿ ಸೋತುಹೋದರು. ಅಲ್ಲಿಂದ ತಿರುವಾಂಕೂರಿನ ದಾರಿ ಹಿಡಿಯಲಾಯಿತು. ಅಲ್ಲಿಯ ರಾಜ ಆದರದಿಂದ ಸ್ವಾಗತಿಸಿ ಶಾಸ್ತ್ರಗಳ ಚರ್ಚೆ ನಡೆಸಲು ಆಹ್ವಾನವಿತ್ತ. ಮಧ್ವಾಚಾರ್ಯರಿಗೆ ಬೇಕಾಗಿದ್ದುದೂ ಇದೇ. ಅದೇ ಸಮಯಕ್ಕೆ ಶೃಂಗೇರಿಯ ವಿದ್ಯಾಶಂಕರರು ತಿರುವಾಂಕೂರಿಗೆ ದಯಮಾಡಿಸಿದ್ದರು. ತಿರುವಾಂಕೂರಿನ ರಾಜನ ಮುಂದೆ ಚರ್ಚೆ ನಡೆದು ಮಧ್ವಾಚಾರ್ಯರು ಜಯಶೀಲರಾದರು. ಅನಂತರ ಅವರು ಶಿಷ್ಯರೊಡನೆ ರಾಮೇಶ್ವರದ ದಾರಿ ಹಿಡಿದರು. ಅಲ್ಲಿಯೂ ಅನೇಕ ವಿರೋಧಿಗಳನ್ನು ಸೋಲಿಸಿ ಶ್ರೀರಂಗದ ಮೂಲಕ ಉಡುಪಿಗೆ ಹಿಂತಿರುಗಿದರು.

ಉಡುಪಿಗೆ ಹಿಂತಿರುಗಿದ ಬಳಿಕ ಮಧ್ವಾಚಾರ್ಯರು ಭಗವದ್ಗೀತೆಯ ಮೇಲೆ ಭಾಷ್ಯವೊಂದನ್ನು ಬರೆದು ವೇದಾಂತ ಸೂತ್ರಗಳ ಮೇಲೆ ವ್ಯಾಖ್ಯೆ ಮಾಡುವ ಕೆಲಸದಲ್ಲಿ ಮಗ್ನರಾದರು. ಹೀಗೆ ಬಹಳ ಕಾಲದ ವರೆಗೆ ಉಡುಪಿಯಲ್ಲಿದ್ದು ಕೊನೆಗೆ ಉತ್ತರ ಭಾರತದ ಸಂಚಾರಕ್ಕೆ ಹೊರಟರು.

ಆಗ ಉತ್ತರ ಭಾರತದಲ್ಲಿ ಮುಸಲ್ಮಾನರದೇ ಮಾತಾಗಿದ್ದಿತು. ಅನೇಕ

ಬಾರಿ ಅವರ ಸರದಾರರ ಜಹಗೀರು ಮತ್ತು ಇಲಾಖೆಗಳ ಮೂಲಕ ಹೋಗಬೇಕಾಯಿತು. ಅದೃಷ್ಟಕ್ಕೆ ಮಧ್ವಾಚಾರ್ಯರು ಉರ್ದು ಮತ್ತು ಫಾರಸಿ ಭಾಷೆಗಳೆರಡನ್ನೂ ಚೆನ್ನಾಗಿಯೇ ಕಲಿತಿದ್ದು, ಅವುಗಳಲ್ಲಿ ಮಾತಾಡುವ ಶಕ್ತಿಯನ್ನೂ ಸಂಪಾದಿಸಿದ್ದರು. ಮುಸಲ್ಮಾನ್ ಸರದಾರರೊಡನೆ ಉರ್ದು ಅಥವಾ ಪರ್ಶಿಯನ್ ಭಾಷೆ ಮಾತಾಡಿ ಮಧ್ವಾಚಾಯರು ಅವರ ಮೇಲೆ ಪ್ರಭಾವ ಬೀರುತ್ತಿದ್ದರು. ಆದ್ದರಿಂದ ಮುಸಲ್ಮಾನರಿಂದ ಅವರಿಗೆ ಯಾವ ವಿಧವಾದ ಅಪಾಯವೂ ಆಗಲಿಲ್ಲ. ಯಾವ ವ್ಯಕ್ತಿಯನ್ನೇ ಆಗಲಿ ಆಕರ್ಷಿಸಲು ಅವನ ಮಾತೃಭಾಷೆಯಲ್ಲಿ ಮಾತಾಡಿದರೆ ಸಾಕು ಎಂದು ಮಧ್ವಾಚಾರ್ಯರು ಹೇಳುತ್ತಿದ್ದರು.

ಉತ್ತರ ಭಾರತದ ಅನೇಕ ನಗರಗಳನ್ನು ಸುತ್ತುಹಾಕುತ್ತಾ ಕೊನೆಗೆ ಹರಿದ್ವಾರಕ್ಕೆ ತಲಪಿದರು. ಅಲ್ಲಿ ಅನೇಕ ದಿನಗಳವರೆಗೆ ಉಪವಾಸ ಮತ್ತು ಧ್ಯಾನ ಮಾಡುತ್ತಿದ್ದರು. ಈ ಮಧ್ಯೆ ಕೆಲವು ದಿನಗಳಿಗಾಗಿ ಹಿಮಾಲಯದ ಗುಹೆಗೂ ಹೋಗಿ ಅಲ್ಲಿ ಕೆಲವು ಕಾಲ ಏಕಾಂತ ವಾಸ ಮಾಡಿ ಹಿಂತಿರುಗಿದರು. ಮೊದಲ ಬಾರಿ ಬಹಿರಂಗವಾಗಿ ವಿಷ್ಣುವಿನ ಪೂಜೆಯೇ ಈಶ್ವರನ ನಿಜವಾದ ಪೂಜೆ ಎಂದು ಸಾರಿದರು. ಅಲ್ಲಿಯೇ ವೇದಾಂತ ಸೂತ್ರದ ಅವರ ವ್ಯಾಖ್ಯಾನವೂ ಹೊರಬಂದಿತು. ಇಂದೂ ಅವರ ಭಾಷ್ಯವು ಬಹುಮೂಲ್ಯವಾದುದು. ಹರಿದ್ವಾರದಿಂದ ಮುಂದುವರಿದು ಹೋದ ಕಡೆಯಲ್ಲೆಲ್ಲಾ ವಿಷ್ಣುವಿನ ಶ್ರೇಷ್ಠತೆ ಸಾರುತ್ತಾ ವೈಷ್ಣವ ಧರ್ಮಕ್ಕೆ ಸೇರಲು ಜನಗಳಿನ್ನು ಪ್ರೋತ್ಸಾಹಿಸಿದರು. ಉತ್ತರ ಭಾರತದಿಂದ ಹಿಂತಿರುಗುವಾಗ ಅವರು ಕೆಲವು ಕಾಲ ಕಲ್ಯಾಣದಲ್ಲಿ ತಂಗಿದರು. ಕಲ್ಯಾಣ ಆಗ ಚಾಳುಕ್ಯರ ಸಾಮ್ರಾಜ್ಯದ ರಾಜಧಾನಿಯಾಗಿದ್ದು ಅನೇಕ ವಿದ್ವಾಂಸರ ಕೇಂದ್ರವಾಗಿದ್ದಿತು.

ಕಲ್ಯಾಣದಲ್ಲಿ ಮಧ್ವಾಚಾರ್ಯರು ಶೋಭನ ಭಟ್ಟನೆಂಬ ವಿದ್ವಾಂಸನೊಡನೆ ಚರ್ಚೆ ನಡೆಸಿದರು. ಶೋಭನಭಟ್ಟ ಸೋಲೊಪ್ಪಿದ. ಆತ ಮಧ್ವಾಚಾರ್ಯರಿಂದ ಪ್ರಭಾವಿತನಾಗಿ ಅವರ ಶಿಷ್ಯನಾದ. ಜೊತೆಗೆ ಸಾವಿರಾರು ಸ್ತ್ರೀಪುರುಷರೂ ವೈಷ್ಣವರ ಅನುಯಾಯಿಗಳಾದರು. ಕಲ್ಯಾಣದಿಂದ ಹೊರಡುವ ಮುನ್ನ ಮಧ್ವಾಚಾರ್ಯರು ಶೋಭನ ಭಟ್ಟನನ್ನು ಅಲ್ಲಿನ ತಮ್ಮ ಮಠದ ಅಧಿಕಾರಿಯನ್ನಾಗಿ ನೇಮಿಸಿದರು. ಉಡುಪಿಗೆ ಬಂದು ತಮ್ಮ ಗುರುವಾದ ಅಚ್ಯುತಪ್ರೇಕ್ಷರಿಗೆ ವೈಷ್ಣವ

ಧರ್ಮದ ದೀಕ್ಷೆ ಇತ್ತು ಶಿಷ್ಯನನ್ನಾಗಿ ಮಾಡಿಕೊಂಡರು. ಆ ಕಾಲದಲ್ಲಿ ಶಿವ ಅಥವಾ ಕಾಳಿಯ ಗುಡಿಯಲ್ಲಿ ಪಶುಬಲಿ ನಡೆಯುತ್ತಿತ್ತು.

ಮೈಸೂರು ಪ್ರಾಂತದ ಶೃಂಗೇರಿ ಮಠದವರಿಗೆ ಮಧ್ವಾಚಾರ್ಯರ ಅಭ್ಯುದಯವು ಸರಿಹೋಗಲಿಲ್ಲ. ದಕ್ಷಿಣದ ಅನೇಕ ರಾಜರು ಶಂಕರಾಚಾರ್ಯರ ಮತಾನುಯಾಯಿಗಳಾಗಿದ್ದರು. ಹೀಗೆ ಅವರಿಗೆ ರಾಜಸಹಾಯವಿದ್ದಿತು. ಕೊನೆಗೆ ಮಧ್ವಾಚಾರ್ಯರು ಮತ್ತು ಅವರ ಮತದ ಅನುಯಾಯಿಗಳ ವಿರುದ್ಧ ವಿಧ ವಿಧವಾದ ಅನ್ಯಾಯಗಳು ನಡೆಯತೊಡಗಿದವು.

ಮಧ್ವಾಚಾರ್ಯರನ್ನು ಹೀಗೆಯೇ ಬಿಟ್ಟರೆ ದೇಶದಲ್ಲೆಲ್ಲಾ ವೈಷ್ಣವರೇ ತುಂಬಿ ಹೋಗಿ ತಮ್ಮನ್ನು ಯಾರೂ ಕೇಳುವುದಿಲ್ಲವೆಂದು ಶೃಂಗೇರಿ ಮಠದ ಅಧೀಶ ಪದ್ಮತೀರ್ಥರು ಯೋಚಿಸಿದರು. ದ್ವೇಷ ತೀರಿಸಿಕೊಳ್ಳಲು ತನ್ನ ಅನುಯಾಯಿಗಳನ್ನು ಕರೆಸಿ ಸಣ್ಣ ಸಣ್ಣ ಗುಂಪನ್ನಾಗಿ ಮಾಡಿ ದೇಶದಲ್ಲೆಲ್ಲಾ ಸುತ್ತಿ ವೈಷ್ಣವ ಸಂತರನ್ನು ಪೀಡಿಸಲು ಆದೇಶವಿತ್ತರು.

ಇತ್ತ ವೈಷ್ಣವ ಧರ್ಮದ ಪ್ರಚಾರವನ್ನು ತಡೆಯಲು ಹೀಗೆ ಏರ್ಪಾಡು ಮಾಡಿ ಅತ್ತ ಮಧ್ವಾಚಾರ್ಯರ ಪುಸ್ತಕಾಲಯವನ್ನು ಹಾಳು ಮಾಡಲು ಹೊಂಚು ಹಾಕಿದರು. ಪುಸ್ತಕಾಲಯವನ್ನು ಸುಟ್ಟದ್ದೇ ಆದರೆ ವೈಷ್ಣವ ಮತದ ಪ್ರಚಾರದಲ್ಲಿ ವಿಘ್ನ ಉಂಟಾಗಬಹುದೆಂದು ಪದ್ಮತೀರ್ಥರ ಯೋಚನೆ.

ಪದ್ಮತೀರ್ಥರ ಕೆಲವು ದೂತರು ಗುಟ್ಟಾಗಿ ಮಧ್ವಾಚಾರ್ಯರ ಕುಟೀರಕ್ಕೆ ನುಗ್ಗಿ ಅವರ ಅನೇಕ ಅಮೂಲ್ಯ ಗ್ರಂಥಗಳನ್ನು ಕದ್ದು ಓಡಿದರು. ಯಾರಿಗೂ ಕಾಣಿಸದಿರಲೆಂದು ಆ ಗ್ರಂಥಗಳನ್ನು ಭೂಮಿಯಲ್ಲಿ ಹೂತುಹಾಕಲಾಯಿತು. ಅದೃಷ್ಟಕ್ಕೆ ಕುಂಬಲದ ರಾಜ ಜಯಸಿಂಹ ಚಾಳುಕ್ಯ ಮಧ್ವಾಚಾರ್ಯರಲ್ಲಿ ಬಹಳ ಶ್ರದ್ಧೆ ಇಟ್ಟಿದ್ದನು. ಮಧ್ವಾಚಾರ್ಯರು ಅವನ ಸಹಾಯದಿಂದ ವೈರಿಗಳ ಪತ್ತೆ ಹಚ್ಚಿ ಕಳವಾಗಿದ್ದ ಗ್ರಂಥಗಳನ್ನು ಹಿಂದೆ ಪಡೆದರು.

ಮಧ್ವಾಚಾರ್ಯರಿಗೆ ಸೋತು ಶರಣಾಗತರಾದ ಪಂಡಿತರಲ್ಲಿ ತ್ರಿವಿಕ್ರಮನೂ ಒಬ್ಬ. ಆತ ಶಂಕರರ ಮತಾವಲಂಬಿಯಾಗಿದ್ದರೂ ಶಂಕರರ ಧರ್ಮದಲ್ಲಿ ಅವನಿಗೆ ಕೆಲವು ಸಂದೇಹಗಳಿದ್ದವು. ಎಂಟು ದಿನಗಳ ಪರ್ಯಂತ ನಡೆದ ಚರ್ಚೆಯಲ್ಲಿ ತ್ರಿವಿಕ್ರಮನು ಸೋತು ವೈಷ್ಣವನಾದನು. ಈ ಸುದ್ದಿ ತಿಳಿದ ಕೂಡಲೇ ದೂರ ದೂರದ ಅನೇಕ ಜನರು ತಾವೇ ತಾವಾಗಿ ವೈಷ್ಣವರಾದರು.

ಮಧ್ವಾಚಾರ್ಯರು ಜಯಸಿಂಹನ ರಾಜ್ಯದಲ್ಲಿ ತಿರುಗುತ್ತಿದ್ದಾಗಲೇ ಅವರ ತಂದೆತಾಯಿಗಳು ಕಾಲವಾದರು. ತಮ್ಮ ಪುತ್ರನ ಕೀರ್ತಿ ಹರಡುತ್ತಿರುವುದನ್ನು ನೋಡಿ ಅವರು ಉಬ್ಬುತ್ತಿದ್ದರು.

ತಮ್ಮ ಜೀವನದ ಕೊನೆಯ ದಿನಗಳಲ್ಲಿ ಮಧ್ವಾಚಾರ್ಯರು ಅನೇಕ ಮಠಗಳನ್ನು ಸ್ಥಾಪಿಸಿದರು. ಮೃತ್ಯುವಿನ ಮುನ್ನ ಮಧ್ವಾಚಾರ್ಯರು ತಮ್ಮ ಅತ್ಯಂತ ಯೋಗ್ಯ ಶಿಷ್ಯನಾದ ಪದ್ಮನಾಭ ತೀರ್ಥರಿಗೆ ಧರ್ಮ ಪ್ರಚಾರದ ಭಾರ ಒಪ್ಪಿಸಿ, ಉಡುಪಿಯ ಕೃಷ್ಣಮಂದಿರದ ರಕ್ಷಣೆಯ ಭಾರವನ್ನು ತಮ್ಮ ಎಂಟು ಪ್ರಮುಖ ಶಿಷ್ಯರ ಮಂಡಳಿಗೆ ಒಪ್ಪಿಸಿದರು. ಕ್ರಿ.ಶ. ೧೨೮೭ರಲ್ಲಿ ಅವರು ಶಾಂತಿಪೂರ್ವಕ ಭಗವನ್ನಾಮ ಸ್ಮರಣೆಯಲ್ಲಿ ದೇಹವನ್ನು ತ್ಯಜಿಸಿದರು.

ಮಧ್ವಾಚಾರ್ಯರೂ ರಾಮಾನುಜರಂತೆ ದೊಡ್ಡ ಆಚಾರ್ಯರು. ಅವರ ಮತದಂತೆ ಬ್ರಹ್ಮ, ಜೀವ ಮತ್ತು ಜಡ ಇವು ಅನಾದಿ ಮತ್ತು ಅನಂತವಾದುವು. ಜಡ ಮತ್ತು ಜೀವ ಈಶ್ವರನಿಂದ ಬಿನ್ನವಾದುವು. ಜೀವಾತ್ಮನೂ ಅನಂತ, ಜೀವಾತ್ಮ ಮತ್ತು ಪರಮಾತ್ಮನ ಸಂಬಂಧ ಮಧ್ವಾಚಾರ್ಯರ ಮತ ಪ್ರಕಾರ ಸ್ವಾಮಿ ಮತ್ತು ಸೇವಕನ ಸಂಬಂಧ. ವಿಷ್ಣುವಿನ ಉಪಾಸನೆಯಿಂದ ಈಶ್ವರನ ಅನೇಕ ಗುಣಗಳು ಜೀವಾತ್ಮನಿಗೆ ದೊರಕುವುವು. ಆದರೆ ಜೀವಾತ್ಮ ಎಂದೂ ಪರಮಾತ್ಮನಾಗಲಿಕ್ಕಿಲ್ಲ.

ಮಧ್ವಾಚಾರ್ಯರ ಸಂಪ್ರದಾಯದವರು ಗೋಪಿ ಚಂದನವನ್ನು ಧರಿಸುವರು. ಮುಖಕ್ಕೆ ಅಂಗಾರಕ (ಕಪ್ಪು ರೇಖೆ) ಹಾಕುವರು. ತೋಳು, ಎದೆ, ಹೊಟ್ಟೆ ಇತ್ಯಾದಿ ಭಾಗಗಳಲ್ಲಿ ಶಂಖಚಕ್ರಾದಿ ಮುದ್ರೆಗಳನ್ನು ಧರಿಸುವರು. ಕನ್ನಡಿಗರಲ್ಲಿ ಈ ಮತದ ಅನುಯಾಯಿಗಳ ಸಂಖ್ಯೆ ಅಧಿಕವಾಗಿದೆ.

ಮಧ್ವಾಚಾರ್ಯರ ಮೂವತ್ತಮೂರು ರಚನೆಗಳಲ್ಲಿ ಬ್ರಹ್ಮಸೂತ್ರ ಮತ್ತು ಉಪನಿಷತ್ತಿನ ಟೀಕೆ ಅತ್ಯಂತ ಪ್ರಸಿದ್ಧವಾದುವು.

ಜ್ಞಾನೇಶ್ವರ

ಜ್ಞಾನೇಶ್ವರರು ಹದಿಮೂರನೆ ಶತಮಾನದಲ್ಲಿ ಜೀವಿಸಿದ್ದರು. ಅವರ ಪೂರ್ವಜರು ಪೈಠಣದಿಂದ ನಾಲ್ಕು ಹರಿದಾರಿ ಆಚೆ ಗೋದಾವರಿ ನದಿಯ ಉತ್ತರ ದಡದಲ್ಲಿ ಆಚೆ ಗ್ರಾಮದಲ್ಲಿದ್ದವರು. ಕಾರಣ ವಶದಿಂದ ಆಲಂದಿ ಗ್ರಾಮಕ್ಕೆ ಬಂದು ನೆಲಸಿದರು. ಅವರು ಜಾತಿಯಲ್ಲಿ ಬ್ರಾಹ್ಮಣರಾಗಿದ್ದರು. ಕಸುಬಿನಲ್ಲಿ ಕುಲಕರ್ಣಿಗಳಾಗಿದ್ದರು.

ಜ್ಞಾನೇಶ್ವರರ ಮುತ್ತಜ್ಜ ತ್ರ್ಯಂಬಕ ಪಂತರು ಗೋರಖನಾಥನ ಶಿಷ್ಯ ಮತ್ತು ಪರಮಭಕ್ತರಾಗಿದ್ದನು. ತ್ರ್ಯಂಬಕಪಂತರ ಮಗ ಗೋವಿಂದಪಂತರು ಮತ್ತು ಸೊಸೆ ಮೀರಾಬಾಯಿ ಗೈನಿನಾಥನ ಅನನ್ಯ ಸೇವಕರಾಗಿದ್ದರು. ಮೀರಾಬಾಯಿಯ ಪುತ್ರ ವಿಠಲಪಂತರೆ ಜ್ಞಾನೇಶ್ವರರ ತಂದೆ.

ವಿಠಲಪಂತರು ಬಾಲ್ಯದಿಂದಲೇ ವಿದ್ಯಾಪ್ರೇಮಿಗಳು. ಈಶ್ವರ ಭಕ್ತರು. ಮುಂಜಿಯಾದನಂತರ ದೇಶಾಟನೆಗೆ ಹೊರಟರು. ದಾರಿಯಲ್ಲಿ ಪ್ರಸಿದ್ಧ ವಿದ್ವಾಂಸರ ಬಳಿ ಇದ್ದು ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿದ್ದರು. ವಿವಾಹವಾದ ಬಹಳ ಕಾಲದವರೆಗೂ ಮಕ್ಕಳಾಗದಿರಲು ಅವರು ಸನ್ಯಾಸಿಯಾಗಲು ನಿಶ್ಚಯಿಸಿದರು. ಆದರೆ ಅವರ ಮಡದಿ ಇದಕ್ಕೆ ಸಮ್ಮತಿಸಲಿಲ್ಲ. ಆದ್ದರಿಂದ ಒಂದು ದಿನ ನದಿಗೆ ಸ್ನಾನ ಮಾಡಲು ಹೋಗುವೆನೆಂದು ಸುಳ್ಳು ಹೇಳಿ ಕಾಶಿಗೆ ಓಡಿಹೋದರು. ಅಲ್ಲಿ ಸ್ವಾಮಿ ರಮಾನಂದರ ಆಶ್ರಮದಲ್ಲಿ ತಾವು ಅನಾಥರೆಂದು ಹೇಳಿ ಸನ್ಯಾಸ ದೀಕ್ಷೆಯನ್ನು ಪಡೆದರು. ಅವರ ಪತ್ನಿ ರುಕ್ಮಿಣಿಗೂ ಈ ವಿಷಯ ತಿಳಿಯಿತು. ಆದರೆ ಈಗ ಅಳುವುದನ್ನು ಬಿಟ್ಟು ಆಕೆ ಮತ್ತೇನು ಮಾಡಿಯಾಳು?

ಕೆಲವು ಕಾಲದ ಅನಂತರ ರಮಾನಂದರು ತಮ್ಮ ಬಹುಮಂದಿ ಶಿಷ್ಯರೊಡನೆ ಧರ್ಮಪ್ರಚಾರಕ್ಕಾಗಿ ದಕ್ಷಿಣದ ಕಡೆ ಯಾತ್ರೆ ಹೊರಟರು. ಅಕಸ್ಮಾತ್ ಆಲಂದಿ ಗ್ರಾಮದ ಒಂದು ದೇವಸ್ಥಾನದಲ್ಲಿ ಅವರು ತಂಗಿದರು. ನಿತ್ಯದಂತೆ ರುಕ್ಮಿಣಿಬಾಯಿ

ದೇವಸ್ಥಾನಕ್ಕೆ ಬಂದಾಗ ಸ್ವಾಮಿ ರಮಾನಂದರನ್ನು ನೋಡಿ ನಮಸ್ಕಾರ ಮಾಡಿದಳು. 'ಪುತ್ರವತಿಯಾಗು' ಎಂದು ರಮಾನಂದರು ಆಶೀರ್ವದಿಸಿದರು. ಆಗ ಆಕೆ 'ನನ್ನ ಸ್ವಾಮಿಯಾದರೂ ದೀಕ್ಷೆ ಹೊಂದಿ ತಮ್ಮ ಶಿಷ್ಯರಾಗಿರುವರು. ತಮ್ಮ ಆಶೀರ್ವಾದ ಹೇಗೆ ಸಫಲವಾದೀತು?' ಎಂದು ಕೇಳಿದಳು. ಆಗ ರಮಾನಂದರು ವಿಠಲಪಂತರನ್ನು ಮತ್ತೆ ಕಾಶಿಗೆ ಹೋಗಿ ಗೃಹಸ್ಥರಾಗಿರಲು ಅಪ್ಪಣೆ ಮಾಡಿದರು. ಅಂತೆಯೇ ಅವರು ರುಕ್ಮಿಣಿಬಾಯಿಯೊಡನೆ ಇರತೊಡಗಿದರು. ಕೆಲವು ಕಾಲದ ನಂತರ ಅವರಿಗೆ ನಿವೃತ್ತಿನಾಥ, ಜ್ಞಾನೇಶ್ವರ ಮತ್ತು ಸೋಪಾನದೇವ ಎಂಬ ಮೂವರು ಬಾಲಕರು, ಮುಕ್ತಾಬಾಯಿಯೆಂಬ ಮಗಳು ಹುಟ್ಟಿದಳು. ಹೀಗೆ ಜ್ಞಾನೇಶ್ವರರು ಕ್ರಿ.ಶ. ೧೨೭೫ರಲ್ಲಿ ಆಪೀ ಗ್ರಾಮದಲ್ಲಿ ಜನಿಸಿದರು.

ಗುರುವಿನ ಆಜ್ಞೆ ಮೇರೆಗೆ ವಿಠಲರು ಮತ್ತೆ ಗೃಹಸ್ಥರಾಗಿದ್ದರು. ಶಾಸ್ತ್ರಕ್ಕನುಸಾರವಾಗಿ ಸನ್ಯಾಸಿ ಎಂದೂ ಗೃಹಸ್ಥರಾಗುವಂತಿಲ್ಲ. ಪರಿಣಾಮವಾಗಿ ಸಮಾಜವು ಅವರಿಗೆ ಬಹಿಷ್ಕಾರ ಹಾಕಿ ಪಾಪಿ, ವ್ಯಭಿಚಾರಿ ಎಂದು ಆರೋಪ ಮಾಡಿತು. ನಿವೃತ್ತಿನಾಥರಿಗೆ ಏಳು ವರುಷ ತುಂಬಲು ಬ್ರಹ್ಮೋಪದೇಶ ಮಾಡಬೇಕಾಯಿತು. ಆದರೆ ಬ್ರಾಹ್ಮಣರ ಸಮಾಜದಲ್ಲಿ ಒಬ್ಬರೂ ಅವರ ಪಕ್ಷ ವಹಿಸುವವರಿರಲಿಲ್ಲ.

ಕೊನೆಯಲ್ಲಿ ಕಠಿನ ಪ್ರಾಯಶ್ಚಿತ್ತ ಸ್ವೀಕರಿಸಲು ವಿಠಲರು ತೀರ್ಮಾನಿಸಿ ಪಂಡಿತರಲ್ಲಿ ಅನುಮತಿ ಬೇಡಿದರು. ಶಾಸ್ತ್ರ ಗ್ರಂಥಗಳನ್ನು ತಿರುವಿಹಾಕಿ ಪಂಡಿತರಿಗೆ ಯಾವ ವಿಧವಾದ ಪ್ರಾಯಶ್ಚಿತ್ತವೂ ಇಲ್ಲ· ಆ ಬಾಲಕನಿಗೆ ಬ್ರಹ್ಮೋಪದೇಶ (ಮುಂಜಿ) ಮಾಡಲು ಅವಕಾಶ ಕೊಡುವಂತೆಯೂ ಇಲ್ಲವೆಂದು ಧರ್ಮಗುರುಗಳು ಹೇಳಿದರು. ಪ್ರಾಣ ಬಿಡುವುದನ್ನು ಬಿಟ್ಟು ಅವರಿಗೆ ಬೇರೆ ದಾರಿಯೇ ಇರಲಿಲ್ಲ.

ಈ ಅಮಾನುಷಿಕ ಆದೇಶವನ್ನು ಕೇಳಿದಾಗ ವಿಠಲಪಂತರ ಎದೆ ಬಿರಿಯುವಂತಾಯಿತು. ಆದರೂ ತಮ್ಮ ನಿಶ್ಚಯವನ್ನು ಸಡಿಲಿಸಲಿಲ್ಲ. ಅವರು ಪ್ರಪಂಚದಲ್ಲಿ ಮಾಯಾಮೋಹವನ್ನು ತೊರೆದು ಪ್ರಯಾಗಕ್ಕೆ ತಲಪಿ ಪವಿತ್ರ ತ್ರಿವೇಣಿ ಸಂಗಮದಲ್ಲಿ ಮುಳುಗಿ ಪ್ರಾಣ ತ್ಯಜಿಸಿದರು. ರುಕ್ಮಿಣಿಬಾಯಿಯೂ ಪತಿಯನ್ನೇ ಅನುಸರಿಸಿದಳು. ಹೀಗೆ ಬ್ರಾಹ್ಮಣರ ತಪ್ಪು ಆದೇಶದಿಂದ ದೊಡ್ಡ ಅನರ್ಥವೇ ಜರುಗಿತು.

ತಂದೆ ತಾಯಿಗಳು ಕಣ್ಮರೆಯಾದನಂತರ ಅವರ ನಾಲ್ಕು ಮುದ್ದು ಮಕ್ಕಳೂ

ಅನಾಥರೂ, ಅಸಹಾಯಕರೂ ಆದರು. ನಿವೃತ್ತಿನಾಥರಿಗೆ ಆಗ ಕೇವಲ ಹತ್ತು ವರ್ಷ. ತಮ್ಮ ನೆಂಟರಿಷ್ಟರಿಂದ ಏನಾದರೂ ಸಹಾಯ ದೊರಕೀತೆಂಬ ಆಸೆಯಿಂದ ಆ ಮಕ್ಕಳು ತಮ್ಮ ಪೂರ್ವಿಕರ ಸ್ಥಳವಾದ ಆಪೀ ಗ್ರಾಮಕ್ಕೆ ಹೊರಟರು. ಆದರೆ ಅಷ್ಟು ಸಹೃದಯರಾದ ನೆಂಟರಿರುವರೇ? ಅವರ ಪಿತ್ರಾರ್ಜಿತ ಆಸ್ತಿಯು ಮಾತಿರಲಿ; ಅವರ ಹಳೆಯ ಮನೆಯಲ್ಲಿ ವಾಸವಾಗಿರಲೂ ಅವಕಾಶ ಕೊಡಲಿಲ್ಲ. ಆ ಮಕ್ಕಳಿಗೆ ಭಿಕ್ಷೆ ಬೇಡಿ ಹೊಟ್ಟೆ ಹೊರೆಯುವುದಲ್ಲದೆ ಬೇರೆ ಮಾರ್ಗವೇ ಇರಲಿಲ್ಲ.

ಭಿಕ್ಷೆ ಬೇಡುತ್ತಿದ್ದಾಗ ಒಮ್ಮೆ ನಿವೃತ್ತಿನಾಥರು ರಸ್ತೆಯನ್ನು ಮರೆತು ಅಲೆದಾಡಿ ಗುಹೆಯೊಂದನ್ನು ತಲಪಿದರು. ಅದು ಗೈನೀನಾಥರ ಆಶ್ರಮವಾಗಿದ್ದಿತು. ತಮ್ಮ ಶಿಷ್ಯನ ಮಗನನ್ನು ನೋಡಿ ಗೈನೀನಾಥರಿಗೆ ಸಂತೋಷವಾಯಿತು. ನಿವೃತ್ತಿನಾಥರಿಗೆ ಯೋಗ ಮಾರ್ಗದ ದೀಕ್ಷೆಯಿತ್ತು ಶ್ರೀಕೃಷ್ಣನನ್ನು ಪೂಜಿಸಲು ಆದೇಶವಿತ್ತರು. ಇವರು ಕೆಲವು ಕಾಲ ಗುರುವಿನ ಬಳಿ ಇದ್ದು ಅನಂತರ ಮನೆಗೆ ಬಂದು ಸಹೋದರ ಜ್ಞಾನೇಶ್ವರರಿಗೆ ದೀಕ್ಷೆಯಿತ್ತರು.

ತಮ್ಮ ಇಬ್ಬರು ಸಹೋದರರು ಮತ್ತು ಸಹೋದರಿಯೊಡನೆ ನಿವೃತ್ತಿನಾಥರು ಆಲಿಂದಿಗೆ ಮತ್ತೆ ಬಂದರು. ಜನಿವಾರ ಪಡೆದು ಮತ್ತೆ ಬ್ರಾಹ್ಮಣರ ಸಮಾಜದಲ್ಲಿ ಪ್ರವೇಶಿಸಬೇಕೆಂದು ಜ್ಞಾನೇಶ್ವರರು ಅಪೇಕ್ಷಿಸಿದರು. ಪಂಡಿತರನ್ನು ಕೇಳಬೇಕೆಂದು ಸಹೋದರರಲ್ಲಿ ತೀರ್ಮಾನವಾಯಿತು.

ಅವರು ಗೋದಾವರಿ ನದಿಯಲ್ಲಿ ಮಿಂದು ನಗರವನ್ನು ತಲಪಿದರು. ನಾಲ್ಕು ದಿನಗಳವರೆವಿಗೆ ಪೈಠಣ ಪಂಡಿತರ ಸಭೆ ನಡೆಯಿತು. ಸನ್ಯಾಸಿಯ ಮಗನಿಗೆ ಕೊಡಬಹುದಾದ ಪ್ರಾಯಶ್ಚಿತ್ತದ ಉಲ್ಲೇಖ ಯಾವ ಧರ್ಮಶಾಸ್ತ್ರದಲ್ಲೂ ದೊರಕಲಿಲ್ಲ. ಕೊನೆಗೆ ಹಿಂದಿನಂತೆ ದೇವರ ಪೂಜೆ ಪುನಸ್ಕಾರದಲ್ಲೇ ನಿರತರಾಗಿದ್ದಿರಬೇಕೆಂದೂ, ಮುಂಜಿಯ ಮಾತನ್ನು ಕೈಬಿಡಬೇಕೆಂದೂ ತಿಳಿಸಿದರು.

ಸಭೆಯು ಮುಗಿದನಂತರ ಪಂಡಿತನೊಬ್ಬನು ಆ ಮಕ್ಕಳನ್ನು ಅವರ ಹೆಸರಿನ ಅರ್ಥ ಕೇಳಿದ. ಮಕ್ಕಳ ಪಾಂಡಿತ್ಯಪೂರ್ಣ ಉತ್ತರವನ್ನು ಕೇಳಿ ಆತನೇ ಆಶ್ಚರ್ಯ ಚಕಿತನಾಗಬೇಕಾಯಿತು. ಸಣ್ಣ ಸಣ್ಣ ಬಾಲಕರ ಬಾಯಿಯಲ್ಲಿ ಜ್ಞಾನಗರ್ಭಿತ ಮಾತನ್ನು ಕೇಳಿ ಕೆಲವು ಪಂಡಿತರಿಗೆ ನಗುವೂ ಬಂದಿತು. ಅಷ್ಟರಲ್ಲಿ ಅತ್ತ

ಹೋಗುತ್ತಿದ್ದ ಎಮ್ಮೆಯೊಂದು ಪಂಡಿತನಿಗೆ ಕಂಡುಬಂದಿತು. ಆತ ತತ್ ಕ್ಷಣ ಹೆಸರಿನಲ್ಲೇನಿದೆ, ಹೇಗೆ ಬೇಕಾದರೆ ಹಾಗೆ ಕರೆಯಬಹುದು. ಆ ಎಮ್ಮೆಯನ್ನು ನಾನು ಜ್ಞಾನೇಶ್ವರ ಎಂದು ಕರೆಯುವೆ ಎಂದನು. ಆ ಮಾತನ್ನು ಕೇಳಿ ಜ್ಞಾನೇಶ್ವರರು– 'ನಿಜ. ನನಗೂ ಆ ಎಮ್ಮೆಗೂ ಏನೂ ಅಂತರವಿಲ್ಲ. ನನ್ನ ದೇಹದೊಳಗಿರುವ ಆತ್ಮವೇ ಅದರ ದೇಹದಲ್ಲೂ ಇರುವುದು' ಎಂದು ಉತ್ತರಕೊಟ್ಟರು.

ಪಂಡಿತರು ಆ ಎಮ್ಮೆಯನ್ನು ಮೂರು ಸಾರಿ ಹೊಡೆದ ಕೂಡಲೇ ಜ್ಞಾನೇಶ್ವರರ ಶರೀರದಲ್ಲಿ ಮೂರು ಪೆಟ್ಟುಗಳು ಕಂಡುಬಂದುವೆಂದೂ ಈ ಚಮತ್ಕಾರವನ್ನು ನೋಡಿ ಪಂಡಿತರೆಲ್ಲ ಮೂಗಿನ ಮೇಲೆ ಬೆರಳಿಟ್ಟರೆಂದೂ ಹೇಳುವರು.

ಕೆಲವರು ಜ್ಞಾನೇಶ್ವರರನ್ನು ಶ್ರದ್ಧೆಯಿಂದ ನೋಡಿದರೆ ಕೆಲವರು ಅಪಹಾಸ್ಯ ಮಾಡುತ್ತಿದ್ದರು. ಮತ್ತೆ ಕೆಲವರು ಪೂರ್ಣವಾಗಿ ಪರೀಕ್ಷಿಸಲು ಯತ್ನಿಸುತ್ತಿದ್ದರು. ಒಬ್ಬ ಪಂಡಿತ ಮುಂದೆ ಬಂದು 'ನಿನಗೆ ಶುದ್ಧಿಪತ್ರ ಬೇಕಾದರೆ ಈ ಎಮ್ಮೆಯ ಬಾಯಿಂದ ವೇದ ಹೇಳಿಸು' ಎಂದನು. ಅಂತೆಯೇ ಜ್ಞಾನೇಶ್ವರರು ಎಮ್ಮೆಯ ತಲೆಯನ್ನು ಸವರಲು ಅದು ವೇದಮಂತ್ರವನ್ನು ಪಠಿಸತೊಡಗಿತೆಂದು ಹೇಳುವರು. ಈ ಚಮತ್ಕಾರದಿಂದ ಪಂಡಿತರ ಕಣ್ಣು ತೆರೆಯಿತು. ಆದರೆ ಇವೆಲ್ಲ ಕೇವಲ ಕಟ್ಟು ಕತೆಯಿರಬೇಕು. ಸಾಮಾನ್ಯವಾಗಿ ಮಹಾಪುರುಷರ ಜೀವನದ ಜೊತೆಗೆ ಇಂತಹ ಕಟ್ಟುಕತೆಗಳನ್ನು ಸೇರಿಸುವುದು ವಾಡಿಕೆ.

ಇದಾದ ಕೆಲವು ಕಾಲದವರೆಗೆ ಜ್ಞಾನೇಶ್ವರರು ಮತ್ತು ಅವರ ಸಹೋದರ ಸಹೋದರಿಯರು ಪಟ್ಟಣದಲ್ಲೇ ಇದ್ದರು. ಪ್ರತಿದಿನ ಗೋದಾವರಿ ನದಿಯಲ್ಲಿ ಮಿಂದು ಜನಗಳಿಗೆ ಧಾರ್ಮಿಕ ಗ್ರಂಥಗಳನ್ನು ಓದಿ ಹೇಳುತ್ತಿದ್ದರು. ರಾತ್ರಿಯ ವೇಳೆಯಲ್ಲಿ ಭಜನೆ ಕೀರ್ತನೆ ನಡೆಯುತ್ತಿತ್ತು. ಬಹುಬೇಗ ಅವರ ಕೀರ್ತಿ ಸುತ್ತ ಮುತ್ತ ಹರಡತೊಡಗಿತು.

ಒಮ್ಮೆ ಅಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಅವನ ತಂದೆಯ ಶ್ರಾದ್ಧವಿದ್ದಿತು. ಜ್ಞಾನೇಶ್ವರರು ಆಗ ಅವರ ಮನೆಗೆ ಹೋಗಿದ್ದರು. ಆ ಬ್ರಾಹ್ಮಣ ಪಿತೃಗಳನ್ನು ಕರೆಯುತ್ತಿದ್ದಂತೆ ಪಿತೃಗಳು ಸಶರೀರವಾಗಿ ಬಂದು ಮುಂದೆ ಆಸೀನರಾದರೆಂಬ ಪ್ರತೀತಿಯಿದೆ. ಜನಗಳು ಇದನ್ನು ಜ್ಞಾನೇಶ್ವರರ ಚಮತ್ಕಾರವೆಂದೇ ತಿಳಿದು ಅಂದಿನಿಂದ ಅವರ ಮನಸ್ಸಿನಲ್ಲಿ ಜ್ಞಾನೇಶ್ವರರ ಬಗ್ಗೆ ಒಂದು ರೀತಿಯ ಅಲೌಕಿಕ

ಭೀತಿಯು ನೆಲೆಗೊಂಡಿತು. ಪಂಡಿತರು ಪರಸ್ಪರ ಮಾತಾಡಿಕೊಂಡು ಅವರಿಗೆ ಶುದ್ಧಿಪತ್ರವನ್ನು ಕೊಟ್ಟು ಮತ್ತೆ ಬ್ರಾಹ್ಮಣರ ಸಮಾಜಕ್ಕೆ ಸೇರಿಸಿಕೊಂಡರು.

ಅಲ್ಲಿ ಕೆಲವು ಕಾಲವಿದ್ದನಂತರ ಜ್ಞಾನೇಶ್ವರರು ಸಹೋದರ ಸಹೋದರಿಯರೊಡನೆ ಕಾಲುನಡಿಗೆಯಲ್ಲೇ ನೆಲಾ ಎಂಬ ಹಳ್ಳಿಗೆ ಬಂದರು. ಹಳ್ಳಿಗೆ ಪ್ರವೇಶಿಸುತ್ತಿದ್ದಂತೆಯೇ ಒಬ್ಬ ಹೆಂಗಸು ತನ್ನ ಪತಿಯ ಶವದ ಮುಂದೆ ಪ್ರಲಾಪಿಸುತ್ತಿರುವುದನ್ನು ನೋಡಿದರು. ಮೃತ ವ್ಯಕ್ತಿಯ ನಾಮಧೇಯ ಸಚ್ಚಿದಾನಂದನೆಂದು ತಿಳಿಯಿತು. ಜ್ಞಾನೇಶ್ವರರು 'ಸತ್ ಚಿತ್ ಆನಂದವಾದರೋ ಅಮರ' ಎಂದು ಶವವನ್ನು ಸ್ಪರ್ಶಿಸುತ್ತಲೇ ಆತ ಎದ್ದು ಕುಳಿತನೆಂದು ಹೇಳುವರು. ಆತ ಜ್ಞಾನೇಶ್ವರರ ಪಾದಕಮಲಕ್ಕೆರಗಿ ಅವರ ಶಿಷ್ಯನಾದ. ಈ ಸಚ್ಚಿದಾನಂದನೇ ಮುಂದೆ ಜ್ಞಾನೇಶ್ವರ ವಿಜಯ ಎಂಬ ಕಾವ್ಯ ಗ್ರಂಥವನ್ನು ರಚಿಸಿದನು.

ನೇಲಾದಿಂದ ಜ್ಞಾನೇಶ್ವರರು ಆಲಂದಿಗೆ ತಲಪಿದರು. ಅವರ ಚಮತ್ಕಾರದ ಸಮಾಚಾರ ಅಲ್ಲಿ ಮೊದಲೇ ಹರಡಿದ್ದಿತು. ಅಲ್ಲಿಯ ಪಂಡಿತರಿಂದ ಅತ್ಯಾದರದ ಸ್ವಾಗತ ದೊರೆಯಿತು. ಬಿಸೋವಚಾಟಿ ಎಂಬ ಬ್ರಾಹ್ಮಣನು ಇದನ್ನು ಸೈರಿಸಲಾರದಾದ. ಇವನು ಜ್ಞಾನೇಶ್ವರ ಮುಂತಾದವರನ್ನು ತಿರಸ್ಕರಿಸುತ್ತಾ ಸನ್ಯಾಸಿಯ ಮಕ್ಕಳೆಂದು ಕರೆಯುತ್ತಿದ್ದನು.

ಒಮ್ಮೆ ದೀಪಾವಳಿಯ ಸಮಯದಲ್ಲಿ ನಿವೃತ್ತಿನಾಥರು ತಂಗಿಗೆ ಒಂದು ವಿಶೇಷ ಅಡಿಗೆಯನ್ನು ಮಾಡಲು ತಿಳಿಸಿದರು. ಅದಕ್ಕಾಗಿ ಒಂದು ಮಡಿಕೆಯು ಬೇಕಾಗಿದ್ದಿತು. ಆಕೆ ಅಲ್ಲಿಯ ಕುಂಬಾರರನ್ನು ವಿಚಾರಿಸಿದಳು. ಈ ಸುದ್ದಿ ಹೇಗೋ ಬಿಸೋವಚಾಟಿಗೆ ತಿಳಿದು ಕುಂಬಾರರಿಗೆ ಬೆದರಿಕೆ ಹಾಕಿ ಮಡಿಕೆ ಮಾಡಿಕೊಡ ಕೂಡದೆಂದು ಆಜ್ಞೆ ಮಾಡಿದ ಮುಕ್ತಾಬಾಯಿಗೆ ಮಡಿಕೆ ಸಿಗದೆ ಹೋಗಲು ಆಕೆ ಮನೆಗೆ ಹೋಗಿ ಅಳಲು ಪ್ರಾರಂಭಿಸಿದಳು. ಇದು ಹೇಗೋ ಜ್ಞಾನೇಶ್ವರರಿಗೆ ತಿಳಿದು ಯೋಗಸಾಧನೆಯಿಂದ ತಮ್ಮ ಬೆನ್ನ ಮೇಲೆಯೇ ಆ ಅಡಿಗೆಯನ್ನು ಮಾಡಿಸಿದರಂತೆ. ಇದು ತಿಳಿಯುತ್ತಲೇ ಬಿಸೋವಚಾಟಿ ಅವರ ಕಾಲಿಗೆರಗಿ ಅಂದಿನಿಂದ ಅವರ ಶಿಷ್ಯನಾದನು.

ಜ್ಞಾನೇಶ್ವರರು ತಮ್ಮ ಹದಿನೈದನೆ ವರ್ಷದಲ್ಲೇ ಪೂರ್ಣ ಯತಿಯಾಗಿ ಶ್ರೀಕೃಷ್ಣನ ಭಕ್ತರಾಗಿದ್ದರು. ತಮ್ಮ ಸಹೋದರ ನಿವೃತ್ತಿನಾಥರಲ್ಲಂತೂ ಅವರಿಗೆ

ಅತಿ ಶ್ರದ್ಧೆ. ತನ್ನ ಗುರುವೆಂದೇ ಹೇಳುತ್ತಿದ್ದರು. ಸಹೋದರನ ಹೇಳಿಕೆಯ ಮೇಲೆ ಜ್ಞಾನೇಶ್ವರರು ಚಿಕ್ಕ ವಯಸ್ಸಿನಲ್ಲೇ ಶ್ರೀಮದ್ಭಗವದ್ಗೀತೆಯ ಮೇಲೆ ಟೀಕೆಯನ್ನು ಬರೆಯಲು ಪ್ರಾರಂಭಿಸಿದರು. ಒಂದೇ ವರುಷದೊಳಗೆ ಜ್ಞಾನೇಶ್ವರಿ ಎಂಬ ಟೀಕೆಯು ಸಿದ್ಧವಾಯಿತು. ಅದನ್ನು ಮರಾಠಿ ಭಾಷೆಯಲ್ಲಿ ಅದ್ವಿತೀಯ ಗ್ರಂಥ ವೆನ್ನುವರು. ಭಾಷೆಯು ಎಷ್ಟು ಸರಳ ಮತ್ತು ಸರಸವಾಗಿದೆ ಎಂದರೆ ಸಾಧಾರಣ ಜನಗಳೂ ಅದನ್ನು ಅರ್ಥ ಮಾಡಿಕೊಂಡು ರಸಾಸ್ವಾದ ಮಾಡಬಹುದು. ಜ್ಞಾನೇಶ್ವರಿಯ ಜೊತೆಗೆ ಅವರ ಅನೇಕ ಗ್ರಂಥಗಳು ಮತ್ತು ಕವಿತೆಗಳು ಹೊರಬಂದವು. ಅವುಗಳಲ್ಲಿ 'ಅಮೃತಾನುಭವ', 'ಚಾಂಗದೇವ ಪ್ರಶಸ್ತಿ', 'ಹರಿ ಪಾಠ', 'ಯೋಗವಾಸಿಷ್ಠ ಟೀಕಾ' ಮತ್ತು 'ಸ್ವಾತ್ಮ ಪತ್ರ ವಿಶೇಷ' ಮುಂತಾದವು ಪ್ರಸಿದ್ಧವಾದವು. ಜ್ಞಾನೇಶ್ವರಿಯನ್ನು ಮುಗಿಸಿದನಂತರ ಜ್ಞಾನೇಶ್ವರರು ನಿವೃತ್ತಿ ನಾಥ ಮತ್ತು ಕೆಲವು ಸಾಧುಗಳೊಡನೆ ತೀರ್ಥಯಾತ್ರೆಗೆ ಹೊರಟರು.

ಅಲೆಯುತ್ತಾ ಅವರು ಕನ್ನಾಡಕ್ಕೆ ತಲಪಿದರು. ಅಲ್ಲಿಯ ರಾಜ ರಾಮರಾಯ ಸಂತರನ್ನು ಬಹಳ ವಿರೋಧಿಸುತ್ತಿದ್ದನು. ಆದರೆ ರಾಣಿ ಸೀತಾಬಾಯಿ ಸಂತರ ಪರಮಭಕ್ತೆಯಾಗಿದ್ದಳು. ಯಾವ ಸಾಧುವನ್ನೂ ರಾಜಧಾನಿಯ ಒಳಗೆ ಬಿಡಕೂಡ ದೆಂಬುದು ರಾಜರ ಆಜ್ಞೆ. ಆದರೆ ಜ್ಞಾನೇಶ್ವರರ ಪ್ರಭಾವದಿಂದ ರಾಮರಾಯನ ಮನಸ್ಸು ಬದಲಿಸಿತು. ಆತ ಸಾಧುಸಂತರನ್ನು ವಿರೋಧಿಸದೆ ಅವರ ಅನನ್ಯ ಭಕ್ತನಾದನು.

ಸತಪುಡಾಗೆ ತಲಪಿದಾಗ ಅವರ ಭೇಟಿ ಹರಪಾಲನೆಂಬ ಬೇಡನೊಡನಾಯಿತು. ಯಾತ್ರಿಕರನ್ನು ಲೂಟಿ ಮಾಡುವುದು ಹರಪಾಲನ ಉದ್ಯೋಗ. ಆದರೆ ಭಜನೆ ಮಾಡುತ್ತಿರುವ ಯಾತ್ರಿಕರನ್ನು ಆತ ಹಿಂಸಿಸುತ್ತಿರಲಿಲ್ಲ. ಆತ ಜ್ಞಾನೇಶ್ವರ ಮುಂತಾದವರನ್ನು ಬಹಳ ಪ್ರೀತಿಯಿಂದ ಸ್ವಾಗತಿಸಿ ಅವರ ಸೇವೆ ಮಾಡಿದ್ದಲ್ಲದೆ ಬಿಲ್ಲು ಬಾಣಗಳನ್ನು ತೆಗೆದುಕೊಂಡು ಧಾರವೆಂಬ ಹಳ್ಳಿಗೆ ಅವರನ್ನು ತಲುಪಿಸಲು ಹೊರಟನು. ಧಾರದಿಂದ ಜ್ಞಾನೇಶ್ವರರು ಉಜ್ಜಯಿನಿಗೆ ಹೋಗಿ ವೀರಮಂಗಲ ನೆಂಬ ಜ್ಯೋತಿಷಿಯನ್ನು ಉದ್ಧಾರ ಮಾಡಿದರು. ಅವನ ಸಮಾಧಿಯ ಮೇಲೆ ಶಿವಲಿಂಗವನ್ನು ಸ್ಥಾಪಿಸಿದರು. ಆ ಸ್ಥಳ ಉಜ್ಜಯಿನಿಯಿಂದಾಚೆ ಸಂದೀಪನ ಆಶ್ರಮದ ಸಮೀಪ ಮಂಗಳೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಮುಂದೆ ಪ್ರಯಾಗಕ್ಕೆ ಹೋಗಿ ತ್ರಿವೇಣಿಯಲ್ಲಿ ಮಿಂದು ಭಾರದ್ವಾಜಾಶ್ರಮದ ದರ್ಶನ ಪಡೆದು ಕಾಶಿಗೆ ತಲುಪಿದರು. ಕಾಶಿಯ ಸಮೀಪ ಮಣಿಕರ್ಣಿಕಾ ಘಾಟಿಯಲ್ಲಿ ಮುದ್ಗಲಾಚಾರ್ಯನೆಂಬ ಮಹಾತ್ಮ ಭಾರಿ ಯಜ್ಞವೊಂದನ್ನು ಮಾಡುತ್ತಿದ್ದನು. ಅಲ್ಲಿ ಅನೇಕ ವಿದ್ವಾಂಸರೂ ಆಗಮಿಸಿದ್ದರು. ಜ್ಞಾನೇಶ್ವರರು ಅಲ್ಲಿಗೆ ಹೋದರು. ಮೊದಲು ಯಾರ ಪೂಜೆ ಮಾಡಬೇಕೆಂದು ಪ್ರಶ್ನೆ ಕೇಳಲು ಮುದ್ಗಲಾಚಾರ್ಯರು ಆನೆಯ ಸೊಂಡಲಿಗೊಂದು ಹಾರವನ್ನು ಕೊಟ್ಟು ಅದು ಯಾರಿಗೆ ಹಾಕುವುದೋ ಅವರನ್ನು ಪೂಜಿಸಬೇಕೆಂದು ತೀರ್ಮಾನಿಸಿದರು. ಆನೆಯು ಜ್ಞಾನೇಶ್ವರರ ಕುತ್ತಿಗೆಗೆ ಹಾಕಲು ಅವರಿಗೇ ಪ್ರಥಮ ಪೂಜೆ ದೊರೆಯಿತು.

ಜ್ಞಾನೇಶ್ವರರು ದೆಹಲಿಗೆ ಹೋದಾಗ ಜಲಾಲುದ್ದೀನ್ ಖಿಲ್ಜಿಯು ರಾಜನಾಗಿದ್ದನು. ಜ್ಞಾನೇಶ್ವರರ ಮಂಡಲಿಯುವರು ಭಜನೆ ಕೀರ್ತನೆಗಳ ಮೂಲಕ ಜನಗಳನ್ನು ಎಚ್ಚರಿಸಲು ಪ್ರಯತ್ನಿಸಿದಾಗ ಕೆಲವು ಸಂಕುಚಿತ ಮನೋಭಾವದ ಮೌಲ್ವಿಗಳು ರಾಜನಿಗೆ ದೂರಿದರು. ಜಲಾಲುದ್ದೀನ್ ಕೋಪಗೊಂಡು ಕೀರ್ತನೆ ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದ. ಆದರೆ ಸ್ವತಃ ತಾನೇ ಜ್ಞಾನೇಶ್ವರರ ಪ್ರಭಾವಕ್ಕೊಳಗಾಗಿ ನಗರದಲ್ಲಿ ಭಜನೆ ಕೀರ್ತನೆಗಳನ್ನು ನಡೆಸಲು ಅವಕಾಶವಿತ್ತು ಹಿಂತಿರುಗಿದನು.

ಜ್ಞಾನೇಶ್ವರರು ತಮ್ಮ ಜೊತೆಯವರೊಡನೆ ಅಯೋಧ್ಯಾ, ಬೃಂದಾವನ, ದ್ವಾರಕೆ, ಗಿರಿನಾರ ಮುಂತಾದ ತೀರ್ಥಗಳನ್ನು ಸಂದರ್ಶಿಸಿ ಧಾರವಾಡದ ಮೂಲಕ ಪಂಡರಪುರಕ್ಕೆ ಬಂದರು. ಇಲ್ಲಿಗೆ ಯಾತ್ರೆ ಮುಕ್ತಾಯವಾಯಿತು. ಜ್ಞಾನೇಶ್ವರರ ಮುಖ್ಯ ಜೊತೆಗಾರ ನಾಮದೇಯ ಈ ಸಮಯದಲ್ಲಿ ಒಂದು ದೊಡ್ಡ ಔತಣವನ್ನು ನಡೆಸಿ ಅನೇಕ ಸಂತರನ್ನು ಆಹ್ವಾನಿಸಿದನು.

ಜ್ಞಾನೇಶ್ವರರ ಜೀವನದ ಮಹತ್ವಪೂರ್ಣ ಘಟನೆಯೆಂದರೆ ಚಾಂಗದೇವನ ಉದ್ಧಾರ. ಚಾಂಗದೇವ ಶಿವಭಕ್ತ ಮತ್ತು ಸಿದ್ಧಪುರುಷ. ಆತ ಅನೇಕ ವಿದ್ಯೆಗಳಲ್ಲಿ ಪಾರಂಗತನಾಗಿದ್ದು, ಪರಕಾಯ ಪ್ರವೇಶ, ನೀರ ಮೇಲೆ ನಡೆಯುವುದು, ಯಾವ ಆಧಾರವೂ ಇಲ್ಲದೆ ಆಕಾಶದಲ್ಲಿ ಕುಳಿತುಕೊಳ್ಳುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದ. ಅವನ ಆಶ್ರಮ ತಪತೀ ನದಿಯ ದಡದಲ್ಲಿದ್ದಿತು. ಆತ ಹದಿನಾಲ್ಕು ಬಾರಿ ಮೃತ್ಯುವನ್ನು ಹಿಂದೆ ಕಳುಹಿಸಿದ್ದನೆಂದು ಹೇಳುವರು. ಅವನ ದೋಷವೆಂದರೆ ಆತ ಅತ್ಯಂತ ಸ್ವಾಭಿಮಾನಿ ಮತ್ತು ಗರ್ವಿಷ್ಠ.

ಜ್ಞಾನೇಶ್ವರರ ಚಮತ್ಕಾರದ ಸಮಾಚಾರ ಕೇಳಿ ಆತನ ಹೊಟ್ಟೆ ಉರಿಯಿತು. ಅವರಿಗೆ ಅಪಮಾನ ಮಾಡಬೇಕೆಂದು ನಿಶ್ಚಯಿಸಿ ತನ್ನ ಶಿಷ್ಯನ ಕೈಯಲ್ಲಿ ಖಾಲಿ ಕಾಗದವೊಂದನ್ನು ಕೊಟ್ಟು ಅವರ ಬಳಿ ಕಳುಹಿಸಿದನು. ಜ್ಞಾನೇಶ್ವರರು ಚಾಂಗದೇವ ಕೇವಲ ಖಾಲಿ ಹಾಳೆಯನ್ನೇ ಕಳುಹಿಸಿದನೇ ಎಂದು ಶಿಷ್ಯನನ್ನು ನೋಡುತ್ತಲೇ ಕೇಳಲು ಎಲ್ಲರೂ ಆಶ್ಚರ್ಯಚಕಿತರಾದರು ಮತ್ತು ಉತ್ತರ ವಾಗಿ ಅರುವತ್ತೈದು ಛಂದಸ್ಸುಗಳಲ್ಲಿ ಬ್ರಹ್ಮಜ್ಞಾನ ಗರ್ಭಿತವಾದ ಒಂದು ಪತ್ರವನ್ನು ಕಳುಹಿಸಿದರು. ಚಾಂಗದೇವನಿಗೆ ಆ ಪತ್ರ ಸರಿಯಾಗಿ ಅರ್ಥವೇ ಆಗಲಿಲ್ಲ.

ಆತ ಜ್ಞಾನೇಶ್ವರರನ್ನು ನೋಡಲು ತನ್ನ ಸಾವಿರದ ನಾನ್ನೂರು ಶಿಷ್ಯರೊಡನೆ ಹೊರಟ. ಚಾಂಗದೇವ ಒಂದು ಸಿಂಹದ ಮೇಲೆ ಕುಳಿತು ಚಾವಟಿಗೆ ಬದಲಾಗಿ ಕೈಯ್ಯಲ್ಲಿ ಹಾವನ್ನು ಹಿಡಿದಿದ್ದನೆಂದು ಹೇಳುವರು. ಚಾಂಗದೇವ ಬರುತ್ತಿರುವ ಸುದ್ದಿ ಜ್ಞಾನೇಶ್ವರರಿಗೆ ತಲಪಿದಾಗ, ಅವರು ತಮ್ಮ ಸಹೋದರ ನಿವೃತ್ತಿನಾಥ ರೊಡನೆ ಗೋಡೆಯ ಮೇಲೆ ಕುಳಿತು ಮಾತಾಡುತ್ತಿದ್ದರಂತೆ. ಚಾಂಗದೇವನಂತಹ ಮಹಾಪುರುಷನನ್ನು ಸ್ವಾಗತಿಸಲು ಖಂಡಿತ ಹೋಗಬೇಕು. ಆದರೆ ಸವಾರಿ ಯಾವುದು ಎಂದು ನಿವೃತ್ತಿನಾಥರು ಕೇಳಲು ಜ್ಞಾನೇಶ್ವರರ ಆಜ್ಞೆಯ ಮೇರೆಗೆ ಅವರು ಕುಳಿತಿದ್ದ ಗೋಡೆಯೇ ಹೊರಟಿತಂತೆ. ಜ್ಞಾನೇಶ್ವರರ ಈ ವಾಹನವನ್ನು ನೋಡಿ ಚಾಂಗದೇವ ಅಚ್ಚರಿಗೊಂಡು ತನ್ನ ಅಹಂಕಾರವನ್ನು ಬಿಟ್ಟು ಅವರ ಪಾದಕ್ಕೆ ಬಿದ್ದನು.

ಆಷಾಢ ಮತ್ತು ಕಾರ್ತಿಕ ಕೃಷ್ಣಪಕ್ಷ ಏಕಾದಶಿಯ ದಿನ ಪಂಡರಾಪುರದಲ್ಲಿ ಪ್ರಾಚೀನ ಕಾಲದಿಂದಲೂ ಒಂದು ದೊಡ್ಡ ಜಾತ್ರೆ ನಡೆಯುವುದು. ಒಮ್ಮೆ ಜ್ಞಾನೇಶ್ವರರು ತಮ್ಮ ಮನೆಯವರೊಡನೆ ಹೋದರು. ಭಾಗವತ ಸಂಪ್ರದಾಯ ದಂತೆ ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡಿ ಪುಂಡರೀಕ ಮತ್ತು ವಿಠಲ ರುಕ್ಮಿಣಿಯ ದರ್ಶನ ಪಡೆಯಲು ದೇವಸ್ಥಾನಕ್ಕೆ ಹೋದರು ಅಲ್ಲಿ ಜ್ಞಾನೇಶ್ವರರು ಸಂತರ ಎದುರು ದೇವರನ್ನು ಸ್ತುತಿಸುತ್ತಾ ಸಮಾಧಿಯಾಗಿ ಪ್ರಾಣ ತ್ಯಜಿಸಲು ದೇವರನ್ನು ಮನಸ್ಸಿನಲ್ಲಿ ಅನುಮತಿ ಬೇಡಿದರಂತೆ. ಪ್ರಾಪಂಚಿಕ ವ್ಯವಹಾರದಿಂದ ಅವರ ಮನಸ್ಸು ಬಹಳ ಬೇಸರಗೊಂಡಿತ್ತು.

ಕ್ರಿ. ಶ. ೧೨೯೬ರಲ್ಲಿ ತಮ್ಮ ಇಪ್ಪತ್ತೊಂದನೇ ವರ್ಷದಲ್ಲಿ ಜ್ಞಾನೇಶ್ವರರು ಸಮಾಧಿಸ್ಥರಾಗಿ ಪ್ರಾಣ ತ್ಯಜಿಸಿದರು. ಈ ಘಟನೆಯ ಹೃದಯ ವಿದ್ರಾವಕ ವರ್ಣನೆಯನ್ನು ನಾಮದೇವ ೨೫೦ ಛಂದಸ್ಸುಗಳಲ್ಲಿ ಮಾಡಿರುವ. ಜ್ಞಾನೇಶ್ವರರ ಸ್ಮರಣೆಗಾಗಿ ಇಂದೂ ಆಲಿಂದಿಯಲ್ಲಿ ಪ್ರತಿ ವರ್ಷ ದೊಡ್ಡ ಜಾತ್ರೆ ನಡೆಯುತ್ತದೆ.

ಖುಸರೋ

ಇಂದಿಗೆ ಸುಮಾರು ೬೦೦ ವರ್ಷಗಳಿಗೂ ಹಿಂದೆ ಭಾರತದಲ್ಲಿ ಅಮೀರ್ ಖುಸರೋ ಎಂಬ ಪ್ರಸಿದ್ಧ ಕವಿಯಿದ್ದನು. ಅವನು ಜನರು ಮಾತಾಡುವ ಭಾಷೆಯಲ್ಲಿ ಅನೇಕ ಗೀತೆಗಳು, ಪಹೇಲಿಗಳು (ಒಗಟುಗಳು) ದೋಸಖುನಗಳು, ತಪಮುಕರಿಗಳು, ಢಕೋಸಲಿಗಳು ಮುಂತಾದುವನ್ನು ಬರೆದನು. ೬೦೦ ವರ್ಷಗಳು ಕಳೆದುಹೋಗಿದ್ದರೂ ಇಲ್ಲಿಯುವರೆಗೆ ಖುಸರೋವಿನ ಜನಪ್ರಿಯತೆ ಕಡಿಮೆಯಾಗಲಿಲ್ಲ. ಅವನು ತನ್ನ ರಚನೆಗಳ ಮೂಲಕ ಇಂದೂ ನಮ್ಮ ಮಧ್ಯದಲ್ಲಿ ಜೀವಂತನಾಗಿದ್ದಾನೆ. ಅಮೀರ್ ಖುಸರೋ ಹಿಂದಿಯಲ್ಲೂ ಬರೆದನು. ಅವನು ಉಪಯೋಗಿಸಿದ ಹಿಂದಿ ಈಗ ನಾವು ಉಪಯೋಗಿಸುವ ಹಿಂದಿಗೆ ಬಹಳ ಹತ್ತಿರದ ಭಾಷೆ. ಈ ರೀತಿ ಅವನನ್ನು ಆಧುನಿಕ ಹಿಂದಿಯ ಪ್ರಥಮ ಕವಿ ಎಂದು ಹೇಳಬಹುದು.

ಖುಸರೋವಿನ ಜನ್ಮವು ಕ್ರಿ.ಶ. ೧೨೫೫ನೇ ಇಸವಿಯಲ್ಲಿ ಏಟಾ ಜಿಲ್ಲೆಯ ಪಟಿಯಾಲೀ ಎಂಬ ಹಳ್ಳಿಯಲ್ಲಾಯಿತು. ಇವನ ತಂದೆ ಆಜೀವಿಕೆಯನ್ನು ಹುಡುಕುತ್ತಾ ಬಲಖ್ ಹಜಾರಾ ಎಂಬ ಸ್ಥಳದಿಂದ ಇಲ್ಲಿಗೆ ಬಂದು ನೆಲಸಿದ್ದನು. ಮೂವರು ಸಹೋದರರಲ್ಲಿ ಖುಸರೋವೇ ಎಲ್ಲರಿಗಿಂತಲೂ ಚಿಕ್ಕವನು. ಅವನಿಗೆ ಇನ್ನೂ ಒಂಬತ್ತು ವರ್ಷ ವಯಸ್ಸಾಗಿದ್ದಿಲ್ಲ. ಆಗಲೇ ೮ ವರ್ಷ ವಯಸ್ಸಿನ ಅವನ ತಂದೆ ಕಾಲವಾದನು. ತಂದೆಯ ಮರಣಾನಂತರ ಇವನ ಅಜ್ಜನಾದ ನವಾಬ್ ಇಮಾದ್ ಉಲ್‌ಮುಲ್ಕ್ ಎಂಬುವರು ಇವನನ್ನು ಸಾಕಿದರು.

ಖುಸರೋ ಹನ್ನೆರಡು ವರ್ಷದವನಿದ್ದಾಗ ಅವನು ಹೊಟ್ಟೆಪಾಡಿಗೋಸ್ಕರವಾಗಿ ಕೆಲಸ ಹುಡುಕಬೇಕಾಯಿತು. ಅಲ್ಲಿಯುವರೆಗೆ ಖುಸರೋವಿನ ಕುಟುಂಬದವರು ಕೇವಲ ಸೈನ್ಯದಲ್ಲಿ ಸೇರಿ ಯುದ್ದ ಮಾಡುವುದು ಮತ್ತು ಯುದ್ಧ ಮಾಡುವುದಕ್ಕೆ ದೂರ ದೂರ ಪ್ರದೇಶಗಳಿಗೆ ಹೋಗುವುದನ್ನು ಮಾತ್ರ ಕಲಿತಿದ್ದರು. ಆದರೆ ಖುಸರೊವಾದರೋ ಸೈನ್ಯಕ್ಕೆ ಸೇರಿ ಖಡ್ಗ ಹಿಡಿಯುವುದಕ್ಕಿಂತ ಲೇಖನಿ

ಯನ್ನು ಹಿಡಿಯುವುದು ಅಧಿಕ ಶ್ರೇಯಸ್ಕರ ಎಂದು ತಿಳಿದನು. ಪ್ರಾರಂಭದಿಂದಲೇ ಅವನ ಮನಸ್ಸು ಕವಿತಾ ರಚನೆಯ ಕಡೆಗೆ ಹೆಚ್ಚಾಗಿ ಓಡುತ್ತಿತ್ತು. ಅವನು ಶಾಂತಿಪ್ರಿಯ ಸ್ವಭಾವದವನು. ಅವನು ತನ್ನ ಗಮನವನ್ನೆಲ್ಲಾ ಓದುಬರಹಕ್ಕೆ ಕೊಟ್ಟನು.

ತನ್ನ ಒಂದು ಪುಸ್ತಕದ ಪೀಠಿಕೆಯಲ್ಲಿ ಅವನು ಹೀಗೆ ಬರೆಯುತ್ತಾನೆ– ನಾನು ಹನ್ನೆರಡನೆಯ ವರ್ಷದಿಂದಲೇ ಕವಿತೆ ಬರೆಯತೊಡಗಿದೆ. ಆದರೆ ನನಗೆ ಯಾವ ಗುರುತೂ ಸಿಕ್ಕಲಿಲ್ಲ. ನಾನು ಹಳೆಯ ಮತ್ತು ಹೊಸ ಕವಿಗಳ ಕವಿತೆಗಳನ್ನು ಓದುತ್ತಿದ್ದೆ. ಅದೇ ಅಭ್ಯಾಸದಿಂದ ನಾನೂ ಸ್ವತಃ ಕವಿತೆಗಳನ್ನು ರಚಿಸತೊಡಗಿದೆ. ಈ ವಿಧದಲ್ಲಿ ನನ್ನ ಲೇಖನಿ ಸ್ವೇಚ್ಛೆಯಾಗಿ ನಿರ್ಬಂಧವಿಲ್ಲದೆ ಓಡತೊಡಗಿತು.

ಆಗಿನ ಕಾಲದಲ್ಲಿ ಕವಿಗಳು ರಾಜರ ದರಬಾರಿಗೆ ಹೋಗಿ ರಾಜರೆದುರಿಗೆ ಕವಿತಾ ಪಾಠ ಮಾಡಿ ಧನೋಪಾರ್ಜನೆ ಮಾಡುವ ವಾಡಿಕೆಯಿದ್ದಿತು. ಖುಸರೋವು ಕೂಡ ಈ ವೃತ್ತಿಯನ್ನೇ ಪ್ರಾರಂಭಿಸಿದನು. ಇತರ ಕವಿಗಳಿಗಿಂತ ಖುಸರೋವಿಗೆ ದರಬಾರುಗಳಲ್ಲಿ ಅತಿ ಜಾಗ್ರತೆಯಾಗಿ ಮನ್ನಣೆ ದೊರಕಿತು. ಅವನಿಗೆ ಹಣ, ಯಶಸ್ಸು ಎರಡೂ ಅಧಿಕವಾಗಿ ಸಿಕ್ಕಿತು. ಏಕೆಂದರೆ ಅವನು ಅರಬ್ಬಿ, ಪರ್ಷಿಯನ್ ಮತ್ತು ತುರ್ಕಿ ಮುಂತಾದ ಅನೇಕ ಭಾಷೆಗಳಲ್ಲಿ ಕಾವ್ಯ ರಚನೆ ಮಾಡಬಲ್ಲವನಾಗಿದ್ದನು. ದೆಹಲಿಯ ಮುಸಲ್ಮಾನ ಸುಲ್ತಾನರು ತುರ್ಕಿ ಮತ್ತು ಅರಬ್ಬಿ ಭಾಷೆಗಳನ್ನು ಸುಲಭವಾಗಿ ತಿಳಿದುಕೊಳ್ಳುತ್ತಿದ್ದರು.

ಮೊದಲು ಮೊದಲು ದೆಹಲಿಯ ದರಬಾರಿನಲ್ಲಿ ಇವನಿಗೆ ಪ್ರವೇಶ ಸಿಕ್ಕಿರಲಿಲ್ಲವಾದ ಸಮಯದಲ್ಲಿ ಇವನು ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಇವನು ಚಿಕ್ಕ ಪುಟ್ಟ ನವಾಬರ ಮತ್ತು ಸರದಾರರ ಕೃಪಾಭಿಕ್ಷೆಗಾಗಿ ಹೋಗುತ್ತಿದ್ದನು. ದೆಹಲಿಯ ಸುಲ್ತಾನನಾದ ಗಯಾಸುದ್ದೀನ್ ಬಲ್ಬನ್ನನ ಜ್ಯೇಷ್ಠಪುತ್ರ ರಾಜಕುಮಾರ ಮುಹಮ್ಮದ್‌ನನ್ನು ಇವನು ತನ್ನ ಕವಿತೆಯಿಂದ ಬಹಳ ಸಂತೋಷಪಡಿಸಿದ. ರಾಜಕುಮಾರನು ಖುಸರೋವನ್ನು ತನ್ನನ್ನು ಬಿಟ್ಟು ಬೇರೆ ಕಡೆ ಹೋಗಲು ಬಿಡುತ್ತಿರಲಿಲ್ಲ. ಸನ್ ೧೨೮೪ರಲ್ಲಿ ಪಂಜಾಬಿನ ಮೇಲೆ ಮೊಗಲರು ಆಕ್ರಮಣ ನಡೆಸಿದಾಗ ಅವರನ್ನು ಎದುರಿಸಲು ಹೋದ ರಾಜಕುಮಾರ ಮುಹಮ್ಮದನು

ಖುಸರೋವನ್ನು ತನ್ನೊಡನೆ ಕರೆದುಕೊಂಡು ಹೋದ. ಯುದ್ಧದಲ್ಲಿ ರಾಜಕುಮಾರ ಮೃತನಾದ. ಮೊಗಲರು ಖುಸರೋವನ್ನು ಬಂಧಿಸಿ ಬಲಖ್ ಎಂಬ ಸ್ಥಳಕ್ಕೆ ಕೊಂಡುಹೋದರು. ಖುಸರೋವಿನ ಪೂರ್ವಜರೂ ಬಲಖಿನ ನಿವಾಸಿಗಳಾಗಿದ್ದರು. ಎರಡು ವರ್ಷಗಳಾದ ಮೇಲೆ ಖುಸರೋ ಅಲ್ಲಿಂದ ಹಿಂತಿರುಗಿದ. ಭಾರತಕ್ಕೆ ಮರಳಿದ ಮೇಲೆ ಇವನು ಗಯಾಸುದ್ದೀನ್ ಬಲ್ಬನ್ನನಿಗೆ ಅವನ ಪುತ್ರ ರಾಜಕುಮಾರ ಮುಹಮ್ಮದ್ದಿನ ಮೃತ್ಯುವಿನ ಬಗ್ಗೆ ಬರೆದಿದ್ದ ಕವಿತೆಯನ್ನು ಓದಿ ಹೇಳಿದ. ಕವಿತೆ ಅತ್ಯಂತ ಕರುಣೆಯಿಂದ ತುಂಬಿತ್ತು. ಬಲ್ಬನ್ನನು ಅತೀವ ವ್ಯಾಕುಲನಾದ. ಅವನ ಆರೋಗ್ಯವು ಒಡನೆಯೇ ಕೆಟ್ಟುಹೋಗಿ ಅವನು ಮೂರು ದಿನಗಳನಂತರ ಕಾಲವಾದ.

ಈಗ ಖುಸರೋವಿಗೆ ಹೊಸ ಆಶ್ರಯದಾತನ ಅಗತ್ಯ ಬಿದ್ದಿತು. ಎರಡು ವರ್ಷಗಳವರೆಗೆ ಅವನು ಅವಧ್ ಪ್ರಾಂತದ ಸುಬೇದಾರನ ಬಳಿ ಇದ್ದ. ಅನಂತರ ಅವನು ದೆಹಲಿಗೆ ಹಿಂತಿರುಗಿ ಬಾದಶಾಹ್ ಕೈಕೊಬಾದನ ದರಬಾರಿನ ಸದಸ್ಯನಾಗಿ ನೇಮಕ ಹೊಂದಿದ.

ಸನ್ ೧೨೯೦ರಲ್ಲಿ ಜಲಾಲುದ್ದಿನ್ ಖಿಲ್ಜಿಯು ದೆಹಲಿಯ ಸಿಂಹಾಸನದ ಮೇಲೆ ಆಸೀನನಾದಾಗ ಖುಸರೋವು ಅವನನ್ನು ಭೇಟಿ ಮಾಡಿದ. ಚಕ್ರವರ್ತಿಯು ಮೊದಲಿನಿಂದಲೇ ಇವನ ಹೆಸರನ್ನು ಕೇಳಿದ್ದ. ಇವನ ಕವಿತೆಯಿಂದ ಸುಲ್ತಾನ್ ಜಲಾಲುದ್ದೀನನು ಅತೀವ ಪ್ರಸನ್ನನಾಗಿ ಇವನಿಗೆ "ಅಮೀರ್" ಎಂಬ ಪದವಿಯನ್ನು ದಯಪಾಲಿಸಿದ. ಚಕ್ರವರ್ತಿಯು ಖುಸರೋವನ್ನು ದರಬಾರಿನ ಅಧಿಕಾರಿಯಾಗಿ ಹೆಚ್ಚು ಸಂಬಳದ ಮೇಲೆ ನೇಮಕ ಮಾಡಿದ.

ಸನ್ ೧೨೯೬ರಲ್ಲಿ ಸುಲ್ತಾನ್ ಜಲಾಲುದ್ದೀನನ್ನು ಕೊಂದು ಅವನ ಸಹೋದರನ ಮಗನಾದ ಅಲ್ಲಾಉದ್ದೀನ್ ಖಿಲ್ಜಿಯು ದೆಹಲಿಯ ಸಿಂಹಾಸನವೇರಿದ. ಅಲ್ಲಾಉದ್ದೀನನೂ ಸಹ ಅಮೀರ್ ಖುಸರೋವನ್ನು ಕಂಡು ಹರ್ಷಪಟ್ಟನು. ಖುಸರೋವಿಗೆ ಎಲ್ಲಾ ವಿಧದ ಸೌಲಭ್ಯಗಳು ದೊರೆಯುವಂತೆ ಅವನು ವ್ಯವಸ್ಥೆ ಮಾಡಿದನು. ಅವನು ಖುಸರೋವಿಗೆ "ಖುಸರವೇ-ಶೋಅರ್" ಎಂದರೆ "ಕವಿ ಸಮ್ರಾಟ್" ಎಂಬ ಬಿರುದು ಕೊಟ್ಟನು. ಮತ್ತು ಜಲಾಲುದ್ದೀನನು ಕೊಡುತ್ತಿದ್ದ ವೇತನವನ್ನೂ ಮುಂದುವರಿಸಿದನು. ಸನ್ ೧೩೧೬ರಲ್ಲಿ ಕುತುಬುದ್ದೀನ್ ಮುಬಾರಕ್ ಚಕ್ರವರ್ತಿಯಾದನು. ಇವನೂ ಕವಿತೆಯನ್ನು ಕಂಡರೆ ಇಷ್ಟಪಡುತ್ತಿದ್ದನು. ಇವನು

ಖುಸರೋವಿನ ಒಂದು ಕವಿತೆಯ ಮೇಲೆ ಅತ್ಯಂತ ಮುಗ್ಧನಾಗಿ ಅವನಿಗೆ ಆನೆಯ ತೂಕದಷ್ಟು ಚಿನ್ನವನ್ನು ಕೊಟ್ಟುಬಿಟ್ಟನು.

ಖಿಲ್ಜೀ ವಂಶವು ಕೊನೆಗೊಂಡಿತು. ಗಯಾಸುದ್ದೀನ್ ತೊಗಲಕನು ಸಿಂಹಾಸನಾಧೀಶನಾದನು ಖುಸರೋವು ಅವನ ಹೆಸರಿನ ಮೇಲೆ "ತೊಗಲಕ್ ನಾಮಾ" ಎಂಬ ಪುಸ್ತಕ ಬರೆದನು. ಇದನ್ನು ಖುಸರೋವಿನ ಅಂತಿಮ ರಚನೆಯೆಂದು ಹೇಳಲಾಗುತ್ತದೆ.

ಎಲ್ಲವನ್ನೂ ಸೇರಿಸಿ ಖುಸರೋ ೯೯ ಪುಸ್ತಕಗಳನ್ನು ಬರೆದನು. ಪುಸ್ತಕಗಳೆಲ್ಲಾ ಅರಬ್ಬೀ ಅಥವಾ ಪರ್ಷಿಯನ್ ಭಾಷೆಗಳಲ್ಲಿವೆ. ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಕೆಲವು ಪುಸ್ತಕಗಳ ಅನುವಾದ ಮಾತ್ರ ಉಪಲಬ್ಧವಾಗುತ್ತದೆ. ಕೆಲವು ಪುಸ್ತಕಗಳ ಹೆಸರು ಹೀಗಿದೆ: 'ಮುಸನವೀ ಶೀರಿನ್ ಫರ್ಹಾದ್', 'ಮುಸನವೀ ಲೈಲಾಮಜನೂನ್' ಮತ್ತು 'ಖಾಲಿಕ್‌ಬಾರೀ'.

ಖುಸರೋ ತನ್ನ ಕಾಲದ ಅತ್ಯುತ್ತಮ ಪರ್ಷಿಯನ್ ಭಾಷೆಯ ಕವಿಯೆಂದು ಪರಿಗಣಿತನಾಗಿದ್ದನು ಅವನಿಗೆ ಪರ್ಷಿಯನ್ ಭಾಷೆ ಹೇಗೋ ಹಿಂದಿಯೂ ಸಹ ಅಷ್ಟೇ ಸಹಜವಾಗಿದ್ದಿತು. ಅವನು ಹಲವು ಬಾರಿ ಒಂದೇ ಛಂದದ ಒಂದು ಪಂಕ್ತಿ ಪರ್ಷಿಯನ್ ಮತ್ತು ಇನ್ನೊಂದು ಪಂಕ್ತಿ ಹಿಂದಿಯಾಗುವಂತೆ ಕವಿತೆ ರಚಿಸುತ್ತಿದ್ದನು.

ಶಬಾನೇ ಹಿಜರಾಂ ದರಾಜ್‌ಚೂಂ ಜುಲ್ಫೋ ರೋಜೇ
ವಸಲತ್‌ಚು ಉಮ್ರ್‌ಕೋತಹ್ ।
ಸಖೀ ಪಿಯಾ ಕೋ ಜೋ ಮೈ ನ ದೇಖೂ
ತೋ ಕೈಸೆ ಕಾಟೂಂ ಅಂಧೇರಿ ರತಿಯಾಂ ॥

(ಸಖೀ, ಪ್ರಿಯತಮನನ್ನು ನೋಡದೆ ನಾನು ಅಂಧಕಾರಮಯವಾದ ರಾತ್ರಿಯನ್ನು ಹೇಗೆ ಕಳೆಯಲಿ?)

ಆ ಸಮಯದಲ್ಲಿ ಹಿಂದೀ, ಫಾರಸೀ ಎರಡು ಭಾಷೆಗಳನ್ನೂ ಚೆನ್ನಾಗಿ ತಿಳಿದಿದ್ದ ಅನೇಕ ಜನರಿದ್ದರೆಂಬುದಾಗಿ ಇದರಿಂದ ತಿಳಿಯುತ್ತದೆ.

ಖುಸರೋವು ತನ್ನ ಕಣ್ಣುಗಳಿಂದಲೇ ಗುಲಾಮೀ ವಂಶಜ ರಾಜರ ಅಂತ್ಯ, ಖಿಲ್ಜೀ ವಂಶದ ಉದಯ ಮತ್ತು ಅಸ್ತ ಮತ್ತು ತೊಗಲಕ್ ವಂಶದ ಪ್ರಾರಂಭ

ವನ್ನು ನೋಡಿದ್ದನು. ಅವನ ಜೀವಿತ ಕಾಲದಲ್ಲಿ ದೆಹಲಿಯ ಸಿಂಹಾಸನದ ಮೇಲೆ ಎಂಟು ಚಕ್ರವರ್ತಿಗಳು ಕುಳಿತುಕೊಂಡರು, ಅವರಲ್ಲಿ ಐದು ಚಕ್ರವರ್ತಿಗಳ ದರಬಾರಿನಲ್ಲಿ ಖುಸರೋವಿಗೆ ಗೌರವದ ಸ್ಥಾನ ದೊರಕಿದ್ದಿತು.

ಖುಸರೋವಿಗೆ ಇವತ್ತು ದೊರಕುತ್ತಿರುವ ಗೌರವಕ್ಕೆ ಅವನು ರಚಿಸಿದ ಪರ್ಷಿಯನ್ ಭಾಷೆಯ ಗ್ರಂಥಗಳೂ ಕಾರಣ ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಪರ್ಷಿಯನ್ ಭಾಷೆಯಲ್ಲಿ ಅವನ ಐದು ಕವಿತಾ ಸಂಗ್ರಹಗಳೂ, ಐದು ಖಂಡ ಕಾವ್ಯಗಳೂ ಇವೆ. ಭಾರತದ ಪರ್ಷಿಯನ್ ಭಾಷೆಯ ಕವಿಗಳಲ್ಲಿ ಇವನೇ ಸರ್ವಶ್ರೇಷ್ಠ. ಹಿಂದಿಯಲ್ಲಿ ಅವನು ಬರೆದ ಬಿಡಿಬಿಡಿಯಾದ ಕವಿತೆಗಳ ಕಾರಣದಿಂದ ಜನರು ಅವನನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ. ಖುಸರೋವು ಜನರು ಆಡುವ ಹಿಂದಿಯಲ್ಲಿ ಕವಿತೆ ರಚಿಸುತ್ತಿದ್ದನು. ಪರ್ಷಿಯನ್ ಮತ್ತು ಹಿಂದಿಗಳನ್ನು ಒಂದುಮಾಡುವುದಕ್ಕಾಗಿ ಅವನು ಒಂದು ನಿಘಂಟನ್ನು ಪದ್ಯದಲ್ಲಿಯೇ ರಚಿಸಿದ್ದಾನೆ.

ಖಾಲರ್‌ಬಾರಿ ಸಿರ್‌ಜನ್‌ಹಾರ್
ವಾಹಿದ್ ಏಕ್ ಬಿದಾ ಕರ್‌ತಾರ್
ಮೂಸ್ ಚೂಹಾ ಗುರ್ಬ್: ಬಿಲ್ಲೀ ಮಾರ್‌ನ
ಸೋಜನೋ ರಿಶ್ತ: ವಹಿಂದೀ ಸುಯೀ ತಾಗ್॥

(ಈ ಪದ್ಯದಲ್ಲಿ ಪರ್ಷಿಯನ್ ಮತ್ತು ಹಿಂದಿಯ ಸಮಾನ ಅರ್ಥದ ಪದಗಳನ್ನು ಕೊಟ್ಟಿದೆ.)

೬೦೦ ವರ್ಷಗಳ ಮೊದಲು ಅವನು ರಚಿಸಿದ ಕೆಲವು ಒಗಟೆಗಳನ್ನು ನೋಡಿ; ಇವತ್ತು ಬರೆದಂತೆ ಕಾಣುತ್ತವೆ—

ಖಡಾ ಭೀ ಲೋಟಾ, ಪಡಾ ಭೀ ಲೋಟಾ।
ಹೈ ಬೈಠಾ ಔರ್ ಕಹೇ ಹೈ ಲೋಟಾ॥ ಉತ್ತರ: ಲೋಟಾ
ಬೀಸೋಂಕಾ ಸಿರ್ ಕಾಟ್ ಲಿಯಾ।
ನಾ ಮಾರಾ ನಾಖೂನ್ ಕಿಯಾ॥ ಉತ್ತರ: ನಾಖೂನ್
ಸಾಮನೇ ಆಯೇ ಕರ್‌ದೇ ದೋ।
ಮಾರಾ ಜಾಯೇ ನ ಜಖ್ಮೀಹೋ॥ ಉತ್ತರ: ಕನ್ನಡಿ.

ಒಗಟಿನ ಉತ್ತರ ಅಂತಿಮ ಚರಣದಲ್ಲಿ ಸೂಚಿಸಿರುವ ಪದ್ಯದಲ್ಲಿ ಹೇಳಿರುವ ಒಗಟನ್ನು ಕಹಮುಕರಿ ಎನ್ನುತ್ತಾರೆ. ಉದಾಹರಣೆ:

ಸೋಭಾ ಸದಾ ಬಢಾವನ ಹಾರಾ।
ಆಖೋಂ ತೇ ಛಿನ್ ಹೋತ್ ನ ನ್ಯಾರಾ॥
ಆಯೇ ಫಿರ್ ಮೇರೇ ಮನರಂಜನ್।
ಏ ಸಖಿ ಸಾಜನ್, ನಾ ಸಖಿ ಅಂಜನ್॥

ಎರಡು ಪ್ರಶ್ನೆಗಳ ಉತ್ತರ ಒಂದೇ ಪದ್ಯದಲ್ಲಿದ್ದರೆ, ಅದನ್ನು ದೋಸಖುನೇ ಎನ್ನುತ್ತಾರೆ. ಉದಾಹರಣೆ:

ಪಂಡಿತ್ ಪ್ಯಾಸಾ ಕ್ಯೋಂ?
ಗದ್‌ಹಾ ಉದಾಸಾ ಕ್ಯೋಂ? (ಉತ್ತರ: ಲೋಟಾ ನ ಥಾ)
ಸಿತಾರ್ ಕ್ಯೋಂನ ಬಜಾ?
ನಾರ್ ಕ್ಯೋಂನ ನಹಾಯೀ? (ಉತ್ತರ: ಪರದಾ ನ ಥಾ)

ಈಗ "ಢಕೋಸಲಾ" ಒಂದನ್ನು ಕೇಳಿ. ಒಂದು ಸಾರಿ ಖುಸರೋ ಎಲ್ಲಿಗೋ ಹೋಗುತ್ತಿದ್ದ. ದಾರಿಯಲ್ಲಿ ಅವನಿಗೆ ಬಾಯಾರಿಕೆಯಾಯಿತು. ಒಂದು ಭಾವಿಯ ಹತ್ತಿರ ಅವನು ನೀರು ಕುಡಿಯುವುದಕ್ಕಾಗಿ ನಿಂತ. ಅಲ್ಲಿ ನಾಲ್ಕು ಹೆಂಗಸರು ನೀರು ತುಂಬುತ್ತಿದ್ದರು. ಅವರು ಖುಸರೋವನ್ನು ಗುರುಗಿಸಿಬಿಟ್ಟರು. ಒಬ್ಬಳು "ಪಾಯಸ"ದ (ಖೀರ್) ಮೇಲೆ ಕವಿತೆ ಹೇಳಿದರೆ ನೀರು ಕೊಡುವೆನೆಂದಳು. ಎರಡನೆಯವಳು "ಚರಖ"ದ ಮೇಲೆ ಒಂದು ಕವಿತೆ ಹೇಳಿದರೆ ನೀರು ಕೊಡುವೆನೆಂದಳು. ಮೂರನೆಯವಳು "ನಾಯಿ" (ಕುತ್ತಾ) ಮತ್ತು ನಾಲ್ಕನೆಯವಳು "ತಮಟೆ" (ಢೋಲ್) ಇವುಗಳ ಮೇಲೆ ಕವಿತೆ ಹೇಳೆಂದರು. ಖುಸರೋವು ಒಂದೇ ಪದ್ಯದಲ್ಲಿ ನಾಲ್ವರನ್ನು ಸಂತೋಷಪಡಿಸಿದನು.

ಖೀರ ಪಕಾಯಿ ಜತನ್‌ಸೇ, ಚರ್‌ಖಾ ದಿಯಾ ಚಲಾ।
ಆಯಾ ಕುತ್ತಾ ಖಾ ಗಯಾ, ತೂ ಬೈಠೀ ಢೋಲ್ ಬಜಾ॥
ಲಾ ಪಾನೀ ಲಾ॥

ಖುಸರೋ ಒಳ್ಳೆಯ ಸಂಗೀತ ತಿಳಿದವನಾಗಿದ್ದನು. ಅವನು ಅನೇಕ ರಾಗ ರಾಗಿಣಿಗಳನ್ನು ಕಂಡುಹಿಡಿದಿದ್ದಾನೆ.

ಅಮೀರ್ ಖುಸರೋ ಭಾರತೀಯ ಸಂಗೀತ ಪದ್ಧತಿಯಲ್ಲಿ ನೈಪುಣ್ಯ ಪಡೆದಿದ್ದನು. ಪರ್ಷಿಯನ್ ಸಂಗೀತದಲ್ಲೂ ಪ್ರವೀಣತೆ ಸಂಪಾದಿಸಿದ್ದನು. ಈ ಎರಡು ಶೈಲಿಗಳ ಸಮ್ಮಿಶ್ರಣದಿಂದ ಅವನು ಸಂಗೀತ ಕಲೆಯಲ್ಲಿ ಹೊಸದೇ ಆದ, ಹೊಸ ಉಲ್ಲಾಸವನ್ನುಂಟು ಮಾಡುವ ಒಂದು ಮೂರನೆಯ ಶೈಲಿಯನ್ನೇ ಸೃಷ್ಟಿಸಿದನು. ಕೆಲವು ಭಾರತೀಯ ರಾಗಗಳಲ್ಲಿ ಪರ್ಶಿಯನ್ ರಾಗಗಳನ್ನು ಸೇರಿಸಿ ಹೊಸ ರಾಗಗಳನ್ನು ಖುಸರೋ ನಿರ್ಮಿಸಿದನು. ಕೆಲವು ಅಂಥ ರಾಗಗಳನ್ನು ಕೆಳಗೆ ಕೊಡಲಾಗಿದೆ :

ಮಾಮನ್ :—ಭಾರತೀಯ ರಾಗ "ಹಿಂದೋಳ" ಮತ್ತು ಪರ್ಷಿಯನ್ ರಾಗ "ನೀರೀಜ್" ಇವನ್ನು ಸೇರಿಸಿದ ರಾಗ.

ಉಶಾಕ್ :—ಭಾರತೀಯ ರಾಗ "ಸಾರಂಗ" ವಸಂತ ಹೀಗೆ ಪರ್ಶಿಯನ್ "ನವಾ" ರಾಗ ಸೇರಿಸಿದ ರಾಗ.

ಮುವಾಫಿಕ್ :—ಭಾರತೀಯ ರಾಗಗಳಾದ "ತೋಡಿ" ಮತ್ತು "ಮಾಲರಿ" ಮತ್ತು ಪರ್ಷಿಯನ್ ರಾಗ "ದುರ್ಗಾ ಹುಸೈನಿ" ಇವನ್ನು ಸೇರಿಸಿ.

ಜೈಲ್ಫ :—ಭಾರತೀಯ ರಾಗ "ಖಟ್ ರಾಗ್" ಮತ್ತು ಪರ್ಷಿಯನ್ ರಾಗ "ಶಹ್‌ನಾಜ್" ಸೇರಿಸಿದ ರಾಗ.

ಫರಗ್‌ನಾ (ಫರಗನಾ) :—ಭಾರತೀಯ ರಾಗ "ಕಂಗಲೀ", "ಗೌರಾ" ಮತ್ತು ಪರ್ಷಿಯನ್ ರಾಗ "ಫರಗಾನಾ" ಇವನ್ನು ಸೇರಿಸಿದ ರಾಗ.

ಸರ ಫರದಾ (ಸರ್ ಫರ್‌ದಾ) :—ಭಾರತೀಯ ರಾಗ "ಸಾರಂಗ ಬಿಲಾವಲ" ಮತ್ತು ಪರ್ಷಿಯನ್ ರಾಗ "ರಾಸ್ತ" ಇವನ್ನು ಸೇರಿಸಿದ ರಾಗ.

ಬಾಖರಜ್-ಭಾರತೀಯ ರಾಗ "ದೇಸ್ ಕಾರ"ಕ್ಕೆ ಪರ್ಷಿಯನ್ ರಾಗ ಒಂದನ್ನು ಸೇರಿಸಿದ ರಾಗ.

ಫಿರೋದೋಸ್ತ್ ಅಥವಾ ಪಹರ್‌ದೋಸ್ತ್ (ಫರದೋಸ್ತ್) :—ಭಾರತೀಯ ರಾಗ ಕಾನಡಾ, ಗೌರೀಪೂರ್ವಿ ಮತ್ತು ಒಂದು ಪರ್ಶಿಯನ್ ರಾಗ ಇವುಗಳನ್ನು ಸೇರಿಸಿದ ರಾಗ.

ಅಮೀರ್ ಖುಸರೋ ಹಿಂದಿನ ಶೈಲಿಯನ್ನು ಬದಲಾಯಿಸಿ, ಪ್ರಾಚೀನ ಪರಂಪರೆಯನ್ನು ಒಡೆದು ಸ್ಥಾಪಿಸಿದ ಹೊಸ ರಾಗಗಳನ್ನೂ ಹೊಸ ವಿಧಾನವನ್ನೂ

ಜನರೆಲ್ಲರೂ ಒಪ್ಪಿ ಸ್ವೀಕರಿಸಿದರು ಎಂದು ನಾವು ತಿಳಿಯಕೂಡದು. ಪ್ರಾಚೀನ ರಾಗಗಳ ಪ್ರೇಮಿಗಳು ಈ ಹೊಸ ರಾಗಗಳನ್ನು ಒಪ್ಪಲಿಲ್ಲ. ಭಾರತೀಯ ಮತ್ತು ಪರ್ಷಿಯನ್ ರಾಗಗಳ ಮಿಶ್ರಣದಿಂದ ತಯಾರು ಮಾಡಿದ ಮೇಲೆ ಹೇಳಿದ ರಾಗಗಳಲ್ಲಿ ಈಗ ಕೆಲವೇ ಉಳಿದಿರುವುದಕ್ಕೆ ಇದೇ ಕಾರಣವಿರಬಹುದು ಮಿಕ್ಕ ರಾಗಗಳ ಹೆಸರನ್ನು ಕೂಡ ಜನರು ಕೇಳಿಲ್ಲ.

ಅಮೀರ್ ಖುಸರೋ ಸಿತಾರ್ ವಾದ್ಯವನ್ನು ಕಂಡುಹಿಡಿದನೆಂದು ಕೂಡ ಹೇಳುತ್ತಾರೆ. ಆದರೆ ಸಿತಾರ್ ವಾದ್ಯವನ್ನು ಅವನು ಒಮ್ಮೆಯೇ ಕಂಡುಹಿಡಿಯ ಲಿಲ್ಲ ಎಂದು ಅನೇಕರ ಅಭಿಪ್ರಾಯ. ಹತ್ತನೆಯ ಶತಮಾನದ ಹೊತ್ತಿಗೆ ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ಕೋಚಕ್, ಪರ್ಶಿಯಾ, ಆರ್ಮೀನಿಯಾ ಮತ್ತು ಟರ್ಕಿಯಲ್ಲಿ ಸಿತಾರನ್ನೇ ಹೋಲುವ ವಾದ್ಯ ಒಂದು ಇತ್ತೆಂದು ಹೇಳುತ್ತಾರೆ. ಜೀಥರ್ ಅಥವಾ "ಗೀತಾರ್" ಅದರ ಹೆಸರು. ಆ ವಾದ್ಯವೂ ಕೂಡ ಈಜಿಪ್ಟಿನ ಪ್ರಾಚೀನ ವಾದ್ಯಗಾರ ಸ್ಥಾರಾ ಎಂಬುದರ ಆಕೃತಿಯದು.

ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ಸಿತಾರನ್ನು ಹೋಲುವ ಉಪಯೋಗ ದಲ್ಲಿದ್ದ ವಾದ್ಯಗಳೆಲ್ಲ ನಾಲ್ಕು ತಂತಿಗಳನ್ನು ಹೊಂದಿದ್ದುವು. ಖುಸರೋ ಇನ್ನೂ ಮೂರು ತಂತಿಗಳನ್ನು ಸೇರಿಸಿರಬಹುದು ಮತ್ತು ಈ ವಾದ್ಯದ ಹೆಸರು ಸಿತಾರ್ ಎಂದು ಪ್ರಸಿದ್ಧವಾಗಿ ಬಿಟ್ಟಿರಬಹುದು. ಸಿತಾರ್ ಬಾರಿಸುವಾಗ 'ದಾ', 'ರಾ', 'ದಿರ್' ಎಂಬ ವಿಶಿಷ್ಟ ಧ್ವನಿಗಳು ಉತ್ಪನ್ನವಾಗುತ್ತವೆ. ತಂತಿಗಳನ್ನು ಬಿಟ್ಟು ಒಂದು ಪಾರ್ಶ್ವಕ್ಕೆ ತಂದರೆ 'ದಾ' ಧ್ವನಿ ಹುಟ್ಟುತ್ತದೆ. ಇನ್ನೊಂದು ಪಕ್ಕಕ್ಕೆ ತಂತಿಗಳನ್ನೆಳೆದರೆ 'ರಾ' ಧ್ವನಿ ಹುಟ್ಟುತ್ತದೆ. ಈ ರೀತಿ ತಂತಿಗಳನ್ನು ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ತೆಗೆದುಕೊಂಡುಹೋಗಿ ಹಿಂತಿರುಗಿ ತರುವ ಮಧ್ಯದಲ್ಲಿ 'ದಿರ್' ಧ್ವನಿಯು ಉತ್ಪನ್ನವಾಗುತ್ತದೆ. ಈ ರೀತಿ ಸಿತಾರಿನಲ್ಲಿ 'ದಾ', 'ದಿರ್' ಮತ್ತು 'ರಾ' ಧ್ವನಿಗಳು ಹುಟ್ಟುತ್ತವೆ.

ನಮ್ಮ ದೇಶದಲ್ಲಿ ಭಾರತೀಯ ಮತ್ತು ಮುಸಲ್ಮಾನೀ ಸಭ್ಯತೆಗಳು ಒಟ್ಟು ಗೂಡುತ್ತಿದ್ದ ಸಮಯದಲ್ಲಿ ಅಮೀರ್ ಖುಸರೋ ಒಂದು ಮಹತ್ವಪೂರಿತವಾದ ಕೆಲಸ ಮಾಡಿದ. ಅದೇ ಅವನ ಪ್ರಸಿದ್ಧಿ ಖ್ಯಾತಿಗಳಿಗೆ ದೊಡ್ಡ ಕಾರಣವಾಗಿರ ಬಹುದು. ಅವನು ಸಂಗೀತ ಮತ್ತು ಸಾಹಿತ್ಯದ ಕ್ಷೇತ್ರದಲ್ಲಿ ಎರಡು ಸಭ್ಯತೆ

ಗಳನ್ನೂ ಸೇರಿಸಿ ಮುಂದುವರೆಸಿದನು. ಇದೇ ಭಾರತಕ್ಕೆ ಖುಸರೋವಿನ ದೊಡ್ಡ ಕೊಡುಗೆ.

ಖುಸರೋ ಧರ್ಮನಿಷ್ಠನಾದ ವ್ಯಕ್ತಿ. ಅವನು ತನ್ನ ಪೀರನಾದ ನಿಜಾಮುದ್ದೀನ್ ಔಲಿಯಾವಿನ ವರ್ಣನೆಯಲ್ಲಿ ಹೇಳುತ್ತಿದ್ದುದೆಲ್ಲ ಅತೀವ ಪ್ರಭಾವಶಾಲಿಯಾಗಿರುತ್ತಿತ್ತು. ಆದುದರಿಂದ ಧಾರ್ಮಿಕ ಪ್ರಭಾವವುಳ್ಳ ಅವನ ಕವ್ವಾಲಿಗಳು ಅತ್ಯಂತ ಜನಪ್ರಿಯವಾಗಿವೆ. ಇಂದಿಗೂ ಜನರು ಅವುಗಳನ್ನು ಹಾಡುತ್ತಾರೆ. ಅವನ ಕೆಲವು ಗೀತೆಗಳೂ ಬಹಳ ಪ್ರಸಿದ್ಧಿ ಪಡೆದಿವೆ. ಅವನು ರಚಿಸಿದ ಕೆಲವು ಹಾಡುಗಳನ್ನು ದೆಹಲಿಯ ಸುತ್ತಮುತ್ತಲಿನ ಹೆಂಗಸರೂ ಇಂದಿಗೂ ಹಾಡುತ್ತಾರೆ. ಕೆಳಗೆ ಒಂದು ಹಾಡನ್ನು ಕೊಡಲಾಗಿದೆ:—

ಅಮ್ಮಾ! ಮೇರೇ ಬಾಬಾಕೋ ಭೇಜೋ ಜೀ ಕಿ ಸಾವನ್ ಆಯಾ।
ಬೇಟೀ! ತೇರಾ ಬಾಬಾ ತೋ ಬುಡ್ಡಾರೀ ಕಿ ಸಾವನ್ ಆಯಾ।
ಅಮ್ಮಾ! ಮೇರೇ ಭಾಯೀ ಕೋ ಭೇಜೋ ಜೀಕಿ ಸಾವನ್ ಆಯಾ।
ಬೇಟೀ! ತೇರಾ ಭಾಯೀ ತೋ ಬಾಲಾರೀ ಕಿ ಸಾವನ್ ಆಯಾ॥

"ಅಮ್ಮಾ! ನನ್ನ ತಂದೆಯನ್ನು ಕಳುಹಿಸು; ಶ್ರಾವಣಮಾಸ ಬಂದಿತು ಮಗಳೆ! ನಿನ್ನ ತಂದೆಯಾದರೋ ವೃದ್ಧನು. ಅಮ್ಮಾ ನನ್ನ ಸಹೋದರನನ್ನು ಕಳುಹಿಸು; ಶ್ರಾವಣ ಬಂದಿತು. ಮಗಳೆ! ನಿನ್ನ ಸಹೋದರನಾದರೋ ಬಾಲಕನು."

ಮೇಲೆ ಹೇಳಿದಂತೆ ಖುಸರೋ ತನ್ನ ಧರ್ಮಗುರುವಾದ ನಿಜಾಮುದ್ದೀನ್ ಓಲಿಯಾರವರಲ್ಲಿ ಬಹಳ ಭಕ್ತಿಯನ್ನಿಟ್ಟಿದ್ದನು. ಸನ್ ೧೩೨೫ನೆಯ ಇಸವಿಯಲ್ಲಿ ಅವರು ಕಾಲವಾದರು. ಆಗ ಖುಸರೋ ದೆಹಲಿಯಿಂದ ಹೊರಗಿದ್ದನು. ಈ ಸಮಾಚಾರ ಕೇಳಿ ಒಡನೆಯೇ ಹಿಂತಿರುಗಿದನು. ನಿಜಾಮುದ್ದೀನರ ಸಮಾಧಿಯ ಬಳಿಗೆ ಹೋಗಿ ಈ ದ್ವಿಪದಿಯನ್ನು ಓದಿದನು :—

ಗೋರೀ ಸೋವೇ ಸೇಜಪರ್ ಮುಖಪರ್ ಡಾರೇ ಕೇಸ್।
ಚಲ ಖುಸರೋ ಘರ್ ಆಪನೇ ರೈನ ಭಯೀ ಚಹೂಂ ದೇಸ್॥

"ಗೌರಾಂಗಿಯು ತನ್ನ ಮುಖವನ್ನು ಕೇಶಗಳಿಂದ ಮುಚ್ಚಿಕೊಂಡು ಶಯ್ಯೆಯ ಮೇಲೆ ಮಲಗಿದ್ದಾಳೆ. ಖುಸರೋ! ನೀನು ನಿನ್ನ ಮನೆಗೆ ಹೋಗು. ನಾಲ್ಕು ದೇಶಗಳಲ್ಲಿಯೂ ಕತ್ತಲಾಯಿತು."

ಇದಾದ ಮೇಲೆ ಖುಸರೋ ತನ್ನ ಮನೆಯನ್ನು ತ್ಯಜಿಸಿ ಗುರುವಿನ ಸಮಾದಿಯ ಹತ್ತಿರ ಹೋಗಿ ಕುಳಿತು ತನ್ನ ಹಣವನ್ನೆಲ್ಲಾ ಬಡಬಗ್ಗರಿಗೆ ಹಂಚಿಬಿಟ್ಟನು. ಅದೇ ವರ್ಷ ಅವನೂ ಕಾಲವಾದನು. ಈಗಲೂ ಸಹ ಅವನ ಸಮಾಧಿಯ ಹತ್ತಿರ ಪ್ರತಿ ವರ್ಷ ಮೇಳ ಜರುಗುತ್ತದೆ.

ವಿದ್ಯಾರಣ್ಯ

ವಿದ್ಯಾರಣ್ಯರು ಹದಿನಾಲ್ಕನೆಯ ಶತಮಾನದ ಒಬ್ಬ ಮಹಾಪುರುಷರು ಧಾರ್ಮಿಕ ಮತ್ತು ರಾಜನೈತಿಕ ಕ್ಷೇತ್ರಗಳೆರಡರಲ್ಲೂ ಅವರು ಖ್ಯಾತರಾಗಿದ್ದರು. ಅವರ ಮಹತ್ವವೇನೆಂದು ತಿಳಿಯಬೇಕಾದರೆ ಆ ಕಾಲದ ರಾಜನೈತಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ ಪರಿಚಯ ಆವಶ್ಯಕ.

ಕ್ರಿ.ಶ. ೭೧೨ರಲ್ಲಿ ಅರಬರು ಸಿಂಧು ಪ್ರದೇಶವನ್ನು ಜಯಿಸಿದರು. ರಜಪೂತರ ಅಪ್ರತಿಮ ವೀರತೆಯ ಕಾರಣ ಅರಬರಿಗೆ ಮುಂದುವರಿಯಲಾಗ ಲಿಲ್ಲ. ಕ್ರಿ.ಶ. ೧೦೦೦ದ ಸುಮಾರಿನಲ್ಲಿ ಎರಡನೆ ಬಾರಿ ಆಕ್ರಮಣ ನಡೆದಾಗ ಪಂಜಾಬು ನಮ್ಮ ಕೈಬಿಟ್ಟಿತು. ಆದರೆ ಆಗಲೂ ಭಾರತೀಯರ ಕಣ್ಣು ತೆರೆಯಲಿಲ್ಲ. ಪರಸ್ಪರ ಕಾದಾಟ ನಡೆಯುತ್ತಲೇ ಇತ್ತು. ಗುಜರಾತಿನ ಚಾಳುಕ್ಯರು ಅಜಮೀರದ ಚೌಹಾನರ ಮೇಲೆ ಆಕ್ರಮಣ ಮಾಡಿದರು. ಅಜಮೀರದ ಚೌಹಾನ ಮಹಾರಾಜಾಧಿರಾಜ ಪೃಥ್ವೀರಾಜನು ತನ್ನ ಕೃತ್ಯದಿಂದ ಮಹೋಬದ ಚಂದೇಲರು ಮತ್ತು ಕನೌಜಿನ ಗಾಹಡವಾಲರನ್ನು ಶತ್ರುಗಳಾಗಿಸಿದ್ದ. ಪರಿಣಾಮವಾಗಿ ಕ್ರಿ.ಶ. ೧೧೯೨ರ ಸುಮಾರಿನಲ್ಲಿ ನಡೆದ ವಿದೇಶಗಳ ಆಕ್ರಮಣವನ್ನು ಎದುರಿಸುವ ಶಕ್ತಿ ಇಲ್ಲದಾಯಿತು. ಬಹುಬೇಗ ಮುಸಲ್ಮಾನರು ಭಾರತದ ಪಶ್ಚಿಮ ಗಡಿಯಿಂದ ಪೂರ್ವ ಗಡಿಯವರೆಗೆ ಹರಡಿದರು.

ದಕ್ಷಿಣ ಭಾರತದ ರಾಜ್ಯಗಳು ಉತ್ತರ ಭಾರತದ ಈ ದುರ್ದೆಶೆಯಿಂದ ಪಾಠವೇನೋ ಕಲಿತುವು. ಆದರೂ ವಿಂಧ್ಯ, ಸತಪುಡ ಮುಂತಾದ ಪರ್ವತ ಮತ್ತು ನಿಬಿಡ ವನಗಳು ತಮ್ಮನ್ನು ರಕ್ಷಿಸುವುವೆಂದು ತಿಳಿದು ಪರಸ್ಪರ ಕಚ್ಚಾಡು ತ್ತಿದ್ದವು. ಫಲಿತಾಂಶವೆಂದರೆ ಉತ್ತರ ಭಾರತದ ರಾಜನೈತಿಕ ಪತನವಾದ ಸುಮಾರು ನೂರು ವರುಷಗಳ ನಂತರ ಇತಿಹಾಸದ ಪುನರಾವೃತ್ತಿ ಆಯಿತು.

ಕ್ರಿ.ಶ. ೧೨೯೪ರಲ್ಲಿ ಜಲಾಲುದ್ದೀನ ಖಿಲ್ಜಿಯು ದೆಹಲಿಯಲ್ಲಿ ರಾಜ್ಯವಾಳು ತ್ತಿದ್ದಾಗ ಅಲ್ಲಾಉದ್ದೀನನು ಇದ್ದಕ್ಕಿದ್ದ ಹಾಗೆ ದೇವಗಿರಿಯ ಯಾದವ ರಾಜ್ಯದ

ಮೇಲೆ ದಂಡೆತ್ತಿ ಹೋದ. ಆಕಸ್ಮಿಕ ವಿಪತ್ತಿಗೆ ಸಿದ್ಧವಿರದ ರಾಮಚಂದ್ರ ಯಾದವ ಅಲ್ಲಾಉದ್ದೀನನಿಗೆ ಅಪಾರ ಹಣ ಕೊಟ್ಟು ಹಿಂತಿರುಗಿಸಿದನು. ಆದರೇನು ಸುಮಾರು ಹನ್ನೆರಡು ವರುಷಗಳವರೆಗೆ ಉತ್ತರ ಭಾರತದ ಅನೇಕ ಭೂಭಾಗ ವನ್ನು ಗೆದ್ದು ಕ್ರಿ.ಶ. ೧೩೦೭ರಲ್ಲಿ ಮತ್ತೆ ಅಲ್ಲಾವುದ್ದೀನನು ತನ್ನ ಸೈನ್ಯವನ್ನು ದಕ್ಷಿಣಕ್ಕೆ ಕಳುಹಿಸಿದ. ಈ ಬಾರಿ ದೇವಗಿರಿಯು ಶತ್ರು ವಶವಾಯಿತು. ಓರಂಗಲ್ಲಿನ ರಾಜ ದ್ವಿತೀಯ ಪ್ರತಾಪರುದ್ರನೂ ಕಪ್ಪ ತೆರಲು ಒಪ್ಪಿದ ದ್ವಾರ ಸಮುದ್ರದ ಅರಸು ದ್ವಿತೀಯ ವೀರಬಲ್ಲಾಳನನ್ನೂ ಮುಸಲ್ಮಾನರು ಸೋಲಿಸಿದರು. ಅತ್ತ ಪಾಂಡ್ಯ ರಾಜ್ಯಕ್ಕಾಗಿ ಸುಂದರ ಮತ್ತು ವೀರಪಾಂಡ್ಯರು ಪರಸ್ಪರ ಕಾದಾಡುತ್ತಿದ್ದರು. ಈ ಸಮಯದಲ್ಲಿ ಅಲ್ಲಾಉದ್ದೀನನ ಸೇನಾಪತಿ ಮಲ್ಲಿಕಾಫರನು ಸುಂದರ ಪಾಂಡ್ಯನಿಗೆ ಸಹಾಯ ಮಾಡುವ ನೆಪದಲ್ಲಿ ಮಧುರೆಯ ಮಾರ್ಗವಾಗಿ ಭಾರತದ ದಕ್ಷಿಣದ ಕಡೆಗೂ ಬಂದನು.

ಅಲ್ಲಾಉದ್ದೀನನ ಉತ್ತರಾಧಿಕಾರಿ ಮುಬಾರಕನು ದೇವಗಿರಿಯನ್ನು ಮುಸಲ್ಮಾನರ ಸಾಮ್ರಾಜ್ಯಕ್ಕೆ ಸೇರಿಸಿದನು. ಮತ್ತೆ ಕ್ರಿ.ಶ. ೧೩೨೩ರಲ್ಲಿ ಗಯಾಸುದ್ದೀನ ತೊಗಲಕ್ ಓರಂಗಲ್ಲನ್ನು ಜಯಿಸಿ ಐದು ವರುಷಗಳಾದನಂತರ ಕ್ರಿ.ಶ. ೧೩೨೮ರಲ್ಲಿ ಮಧುರೆಯನ್ನೂ ವಶಪಡಿಸಿಕೊಂಡನು. ಕ್ರಿ.ಶ. ೧೩೩೪ರ ನಂತರ ಅಲ್ಲಿ ಒಂದು ಮುಸಲ್ಮಾನ ರಾಜ್ಯವು ಸ್ಥಾಪಿತವಾಯಿತು.

ಹೀಗೆ ಕ್ರಿ.ಶ. ೧೩೩೦ರಲ್ಲಿ ಭಾರತದ ಎಲ್ಲ ಭೂಭಾಗಗಳಲ್ಲೂ ಮುಸಲ್ಮಾನರ ಭಯವು ವ್ಯಾಪಿಸಿತು. ಭಾರತೀಯರು ತಮ್ಮ ರಾಜ್ಯವನ್ನು ಕಳೆದುಕೊಂಡರು. ಅವರ ಸಂಸ್ಕೃತಿಯೂ ಡೋಲಾಯಮಾನವಾಗಿತ್ತು. ದೇವಸ್ಥಾನಗಳ ಸ್ಥಾನವನ್ನು ಮಸೀದಿಗಳು ಆಕ್ರಮಿಸಿದುವು. ವರ್ಣಾಶ್ರಮ ಧರ್ಮವನ್ನು ಪರಿಪಾಲಿಸುವುದೇ ದೊಡ್ಡ ಕಷ್ಟವಾಯಿತು. ಭಾರತೀಯರು ಯಾವ ತತ್ವವನ್ನು ತಮ್ಮ ಧರ್ಮದ ಮುಖ್ಯ ಅಂಗವೆಂದು ಭಾವಿಸಿದ್ದರೋ ಆ ತತ್ವಗಳ ಮೇಲೇ ಮುಸಲ್ಮಾನರು ಬೇಕೆಂದೇ ಏಟು ಕೊಡುತ್ತಿದ್ದರು.

ಇಂತಹ ಭಯಂಕರ ಪರಿಸ್ಥಿತಿಯಲ್ಲಿ ಭಾರತವನ್ನು ರಾಜನೈತಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಉದ್ಧಾರ ಮಾಡುವಂತಹ ಒಬ್ಬ ಯೋಗ್ಯ ವ್ಯಕ್ತಿಯ ಅವಶ್ಯಕತೆ ದಕ್ಷಿಣ ಭಾರತಕ್ಕಿದ್ದಿತು. ಆದರೆ ಕೇವಲ ದಕ್ಷಿಣ ಭಾರತದ ಉದ್ಧಾರ

ದಿಂದ ಹೆಚ್ಚು ಪ್ರಯೋಜನವಿರಲಿಲ್ಲ. ಉತ್ತರ ಮತ್ತು ದಕ್ಷಿಣ ಭಾರತಗಳಲ್ಲಿ ಅನ್ಯೋನ್ಯಾಶ್ರಯ ಸಂಬಂಧವಿದ್ದಿತು. ತನ್ನ ಸಂಸ್ಕೃತಿಯ ಬಗ್ಗೆ ಪ್ರೇಮವಿಲ್ಲದ ಜಾತಿ ರಾಜನೈತಿಕ ಅಧಿಕಾರಕ್ಕೆ ಯುದ್ಧ ಮಾಡಲಾರದು. ರಾಜನೈತಿಕವಾಗಿ ದುರ್ಬಲವಾದ ದೇಶವು ಸಂಸ್ಕೃತಿಯನ್ನು ಹೇಯವೆಂದು ತಿಳಿಯುವುದರಲ್ಲಿ ಸಂದೇಹ ವೇನಿಲ್ಲ. ದಕ್ಷಿಣ ಭಾರತದ ಈ ಗೂಢ ಸಮಸ್ಯೆಯನ್ನು ಎರಡು ದೃಷ್ಟಿಯಿಂದಲೂ ಆಲೋಚಿಸಿ ವಿದ್ಯಾರಣ್ಯರು ಕಾರ್ಯನಿರತರಾದರು.

ವಿದ್ಯಾರಣ್ಯರ ಮನೆಯಲ್ಲಿ ಅವರನ್ನು ಮಾಧವ ಎಂದು ಕರೆಯುತ್ತಿದ್ದರು. ಸಾಯಣ ಮತ್ತು ಭೋಗನಾಥ ಅವರ ಕಿರಿಯ ಸಹೋದರರು. ತಂದೆ ಮಾಯಣ ಮತ್ತು ತಾಯಿ ಶ್ರೀಮತಿ. ಅವರ ತಂದೆ ವಿಜಯನಗರ ರಾಜ್ಯದ ಸ್ಥಾಪಕ ಹರಿಹರ ಮತ್ತು ಬುಕ್ಕನ ಕುಲಗುರುವಾಗಿದ್ದಿರಬಹುದು. ಹೀಗೆ ತಮ್ಮ ತಂದೆಯಿಂದಲೂ ಮಾಧವರಿಗೆ ಶಿಕ್ಷಣ ದೊರೆಯಿತು. ಅಲ್ಲದೆ ವಿದ್ಯಾತೀರ್ಥ, ಭಾರತೀತೀರ್ಥ ಮತ್ತು ಶ್ರೀಕಂಠರನ್ನು ಮಾಧವರು ಗುರುಗಳ ರೂಪದಲ್ಲಿ ಸ್ಮರಿಸಿರುವರು. ವಿದ್ಯಾತೀರ್ಥರು ಶೃಂಗೇರಿಮಠದ ಶಂಕರಾಚಾರ್ಯರು. ಭಾರತೀತೀರ್ಥರು ವೇದಾಂತದ ಉಪದೇಶಕ ರಾಗಿದ್ದರು. ಶ್ರೀಕಂಠರು ವಿದ್ಯಾರಣ್ಯ ಮತ್ತು ಭೋಗನಾಥರ ಗುರುವಾಗಿದ್ದರು. ಕಾವ್ಯ, ಸಾಹಿತ್ಯ, ಮುಂತಾದ ಶಿಕ್ಷಣವನ್ನು ಮಾಧವರು ಶ್ರೀಕಂಠದಿಂದ ಪಡೆದಿರಬೇಕು.

ತಮ್ಮ ದೇಶವನ್ನು ತುಳಿದು ಹಾಳು ಮಾಡುತ್ತಿರುವುದನ್ನು ಬಾಲಕರಾದ ಮಾಧವರು ನೋಡಿದ್ದರು. ಆ ವೇಳೆಗಾಗಲೇ ಜನಗಳು ಚಿದಂಬರದಂತಹ ಪವಿತ್ರ ತೀರ್ಥ ಸ್ಥಳಗಳನ್ನು ಬಿಟ್ಟು ಓಡಿದ್ದರು. ದೇವಸ್ಥಾನಗಳ ಗರ್ಭಗೃಹ ಮತ್ತು ಮಂಟಪಗಳಲ್ಲಿ ಹುಲ್ಲು ಬೆಳೆದುಕೊಂಡಿದ್ದಿತು. ಅಗ್ರಹಾರಗಳ ಯಜ್ಞ ಧೂಮದ ಸುಗಂಧಕ್ಕೆ ಬದಲಾಗಿ ಬೇಯುತ್ತಿರುವ ಮಾಂಸದ ನಾಥ ಬರುತ್ತಿತ್ತು. ದೇವಸ್ಥಾನ ಮತ್ತು ಮಠಗಳ ಮೇಲೂ ಕಂದಾಯವನ್ನು ಹಾಕಿದ್ದರು. ಅನೇಕ ದೇವಸ್ಥಾನ ಗಳು ತಾವೇ ಬಿದ್ದುಹೋಗಿದ್ದವು; ಇಲ್ಲವೆ ಬೀಳಿಸಲಾಗಿದ್ದಿತು. ಹಿಂದೂ ರಾಜ್ಯವನ್ನು ಮುಸಲ್ಮಾನರು ಕಪಟ ವಂಚನೆಯಿಂದ ಹಾಳುಮಾಡಿದರು.

ಇಂತಹ ಒಂದು ಹಿಂದೂ ರಾಜ್ಯದಲ್ಲೇ ಮಾಧವರೂ ಜನಿಸಿದ್ದು. ದ್ವಾರ ಸಮುದ್ರದ ರಾಜವೀರ ಬಲ್ಲಾಳ ವಿವೇಕಿಯೂ ಸ್ವೇಚ್ಛಾಚಾರಿಯೂ ಆಗಿದ್ದನು.

ಅವನ ರಕ್ಷಣೆಯಲ್ಲೇ ಸಂಗಮ ಮುಂತಾದವರು ಬೆಳೆಯುತ್ತಿದ್ದರು. ಈ ಸಹೋದರರ ಗುರುಗಳು ಸಾಯಣ ಮತ್ತು ಮಾಧವರು. ದಕ್ಷಿಣ ಭಾರತದ ಈ ದುರ್ದೆಶೆಯನ್ನು ನೋಡಿ ಮಾಧವರು ಸಹಿಸಲಾರದಾದರು. ಯಥಾಶಕ್ತಿ ಅದರ ಉದ್ಧಾರ ಮಾಡ ಬೇಕೆಂದು ನಿಶ್ಚಯಿಸಿ ತಮ್ಮ ಸಹೋದರರು ಮತ್ತು ಶಿಷ್ಯರನ್ನು ಈ ಕಾರ್ಯಕ್ಕೆ ನಿಯೋಗಿಸಿದರು.

ಕ್ರಿ.ಶ. ೧೩೩೬ರಲ್ಲಿ ಮಾಧವಾಚಾರ್ಯರ ಸಂರಕ್ಷಣೆಯಲ್ಲಿ ಸಂಗಮ ರಾಜಪುತ್ರ ಪ್ರಥಮ ಹರಿಹರ, ಬುಕ್ಕ, ಕಂಪ ಮುಂತಾದವರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆಂಬುದು ಎಲ್ಲರಿಗೂ ತಿಳಿದಿದೆ. ಆ ವೇಳೆಗೆ ದೇಶವು ಮುಸಲ್ಮಾನರ ಅತ್ಯಾಚಾರದಿಂದ ಬೇಸರಗೊಂಡಿತ್ತು. ರಕ್ಷಣೆಗಾಗಿ ಜನಗಳು ಹಾಹಾಕಾರ ಮಾಡುತ್ತಿದ್ದರು. ಜನಗಳ ಈ ಕಷ್ಟವನ್ನು ದೂರ ಮಾಡುವುದು ಮಾಧವಾಚಾರ್ಯರ ಕರ್ತವ್ಯವಾಯಿತು. ಅವರ ಕಿರಿಯ ಸಹೋದರ ಸಾಯಣ ವಿದ್ವಾಂಸ ಮತ್ತು ಒಳ್ಳೆಯ ಸೇನಾಪತಿಯಾಗಿದ್ದ. ಅತ್ತ ಭೋಗನಾಥರೂ ಒಳ್ಳೆ ಕವಿಗಳಾಗಿದ್ದರು. ಮಾಧವಾಚಾರ್ಯನು ಎಂದೂ ಸೇನಾಪತಿಯಾಗಲಿಲ್ಲವೆಂಬುದು ಸಂದೇಹಾಸ್ಪದ. ಆದರೆ ಕೌಟಿಲ್ಯನೂ ಕತ್ತಿ ಹಿಡಿಯದೆಯೇ ನಂದ ಸಾಮ್ರಾಜ್ಯ ವನ್ನು ತುಳಿದು ಹೊಸ ಸಾಮ್ರಾಜ್ಯಕ್ಕೆ ತಳಹದಿ ಹಾಕಿದನು. ಅಂತೆಯೇ ಮಾಧವಾಚಾರ್ಯರ ಕಾರ್ಯವೂ ಅದೇ ರೀತಿಯಾಗಿದ್ದು ಅಷ್ಟೇ ಮಹತ್ವಪೂರ್ಣ ವಾಗಿರಬಹುದು. ಅವರ ಆದೇಶದಂತೆ ನಡೆದು ಸಂಗಮ ರಾಜಪುತ್ರರು ದಕ್ಷಿಣ ಭಾರತ ಸಂಸ್ಕೃತಿಯನ್ನು ಪುನರುದ್ಧಾರ ಮಾಡಿದರು. ಅವರು ಮಹಮದ್ ಬಿನ್ ತೊಗಲಕ್‌ನ ಬಹುಮಂದಿ ಸೇನಾಪತಿಗಳನ್ನು ಅನೇಕ ಜಾಗದಲ್ಲಿ ಸೋಲಿಸಿ ಕೊನೆಗೆ ವಿಜಯನಗರದಂತಹ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇದನ್ನು ನೋಡಿ ಹಿಂದುಗಳಲ್ಲಿ ಹೊಸ ಉತ್ಸಾಹ ಹುಟ್ಟಿತು. ಈ ಸುದ್ದಿ ಜಿಂಜಿಗೆ ತಲುಪಿದಾಗ ಅಲ್ಲಿಯ ರಾಜ ಮುಸಲ್ಮಾನರ ಮೇಲೆ ಆಕ್ರಮಣ ಮಾಡಿ ಅವರನ್ನು ಸೋಲಿಸಿ ಶ್ರೀರಂಗನಾಥರ ವಿಗ್ರಹವನ್ನು ಪ್ರತಿಷ್ಠಾಪಿಸಿದ. ಬುಕ್ಕರಾಯನ ವೀರಪುತ್ರ ಕಂಪನ ಪ್ರಾಚೀನ ಮಂದಿರಗಳನ್ನು ಮತ್ತೆ ಹೊಸತು ಮಾಡಿಸಿ ಅಲ್ಲಿ ಪೂಜೆಗೆ ಏರ್ಪಾಡು ಮಾಡಿದ. ದ್ವಿತೀಯ ಸಂಗಮಗೆ ಶಿಕ್ಷಣ ಕೊಡುವುದಲ್ಲದೆ ಅನೇಕ ಯುದ್ಧಗಳಲ್ಲಿ ಸೇನಾಪತಿಯ ಕೆಲಸವನ್ನೂ ಸಾಯಣರು ಮಾಡಿದರು.

ಈ ರಾಜನೈತಿಕ ಮಹತ್ತಾದ ಕೆಲಸವನ್ನು ಮಾಡಿದ್ದಲ್ಲದೆ ಮಾಧವಾಚಾರ್ಯರು ಹಿಂದು ಧರ್ಮದ ಸಿದ್ಧಾಂತಗಳನ್ನೂ ಜನಗಳ ಮುಂದಿಟ್ಟರು. 'ಪರಾಶರ ಮಾಧವೀಯ'ದಲ್ಲಿ ಅವರು ಹಿಂದೂ ಧರ್ಮಶಾಸ್ತ್ರ ಮತ್ತು ವ್ಯವಹಾರ ಶಾಸ್ತ್ರಗಳನ್ನು ಸುಂದರವಾಗಿ ಪ್ರತಿಪಾದಿಸಿದ್ದಾರೆ. 'ಮನುಸ್ಮೃತಿ'ಯಂತೆ ಅದಕ್ಕೂ ಪಂಡಿತರು ಹೆಚ್ಚು ಮಾನ್ಯತೆ ಇತ್ತಿರುವರು. ಇದರ ರಚನಾ ಕಾಲ ಸುಮಾರು ೧೩೫೪ರ ಸಮೀಪ ಇರಬೇಕು. 'ಜೀವನ್ಮುಕ್ತಿ', 'ವಿವೇಕ ಪಂಚದಳ' ಮತ್ತು 'ಜೈಮುನೀಯ ನ್ಯಾಯ ಮಾಲ' ಎಂಬುದು ಅವರ ಇತರ ಪ್ರಸಿದ್ಧ ಗ್ರಂಥಗಳು. ಸಚ್ಚಿದಾನಂದ ಪರಬ್ರಹ್ಮನ ಹೊರತು ಬೇರೆ ಯಾವ ವಸ್ತುವೂ ಇಲ್ಲ. ಆತ್ಮ ಅದರೊಡನೆ ಅಭಿನ್ನವಾದುದೆಂದು ವಿದ್ಯಾರಣ್ಯರು ನಂಬಿದ್ದರು. ಈ ಸಿದ್ಧಾಂತ ರೀತಿ ಕೆಲಸ ಮಾಡುವವ ಜೀವನ್ಮುಕ್ತನಾಗುವ. ಭಗವದ್ಗೀತೆಯ ಸ್ಥಿತಪ್ರಜ್ಞನನ್ನೂ ಜೀವನ್ಮುಕ್ತರ ಪಂಕ್ತಿಗೆ ಸೇರಿಸಬಹುದು.

ಕ್ರಿ.ಶ ೧೩೭೭ರಲ್ಲಿ ಮಾಧವಾಚಾರ್ಯರು ವಿದ್ಯಾರಣ್ಯರೆಂಬ ಹೆಸರಿನಲ್ಲಿ ಸನ್ಯಾಸಿಯಾದರು. ಆದರೆ ಹಿಂದೂ ಧರ್ಮದ ರಕ್ಷಣೆ ವಿಷಯವಾದ ಅವರ ಅನುರಾಗವು ಹಾಗೆಯೇ ಉಳಿಯಿತು. ವೈಷ್ಣವ ಧರ್ಮದ ಮಹಾ ಶಿಕ್ಷಕರಾದ ವೇದಾಂತ ದೇಶಿಕರನ್ನು ಇದೇ ಕೆಲಸದಲ್ಲಿ ಮಗ್ನರಾಗಿಸಲು ಪ್ರಯತ್ನಿಸಿದರೆಂದು ಹೇಳುವರು.

ಕ್ರಿ.ಶ. ೧೩೮೬ರಲ್ಲಿ ವಿಜಯನಗರದ ರಾಜ ದ್ವಿತೀಯ ಹರಿಹರ ನಾಲ್ಕು ವೇದಗಳ ಮೇಲೆ ಭಾಷ್ಯ ಬರೆಯುವರನ್ನು ಮತ್ತು ಕೆಲವು ವಿದ್ವಾಂಸರನ್ನು ವಿದ್ಯಾರಣ್ಯರ ಮುಂದೆ ಸನ್ಮಾನಿಸಿದನೆಂಬುದಕ್ಕೆ ಅನೇಕ ಸಾಕ್ಷಿಗಳಿವೆ. ಕ್ರಿ.ಶ. ೧೩೮೦ರಲ್ಲಿ ದ್ವಿತೀಯ ಹರಿಹರನ ಸಹೋದರಿಯ ಮಗ ವಿದ್ಯಾರಣ್ಯರ ಶಿಷ್ಯರಾದ ವಿದ್ಯಾಭೂಷಣ ದೀಕ್ಷಿತರಿಗೆ ಒಂದು ಅಗ್ರಹಾರವನ್ನು ದಕ್ಷಿಣೆಯ ರೂಪದಲ್ಲಿ ಕೊಟ್ಟನು. ಆ ಅಗ್ರಹಾರಕ್ಕೆ ವಿದ್ಯಾರಣ್ಯರ ಹೆಸರಿಡಲಾಯಿತು. ಹರಿಹರ ವಿದ್ಯಾರಣ್ಯರ ಹೆಸರಿನಲ್ಲಿ ಹಂಪೆಯಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿದನು.

ವಿದ್ಯಾರಣ್ಯರು ವಾಸ್ತವವಾಗಿ ಯುಗನಾಯಕರು. ಅವರಿಗೆ ನಾಯಕರಾಗುವ ವಿಲಕ್ಷಣ ಯೋಗ್ಯತೆ ಇದ್ದಿತು. ಸರಿಯಾದ ನಾಯಕನ ಲಕ್ಷಣವೆಂದರೆ ಆತ ಸ್ವತಃ ಕೆಲಸ ಮಾಡುವುದಲ್ಲದೆ ಗುರಿಯನ್ನು ಮುಟ್ಟಲು ಬೇಕಾಗುವ ಉತ್ಸಾಹವನ್ನು

ಹಿಂಬಾಲಕರಲ್ಲಿ ತುಂಬ ತುಂಬಬೇಕು. ಈ ಅರ್ಥದಲ್ಲಿ ವಿದ್ಯಾರಣ್ಯರು ಅದ್ವಿತೀಯರಾಗಿದ್ದರು. ಅವರ ಪ್ರಯತ್ನದಿಂದಲೇ ಭಾರತದ ಸಂಸ್ಕೃತಿ ದಕ್ಷಿಣದಲ್ಲಿ ಉಳಿಯಿತು. ಸಂಸ್ಕೃತ ಸಾಹಿತ್ಯ ಮತ್ತು ದರ್ಶನಕ್ಕೆ ಹೊಸ ಸ್ಫೂರ್ತಿ ಬಂದು ಭಾರತದ ರಾಜರು ವೇದಮಾರ್ಗ ಪ್ರತಿಷ್ಠಾಪನಾಚಾರ್ಯ, ವೈದಿಕ ಮಾರ್ಗ ಪ್ರತಿಷ್ಠಾಪನಾಚಾರ್ಯ ಮುಂತಾದ ಬಿರುದುಗಳನ್ನು ಬಳಸತೊಡಗಿದರು. ಶಂಕರಾಚಾರ್ಯರ ಒಳಿಕ ವೇದಾಂತದ ಸಿದ್ಧಾಂತಗಳಿಗೆ ಇಷ್ಟು ಸರಳ ಮತ್ತು ಅರ್ಥವತ್ತಾದ ಶೈಲಿಯಲ್ಲಿ ಭಾಷ್ಯ ಬರೆದವರು ಬಹಳ ಕಡಿಮೆ.

ಶಂಕರದೇವ

ಶಂಕರದೇವರು ಆಲಿಪುಖುರಿ ಎಂಬ ಹಳ್ಳಿಯಲ್ಲಿ ಕ್ರಿ.ಶ. ೧೪೪೮ರಲ್ಲಿ ನವರಾತ್ರಿಯಂದು ಜನಿಸಿದರು. ಅವರ ತಾಯಿ ಸತ್ಯಸುಧಾದೇವಿ ಮತ್ತು ತಂದೆ ಕುಸುಂಬರ ಭುಯಿಯಾ. ಶಂಕರರು ಇನ್ನೂ ಚಿಕ್ಕವರಾಗಿರುವಾಗಲೇ ತಂದೆತಾಯಿಗಳು ಕಾಲವಾದರು. ಕುಸುಂಬರ "ಶಿರೋಮಣಿ ಭುಯಿಯಾ" ದೊಡ್ಡ ಜಹಗೀರುದಾರರಾಗಿದ್ದರು. ಅವರು ಕಾಲವಾದ ಮೇಲೆ ಶಂಕರರ ತಾತ ಜಯಂತರು ಆಡಳಿತವನ್ನು ವಹಿಸಿದರು ಮತ್ತು ಶಂಕರರ ಲಾಲನೆ ಪಾಲನೆ ಅವರ ಅಜ್ಜಿ ಖೇರಸುತಿಯೇ ಮಾಡತೊಡಗಿದಳು.

ಶಂಕರರ ಹನ್ನೆರಡು ವರ್ಷಗಳು ಆಟದಲ್ಲೇ ಕಳೆದವು. ಬಾಲಕರೊಡನೆ ಸೇರಿಕೊಂಡು ಕಾಡಿನಿಂದ ಕಾಡಿಗೆ ಅಲೆಯುತ್ತಿದ್ದರು. ಬಿಲ್ಲು ಬಾಣಗಳಿಂದ ಬೇಟೆಯಾಡುತ್ತಿದ್ದರು. ಹಕ್ಕಿ ಹಿಡಿಯುವುದು, ಬ್ರಹ್ಮಪುತ್ರ ನದಿಯಲ್ಲಿ ಈಜುವುದು ಅವರಿಗೆ ಬಹಳ ಪ್ರಿಯವಾಗಿದ್ದವು. ಅವರು ತುಂಟರಷ್ಟೇ ಅಲ್ಲ, ನಿರ್ಭೀತರೂ ಹೌದು. ಒಮ್ಮೆ ಮಲಗಿದ್ದ ಕರಡಿಯೊಂದರ ಮೇಲೆ ಹತ್ತಿ ಕುಳಿತುಕೊಂಡರಂತೆ. ಅದು ಎದ್ದು ಓಡತೊಡಗಲು ಹೇಗೋ ಪ್ರಯಾಸಪಟ್ಟು ಕೆಳಗಿಳಿದರೆಂದು ಹೇಳುವರು.

ಓದಲು ಶಂಕರರಿಗೆ ಮನಸ್ಸೇ ಬರುತ್ತಿರಲಿಲ್ಲ. ಆಟವಾಡುವಾಗ ಊಟದ ಚಿಂತೆಯೂ ಅವರಿಗಿರುತ್ತಿರಲಿಲ್ಲ. ಕರೆದರೂ ಮನೆಗೆ ಬರುವುದು ಕಷ್ಟವಾಗಿತ್ತು. ಜನಗಳು ಹುಡುಕತೊಡಗುವುದು ಗೊತ್ತಾಗುತ್ತಲೇ ಕಾಲಿಗೆ ಬುದ್ಧಿ ಹೇಳುತ್ತಿದ್ದರು. ಯಾರಾದರೂ ಹಿಡಿದು ಬಿಟ್ಟರೆ ಅವರನ್ನು ಚೆನ್ನಾಗಿ ಥಳಿಸುತ್ತಿದ್ದರು. ಆದರೇನು ಯಾರ ಮಾತೂ ಅವರ ಕಿವಿಗೆ ಬೀಳುತ್ತಲೇ ಇರಲಿಲ್ಲ. ಒಂದು ದಿನ ಅಜ್ಜಿ ಊಟ ಹಾಕುವಾಗ ಅಳುತ್ತ 'ನಿಜ ಹೇಳಪ್ಪ, ಏತಕ್ಕೆ ನೀನು ಓದುವುದಿಲ್ಲ' ಎಂದು ಕೇಳಿದಳು.

ಇದನ್ನು ಕೇಳಿ ಶಂಕರರ ಮನಸ್ಸು ಕರಗಿತು. ಹೇಗಾದರಾಗಲಿ ಎಲ್ಲಾ

ಶಾಸ್ತ್ರಗಳನ್ನೂ ಓದಿಯೇ ಬಿಡುವೆನೆಂದು ಪ್ರತಿಜ್ಞೆ ಮಾಡಿದರು. ತಾತ ಮೊಮ್ಮಗನನ್ನು ಗುರುವಿನ ಬಳಿ ಕಳ್ಳಿರಿಸಿ ಬಂದರು. ಗುರುವಿನ ಹೆಸರು ಮಹೇಂದ್ರ ಕಂದಲಿ ಎಂದು. ಈ ಸಲ ಶಂಕರರು ಓದಿನಲ್ಲಿ ಮಗ್ನರಾಗಿ ಆಟವನ್ನೆಲ್ಲಾ ಮರೆತುಬಿಟ್ಟರು. ಐದು ವರ್ಷಗಳ ಪರ್ಯಂತ ನಿರಂತರವಾಗಿ ಅವರ ವ್ಯಾಸಂಗ ಸಾಗಿತು. ವ್ಯಾಕರಣ, ಕಾವ್ಯ, ಶಾಸ್ತ್ರ, ಧರ್ಮಶಾಸ್ತ್ರ ಮುಂತಾದುವುಗಳಲ್ಲಿ ಪಂಡಿತರಾಗಿ ಮನೆಗೆ ಹಿಂತಿರುಗಿದರು.

ಗುರುವಿನ ಬಳಿ ಇರುವಾಗ ಶಂಕರರು ಯೋಗಾಭ್ಯಾಸವನ್ನೂ ಮಾಡುತ್ತಿದ್ದರು. ಆದರೆ ಕ್ರಮೇಣ ಭಾಗವತದಲ್ಲಿ ಎಷ್ಟು ಅಭಿರುಚಿ ಬೆಳೆಯಿತೆಂದರೆ ಯೋಗ ಮಾರ್ಗವನ್ನು ತ್ಯಜಿಸಿಯೇ ಬಿಟ್ಟರು. ಯಾವಾಗ ನೋಡಲಿ ಕೈಯಲ್ಲಿ ಭಾಗವತ ಪುಸ್ತಕವೇ ಇರುತ್ತಿತ್ತು. ತಾವು ಓದಿ ಅನಂತರ ಬೇರೆಯವರಿಗೆ ಹೇಳುತ್ತಿದ್ದರು. ಭಗವದ್ಭಕ್ತಿಯಲ್ಲಿ ಮುಳುಗಿರುತ್ತಿದ್ದ ಶಂಕರರಿಗೆ ಕೆಲವು ಮುದುಕರು-ಅಪ್ಪ, ಈಗ ನಮ್ಮಿಂದ ಏನೂ ಸಾಧ್ಯವಿಲ್ಲ. ನಮಗಾಗಿ ನೀನೇ ವೈಕುಂಠವನ್ನು ನಿರ್ಮಿಸು ಎಂದು ಹೇಳುತ್ತಿದ್ದರು.

ಶಂಕರರು ನಿಜವಾಗಿಯೂ ವೈಕುಂಠ ನಿರ್ಮಾಣದಲ್ಲಿ ಮಗ್ನರಾದರು. ಅವರಿಗೆ ಚಿತ್ರಕಲೆಯೂ ಗೊತ್ತಿದ್ದಿತು. ದೊಡ್ಡ ದೊಡ್ಡ ಪರದೆಗಳ ಮೇಲೆ ಚಿತ್ರವನ್ನು ಬರೆಯುತ್ತಿದ್ದರು. ಕೆಂಪು, ಹಳದಿ ಮುಂತಾದ ಬಣ್ಣಗಳಿಂದ ಏಳು ಪರದೆಗಳ ಮೇಲೆ ಏಳು ಸ್ವರ್ಗಗಳನ್ನು ಚಿತ್ರಿಸಿದರು. ಏಳರಲ್ಲೂ ಏಳು ದೇವರಿದ್ದರು. ಅಲ್ಲಲ್ಲೇ ತೊರೆಗಳೂ, ತೋಟಗಳೂ ಇದ್ದವು ಈ ಚಿತ್ರ ಕೌಶಲ್ಯವನ್ನು ನೋಡಿ ಜನಗಳು ದಂಗಾದರು. ಈ ಸುದ್ದಿ ಸುತ್ತಮುತ್ತಲೂ ಹರಡತೊಡಗಿತು. ರಾಜ್ಯದ ಜನಗಳೆಲ್ಲಾ ಸ್ವರ್ಗವನ್ನು ನೋಡಲು ಬಂದರು. ಮಕ್ಕಳೇನು, ಮುದುಕರೇನು, ಹೆಂಗಸರು, ಗಂಡಸರು ಎಲ್ಲರೂ ಗುಂಪುಕೂಡಿದರು. ಒಂದೊಂದು ಸಮಯ ಆ ಹಳ್ಳಿಯಲ್ಲಿ ಕಾಲೂರಲೂ ಸ್ಥಳವಿರುತ್ತಿರಲಿಲ್ಲ. ಜನಗಳು ಚಿತ್ರಗಳನ್ನು ಅರ್ಥ ಮಾಡಿಕೊಳ್ಳಲು ಇಷ್ಟಪಡುತ್ತಿದ್ದರು. ಪ್ರತಿಯೊಂದು ಸ್ಥಳದ ವರ್ಣನೆಯನ್ನೂ ಕೇಳುತ್ತಿದ್ದರು. ಪಾಪ ಶಂಕರರು ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ವಿವರಿಸಬೇಕಾಗಿದ್ದಿತು.

ಕೊನೆಗೆ ಒಂದು ಉಪಾಯ ಹುಡುಕಲಾಯಿತು. ಹಳ್ಳಿ ಭಾಷೆಯಲ್ಲಿ

"ಚಿನ್ಹ ಯಾತ್ರೆ" ಎಂಬ ನಾಟಕ ರಚಿಸಿದರು. ಆಡಲು ನಟರನ್ನೂ ಆರಿಸಲಾಯಿತು. ರಾಮರಾಮಗುರುವೇ ಸೂತ್ರಧಾರ. ಆ ಪರದೆಗಳನ್ನು ಜೋಡಿಸಿಯೇ ನಾಟಕದ ಅಭಿನಯ ಪ್ರಾರಂಭವಾಯಿತು. ಶಂಕರರು ವೇಷ ಬದಲಿಸಿಕೊಂಡು ಒಂದೇ ಬಾರಿಗೆ ಅನೇಕ ಪಾತ್ರಗಳ ರೂಪದಲ್ಲಿ ರಂಗಮಂಟಪಕ್ಕೆ ಬರುತ್ತಿದ್ದರು. ವಾದ್ಯಗಾರರ ಕೊರತೆಯಿದ್ದರೆ ಒಂದೇ ಬಾರಿಗೆ ಆರೇಳು ವಾದ್ಯಗಳನ್ನು ನುಡಿಸು ತ್ತಿದ್ದರು. ನೃತ್ಯ ಮಾಡಲೂ ಹಿಂತೆಗೆಯುತ್ತಿರಲಿಲ್ಲ. ಪ್ರೇಕ್ಷಕರ ಸಂಖ್ಯೆಯಂತೂ ಹೇಳುವಂತಿಲ್ಲ. ನಟನಟಿಯರ ಮಧ್ಯೆ ಅವರನ್ನು ಗುರುತಿಸುವುದೇ ಕಷ್ಟವಾಗಿತ್ತು. ಯಾರೇ ರಂಗಮಂಟಪಕ್ಕೆ ಬರಲಿ ಜನಗಳು ಶಂಕರದೇವರೆಂದೇ ಹೇಳುತ್ತಿದ್ದರು. ಚಿನ್ಹ ಯಾತ್ರೆ ಏನೂ ಅವರ ಮೊದಲ ಕೃತಿಯಲ್ಲ. ವಿದ್ಯಾರ್ಥಿಯಾಗಿದ್ದಾಗಲೇ ಒಂದು ಖಂಡಕಾವ್ಯವನ್ನೂ ರಚಿಸಿದ್ದರು.

ಕೃತಿಯಲ್ಲಿ ಅವರ ಕೆಲವು ಸಂದೇಶವೂ ಇದ್ದವು. ಇದಕ್ಕೆ ಕಾರಣ ಅವರ ಭಗವತ್ಪ್ರೇಮ. ಭಾಗವತವನ್ನು ಓದಿದಷ್ಟೇ ಅಲ್ಲ. ಕಂಠಪಾಠವನ್ನೂ ಮಾಡಿದ್ದರು. ಧರ್ಮದ ಬಿಗಿ ಅನಾವಶ್ಯಕವೆಂದು ತಿಳಿದಿದ್ದರು. ಧರ್ಮವು ಆದಷ್ಟು ಸರಳವಾಗಿರ ಬೇಕು. ಈಶ್ವರ ಪ್ರಾಪ್ತಿಗಾಗಿ ಅವರು ಭಕ್ತಿ ಮಾರ್ಗವನ್ನು ಅನುಸರಿಸಿದರು. ಜನಗಳಲ್ಲಿ ಐಕ್ಯ ತರಲು ಯೋಗ್ಯವಾಗಿದ್ದ ಮಾರ್ಗವೆಂದರೆ ಇದೇ.

ಶಂಕರರ ಈ ಧರ್ಮವು ಜನಗಳಲ್ಲಿ ನಂಬಿಕೆ ಮತ್ತು ಪ್ರಪಂಚದಲ್ಲಿ ಎಲ್ಲರೂ ಸರಿಸಮಾನರೆಂಬ ಭಾವ ಹುಟ್ಟಿಸಿತು. ಪ್ರತಿಯೊಬ್ಬರಿಗೂ ತಮ್ಮದೇ ಆದ ಮಹತ್ವವಿದೆ. ಇದರಿಂದ ಪರಸ್ಪರ ಭೇದಭಾವ ಕಡಿಮೆಯಾಯಿತು. ವ್ಯಕ್ತಿಯು ಸಮಾಜದಲ್ಲಿ ತಲೆ ಎತ್ತಿ ಸಂತೋಷದಿಂದ ಜೀವಿಸಲು ಆಸರೆ ದೊರೆಯಿತು.

ಶಂಕರರು ಇಪ್ಪತ್ತೊಂದನೆ ವರ್ಷದಲ್ಲಿ ಭಾಗವತದಲ್ಲಿನ ಕಥೆಗಳ ಆಧಾರದ ಮೇಲೆ ಕೀರ್ತನೆಗಳನ್ನು ರಚಿಸಿದರು. ಸರಳ ಶಬ್ದಗಳ ಸರಳ ಗೀತೆಗಳ ಮತ್ತು ಕಥೆಗಳ ಮೂಲಕ ಭಕ್ತಿ, ಐಕ್ಯ, ಸಮಾನತೆ ಮತ್ತು ಮಮತೆಯ ಮಹತ್ವ ತಿಳಿಸು ವುದೇ ಈ ಕೀರ್ತನೆಗಳ ಉದ್ದೇಶ. ಆ ಕೀರ್ತನೆಗಳನ್ನು ಇಂದೂ ಜನಗಳು ಹಾಡುವರು.

ಯಾವಾಗಲೂ ಶಂಕರರು ಧಾರ್ಮಿಕ ಕಾರ್ಯದಲ್ಲಿ ಮುಳುಗಿರುವುದನ್ನು ನೋಡಿ ಮನೆಯವರು ಸೂರ್ಯರತಿ ಎಂಬ ಕನ್ಯೆಯೊಡನೆ ಅವರ ವಿವಾಹ

ಮಾಡಿದರು. ಅಲ್ಲದೆ ಭುಯಿಯಾಗಿರಿಯ ಜವಾಬ್ದಾರಿಯೂ ಅವರ ಮೇಲೆ ಬಿದ್ದಿತು. ಎರಡು ಕೆಲಸವನ್ನೂ ದಕ್ಷತೆಯಿಂದ ನಿರ್ವಹಿಸಿದರೂ ಹೆಚ್ಚು ಸಮಯವನ್ನು ನಿರ್ಗುಣ ಕೃಷ್ಣನ ಗುಣ ಕಥನದಲ್ಲೇ ಕಳೆಯುತ್ತಿದ್ದರು.

ಜಾತಿ ಭೇದದ ಭೂತ ಆ ಕಾಲದಲ್ಲಿ ಎಲ್ಲರನ್ನೂ ಮೆಟ್ಟಿದ್ದಿತು. ವಿಷಮ ಪರಿಸ್ಥಿತಿಯ ಕಾಲ, ಬ್ರಾಹ್ಮಣರು ಮತ್ತು ಕಾಯಸ್ಥರನ್ನು ಬಿಟ್ಟು ಮಿಕ್ಕವರನ್ನೆಲ್ಲಾ ಕೆಳ ಜಾತಿಯವರೆಂದು ಪರಿಗಣಿಸಲಾಗಿತ್ತು. ಎಲ್ಲರಿಗಿಂತಲೂ ಕೀಳಾದವರು ನಾವಿಕರು. ಇದು ಶಂಕರರಿಗೆ ಸರಿಹೋಗದೆ ವಿರೋಧಿಸಿದರು.

ವರಡೋವದ ಬಳಿ ಒಂದು ನಾಲೆಯಿದ್ದಿತು. ಚೈತ್ರಮಾಸದಲ್ಲಿ ಇದರಲ್ಲಿ ಪ್ರವಾಹ ಬಂದು ಪೈರುಗಳು ಹಾಳಾಗುತ್ತಿದ್ದವು. ಒಂದು ಅಣೆಕಟ್ಟು ಕಟ್ಟಿಸೆಂದು ಜನಗಳು ಮೊರೆಯಿಟ್ಟರು.

ಶಂಕರರು ಎಲ್ಲಾ ಹಳ್ಳಿಗಳಿಂದಲೂ ಜನಗಳನ್ನು ಕರೆಸಿ ಅಣೆಕಟ್ಟಿನ ಕೆಲಸದಲ್ಲಿ ನಿಯೋಜಿಸಿದರು. ಮಣ್ಣಿನ ಮೊದಲ ಹೆಂಟೆಯನ್ನು ಯಾವಳಾದರೂ ಸಾಧ್ವಿ ಸ್ತ್ರೀ ಹಾಕಿದರೆ, ಅಣೆಕಟ್ಟೆ ನಿಲ್ಲುವುದೆಂದು ತಿಳಿಸಿದರು.

ಸಾಧ್ವಿ ಸ್ತ್ರೀಯ ಅನ್ವೇಷಣೆ ಮೊದಲಾಯಿತು. ಬ್ರಾಹ್ಮಣ ಮತ್ತು ಭುಯಿಯಾ ಜಾತಿಯ ಹೆಂಗಸರು ಹಿಂದೆ ಮುಂದೆ ನೋಡಿದರು. ಕೊನೆಗೆ ಒಬ್ಬ ನಾವಿಕರ ಹೆಂಗಸು ಮುಂದೆ ಬಂದು ಮಣ್ಣು ಹಾಕಿದಳು. ಅಣೆಕಟ್ಟು ನಿಂತಿತು. ಇದರಿಂದ ಉಚ್ಚ ಜಾತಿಯವರ ಜಂಬ ಅಡಗಿತು. ಈಗಲೂ ಇದನ್ನು ಸತ್ಯನಾಲೆ (ಶಾಂತಿ ನಾಲೆ) ಎಂದೇ ಕರೆಯುವರು.

ಶಂಕರರಿಗೆ ಮೂವತ್ತನೇ ವಯಸ್ಸಿನಲ್ಲಿ ಒಬ್ಬ ಪುತ್ರಿಯು ಜನಿಸಿದಳು. ಆಕೆಗೆ ಮನು ಎಂದು ಹೆಸರಿಡಲಾಯಿತು. ಮಗುವಿಗೆ ಒಂಬತ್ತು ತಿಂಗಳು ತುಂಬುತ್ತಿದ್ದಂತೆಯೇ ತಾಯಿ ಕಣ್ಮುಚ್ಚಿದಳು. ಇದಾದ ಒಂಬತ್ತು ವರ್ಷಗಳಾದನಂತರ ಶಂಕರರು ತೀರ್ಥಯಾತ್ರೆಗೆ ಹೊರಟರು. ಆಗ ತೀರ್ಥಯಾತ್ರೆ ಎಂದರೆ ಇಡೀ ದೇಶವನ್ನು ಕಾಲುನಡಿಗೆಯಲ್ಲೇ ಸುತ್ತಬೇಕಾಗಿದ್ದಿತು. ಹೊಗೆಬಂಡಿ ಇರಲಿಲ್ಲ. ನಾಲ್ಕು ದಿಕ್ಕಿನಲ್ಲೂ ಕಾಡು ಜೇರೆ. ಹನ್ನೆರಡು ವರ್ಷಗಳ ಪರ್ಯಂತ ಶಂಕರರು ದೇಶಪರ್ಯಟನ ಮಾಡಿದರು. ಪ್ರತಿಯೊಂದು ಸ್ಥಳದಲ್ಲೂ ಅವರ ಉಪದೇಶವನ್ನು ಕೇಳಿ ಜನಗಳು ಮುಗ್ಧರಾಗಿರುತ್ತಿದ್ದರು. ಅನೇಕ ಮಂದಿ ಶಿಷ್ಯರೂ ಆದರು.

ಮತ್ತೆ ಅವರು ವರದೋಬಾಗೆ ಹಿಂತಿರುಗಿದಾಗ ಅಪ್ತುರಿಷ್ಟರ ಮತ್ತು ಪ್ರಜೆಗಳ ಬಲವಂತಕ್ಕೆ ಎರಡನೆ ವಿವಾಹವಾದರು.

ಈ ಮಧ್ಯೆ ಭುಯಿಯಾ ಮತ್ತು ನಾವಿಕರ ಮಧ್ಯೆ ಮನಸ್ತಾಪವುಂಟಾಯಿತು. ಕುಸುಂಬರರಾದ ಮೇಲೆ ಆಡಳಿತ ಸಡಿಲಿಸಿದ್ದಿತು. ನಾವಿಕರು ಮೇಲೆ ಬಂದರು ಆದರೆ ಅವರನ್ನು ವಿರೋಧಿಸುವುದು ಶಂಕರರಿಗೆ ಬೇಕಿರಲಿಲ್ಲ. ವ್ಯರ್ಥವಾಗಿ ಪ್ರಾಣ ಹಾನಿ ಮಾಡಬಾರದೆಂದು ಯೋಚಿಸಿ ವರದೋಬವನ್ನೇ ಬಿಡಲು ಯೋಚಿಸಿದರು.

ಈ ಘಟನೆಯಾದದ್ದು ಕ್ರಿ.ಶ. ೧೪೮೬ರಲ್ಲಿ. ಆಗ ಶಂಕರರಿಗೆ ಅರವತ್ತು ವರುಷ. ಈ ವೇಳೆಗೆ ಕೀರ್ತನ ಘೋಷ ಎಂಬ ಗ್ರಂಥದ ಎಂಟು ಖಂಡಗಳಲ್ಲದೆ ಭಕ್ತಿ ಪ್ರದೀಪ, ರುಕ್ಮಿಣೀ ಹರಣ ಕಾವ್ಯ, ಬಡಗೀತ, ಭಾಗವತದ ಆರನೇ ಮತ್ತು ಎಂಟನೇ ಸ್ಕಂದ (ಗಜಗ್ರಾಹ, ಅಮೃತಮಂಥನ, ಹರಮೋಹನ) ಮತ್ತು ಗುಣ ಮಾಲಾದ ಕೆಲವು ಅಧ್ಯಾಯಗಳನ್ನೂ ಬರೆದು ಮುಗಿಸಿದರು.

ಭುಯಿಯಾ ಜನಗಳಿಗೆ ವರದೋಬವನ್ನು ಬಿಟ್ಟನಂತರವೂ ಶಾಂತಿ ಸಿಗಲಿಲ್ಲ ಬ್ರಹ್ಮಪುತ್ರದ ಸಮೀಪ ಅವರು ರಕ್ಷಣೆ ಪಡೆದಿದ್ದ ಸ್ಥಳದ ಮೇಲೆ ಭೂತಾನಿನ ನಿವಾಸಿಗಳು ಆಕ್ರಮಣ ಮಾಡುತ್ತಿದ್ದರು. ಭುಯಿಯಾಗಳಿಗೆ ಇರುವುದೇ ಕಷ್ಟ ವಾಯಿತು. ಶಂಕರರು ತಮ್ಮ ಪರಿವಾರದವರೊಡನೆ ಬಂದು ದ್ವೀಪಕ್ಕೆ ಹೊರಟು ಹೋದರು. ಅಲ್ಲಿ ಹದಿನಾಲ್ಕು ವರುಷಗಳಿದ್ದರು. ಅನೇಕ ಪ್ರಮುಖ ಶಿಷ್ಯರು ದೊರೆತಿದ್ದುದೂ ಅಲ್ಲೇ. ಮಾಧವದೇವರು ಅವರಲ್ಲೊಬ್ಬರು ಶಾಸ್ತ್ರಾರ್ಥಗಳನ್ನು ಕೇಳಿ ಬಂದವರು ಶಂಕರರನ್ನು ನೋಡುತ್ತಲೇ ತಮ್ಮ ಅಹಂಕಾರ ಮರೆತು ಅವರ ಶಿಷ್ಯರಾದರು. ಜೀವನ ಪರ್ಯಂತ ನೆರಳಿನಂತೆ ಶಂಕರರೊಡನಿದ್ದು ಅವರ ಧರ್ಮ ಹರಡಿದರು.

ಶಂಕರರು ತಮ್ಮ ಶಿಷ್ಯರೊಡನೆ ಪಾಟಬಾವುಸಿಯಲ್ಲಿ ಕೀರ್ತನೆ ಮಾಡು ತ್ತಿದ್ದರು. ಆದ್ದರಿಂದಲೇ ಅವರ ಭಕ್ತರು ಅದನ್ನು ಎರಡನೆ ಬೃಂದಾವನವೆಂದು ತಿಳಿದಿರುವರು. ಇಲ್ಲಿ ಚಾಂದವ ಎಂಬ ಒಬ್ಬ ಮುಸಲ್ಮಾನ ಸಾಧು ಮತ್ತು ಗಾರೋ ಕಬೀಲೆಯ ಗೋವಿಂದನೆಂಬ ನಾಯಕ ಅವರ ಶಿಷ್ಯರಾದರು. ಇವ ರಿಬ್ಬರೂ ಜಾತಿ ಮತ್ತು ಸ್ಪೃಶ್ಯಾಸ್ಪೃಶ್ಯ ಭಾವನೆಯನ್ನು ಹೋಗಲಾಡಿಸಲು

ಮತ್ತು ಅಸಮ ಜಾತಿಯನ್ನು ಇತರ ಜಾತಿಯೊಡನೆ ಒಂದುಗೂಡಿಸಲು ಬಹಳ ಯತ್ನಿಸಿದರು. ಶಂಕರರು ಹೋದ ಕಡೆಯೆಲ್ಲಾ ನಾಮಗೃಹವನ್ನು ತೆರೆಯುತ್ತಿದ್ದರು. ಈ ನಾಮಗೃಹಗಳೇ ಮುಂದೆ ಹಳ್ಳಿಯ ಆಡಳಿತ ಕೇಂದ್ರ ಮತ್ತು ಚಿಕ್ಕ ಪುಟ್ಟ ಸಾಂಸ್ಕೃತಿಕ ಕೇಂದ್ರಗಳಾದುವು.

ಪಾಟಬಾವುಸಿಯಿಂದ ಅವರು ತೊಂಬತ್ತೇಳನೇ ವರುಷದಲ್ಲಿ ಎರಡನೇ ಬಾರಿ ಯಾತ್ರೆಗೆ ಹೊರಟು ಗಂಗಾ, ನರದ್ವೀಪ, ಕಬೀರಮಠ, ಶ್ರೀಕ್ಷೇತ್ರ ಮತ್ತು ಪುರಿಯನ್ನು ಸುತ್ತಿ ಬಂದರು.

ಯಾತ್ರೆಯಿಂದ ಹಿಂತಿರುಗಿದಾಗ ಎಲ್ಲೆಲ್ಲೂ ಕೀರ್ತನೆಗಳದೇ ಮಾತಾಯಿತು. ಅವರ ಪ್ರಭಾವ ಮೊದಲಿಗಿಂತಲೂ ಹೆಚ್ಚಾಗಿದ್ದಿತು. ಅವರ ವಿರೋಧಿಗಳು ಹೆದರಿ ಇವರು ಹಿಂದೂ ಧರ್ಮವನ್ನು ಹಾಳುಮಾಡುತ್ತಿರುವರೆಂದು ವದಂತಿ ಹಬ್ಬಿಸಿದರು. ಕೋಚದ ರಾಜ ಶಂಕರರನ್ನು ಹಿಡಿಯಲು ಅಪ್ಪಣೆ ಇತ್ತ. ರಾಜನ ಸಹೋದರ ದಿವಾನ್ ಚಿಲಾರಾಯ ಶಂಕರರನ್ನು ಚೆನ್ನಾಗಿ ಅರಿತಿದ್ದ. ಆತ ಗುಟ್ಟಾಗಿ ಶಂಕರರನ್ನು ಕರೆಸಿ ಸಭೆಯ ಮುಂದೆ ನಿಲ್ಲಿಸಿದ. ಪಂಡಿತರು ಚರ್ಚಿಸಲು ಹೌಹಾರಿದರು. ಆದರೆ ಶಂಕರರು ಎಲ್ಲರನ್ನೂ ಸೋಲಿಸಿದರು. ಇದರಿಂದ ಅವರ ಗೌರವ ಮತ್ತಷ್ಟು ಹೆಚ್ಚಿತು. ಅಲ್ಲೇ 'ಗುಣಮಾಲ' ಎಂಬ ಕೃತಿಯನ್ನು ಮುಗಿಸಿ ರಾಜನಿಗೆ ಆರ್ಪಿಸಿ ದರು. ಈ ಚಮತ್ಕಾರವನ್ನು ನೋಡಿ ರಾಜ ಆಶ್ಚರ್ಯಚಕಿತನಾಗಿ ಶಂಕರರಿಗೆ ಪುರಸ್ಕಾರವಿತ್ತ.

ಶಂಕರರು ತಮ್ಮ ನೂರ ಇಪ್ಪತ್ತನೇ ವರುಷದಲ್ಲಿ ಕ್ರಿ.ಶ. ೧೫೬೮ರಲ್ಲಿ ಭಾದ್ರಪದ ಶುದ್ಧ ತೃತೀಯೆಯಂದು ತಮ್ಮ ಇಹಜೀವನವನ್ನು ಸಮಾಪ್ತಿಗೊಳಿಸಿ ದರು. ಅವರು ಅಸಮ ಪ್ರದೇಶದ ಸಮಾಜ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿದರು. ಅವರ ಪ್ರಭಾವದಿಂದಲೇ ಅಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ ಮುಂತಾದವುಗಳಲ್ಲಿ ಹೊಸ ಹೊಸ ರಚನೆಗಳಾದವು.

ಶಂಕರರು ಆದರ್ಶ ಗೃಹಸ್ಥರಾಗಿದ್ದರು. ತಮ್ಮ ಮಕ್ಕಳಿಗಾಗಿ ಶಿಕ್ಷಕರನ್ನಿರಿಸಿದ್ದರು. ಹೊಲಗಳನ್ನು ಆಳುಗಳು ನೋಡಿಕೊಳ್ಳುತ್ತಿದ್ದರು. ಅತಿಥಿಗಳು ಮತ್ತು ಯಾಚಿತ ರಿಂದ ಅವರ ಮನೆ ತುಂಬಿರುತ್ತಿತ್ತು. ಅವರ ಉದಾರತೆಗೆ ಎಲ್ಲೆಯೇ ಇರಲಿಲ್ಲ.

ಶಂಕರರು ಜನಗಳನ್ನು ಪುರೋಹಿತರ ಮುಷ್ಟಿಯಿಂದ ಬಿಗಿದುದಲ್ಲದೆ ಜಾತಿ ವೈಷಮ್ಯದ ಬೇರನ್ನು ಅಲ್ಲಾಡಿಸಿದರು. ಅಸಮ ಜಾತಿಯ ಚೈತನ್ಯಕ್ಕೆ ಅವರೇ ಕಾರಣರು. ಅವರ ಹೆಸರನ್ನು ಎಂದೂ ಮರೆಯುವಂತಿಲ್ಲ. ಅನೇಕ ವೈಷ್ಣವ ಸಾಧುಗಳು ಅವರ ಜೀವನ ಚರಿತ್ರೆಯನ್ನು ಬರೆದಿರುವರು. ಆದರೆ ಶಂಕರರ ಅಮರತೆ ಅವರ ಜೀವನ ಚರಿತ್ರೆಯನ್ನೇನೂ ಅವಲಂಬಿಸಿಲ್ಲ.

ನರಸಿಂಹ ಮೆಹತಾ

ಬೆಳಗಾಗುತ್ತಲೇ ಗುಜರಾತಿನ ಮನೆ ಮನೆಯಲ್ಲಿ ಉದಯಗೀತೆ ಮತ್ತು ಭಕ್ತಿಗೀತೆಗಳು ಪ್ರತಿಧ್ವನಿಸುತ್ತವೆ. ಅದರಲ್ಲೂ ಭಕ್ತ ಕವಿ ನರಸಿಂಹ ಮೆಹತ ರಚಿಸಿರುವ ಗೀತೆಗಳಿಗೆ ಗುಜರಾತಿನಲ್ಲಿ ವಿಶೇಷ ಮನ್ನಣೆ. ಗುಜರಾತಿ ಭಾಷೆಯಲ್ಲಿ ನರಸಿಂಹ ಮೆಹತ ಆದಿಕವಿ. ಅವರ ಗೀತೆಗಳು ಕಲ್ಪನೆ ಮತ್ತು ಭಕ್ತಿರಸದಿಂದ ತುಂಬಿವೆ. ಭಕ್ತಿಪರವಶರಾಗಿ ರಚಿಸಿದ ಗೀತೆಗಳು ಸರಳವಾಗಿಯೂ ಇದ್ದು ಹೆಚ್ಚು ಜೋಕಪ್ರಿಯವಾಗಿವೆ. ಅವರು ಒಳ್ಳೆಯ ಹಾಡುಗಾರರಾಗಿದ್ದು ವಿವಿಧ ರಾಗಗಳಲ್ಲಿ ಗೀತೆಗಳನ್ನು ರಚಿಸಿರುವರು.

ವೈಷ್ಣವ ಜನತೋ ತೇನೆ ಕಹಿಂಯೆ ಜೇ ಪೀಡ್ ಪರಾಯಿ ಜಾಣೇ ರೇ
ಪರದುಃಖೆ ಉಪಕಾರ ಕರೇ ತೋಯೆ, ಮನ ಅಭಿಮಾನ ನ ಆಣೇ ರೇ
ಸಕಲ ಲೋಕಮಾಂ ಸಹುನೆ ವಂದೇ ನಿಂದಾ ನ ಕರೇ ಕೇ ನೀರೇ
ವಾಚ, ಕಾಛ, ಮನ ನಿಶ್ಚಲ ರಾಖೆ, ಧನಧನ ಜನನೀ ತೇ ನೀರೇ
ಸಮದೃಷ್ಟಿ ನೆ ತೃಷ್ಣಾ ತ್ಯಾಗೀ ಪರಸ್ತ್ರೀ ಜೇನೇ ಮಾತ್ ರೇ
ಜಿಹ್ವಾ ಥಕೀ ಅಸತ್ಯ ನ ಬೋಲೇ, ಪರಧನ ನವ ಜಾಲೇ ಹಾಥ್ ರೇ
ಮೋಹ ಮಾಯಾ ವ್ಯಾಪೇ ನಹೀಂ ಜೇನೇ ದೃಢ ವೈರಾಗ್ಯ ಜ್ಯೆನಾ ಮನಮಾಂ ರೇ
ರಾಮನಾಮಶುಂ ತಾಲೀ ಲಾಗೀ ಸಕಲತೀರಥ ತೇನಾ ಮನಮಾಂ ರೇ
ವಣ ಲೋಭೀ ಕೇ ಕಪಟ ರಹಿತ ಛೇ ಕಾಮ ಕ್ರೋಧ ನಿವಾರ್ಯಾ ರೇ
ಭಣೇ ನರಸೈಂಯೋಲ ತೇನುಂ ದರಸನ ಕರತಾಂ ಕುಲ ಏಕ ತೇರ ತಾರ್ಯಾ ರೇ ||

ಬಾಪೂಜಿಯವರ ಪ್ರಿಯವಾದ ಗೀತೆ ನರಸಿಂಹರದೇ.

ಸೌರಾಷ್ಟ್ರದ ತಲಾಜ ಹಳ್ಳಿಯಲ್ಲಿ ನರಸಿಂಹ ಮೆಹತ ಜನಿಸಿದರು. ಕ್ರಿ.ಶ. ೧೪೧೪ ರಿಂದ ೧೪೮೦ರ ಒಳಗೆ ಅವರು ಜೀವಿಸಿರಬೇಕು. ಅವರು ಜಾತಿಯಲ್ಲಿ ನಾಗರ ಬ್ರಾಹ್ಮಣರು. ತಂದೆ ಕೃಷ್ಣದಾಸ ಮತ್ತು ತಾಯಿ ದಯಾಕೋರ್. ನರಸಿಂಹರ ಬಾಲ್ಯದಲ್ಲೇ ತಂದೆತಾಯಿಗಳು ಕಾಲವಾಗಲು ಅವರ ತಮ್ಮ ಚಿಕ್ಕಪ್ಪನ ಮನೆಯಲ್ಲಿ ಬೆಳೆದರು.

ಬಾಲ್ಯದಿಂದಲೇ ನರಸಿಂಹ ಸಜ್ಜನರ ಗುಂಪಿನಲ್ಲಿ ವ್ಯವಹರಿಸುತ್ತಾ ದೇವಸ್ಥಾನಗಳಲ್ಲಿ ತಮ್ಮ ಅಧಿಕಾಂಶ ಸಮಯವನ್ನು ಕಳೆಯುತ್ತಿದ್ದರು. ಅವರಿಗೆ ಹದಿನೇಳು ಹದಿನೆಂಟು ವರುಷದಲ್ಲೇ ಮದುವೆಯಾಯಿತು. ಅವರ ಪತ್ನಿಯ ಹೆಸರು ಮಾಣಿಕಬಾಯಿ ಎಂದು. ಮದುವೆಯಾದ ನಂತರವೂ ನರಸಿಂಹ ಮೆಹತ ಚಿಕ್ಕಪ್ಪನ ಮನೆಯಲ್ಲೇ ಇರತೊಡಗಿದರು. ಮನೆ ಕೆಲಸ ಮಾಡಲು ಯಾವಾಗಲೂ ಹಿಂದೇಟು ಹಾಕುತ್ತಿದ್ದರು. ಆದ್ದರಿಂದಲೇ ಅತ್ತಿಗೆ ಹೀನಮಾನವಾಗಿ ಅನ್ನುತ್ತಿದ್ದಳು. ಒಮ್ಮೆ ನರಸಿಂಹರಿಗೆ ಬಹಳ ದುಃಖವಾಗಿ ಶಿವಮಂದಿರಕ್ಕೆ ಹೊರಟುಹೋದರು. ಏಳು ದಿನಗಳ ಪರ್ಯಂತ ತಪಸ್ಸು ಮಾಡಲು ಕೊನೆಗೆ ಶಿವ ಪ್ರತ್ಯಕ್ಷನಾಗಿ ಕೃಷ್ಣನನ್ನು ಆರಾಧಿಸು ಮತ್ತು ಅವನ ಗುಣಗಾನವನ್ನು ಮಾಡು ಎಂದು ತಿಳಿಸಿದನು.

ಆ ದಿವಸವೇ ನರಸಿಂಹ ಮೆಹತ ಜುನಾಗಢದಲ್ಲಿ ಬೇರೊಂದು ಮನೆ ಮಾಡಿಕೊಂಡು ಕೃಷ್ಣಭಕ್ತಿಯಲ್ಲಿ ಐಕ್ಯರಾದರು. ಇಂದೂ ಜುನಾಗಢದಲ್ಲಿ ನಾಗರವಾಡ ಎಂಬ ರಸ್ತೆಯಲ್ಲಿ ಅವರ ಮನೆಯಿದ್ದ ಜಾಗದಲ್ಲಿ ಒಂದು ಚೌಕವಿದೆ. ಅದನ್ನು ನರಸಿಂಹ ಮೆಹತರ ಚೌಕವೆನ್ನುವರು.

ಹಿಂದಿನ ಕಾಲದಲ್ಲಿ ಜನರು ಹರಿಜನರನ್ನು ಮುಟ್ಟುವುದು ಪಾಪವೆಂದು ತಿಳಿದಿದ್ದರು. ಆದರೆ ನರಸಿಂಹ ಮೆಹತ ಹರಿಜನರ ಮನೆಗೆ ಹೋಗಿ ಎಲ್ಲರೊಡನೆ ಕುಳಿತು ಭಜನೆ ಮಾಡುತ್ತಿದ್ದರು. ಇದನ್ನು ನೋಡಿ ಮಿಕ್ಕ ನಾಗರ ಬ್ರಾಹ್ಮಣರು ಅಪಹಾಸ್ಯ ಮಾಡುತ್ತಿದ್ದರು. ತಮ್ಮ ಸಮಾಜದಿಂದ ಬಹಿಷ್ಕಾರವನ್ನೂ ಹಾಕಿದರು. ಆದರೆ ನರಸಿಂಹ ಮೆಹತ ಮಾತ್ರ ಆದರ್ಶದಿಂದ ಕದಲಲಿಲ್ಲ. ಪ್ರಾಣಿ ಮಾತ್ರವನ್ನು ಈಶ್ವರನ ರೂಪವೆಂದು ಭಾವಿಸಿದರು. ಕೃಷ್ಣನ ಭಕ್ತಿ ಮತ್ತು ಗುಣಗಾನ ನಡೆಯುವ ಕಡೆ ನಾನು ನಿಸ್ಸಂಕೋಚವಾಗಿ ಕುಳಿತುಕೊಳ್ಳುವೆನೆಂದು ಹೇಳುತ್ತಿದ್ದರು. ನರಸಿಂಹ ಮೆಹತ ತಮ್ಮ ಕಾಲದ ಪ್ರಸಿದ್ಧ ಸಮಾಜ ಸುಧಾರಕರೆಂಬುದರಲ್ಲಿ ಸಂದೇಹವೇನಿಲ್ಲ. ಈ ಕಾರಣದಿಂದ ಸಮಾಜದ ಕೋಪಕ್ಕೆ ಗುರಿಯಾಗ ಬೇಕಾದರೂ ತಮ್ಮ ನಿಶ್ಚಯವನ್ನು ಸಡಿಲಿಸಲಿಲ್ಲ.

ನರಸಿಂಹ ಮೆಹತ ಭಕ್ತಿಯ ಅನೇಕ ಗೀತೆಗಳನ್ನು ಬರೆದಿರುವರು. ಅವರಿಗೆ ಕೃಷ್ಣನಲ್ಲಿ ಅಚಲವಾದ ನಂಬಿಕೆ ಇದ್ದಿತು. ಭಕ್ತರ ವಿಶ್ವಾಸಕ್ಕೆ ಸರಿಯಾಗಿ ತುಂಬಿದ ಸಭೆಯಲ್ಲಿ ದ್ರೌಪದಿಯ ಮಾನ ಉಳಿದಂತೆ, ಮೀರಾಬಾಯಿಯ ವಿಷ

ಅನ್ಯುತವಾದಂತೆ ಭಕ್ತರಾದ ನರಸಿಂಹ ಮೆಹತಾರ ಜೀವನದಲ್ಲೂ ಅನೇಕ ಘಟನೆಗಳು ನಡೆದವು.

ಒಮ್ಮೆ ಕೆಲವು ಭಕ್ತರು ದ್ವಾರಕೆಗೆ ಹೋಗಲು ನಿಶ್ಚಯಿಸಿದರು. ಒಬ್ಬ ಸಾಹುಕಾರನಿಂದ ಹುಂಡಿ ಬರೆಯಿಸಬೇಕೆಂದು ತೀರ್ಮಾನಿಸಿ ಸಾಕ್ಷಿಗೆ ಹುಡುಕುತ್ತಿದ್ದರು. ಆಗ ನೆರೆಯ ಕೆಲವು ಜನರು ತಮಾಷೆಗೆ ನರಸಿಂಹ ಮೆಹತರ ಮನೆಯ ವಿಳಾಸ ಕೊಟ್ಟರು. ಭಕ್ತರು ನರಸಿಂಹ ಮೆಹತರ ಬಳಿ ಹೋಗಿ-ನಿಮಗೆಷ್ಟು ಹಣ ಬೇಕೋ ನಮ್ಮಿಂದ ತೆಗೆದುಕೋ. ನಮಗೆ ದ್ವಾರಕೆಯಲ್ಲಿ ಯಾವನ ಹೆಸರಿಗಾದರೂ ಹುಂಡಿ ಬರೆದುಕೊಡಿ ಎಂದು ಬೇಡಿದರು.

ನರಸಿಂಹ ಮೆಹತ "ಇವರು ಭಕ್ತರು. ಇವರ ಕೆಲಸವನ್ನು ಖಂಡಿತವಾಗಿ ಮಾಡಬೇಕು" ಎಂದು ಯೋಚಿಸಿದರು. ಆದರೆ ದ್ವಾರಕೆಯಲ್ಲಿ ಪರಿಚಿತ ವ್ಯಕ್ತಿ ಯಾರೂ ಇಲ್ಲ. ಸ್ವಲ್ಪ ಆಲೋಚಿಸಿ ದ್ವಾರಕಾಧೀಶ ಶ್ಯಾಮಲ ಶಾಹ (ಕೃಷ್ಣನ ಹೆಸರು) ಸೇಠಿನ ಹೆಸರಿನಲ್ಲಿ ಏಳುನೂರು ರೂಪಾಯಿಯ ಒಂದು ಹುಂಡಿಯನ್ನು ಬರೆದರು.

ಭಕ್ತರು ಹುಂಡಿ ಬರೆಸಿದನಂತರ ದ್ವಾರಕೆಗೆ ಹೋದರು. ಮಿಂದು ಉಂಡು ಅವರು ಶ್ಯಾಮಲ ಶಾಹ ಸೇಠಿನ ಅನ್ವೇಷಣೆಗೆ ಹೊರಟರು. ಬಹಳ ಹೊತ್ತು ಹುಡುಕಾಡಿದರು. ಆದರೆ ಆ ಹೆಸರಿನ ಯಾವ ಸೇಠೂ ಇಲ್ಲವೆಂದು ತಿಳಿದಾಗ ಅವರಿಗೆ ಜಂಘಾಬಲವೇ ಉಡುಗಿದಂತಾಯಿತು. ಜುನಾಗಢಕ್ಕೆ ಅವರು ಹಿಂತಿರುಗಲು ಹೊರಟಾಗ ಶ್ರೀಕೃಷ್ಣ ನರಸಿಂಹ ಮೆಹತರ ಕಷ್ಟವನ್ನು ಅರಿತು ಸೇಠಿನ ರೂಪದಲ್ಲಿ ರಸ್ತೆಯಲ್ಲಿ ದರ್ಶನವಿತ್ತ ಮತ್ತು ಹುಂಡಿಯ ಹಣವನ್ನು ಕೊಟ್ಟು ತಾನು ಮಾಡಬಹುದಾದ ಸೇವೆ ಇದ್ದರೆ ತಿಳಿಸೆಂದು ಕೇಳಿದ.

ಹುಂಡಿಯ ಹಣ ದೊರಕಲು ಭಕ್ತರಿಗೆ ಬಹಳ ಆನಂದವಾಯಿತು. ನರಸಿಂಹ ಮೆಹತರಿಗೆ ಈ ವಿಷಯ ತಿಳಿದಾಗ ಗದ್ಗದರಾಗಿ ಭಕ್ತ ವಾತ್ಸಲ್ಯದ ಗುಣಗಾನ ಮಾಡಿದರು.

ನರಸಿಂಹ ಮೆಹತರಿಗೆ ಒಬ್ಬ ಪುತ್ರಿ ಮತ್ತು ಒಬ್ಬ ಪುತ್ರರಿದ್ದರು. ಬಾಲಕಿಯ ಹೆಸರು ಕುಂವರಬಾಯಿ ಮತ್ತು ಬಾಲಕನ ಹೆಸರು ಶಾಮಲದಾಸನೆಂದು. ಪುತ್ರಿಯ ವಿವಾಹವನ್ನು ನರಸಿಂಹ ಮೆಹತರು ನೆರವೇರಿಸಿದರು. ನಾಲ್ಕು

ವರ್ಷಗಳಾದನಂತರ ಮಗಳು ಗರ್ಭವತಿಯಾದಳು ಈ ಸಮಯದಲ್ಲಿ ತಂದೆಯ ಮನೆಯಿಂದ ಮಗಳಿಗೆ ಉಡುಗೊರೆ ಕಳುಹಿಸುವುದು ಗುಜರಾತಿನ ವಾಡಿಕೆ. ಗುಜರಾತಿನಲ್ಲಿ ಇದನ್ನು ಮಾಮೇರು ಎನ್ನುವರು. ಮಗಳ ಮನೆಯುವರು ನರಸಿಂಹ ಮೆಹತರ ಬಡತನವನ್ನು ತಿಳಿದು ಅಪಹಾಸ್ಯ ಮಾಡಲು ವಸ್ತುಗಳ ದೊಡ್ಡ ಪಟ್ಟಿಯೊಂದನ್ನು ಕಳುಹಿಸಿದರು

ನರಸಿಂಹ ಮೆಹತರ ಬಳಿ ಒಂದು ಕುರುಡುಗಾಸೂ ಇರಲಿಲ್ಲವಾದರೂ ಶ್ಯಾಮಲ ದೇವರು ಸಹಾಯ ಮಾಡುವನೆಂದು ನಂಬಿದ್ದರು. ಸಾಧುಗಳ ಗುಂಪಿನ ಜೊತೆ ನರಸಿಂಹ ಮೆಹತರು ಪುತ್ರಿಯ ಹಳ್ಳಿಗೆ ತಲುಪಿದರು. ಆಕೆ ತಂದೆಯನ್ನು ನೋಡಿ ಜೋರಾಗಿ ಅಳುತ್ತಾ–ನಿಮ್ಮ ಬಳಿ ಹಣವಿಲ್ಲ ಏಕೆ ಬಂದಿರೆಂದು ಕೇಳಿದಳು. ಅವರು ಮಗಳಿಗೆ ಸಮಾಧಾನ ಮಾಡಿ ಬೇಕಾದ ಪದಾರ್ಥಗಳ ಪಟ್ಟಿಯೊಂದನ್ನು ಅತ್ತೆಯಿಂದ ತೆಗೆದುಕೊಂಡು ಬಾ ಎಂದು ತಿಳಿಸಿದರು.

ಅತ್ತೆ ಇದನ್ನು ಕೇಳಿ ಎಷ್ಟು ವಸ್ತುಗಳು ಅವಶ್ಯವಾಗಿದ್ದವೋ ಅದಕ್ಕೆ ಹತ್ತರಷ್ಟು ಪದಾರ್ಥಗಳ ಪಟ್ಟಿಯನ್ನು ಮಾಡಿಸಿದಳು. ಸಾವಿರಾರು ಜೋಡಿ ಬಟ್ಟೆ, ವಿಧವಿಧವಾದ ಸೀರೆಗಳು ಮತ್ತು ಸಾಮಾನುಗಳನ್ನು ಬರೆದು ಕೊನೆಯಲ್ಲಿ ಏನೂ ಸಾಧ್ಯವಿಲ್ಲದಿದ್ದರೆ ಎರಡು ದೊಡ್ಡ ಕಲ್ಲುಗಳನ್ನಾದರೂ ತೆಗೆದುಕೊಂಡು ಬರುವುದು ಎಂದು ಬರೆಸಿದ್ದಳು. ಬಡ ತಂದೆಯಿಂದ ಇನ್ನೇನನ್ನು ತಾನೆ ಆಕೆ ನಿರೀಕ್ಷಿಸಿಯಾಳು?

ಈ ಹೊಸ ಆಪತ್ತಿನಿಂದ ಪಾರಾಗಲು ನರಸಿಂಹ ಮೆಹತರು ಭಗವತ್ ಕೀರ್ತನೆಯಲ್ಲಿ ಮುಳುಗಿದರು. ಅತ್ತ ಭಕ್ತನ ಮೊರೆ ಕೇಳಿ ಭಕ್ತವತ್ಸಲ ಶ್ರೀಕೃಷ್ಣ ಶಾಮಲ ಶಾಹ ಸೇಠಿನ ರೂಪದಲ್ಲಿ ಎಲ್ಲಾ ವಸ್ತುಗಳ ಜೊತೆ ಮಗಳ ಮನೆಗೆ ಬಂದು ತಲುಪಿದ. ಬರಿಸಿದ್ದನ್ನೆಲ್ಲಾ ಕೊಟ್ಟಾದ ನಂತರ ಕೊನೆಯಲ್ಲಿ ಎರಡು ಕಲ್ಲುಗಳನ್ನು ಅತ್ತೆಯ ಕೈಗೆ ಕೊಡಲು ಹೋದಾಗ ಅವು ದೇವರ ಕರಸ್ಪರ್ಶದಿಂದ ಸ್ವರ್ಣವಾದವು.

ನರಸಿಂಹ ಮೆಹತರ ವಿಷಯವಾಗಿ ಇನ್ನೊಂದು ಕಥೆ ಪ್ರಚಲಿತವಾಗಿದೆ. ಅವರ ಪುತ್ರ ಶಾಮಲದಾಸನ ವಿವಾಹವೂ ಇದೇ ರೀತಿ ದೇವರ ಕೃಪೆಯಿಂದ ನೆರವೇರಿತು. ಇದರ ಬಗ್ಗೆ ನರಸಿಂಹರು ತಮ್ಮ ಗೀತೆಗಳಲ್ಲಿ ವಿಸ್ತಾರವಾಗಿ ಹೇಳಿದ್ದಾರೆ.

ಶ್ಯಾಮಲನಿಗೆ ಹನ್ನೆರಡು ವರುಷವಾದಾಗ ತಾಯಿ ಮಗನಿಗೆ ವಿವಾಹ ಮಾಡಬೇಕೆಂದು ಯೋಚಿಸಿದಳು. ಆದರೆ ಹಣವಿಲ್ಲದೆ ಮದುವೆ ಆಗುವುದೆಂತು? ಆದರೆ ನರಸಿಂಹರು ಮಾತ್ರ ದೇವರು ಮದುವೆಗೆ ಬಂದು ಸಹಾಯ ಮಾಡುವ ರೆಂದು ನಂಬಿದ್ದರು.

ವಿಧಿವಶಾತ್ ಆಗಲೇ ಬಡನಗರದ ರಾಜ ವಜೀರಮದನ ಮೆಹತರ ಪುತ್ರಿಗೂ ಎಂಟು ವರುಷಗಳಾಗಿದ್ದುವು. ಹಿಂದಿನ ಶಿಷ್ಟಾಚಾರದಂತೆ ಯೋಗ್ಯ ವರ ನನ್ನು ಹುಡುಕಲು ಪುರೋಹಿತರನ್ನು ಕಳುಹಿಸಲಾಯಿತು. ಪುರೋಹಿತರು ಜುನಾಗಢಿಗೆ ಬಂದರು. ಅನೇಕ ಮನೆಗಳನ್ನು ಶೋಧಿಸಿದರೂ ಯೋಗ್ಯ ವರ ದೊರಕಲಿಲ್ಲ. ಅವರು ಹಿಂತಿರುಗುವುದರಲ್ಲಿದ್ದರು. ಅಷ್ಟರಲ್ಲಿ ಒಬ್ಬ ಹಾಸ್ಯಕ್ಕೆ ನರಸಿಂಹ ಮೆಹತರ ಪುತ್ರನ ಕಡೆ ಕೈ ತೋರಿಸಿದ. ಪುರೋಹಿತರು ನರಸಿಂಹ ಮೆಹತರವರ ಭಕ್ತಿ ಮತ್ತು ಸದ್ಗುಣದಿಂದ ಪ್ರಭಾವಿತರಾಗಿ ಅವರ ಮಗನಿಗೆ ತಿಲಕವಿಟ್ಟು ಮದುವೆ ಮಾಡಿಸುವುದಾಗಿ ಭರವಸೆಯಿತ್ತರು.

ಪುರೋಹಿತರಿಂದ ಈ ವಿಷಯ ತಿಳಿದು ಹುಡುಗಿಯ ತಂದೆತಾಯಿ ಅತಿ ದುಃಖಿತರಾಗಿ–"ನೀವು ನಮ್ಮ ಕುಲ ಪುರೋಹಿತರಾಗಿ ಏನು ಮಾಡಿದಿರಿ. ನರಸಿಂಹ ಮೆಹತ ಬಹಳ ಬಡವ" ಎಂದರು.

ಪುರೋಹಿತರು ಎಲ್ಲರನ್ನೂ ಸಮಾಧಾನ ಮಾಡಿ ಮದುವೆ ದಿನವನ್ನು ನಿಶ್ಚಯಿಸಿ ನರಸಿಂಹ ಮೆಹತರಿಗೆ ಸೂಚನೆಯಿತ್ತರು. ಲಗ್ನ ನಿಶ್ಚಯವಾಗಲು ನರಸಿಂಹ ಮೆಹತರು ಸಹಾಯಕ್ಕಾಗಿ ದ್ವಾರಕೆಗೆ ಹೊರಟರು. ದೇವರಿಗೆ ಮದುವೆಗೆ ಬರಲು ಆಮಂತ್ರಣವಿತ್ತು ಸಹಾಯ ಮಾಡಬೇಕೆಂದು ಬೇಡಿ ಹಿಂತಿರುಗಿದರು. ಪ್ರಭುವು ಶ್ಯಾಮಲ ಶಾಹ ಸೇಠಿನ ರೂಪದಲ್ಲಿ ದಿಬ್ಬಣದ ಜೊತೆಯಲ್ಲಿದ್ದರು. ಹನ್ನೆರಡು ದಿನಗಳಾದನಂತರ ದಿಬ್ಬಣ ವೈಭವಯುತವಾಗಿ ಬಡನಗರವನ್ನು ತಲಪಿದಾಗ ಅದನ್ನು ನೋಡಿ ಮದನ ಮೆಹತರ ಗರ್ವ ಚೂರುಚೂರಾಯಿತು. ಹೀಗೆ ರಾಜವೈಭವದಿಂಡ ಆ ಭಕ್ತರ ಪುತ್ರನ ವಿವಾಹ ನೆರವೇರಿತು. ಮೀರಾಬಾಯಿ ವಿರೋಧಿಗಳಿಂದ ಕಷ್ಟಗಳನ್ನು ಅನುಭವಿಸಿದಂತೆ ನರಸಿಂಹ ಮೆಹತರೂ ಅನೇಕ ತೊಂದರೆಗಳನ್ನು ಅನುಭವಿಸಬೇಕಾಯಿತು.

ನರಸಿಂಹ ಮೆಹತರ ಜೀವನದಲ್ಲಿ ನಡೆದ ಘಟನೆಗಳ ಚಮತ್ಕಾರದ ಕಥೆ

ಜುನಾಗಢದ ರಾಜನ ಕಿವಿಗೆ ಬಿದ್ದಿತು. ಕೆಲವು ನೀಚ ದರಬಾರಿಗಳು ರಾಜನಿಗೆ ನರಸಿಂಹ ಮೆಹತ ಕಪಟಿ. ಆತ ಆಚಾರ ವ್ಯವಹಾರಗಳನ್ನೆಲ್ಲಾ ಬಿಟ್ಟಿರುವ ಹರಿಜನರ ಜೊತೆ ಕುಳಿತುಕೊಳ್ಳುವನು. ನೀವು ಅವನನ್ನು ಪರೀಕ್ಷಿಸಿ ಶಾಮಲ ಶಾಹ ಹೇಗೆ ಕಾಪಾಡುವನೋ ನೋಡೋಣ ಎಂದು ಚಾಡಿ ಹೇಳಿದರು.

ರಾಜ ನರಸಿಂಹ ಮೆಹತರನ್ನು ಹಿಡಿಸಿ ನಿನ್ನ ದೇವರು ಸತ್ಯವಾದರೆ ಸಹಾಯಕ್ಕೆ ಬರಲಿ. ಬೆಳಗ್ಗೆ ನಿನ್ನ ಕತ್ತಿನಲ್ಲಿ ಹೂವಿನ ಹಾರ ಹಾಕದಿದ್ದರೆ ನಿನ್ನ ಪ್ರಾಣ ಉಳಿಯುವುದು ಕಷ್ಟವೆಂದು ತಿಳಿಸಿದನು.

ನರಸಿಂಹ ಮೆಹತರಿಗೆ ದೇವರಲ್ಲಿ ಅಚಲವಾದ ನಂಬಿಕೆ ಇದ್ದಿತು. ಆರ್ತ ಸ್ವರದಲ್ಲಿ ಹಾಡುತ್ತಾ ಚಪ್ಪಾಳೆಯೊಡನೆ ಹರಿಭಜನೆ ಮಾಡಿದರು. ದೇವರು ಭಕ್ತನ ಮಾನವನ್ನು ಕಾಪಾಡಿ ಅಂತರಿಕ್ಷದಿಂದಲೇ ನರಸಿಂಹ ಮೆಹತನ ಕುತ್ತಿಗೆಗೆ ಒಂದು ಹಾರವನ್ನು ಹಾಕಿದರು. ಈ ಚಮತ್ಕಾರವನ್ನು ನೋಡಿ ನಾಲ್ಕು ದಿಕ್ಕಿನಿಂದಲೂ ಚಪ್ಪಾಳೆಯ ಧ್ವನಿಯಾಯಿತು.

ನರಂಸಿಹ ಮೆಹತರು ಮೀರಾಬಾಯಿಯಂತೆ ತಮ್ಮ ಜೀವನದಲ್ಲಿ ನಡೆದ ಚಮತ್ಕಾರ ಪೂರ್ಣವಾದ ಘಟನೆಗಳನ್ನು ತಮ್ಮ ಗೀತೆಗಳಲ್ಲಿ ಉಲ್ಲೇಖಿಸುವರು. ಅವರ ಮಧುರ ಗೀತೆಗಳನ್ನು ಗುಜರಾತಿನ ಮನೆ ಮನೆಯಲ್ಲಿ ಹಾಡುವರು ಮತ್ತು ಅವರ ಭಗವದ್ಭಕ್ತಿಯ ಸಂಗತಿಯನ್ನು ಜನಗಳು ಉತ್ಸಾಹದಿಂದ ಕೇಳುವರು.

ಕಬೀರ

ಸಂತ ಕಬೀರನ ಜನನವು ಸುಮಾರು ೧೩೯೮ನೆಯ ಇಸವಿಯಲ್ಲಿ (ಕ್ರಿ.ಶ. ೧೪೫೫) ಆಯಿತು. ಇವನ ಜನ್ಮದ ವಿಚಾರವಾಗಿ ಅನೇಕ ಕಥೆಗಳು ಪ್ರಚಲಿತವಾಗಿವೆ. ಒಂದು ಕಿಂವದಂತಿ ಹೇಳುವುದೇನೆಂದರೆ "ಕಾಶಿಯಲ್ಲಿ ನೀರೂ ಎಂಬ ನೆಯ್ಗೆಯವನಿದ್ದನು. ಇವನ ಹೆಂಡತಿಯ ಹೆಸರೂ ನೀಮಾ ಎಂದು. ಇವರಿಗೆ ಮಕ್ಕಳಿರಲಿಲ್ಲ. ಇಬ್ಬರೂ ಪ್ರತಿದಿನವೂ ಪ್ರಾರ್ಥನೆ ಮಾಡುತ್ತಿದ್ದರು, ಪೀರರ ಬಳಿಗೆ ಹೋಗುತ್ತಿದ್ದರು. ಹರಸಿಕೊಳ್ಳುತ್ತಿದ್ದರು; ಆದರೆ ಅವರಿಗೆ ಸಂತಾನದ ಸುಖ ಪ್ರಾಪ್ತವಿರಲಿಲ್ಲವೋ, ಏನೋ! ಮಕ್ಕಳೇ ಆಗಲಿಲ್ಲ. ಕಡೆಗೆ ಒಂದು ದಿವಸ ನೀರೂ ಒಂದು ವಿಚಿತ್ರ ಸ್ವಪ್ನ ನೋಡಿದನೆಂದು ಹೇಳುತ್ತಾರೆ. ಅವನನ್ನು ಯಾರೋ ಸಂಬೋಧಿಸಿ ಹೀಗೆ ಹೇಳುತ್ತಿದ್ದಂತೆ ಭಾಸವಾಯಿತು—"ನೀರೂ, ನೀನು ಪುತ್ರನನ್ನು ಇಚ್ಛಿಸುವೆಯೋ? ಒಳ್ಳೆಯದು, ನಾಳೆ ಬೆಳಿಗ್ಗೆ ಬೇಗ ಎದ್ದು ನೀನು ಲಹರ್‌ತಾರಾ ಕೆರೆಯ ದಂಡೆಗೆ ಹೋಗು. ಅಲ್ಲಿ ಕೆರೆಯಲ್ಲಿ ಕಮಲ ಪುಷ್ಪದ ಮೇಲೆ ಮಲಗಿರುವ ಶಿಶುವೊಂದು ದೊರಕುತ್ತದೆ. ಅದನ್ನು ನೀನು ನಿನ್ನ ಸ್ವಂತ ಮಗುವೆಂದು ತಿಳಿದು ಸಾಕುವುದು."

ಪ್ರಾತಃಕಾಲ ನೀರೂವಿಗೆ ಎಚ್ಚರವಾದಾಗ ಅವನು ನೀಮಾಳಿಗೆ ಸ್ವಪ್ನದ ವಿಚಾರವಾಗಿ ತಿಳಿಸಿದನು. ಇಬ್ಬರೂ ಓಡಿ ಲಹರ್‌ತಾರಾ ಕೆರೆಯ ತಟಕ್ಕೆ ಬಂದರು. ಅಲ್ಲಿ ಕಮಲ ಪುಷ್ಪದ ಮೇಲೆ ನಿಜವಾಗಿಯೂ ಒಂದು ಹಸುಳೆ ಮಗು ಮಲಗಿರುವುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಅವರು ಅದನ್ನು ಎತ್ತಿಕೊಂಡು ಮನೆಗೆ ಹೋದರು. ಈ ಬಾಲಕನೇ ಮುಂದೆ ಕಬೀರನೆಂಬ ಹೆಸರಿನಿಂದ ಪ್ರಸಿದ್ಧನಾದ.

ಇನ್ನೊಂದು ಕಥೆಯಿದೆ. ಒಬ್ಬ ಬ್ರಾಹ್ಮಣನು ತನ್ನ ವಿಧವೆಯಾದ ಮಗಳೊಡನೆ ಗಂಗಾ ಸ್ನಾನ ಮಾಡಲು ಕಾಶಿಗೆ ಬಂದಿದ್ದ. ಒಂದು ದಿನ ಗಂಗಾ ಘಾಟಿನ ಮೇಲೆ ಅವನು ಪ್ರಸಿದ್ಧರಾದ ಮಹಾತ್ಮಾ ಸ್ವಾಮಿ ರಾಮಾನಂದರನ್ನು

ನೋಡಿ ಅವರಿಗೆ ನಮಸ್ಕಾರ ಮಾಡಿದ. ಸ್ವಾಮಿ ರಾಮಾನಂದರು ಆ ಬ್ರಾಹ್ಮಣನ ಮಗಳನ್ನು ನೋಡಿ-ಮಗಳೆ, ಪುತ್ರವತಿಯಾಗು-ಎಂದು ಆಶೀರ್ವಾದ ಮಾಡಿದರು.

ಅವರ ಆಶೀರ್ವಾದವನ್ನು ಕೇಳಿ ಬ್ರಾಹ್ಮಣನು ಬೆಚ್ಚಿಬಿದ್ದನು ಮತ್ತು ಭಿನ್ನವಿಸಿಕೊಂಡನು-ಮಹಾನುಭಾವರೆ, ನನ್ನ ಮಗಳು ವಿಧವೆ. ತಾವು ಪುತ್ರವತಿಯಾಗೆಂದು ಇವಳಿಗೆ ಏಕೆ ಆಶೀರ್ವಾದವಿತ್ತಿರಿ?

ಸ್ವಾಮಿ ರಾಮಾನಂದರು ಹೇಳಿದರು-ಈಗ ಆಶೀರ್ವಾದವನ್ನೇನೋ ನಾನು ಕೊಟ್ಟುಬಿಟ್ಟಿದ್ದೇನೆ. ಅದು ಎಂದಿಗೂ ಸುಳ್ಳಾಗಲಾರದು. ಆದರೆ ಈ ಹೆಣ್ಣಿನ ಮಗನು ಬಹಳ ದೊಡ್ಡ ಸಂತನಾಗುವನೆಂಬುದನ್ನು ಮರೆಯಬೇಡಿ.

ಇದಾದ ಸ್ವಲ್ಪ ದಿವಸಗಳ ಮೇಲೆ ಆ ಬ್ರಾಹ್ಮಣ ಪುತ್ರಿಗೆ ಮಗು ಹುಟ್ಟಿತು. ವಿಧವೆಯಾದುದರಿಂದ ಅವಳು ಲೋಕಲಜ್ಜೆಯಿಂದ ಮಗುವನ್ನು ಲಹರ್‌ತಾರಾ ಕೆರೆಯ ದಡದಲ್ಲಿ ಮುಚ್ಚಿಟ್ಟುಬಿಟ್ಟಳು ಮತ್ತು ದುಃಖಿತಳಾಗಿ ಅಲ್ಲಿಂದ ಹೊರಟು ಹೋದಳು. ಸೌಭಾಗ್ಯವಶದಿಂದ ಇದಾದ ಸ್ವಲ್ಪಹೊತ್ತಿಗೆ ನೀರೂ ಎಂಬ ನೆಯ್ಗೆಯವನು ತನ್ನ ಹೆಂಡತಿ ನೀಮಾ ಎಂಬುವಳ ಜೊತೆಯಲ್ಲಿ ಅಲ್ಲೇ ಹೋಗುತ್ತಿದ್ದನು. ಇಬ್ಬರೂ ಕೆರೆಯ ದಂಡೆಯಲ್ಲಿ ಚಿಕ್ಕ ಮಗು ಒಂದು ಬಿದ್ದಿರುವುದನ್ನು ಕಂಡು ಅದನ್ನು ಎತ್ತಿಕೊಂಡು ಅತೀವ ಪ್ರಸನ್ನರಾಗಿ ಮನೆಗೆ ಬಂದರು. ನೀರೂವಿಗೆ ಸ್ವಂತ ಮಕ್ಕಳಿರಲಿಲ್ಲವಾದುದರಿಂದ ಅವನು ಈ ಮಗುವನ್ನೇ ತನ್ನ ಮಗುವಿನಂತೆ ಸಾಕಿದನು.

ಕಬೀರನ ಬಗ್ಗೆ ಇವು ಕೇವಲ ಕಲ್ಪಿತ ಕಥೆಗಳು. ಕಬೀರನ ಜನ್ಮವು ಎಲ್ಲಿಯಾದರೂ ಆಗಿರಲಿ, ಅವನ ಪಾಲನೆ-ಪೋಷಣೆಗಳು ನೀರೂ ಎಂಬ ನೆಯ್ಗೆಯವನ ಮನೆಯಲ್ಲಿ ಆದುವು ಎಂಬುದು ಮಾತ್ರ ನಿಜ. ಕಬೀರನು ತನ್ನ ಪದಗಳಲ್ಲಿ ತನ್ನನ್ನು ನೆಯ್ಗೆಯವನೆಂದು ಹೇಳಿಕೊಂಡಿದ್ದಾನೆ.

ಕಬೀರನು ಸ್ವಾಮಿ ರಾಮಾನಂದರನ್ನು ತನ್ನ ಗುರುವೆಂದು ತಿಳಿದುಕೊಂಡಿದ್ದನು. ರಾಮಾನಂದರು ಆಗ ಕಾಶಿಯ ಪ್ರಸಿದ್ಧ ಹಿಂದೂ ಸಂತರಾಗಿದ್ದರು. ಕಬೀರನು ಅವರಿಂದ ಗುರುಮಂತ್ರ ಉಪದೇಶ ಪಡೆಯಬೇಕೆಂದು ಇಚ್ಛಿಸುತ್ತಿದ್ದನು. ಕಬೀರನು ಚಿಕ್ಕವನಾಗಿದ್ದಾಗಲೇ ಅವನಲ್ಲಿ ದೈವಭಕ್ತಿಯುಂಟಾಯಿತು.

ಸ್ವಾಮಿ ರಾಮಾನಂದರು ಒಬ್ಬ ಮುಸಲ್ಮಾನನಿಗೆ ಉಪದೇಶ ಕೊಡಲಾರರು ಎಂದು ಅವನಿಗೆ ತಿಳಿದಿತ್ತು. ಅವನು ಒಂದು ಉಪಾಯ ಮಾಡಿದನು. ಸ್ವಾಮಿಜಿಯವರು ಗಂಗಾಸ್ನಾನ ಮುಗಿಸಿ ಹಿಂತಿರುಗುತ್ತಿರುವಾಗ ಕಬೀರನು ಗಂಗಾನದಿಯ ಸೋಪಾನದ ಮೇಲೆ ಮಲಗಿಬಿಟ್ಟನು. ಬೆಳಗಿನ ಜಾವದ ವೇಳೆ ಪೂರ್ತಿ ಬೆಳಕಾಗಿರಲಿಲ್ಲ. ರಾಮಾನಂದರು ಸ್ನಾನ ಮುಗಿಸಿಕೊಂಡು ಹಿಂತಿರುಗುತ್ತಿದ್ದರು. ಮೆಟ್ಟಿಲುಗಳನ್ನು ಏರುತ್ತ ಅವರ ಪಾದವು ಆಕಸ್ಮಾತ್ತಾಗಿ ಕಬೀರನಿಗೆ ತಗುಲಿತು. ಅವರು "ರಾಮು ! ರಾಮು !" ಎಂದು ಹೇಳಿದರು.

ಕಬೀರನು ಇದನ್ನೇ ಗುರುಮಂತ್ರವೆಂದು ತಿಳಿದನು. ಅವನೂ ರಾಮು ರಾಮು ಎಂದು ಜಪಿಸತೊಡಗಿದನು.

ಇದೇ ರಾಮಾನಂದರಿಂದ ಕಬೀರನು ದೀಕ್ಷೆ ಹೊಂದಿದ ಕಥೆ.

ಸಂತ ಕಬೀರನ ವಿವಾಹದ ವಿಚಾರದಲ್ಲೂ ಎರಡು ಅಭಿಪ್ರಾಯಗಳಿವೆ. ಕಬೀರ-ಪಂಥಿಗಳು ಅವನು ಜೀವನ ಪರ್ಯಂತ ಅವಿವಾಹಿತನಾಗಿದ್ದನೆಂದು ಹೇಳುತ್ತಾರೆ. ಆದರೆ ಕಬೀರನ ಪದಗಳಲ್ಲಿ ಅನೇಕ ಸರ್ತಿ "ಲೋಮಿ" ಮತ್ತು "ಧನಿಯಾ" ಎಂಬ ಹೆಸರುಗಳು ಬರುತ್ತವೆ "ಲೋಮಿ" ಕಬೀರನ ಹೆಂಡತಿಯ ಹೆಸರೆಂದು ತಿಳಿದುಕೊಳ್ಳಬಹುದು. ಕಬೀರನಿಗೆ ಕಮಾಲನೆಂಬ ಹೆಸರಿನ ಒಬ್ಬ ಮಗ ಮತ್ತು ಕಮಾಲಿ ಎಂಬ ಹೆಸರಿನ ಮಗಳು ಇದ್ದರೆಂದು ಹೇಳುತ್ತಾರೆ.

ಕಬೀರನು ಪ್ರಾರಂಭದಿಂದಲೇ ಸ್ವೇಚ್ಛಾ ವೃತ್ತಿಯುಳ್ಳವನು. ಅವನಿಗೆ ತನ್ನ ಊಟ ಮತ್ತು ಬಟ್ಟೆಬರೆಗಳ ಚಿಂತೆ ಕೂಡ ಇರಲಿಲ್ಲ. ಅವನು ತಮ್ಮ ತಂದೆ ನೆಯ್ಗೆಯವನಾದ ನಿರೂವಿನಂತೆ ನೆಯ್ಯುವ ವೃತ್ತಿಯನ್ನು ಅವಲಂಬಿಸಿದನು ಮತ್ತು ಬಟ್ಟೆ ನೆಯ್ದು ತನ್ನ ಆಜೀವಿಕೆ ಸಂಪಾದಿಸಿಕೊಳ್ಳುತ್ತಿದ್ದನು. ಕಬೀರನು ಭಿಕ್ಷಾಟನೆ ಮಾಡಿ ಹೊಟ್ಟೆಹೊರೆಕೊಳ್ಳುವ ಸಂತನಾಗಿರಲಿಲ್ಲ. ಅವನು ಏನಾದರೂ ಕೆಲಸ ಮಾಡಿ ತನ್ನ ಜೀವನ ನಡೆಸುತ್ತಿದ್ದನು ಮತ್ತು ಪುರಸೊತ್ತಿನ ಸಮಯವನ್ನು ಭಗವಂತನ ನಾಮಸ್ಮರಣೆಯಲ್ಲಿ ಕಳೆಯುತ್ತಿದ್ದನು. ಧರ್ಮದ ಬಾಹ್ಯಾಡಂಬರ ಕಂಡರೆ ಆವನಿಗೆ ಆಗುತ್ತಿರಲಿಲ್ಲ. ಸ್ವಾರ್ಥಹೀನರಾದ ವ್ಯಕ್ತಿಗಳಿಗೆ ಮತ್ತು ಲೋಕ ಸೇವೆಯ ಭಾವನೆಯುಳ್ಳವರಿಗೆ ಯಾವಾಗಲೂ ಇತರರ ಚಿಂತೆ ಹತ್ತಿರುತ್ತದೆ. ಅವನು ಯಾವಾಗಲೂ ಹೀಗೆ ಹಾಡುತ್ತಿದ್ದನು.

ದೇವರೆ, ನನ್ನ ಕುಟುಂಬಕ್ಕಾಗುವಷ್ಟು ದಯಪಾಲಿಸು।
ನಾನೂ ಹಸಿದಿರದೆ ಇರುವಂತೆ ಸಾಧುಗಳೂ ಹಸಿದಿರದಂತೆ ಮಾಡು॥
ಸಾಧುವು ಸಂಗ್ರಹ ಮಾಡುವುದಿಲ್ಲ, ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಾನೆ।
ಅವನ ಹಿಂದುಮುಂದೆ ಹರಿ ನಿಂತಿರುತ್ತಾನೆ, ಏನು ಕೇಳಿದರೂ ಕೊಡುತ್ತಾನೆ॥

ಕಬೀರನ ಭಕ್ತಿ ಜ್ಞಾನದ ಭಕ್ತಿ, ಆತನು ಗುಡಿಗೆ ಅಥವಾ ಮಸೀದಿಗೆ ಹೋಗಲು ಇಷ್ಟಪಡುತ್ತಿರಲಿಲ್ಲ. ಅವನು ದೇವರನ್ನು ಘಟ ಘಟ ವ್ಯಾಪಿಯೆಂದು ತಿಳಿದಿದ್ದನು. ದೋಷ ಎಲ್ಲಿದ್ದರೂ ಅವನು ಸ್ಪಷ್ಟವಾಗಿ ಹೇಳಿಬಿಡುತ್ತಿದ್ದನು. ಮೂದಲಿಸಿ ಮಾತನಾಡಲು ಅವನು ಯಾವತ್ತೂ ಭಯಪಡುತ್ತಿರಲಿಲ್ಲ. ಮುಸಲ್ಮಾನರನ್ನು ಕುರಿತು ಹೀಗೆ ಹೇಳುತ್ತಿದ್ದರು :—

ಕಲ್ಲುಮಣ್ಣನ್ನು ಸಂಗ್ರಹಿಸಿ ಮಸೀದಿ ನಿರ್ಮಿತವಾಗಿದೆ।
ಅದರ ಮೇಲೇರಿ ಮುಲ್ಲಾ ಅಜಾನ್ ಕೂಗುತ್ತಾನೆ. ಭಗವಂತನು
ಕಿವುಡನಾಗಿ ಬಿಟ್ಟನೇ ?॥

ಹಿಂದುಗಳನ್ನು ಉದ್ದೇಶಿಸಿ ಹೀಗೆ ಹೇಳುತ್ತಿದ್ದರು :—

ಕಲ್ಲನ್ನು ಪೂಜಿಸಿ ಭಗವಂತ ದೊರಕಿದರೆ ನಾನು ಬೆಟ್ಟವನ್ನು ಪೂಜಿಸುವೆನು।
ಅದಕ್ಕಿಂತ ಜಗತ್ತು ಬೀಸಿಕೊಳ್ಳುವುದಕ್ಕೆ ಉಪಯೋಗಿಸುವ ಈ
ಬೀಸುವಕಲ್ಲು ಉತ್ತಮ॥

ಮಹಾತ್ಮಾ ಕಬೀರನಿಗೆ ಧರ್ಮಾಂಧತೆ ಮತ್ತು ಧರ್ಮದ ಆಡಂಬರ–ಅದು ಯಾವ ಧರ್ಮದ್ದೇ ಆಗಿರಲಿ ಇಷ್ಟವಿರಲಿಲ್ಲ. ಅವನು ಮುಸಲ್ಮಾನರು ಮತ್ತು ಹಿಂದುಗಳು ಇಬ್ಬರಲ್ಲಿಯೂ ಇರುವ ಪಾಷಂಡವಾದಿಗಳನ್ನು ನಿಂದಿಸಿ, ಅವರನ್ನು ಗೇಲಿ ಮಾಡಿ ಮೂದಲಿಸುತ್ತಿದ್ದನು. ಅಸತ್ಯ ಮತ್ತು ಅನ್ಯಾಯವನ್ನವನು ಸಹಿಸುವುದಕ್ಕಾಗುತ್ತಿರಲಿಲ್ಲ. ಆದುದರಿಂದ ಯಾವ ಜಾತಿಯ ಜನರು ದಯೆಗೆ ಪಾತ್ರರಾಗಿದ್ದರೋ, ಯಾರು ದಲಿತರಾಗಿದ್ದಾರೋ, ಧರ್ಮದ ಆಡಂಬರದಿಂದ ಯಾರು ದುಃಖಿತರಾಗಿದ್ದರೋ–ಆ ಜಾತಿಯವರೇ ಇವನ ಶಿಷ್ಯರಾದರು. ಸಂತ ಕಬೀರನು ಅಂತಹವರ ಭಾಷೆಯಲ್ಲೇ ಎಲ್ಲವನ್ನೂ ಹೇಳುತ್ತಿದ್ದನು. ಅಸ್ಪೃಶ್ಯತೆ ಮತ್ತು ಸಮಾಜದ ಇತರ ದೋಷಗಳಿಂದ ನರಳುತ್ತಿದ್ದ ಹರಿಜನರಿಗೆ ಕಬೀರನು ಧೈರ್ಯ ಕೊಟ್ಟನು. ಉಚ್ಚ ಜಾತಿಯವರೆಂದು ಹೇಳಿಕೊಳ್ಳುವವರನ್ನು ಅವನು ನಿಂದಿಸುತ್ತಿದ್ದನು. ಆದುದರಿಂದ ನಿಮ್ನ ಜಾತಿಯ ದಲಿತ ಮತ್ತು ಪಿಷ್ಟ ಜನರು ಕಬೀರ

ನನ್ನು ತಮ್ಮ ಸಹಾಯಕನೆಂದು ತಿಳಿದರು. ಇದರಿಂದ ಪಂಡಿತ, ಮುಲ್ಲಾ ಮತ್ತು ಜಾತಿ ಪಂಕ್ತಿಯ ಭೇದವನ್ನು ಪರಿಗಣಿಸುವ ಸಂಕೀರ್ಣ ಹೃದಯದ ಜನರು ಕಬೀರನ ಶತ್ರುಗಳಾದರು.

ಕಬೀರ ಮುಸಲ್ಮಾನರನ್ನು ಹಳಿಯುವುದು ಸಿಕಂದರ್ ಲೋದಿ ಎಂಬ ಮುಸಲ್ಮಾನ್ ರಾಜನಿಗೆ ಸ್ವಲ್ಪವೂ ಸರಿಬೀಳಲಿಲ್ಲವೆಂದೂ, ಅವನು ಒಂದು ಸಾರಿ ಕಬೀರನನ್ನು ಸರಪಣಿಯಿಂದ ಕಟ್ಟುಹಾಕಿಸಿ ಗಂಗಾನದಿಯಲ್ಲಿ ಎಸೆದುಬಿಟ್ಟಿದ್ದ ನೆಂದೂ, ಆದರೆ ಕಬೀರನ ಮೇಲೆ ಈಶ್ವರ ಕೃಪೆಯಿತ್ತು, ಅವನು ಸರಪಣಿಯಿಂದ ಬಿಡಿಸಿಕೊಂಡು ಈಜುತ್ತ ಗಂಗಾನದಿಯಿಂದ ಹೊರಕ್ಕೆ ಬಂದನೆಂದೂ ಕಿಂವದಂತಿ ಯಿದೆ. ಇದೇ ರೀತಿಯಲ್ಲಿ ಕ್ರೋಧೋನ್ಮತ್ತವಾದ ಆನೆಯ ಮುಂದೆ ಸಹ ಅವನನ್ನು ಎಸೆಯಲಾಯಿತೆಂದೂ, ಆನೆ ಕಬೀರನ ಬಳಿಗೆ ಹೋದಾಗ ಅದು ತನಗೆ ತಾನಾಗಿಯೇ ಸುಮ್ಮನಾಗಿ ಅತ್ತ ಕಡೆಗೆ ಹೊರಟುಹೋಯಿತೆಂದೂ ಕಿಂವದಂತಿ ಯಿದೆ.

ಕಬೀರನು ಪ್ರಾಣಿಗಳ ಮೇಲೆಲ್ಲಾ ದಯಾಭಾವವನ್ನು ಇಟ್ಟಿದ್ದನು ಮತ್ತು ಎಲ್ಲರೊಡನೆಯೂ ಪ್ರೇಮದಿಂದ ವರ್ತಿಸುತ್ತಿದ್ದನು ಅವನು ಹೀಗೆ ಹೇಳುತ್ತಾನೆ:—

ಪುಸ್ತಕ ಓದಿ ಓದಿ ಪ್ರಪಂಚ ಸತ್ತಿತು, ಯಾವನೂ ಪಂಡಿತನಾಗಲಿಲ್ಲ।
ಪ್ರೇಮದ ಎರಡೂವರೆ ಅಕ್ಷರ ಓದಿದವನು ನಿಜವಾದ ಪಂಡಿತನಾದನು॥

ಅವನು ಸಮಸ್ತ ಜ್ಞಾನವನ್ನೂ ತನ್ನ ಸರಳವಾದ ಭಾಷಾ ಶೈಲಿಯಲ್ಲೇ ಕೊಟ್ಟನು. ಅವನ ಭಾಷೆಯಲ್ಲಿ ಭೋಜಪುರಿ, ರಾಜಸ್ಥಾನಿ, ಪಂಜಾಬಿ, ಅರಬ್ಬಿ ಮತ್ತು ಪರ್ಷಿಯನ್ ಭಾಷೆಗಳ ಸಂಮಿಶ್ರಣವಿದೆ. ಕಬೀರನ ಭಾಷೆಯಲ್ಲಿ ಬಹಳ ಪ್ರಭಾವವಿದೆ. ಅತ್ಯಂತ ಗಹನ ವಿಷಯವನ್ನೂ ಕೂಡ ಕಬೀರನು ಸರಳವಾಗಿ ಮನಸ್ಸಿನ ಮೇಲೆ ಸಂಪೂರ್ಣ ಪ್ರಭಾವವಾಗುವಂತೆ ಹೇಳಿಬಿಡುತ್ತಿದ್ದನು. ಅವರಿಗೆ ಭಾಷೆಯ ನಿಯಮಗಳು ಬೇಕಿರಲಿಲ್ಲ ಅವರು ಹೇಳಬೇಕೆಂದಿರುವುದನ್ನು ಜನತೆಗೆ ತಲಪಿಸುವುದೇ ಅವರ ಮುಖ್ಯ ಗುರಿಯಾಗಿದ್ದಿತು.

ಭಾಷೆಯಂತೆ ಅವನ ಧರ್ಮ ಕೂಡ ಇತರ ಎಲ್ಲಾ ಸಂಪ್ರದಾಯಗಳ ಸಾರ ವಾಗಿದ್ದಿತು. ಅವನು ಎಲ್ಲಾ ಮತಗಳ ಒಳ್ಳೆಯ ಅಂಶಗಳನ್ನು ತೆಗೆದುಕೊಂಡಿದ್ದನು. ಅವನ ಪದಗಳು ಮತ್ತು ಸಾಖಿಗಳಿಂದ ಅವನು ಹೇಳುವುದು ವೇದೋಪನಿಷತ್ತು

ಗಳಲ್ಲಿ, ಬೌದ್ಧ ಧರ್ಮದಲ್ಲಿ, ಯೋಗಿಗಳ ಯೋಗದಲ್ಲಿ ಮತ್ತು ಮುಸಲ್ಮಾನರ ಸೂಫೀ ಸಂಪ್ರದಾಯದಲ್ಲಿ ಇದೆ ಎಂದು ಭಾಸವಾಗುತ್ತದೆ. ಅವನ ಧರ್ಮ ಭಾವಾತ್ಮಕವೂ ಆಗಿದ್ದಿತು, ಜ್ಞಾನಾತ್ಮಕವೂ ಆಗಿದ್ದಿತು, ಅವನು ತಮ್ಮ ಧರ್ಮ ವನ್ನು "ಸಹಜ" ಎಂದು ಹೇಳಿದನು. ಸಾಮಾನ್ಯ ಮಾನವರು ಹಿಂಬಾಲಿಸಬಹು ದಾದಂತಹ ಧರ್ಮ "ಸಹಜ" ಧರ್ಮ. ಅದು ಹಿಂದೂ ಸಮಾಜದ ಪೀಳಿಗೆಯ ಕಾಲವಾಗಿದ್ದಿತು. ಪಾಷಂಡ ವಾದಿಗಳು ಹೆಚ್ಚುತ್ತಿದ್ದರು. ಈ ಪಾಷಂಡಗಳ ಬಂಧನವನ್ನು ಮುರಿದು "ಸಹಜ ಧರ್ಮ"ದ ಶಿಕ್ಷಣವನ್ನು ಕಬೀರದಾಸನಂತಹ ಭಂಡ ಪ್ರವೃತ್ತಿಯವರೇ ಕೊಡಬಲ್ಲವರಾಗಿದ್ದರು. ಇಲ್ಲದಿದ್ದರೆ ಕಷ್ಟ ಮತ್ತು ನಿಂದೆಗಳ ವಿನಹ ಮತ್ತೇನೂ ಇಲ್ಲದ ಈ ದುರ್ಗಮ ಮಾರ್ಗದಲ್ಲಿ ಹೋಗಲು ಯಾರಲ್ಲಿ ತಾನೆ ಧೈರ್ಯವಿದ್ದಿತು. ಆ ಕಾಲದಲ್ಲಿ ಕಬೀರನು ಹೇಳಿರುವ ಮಾತು ಗಳನ್ನು ಹೇಳುವುದು ಮುಳ್ಳಿನ ಮೇಲೆ ನಡೆಯುವಂತಿದ್ದಿತು. ಆದರೆ ಕಬೀರನು ಧೈರ್ಯಶಾಲಿಯಾಗಿದ್ದನು. ನಿಜವಾದ ಹಿಂದು, ನಿಜವಾದ ಮುಸಲ್ಮಾನ ಎಂದರೆ ಯಾರು ಎನ್ನುವುದನ್ನವನು ಹೀಗೆ ಹೇಳಿದ್ದಾನೆ.

ಯಾವನ ನಂಬಿಕೆ ಸರಿಯಾಗಿದೆಯೋ ಅವನೇ ಹಿಂದು,
ಅವನೇ ಮುಸಲ್ಮಾನ।

ಬ್ರಹ್ಮ ವಿಚಾರವಾಗಿ ಹೇಳುವವನು ಬ್ರಾಹ್ಮಣ,
ರಹಮಾನನನ್ನು ತಿಳಿದವನೇ ಕಾಜಿ॥

ಕಬೀರನು ನಿಜವಾದ ಜ್ಞಾನಿ ಮತ್ತು ಭಕ್ತ. "ದೇವರು ಒಬ್ಬನೆ, ಹೆಸರು ಗಳು ಬೇರೆ ಬೇರೆ ಇದ್ದರೆ ವ್ಯತ್ಯಾಸವಾಗುವುದಿಲ್ಲ. ರಾಮನನ್ನು ಅಥವಾ ರಹೀಮ ನನ್ನು, ಎರಡೂ ಆ ಪರಮಾತ್ಮನಿಗೇ ಅನ್ವಯಿಸುತ್ತವೆ. ಅವನನ್ನೇ ಪೂಜಿಸ ಬೇಕು." ಅವನು ಪ್ರೇಮ, ಸತ್ಯ, ಮತ್ತು ಸೇವೆ ಇವುಗಳ ಪ್ರಚಾರದಲ್ಲಿ ನಿರತ ರಾಗಿ ಭಗವಂತನ ಹೆಸರನ್ನು ನಿರಂತರ ಜಪಿಸುತ್ತಿದ್ದನು. ಅವನು ಒಂದೊಂದು ವೇಳೆ ಭಗವಂತನ ವಧುವಾಗಿ ಬಿಡುತ್ತಿದ್ದ; ಮತ್ತೊಮ್ಮೆ ಭಗವಂತನನ್ನು ತಾಯಿಯ ರೂಪದಲ್ಲಿ ಕಂಡು ತಾನು ಬಾಲಕನಾಗಿ ಬಿಡುತ್ತಿದ್ದನು. "ಹರಿ ನೀನು ನನ್ನ ತಾಯಿ, ನಾನು ನಿನ್ನ ಬಾಲಕ."

ಕಬೀರನು ತನ್ನ ಸಾಧು ಸ್ವಭಾವದಿಂದ ಎಲ್ಲರಿಗೂ ಪ್ರೀತಿಪಾತ್ರರಾಗಿದ್ದರು.

ಅವನು ಸ್ವರ್ಗಸ್ಥರಾದಾಗ ಹಿಂದುಗಳು ಮುಸಲ್ಮಾನರಲ್ಲಿ ಅವರ ಅಂತಿಮ ಸಂಸ್ಕಾರವನ್ನು ಯಾವ ರೀತಿ ಮಾಡಬೇಕೆಂಬುದರ ವಿಚಾರವಾಗಿ ಜಗಳವಾಯಿತೆಂದು ಹೇಳುತ್ತಾರೆ. ಕಬೀರನು ಹಿಂದು, ಅವನಿಗೆ ಹಿಂದೂ ರೀತಿಗನುಸಾರವಾಗಿ ದಹನ ಸಂಸ್ಕಾರ ಮಾಡುತ್ತೇವೆ, ಸಮಾಧಿ ಕಟ್ಟುತ್ತೇವೆ ಎಂದು ಹಿಂದುಗಳು ಹೇಳುತ್ತಿದ್ದರು. ಅವನು ಮುಸಲ್ಮಾನ. ಅವನ "ಕಬ್ರ್" ಸ್ಥಾಪಿಸುತ್ತೇವೆ ಎಂದು ಮುಸಲ್ಮಾನರು ಹೇಳುತ್ತಿದ್ದರು. ಜಗಳವು ಏನು ಮಾಡಿದರೂ ನಿಲ್ಲಲೇ ಇಲ್ಲ.

ಕಡೆಗೆ ಬಟ್ಟೆಯನ್ನು ತೆಗೆದು ಹೆಣವನ್ನು ನೋಡಲಾಗಿ ಅಲ್ಲಿ ಹೆಣದ ಬದಲು ಪುಷ್ಪ ರಾಶಿಯಿದ್ದಿತು. ಹೂವುಗಳಲ್ಲಿ ಅರ್ಧ ಭಾಗವನ್ನು ಮುಸಲ್ಮಾನರು ತೆಗೆದುಕೊಂಡರು ಮತ್ತು "ಕಬ್ರ್" ಸ್ಥಾಪಿಸಿದರು. ಮತ್ತೆ ಅರ್ಧ ಭಾಗವನ್ನು ಹಿಂದುಗಳು ತೆಗೆದುಕೊಂಡರು ಮತ್ತು "ಸಮಾಧಿ" ಸ್ಥಾಪಿಸಿದರು. ಸಂತ ಕಬೀರನು "ಮಗಹರ್" ಎಂಬ ಸ್ಥಳದಲ್ಲಿ ಸನ್ ೧೫೧೮ನೆಯ ಇಸವಿಯಲ್ಲಿ (ಕ್ರಿ.ಶ. ೧೫೭೫) ತನ್ನ ೧೨೦ನೆಯ ವಯಸ್ಸಿನಲ್ಲಿ ಕಾಲವಾದರು.

ಕಬೀರನ ಕಾಲದಲ್ಲಿ ಹಿಂದೂ-ಮುಸಲ್ಮಾನರಲ್ಲಿ ಐಕಮತ್ಯದ ಸಮಸ್ಯೆಯೇ ಅತ್ಯಂತ ದೊಡ್ಡ ಸಮಸ್ಯೆಯಾಗಿದ್ದಿತು. ಕಬೀರನು ಸಾಹಸದಿಂದ ಈ ಐಕಮತ್ಯಕ್ಕೆ ಅಡಿಪಾಯ ಹಾಕಿದನು. ಅವನು ಪರಸ್ಪರ ಪ್ರೇಮ ಮತ್ತು ದಯೆಯ ವ್ಯವಹಾರ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹಿಂದುಗಳು, ಮುಸಲ್ಮಾನರು ಇಬ್ಬರಿಗೂ ಬಾರಿ ಬಾರಿ ಹೇಳಿದನು, "ಪರಮಾತ್ಮನು ಒಬ್ಬನೇ, ನಾವೆಲ್ಲರೂ ಅವನ ಮಕ್ಕಳು, ನಾವು ಯಾರೇ ಆಗಿರಲಿ ಅಣ್ಣ ತಮ್ಮಂದಿರು" ಎಂಬ ಮಾತನ್ನು ಕಬೀರನು ಉದ್‌ಘೋಷಿಸಿ ಹೇಳಿದನು.

ಅನೇಕ ನೂರು ವರುಷಗಳ ಹಿಂದೆ ಕಬೀರನು ಹೇಳಿಹೋದ ಮಾತನ್ನು ಮಹಾತ್ಮಾಗಾಂಧೀಜಿಯವರು ತಮ್ಮ ಜೀವನ ಪರ್ಯಂತ ಹೇಳುತ್ತಿದ್ದರು. ಅವರಿಗೆ ಕಬೀರನ "ರಾಮ ಕಹೋ ಯಾ ರಹೀಮ ಕಹೋ, ಮತಲಬ್ ತೋ ಉಸೀ ಕೀ ಯಾದ್ ಸೇ ಹೈ" ಎಂಬ ಭಜನವು ಬಹಳ ಪ್ರಿಯ.

ಸಂತ ಕಬೀರನು ದೇಶಕ್ಕೆ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ನಿಜವಾದ ಮಾರ್ಗ ತೋರಿಸಿದ ಮತ್ತು ಜನರಿಗೆ ಸತ್ಯ, ಪ್ರೇಮ, ಐಕಮತ್ಯ ಮತ್ತು ಮಾನವತೆಯ ಸಂದೇಶವಿತ್ತ ಭಾರತದ ಮಹಾಪುರುಷರಲ್ಲಿ ಒಬ್ಬನು.

ನಾನಕ್

ಸಿಖ್ಖ ಧರ್ಮದ ಪ್ರವರ್ತಕ ಗುರು ನಾನಕದೇವ ಕ್ರಿ.ಶ. ೧೪೬೯ರಲ್ಲಿ ಲಾಹೋರಿಗೆ ೩೫ ಮೈಲಿ ದೂರದಲ್ಲಿರುವ ತಲವಂಡಿ ಎಂಬ ಹಳ್ಳಿಯಲ್ಲಿ ಸಿಖ್ಖ್ ವಂಶ ಒಂದರಲ್ಲಿ ಜನಿಸಿದರು ತಂದೆಯ ಹೆಸರು ಮೆಹತ ಕಾಲು ಎಂದು, ತಾಯಿಯ ಹೆಸರು ತ್ರಿಪತ. ಮೆಹತಕಾಲು ಹಳ್ಳಿಯ ಶಾನುಭೋಗ.

ನಾನಕದೇವ ಬಾಲ್ಯದಲ್ಲೇ ಈಶ್ವರ ಭಕ್ತರಾಗಿದ್ದರು. "ನಿಮಗೆ ಹೊಸ ಆಟ ಆಡಬೇಕೆನ್ನಿಸಿದರೆ ನನ್ನ ಹಾಗೆ ಮಾಡಿ. ನನ್ನ ಹಾಗೆ ಕುಳಿತು ಮನಸ್ಸಿನಲ್ಲೇ ಸತ್ಯ ಕರ್ತಾರ ಹೇಳಿ" ಎಂದು ನಾನಕರು ಒಡನಾಡಿಗಳಿಗೆ ಹೇಳುತ್ತಿದ್ದರು.

ನಾನಕದೇವನಿಗೆ ೭ ವರ್ಷವಾದಾಗ ಅವರ ತಂದೆ ಅವರನ್ನು ಗೋಪಾಲ ಪಂಡಿತರ ಬಳಿ ವಿದ್ಯಾಭ್ಯಾಸಕ್ಕೆ ಕಳುಹಿಸಿದರು. ಗೋಪಾಲ ಪಂಡಿತರು ಆದರದಿಂದ ಶಿಷ್ಯನಿಗೆ ವಿದ್ಯಾಭ್ಯಾಸ ಮಾಡಿಸಿದರು. ಗುರುಗಳೇ ನೀವು ನನಗೇನೂ ಹೇಳಿಕೊಡುವಿರೆಂದು ನಾನಕರು ಕೇಳಲು ಗುರುವು-ಅಂಗಡಿಗೆ ಬೇಕಾದ ಲೆಕ್ಕ ಮತ್ತು ಅನ್ಯ ಪುಸ್ತಕವನ್ನು ಓದಿಸುವೆನೆಂದರು. ಇದನ್ನು ಕೇಳಿ–ಇಂತಹ ಓದು ನನಗೆ ಬೇಡ. ಈ ವಿದ್ಯೆ ನಶ್ವರ ಪ್ರಪಂಚದಲ್ಲೇ ಉಳಿಯುವುದು. ಅಂತ್ಯಕಾಲಕ್ಕೆ ಒದಗುವಂತಹ ವಿದ್ಯೆಯನ್ನು ಕಲಿಯುವೆ-ಎಂದರು. ಈ ಮಾತನ್ನು ಕೇಳಿ ಗುರುವು ಆಶ್ಚರ್ಯಚಕಿತರಾಗಿ ನಾನಕದೇವನ ಕಡೆಯೇ ನೋಡುತ್ತಾ ಕುಳಿತುಬಿಟ್ಟರು.

ಹಿಂದಿ ಮತ್ತು ಗಣಿತದಲ್ಲಿ ಮಗನಿಗೆ ಅಭಿರುಚಿ ಇಲ್ಲದಿರುವುದನ್ನು ನೋಡಿ ಅವರ ತಂದೆ ವ್ರಜಪಾಲ ಪಂಡಿತರ ಬಳಿ ಸಂಸ್ಕೃತವನ್ನು ಮತ್ತು ಕುತುಬುದ್ದೀನನ ಬಳಿ ಫಾರಸಿಯನ್ನು ಕಲಿಯಲು ಮಗನನ್ನು ಕಳುಹಿಸಿದರು. ಅವರಿಬ್ಬರೂ ಬಾಲಕ ನಾನಕನ ಜ್ಞಾನವನ್ನು ನೋಡಿ ದಂಗಾದರು. ನಾನಕರು ಸಂಸ್ಕೃತ ಮತ್ತು ಫಾರಸಿಯನ್ನೂ ಕಲಿಯಲು ಇಷ್ಟಪಡಲಿಲ್ಲ. ಮಗನಿಗೆ ಓದಿಸುವುದು ವ್ಯರ್ಥವೆಂದು ತಂದೆಗೆ ಅರಿವಾಯಿತು. ಸರಿ ಎಮ್ಮೆ ಮೇಯಿಸಲು ಕಳುಹಿಸಿದರು. ನಾನಕರು

ಎಮ್ಮೆಯನ್ನು ಅಟ್ಟಿಕೊಂಡು ಕಾಡಿಗೆ ಹೋಗಿ ಅಲ್ಲಿ ಒಂದು ಕಡೆ ಕುಳಿತು ಧ್ಯಾನ ಮಾಡುತ್ತಿದ್ದರು.

ಒಂದು ದಿನ ಅವರು ಧ್ಯಾನಿಸುತ್ತಾ ಕುಳಿತಿರುವಾಗ ಅವರ ಎಮ್ಮೆ ಹೊಲವೊಂದಕ್ಕೆ ನುಗ್ಗಿ ಹೊಲದ ಒಂದು ಭಾಗವನ್ನು ಹಾಳುಮಾಡಿತು. ಅದರ ಮಾಲೀಕ ಹಳ್ಳಿಯ ಯಜಮಾನನ ಬಳಿ ದೂರಿತ್ತ. ಆತ ನಾನಕದೇವನನ್ನು ಕರೆಸಿ ಎಮ್ಮೆಗಳಿಂದ ಇವನ ಹೊಲವನ್ನೇಕೆ ಹಾಳುಮಾಡಿಸಿದೆ ಎಂದು ವಿಚಾರಿಸಿದ. ಹಾಳು ಮಾಡುವವ ಮತ್ತು ರಕ್ಷಿಸುವವ ಈಶ್ವರ. ಆತ ಹಾಳು ಮಾಡಿದರೆ ಸರಿಯೂ ಮಾಡಬಲ್ಲ. ಈ ಮಧ್ಯೆ ನಾವಿಬ್ಬರೂ ಏನೂ ಮಾಡಲಾರೆವೆಂದು ನಾನಕರು ಹೇಳಿದರು. ಬಾಲಕನ ಬಾಯಿಯಿಂದ ಇಂತಹ ಮಾತನ್ನು ಕೇಳಿದ ಮೇಲೆ ಏನು ಹೇಳಬೇಕೆಂದೇ ಯಾಜಮಾನನಿಗೆ ಹೊಳೆಯಲಿಲ್ಲ.

ನಾನಕರ ಅಕ್ಕ ನಾನಕೀಯಳ ವಿವಾಹವಾಗಿತ್ತು. ಆಕೆ ನಾನಕರನ್ನು ಬಹಳ ಪ್ರೀತಿಸುತ್ತಿದ್ದಳು. ತಮ್ಮನ ವಿಷಯದಲ್ಲಿ ತಂದೆ ಕೋಪಗೊಂಡಿರುವ ಸುದ್ದಿ ಕೇಳಿದಾಗ ಆಕೆ ಪತಿಯ ಬಳಿ ಹಟ ಹಿಡಿದು ನಾನಕರನ್ನು ಸುಲ್ತಾನಪುರಕ್ಕೆ ಕರೆತಂದಳು. ಅಲ್ಲಿ ನಾನಕರು ದೌಲತ್ ಖಾನ್ ಲೋದಿಯ ಮೋತಿಖಾನೆಯಲ್ಲಿ ಕುಳಿತು ವ್ಯಾಪಾರ ಮಾಡತೊಡಗಿದರು.

ಅವರು ತಮ್ಮ ಹದಿನೆಂಟನೆಯ ವರುಷದಲ್ಲಿ ಮೂರಿ ಚಂದ್ರರ ಪುತ್ರಿ ಸುಲಕ್ಷಣೆಯನ್ನು ವಿವಾಹವಾದರು. ಆಕೆಗೆ ಶ್ರೀಚಂದ್ರ ಮತ್ತು ಲಕ್ಷ್ಮೀದಾಸರೆಂಬ ಇಬ್ಬರು ಪುತ್ರರು ಜನಿಸಿದರು.

ಈ ವರೆಗೆ ನಾನಕರು ಮೋತಿಖಾನೆಯ ಕೆಲಸ ಹೇಗೋ ನಿರ್ವಹಿಸುತ್ತಿದ್ದರು. ಆದರೆ ಬಹಳ ಮಂದಿಗೆ ಹಣವಿಲ್ಲದೆ ಹಾಗೆಯೇ ಸಾಮಾನನ್ನು ತೂಗಿ ಕೊಟ್ಟು ಬಿಡುತ್ತಿದ್ದರು. ಹಣವಿಲ್ಲವೆಂದು ಆವಶ್ಯಕ ವಸ್ತುಗಳನ್ನು ಕೊಡಕೂಡದೇ ಎಂದು ಕೇಳುತ್ತಿದ್ದರು. ನಾನಕರ ಕೃಪೆಯಿಂದ ಬಡವರಿಗೆ ಬಿಟ್ಟಿಯಾಗಿ ಸಾಮಾನು ದೊರಕುತ್ತಿತ್ತು.

ಒಮ್ಮೆ ಒಂದು ವಿಚಿತ್ರ ಘಟನೆ ನಡೆಯಿತು. ಒಬ್ಬ ವ್ಯಕ್ತಿಗೆ ನಾನಕರು ಹಿಟ್ಟು ತೂಗಿ ಕೊಡುತ್ತಿದ್ದರು. ಒಂದು ಸೇರು, ಎರಡು ಸೇರು, ಮೂರು ಸೇರು ಹೀಗೆ ಹನ್ನೆರಡು ಸೇರಿನವರೆಗೆ ಸರಿಯಾಗಿ ಎಣಿಸಿ 'ತೇರಾ ತೇರಾ' ಎಂದು ಹೇಳ

ತೊಡಗಿದರು. ಅಂದರೆ ಈ ಪ್ರಪಂಚದಲ್ಲಿ ನನ್ನದೇನಿದೆ ಸರ್ವಸ್ವವೂ ನಿನ್ನದು (ಈಶ್ವರನದು) ಎಂದು, ಹೀಗೆ ಹೇಳಿ ಹಿಟ್ಟೆಲ್ಲವನ್ನೂ ಕೊಟ್ಟುಬಿಟ್ಟರು. ಪರಿಣಾಮ ವಾಗಿ ಅಂಗಡಿ ಬಿಡಬೇಕಾಯಿತು. ನಾನಕರು ಜೀವನ ಪರ್ಯಂತ ಜನಗಳ ಮಧ್ಯೆ ಇದ್ದು ವೈರಭಾವ ಮತ್ತು ರಾಗದ್ವೇಷಗಳನ್ನು ಅಳಿಸಲು ಯತ್ನಿಸಿದರು. ಯಾರೂ ಹಿಂದುವೂ ಅಲ್ಲ, ಮುಸ್ಲಿಮನೂ ಅಲ್ಲ ಎಲ್ಲರೂ ಪರಮೇಶ್ವರನ ಕಿಂಕರರು. ಪ್ರಪಂಚದಲ್ಲಿ ಯಾರೂ ಕೆಟ್ಟವರಲ್ಲ. ಬೇರೆಯವರ ಹುಳುಕನ್ನು ಹುಡುಕುವ ಮೊದಲು ನಮ್ಮ ತಪ್ಪನ್ನು ತಿಳಿದು ತಿದ್ದಿಕೊಳ್ಳಬೇಕು. ಆಗಲೇ ಜನ್ಮ ಸಾರ್ಥಕ ವಾಗುವುದು ಎಂದು ಹೇಳುತ್ತಿದ್ದರು. ಪರಸೇವೆ ಮಾಡಬೇಕೆಂಬುದು ನಾನಕರ ಆದರ್ಶ.

ನಾನಕರು ತಮ್ಮ ಕಾಲದ ಒಬ್ಬ ಮಹಾ ಸುಧಾರಕರು. ಸ್ಪೃಶ್ಯ ಅಸ್ಪೃಶ್ಯ ಮೂಢ ನಂಬಿಕೆ ಡಂಬಾಚಾರವನ್ನು ಖಂಡಿಸಿ ಪರೋಪಕಾರ, ಮಾನವಪ್ರೇಮ ಮತ್ತು ಸಹಯೋಗದ ಮಹತ್ವವನ್ನು ತಿಳಿಸಿದರು. ಒಂದುಗೂಡಿ ಬಾಳಲು ಜನ ಗಳಿಗೆ ಉಪದೇಶವಿತ್ತರು. ಹಿಂದು, ಮುಸ್ಲಿಮ್ ಐಕ್ಯವನ್ನು ಅನುಮೋದಿಸು ತ್ತಿದ್ದರು. ಎಲ್ಲರ ಈಶ್ವರ ಒಬ್ಬನೇ ಎಂದು ಹೇಳಿದರು. ನಾಲ್ಕೂ ಕಡೆ ತಿರುಗಿ ಜನಗಳಿಗೆ ಮಾನವ ಪ್ರೇಮದ ಪಾಠ ಹೇಳಿ ಶಾಂತಿ ಸ್ಥಾಪಿಸಿದರು. ಸುಖ ಶಾಂತಿಯ ಉಪದೇಶವನ್ನು ಜನಗಳ ವರೆಗೆ ತಲುಪಿಸಲು ದೇಶ ವಿದೇಶದ ಯಾತ್ರೆ ಮಾಡಿದರು.

ಮೊಟ್ಟಮೊದಲು ಐಮನಾಬಾದಿಗೆ ಹೋಗಿ ಅಲ್ಲಿ ಲಾಲೋ ಎಂಬ ಬಡಗಿಯ ಮನೆಯಲ್ಲಿದ್ದು ಮುಂದೆ ಡೆಲ್ಲಿ, ಗಯಾ, ಹರಿದ್ವಾರ ಮತ್ತು ಜಗನ್ನಾಥಪುರಿಗೆ ಹೋದರು. ಅನಂತರ ದಕ್ಷಿಣಭಾರತದ ಕಡೆ ಹೊರಟರು. ಸೇತುಬಂಧ, ರಾಮೇಶ್ವರ, ಅರ್ಬುದಗಿರಿ ಮತ್ತು ಲಂಕಾ ಮುಂತಾದ ಸ್ಥಳಗಳಿಗೆ ಹೋಗಿ ತಮ್ಮ ಧರ್ಮವನ್ನು ಹರಡಿದರು. ದಕ್ಷಿಣದಿಂದ ಬಂದ ಮೇಲೆ ಗಡವಾಲ, ಹೇಮಕೂಟ, ಟಿಹರಿ, ಸರಮೌರ, ಗೋರಖಪುರ, ಸಿಕ್ಕಿಂ, ಭೂತಾನ, ಟಿಬೆಟ್ ಮುಂತಾದ ಕಡೆ ಅವರ ಉಪದೇಶ ನಡೆಯಿತು. ನಾಲ್ಕನೇ ಮತ್ತು ಕೊನೆಯ ಯಾತ್ರೆಯಲ್ಲಿ ಬಲೂಚಿಸ್ಥಾನದ ಮೂಲಕ ಮಕ್ಕಾವಿಗೆ ತಲಪಿದರು. ಈ ಯಾತ್ರೆಯಲ್ಲಿ ಇರಾನು, ಕಾಂದಾರ, ಕಾಬುಲ್ ಮತ್ತು ಬಗ್‌ದಾದ್ ಮುಂತಾದ ಕಡೆ ಸತ್ಯನಾಮದ ಉಪದೇಶವಿತ್ತರು. ಪ್ರಪಂಚದ ಕೆಲಸವೆಲ್ಲವೂ ಪರಮಪೂಜ್ಯ ತಂದೆಯ ಅಭೀಷ್ಟದಂತೆ ನಡೆಯುವುವು.

ಆದ್ದರಿಂದ ಜಗಳ, ಕದನ ಮತ್ತು ಉಚ್ಚ ನೀಚ ಭೇದಭಾವವನ್ನು ಬಿಟ್ಟು ಪವಿತ್ರ ಮನಸ್ಸಿನಿಂದ ಈಶ್ವರನನ್ನು ಸ್ಮರಿಸಬೇಕೆಂದು ತಿಳಿಸಿದರು. ದಯೆ, ಧರ್ಮ, ನಮ್ರತೆ, ಭೀತಿ ಮತ್ತು ಸತ್ಯವುಳ್ಳ ವ್ಯಕ್ತಿ ಮನುಷ್ಯ ಜೀವನದಲ್ಲೇ ಸುಖ ಹೊಂದುವನೆನ್ನುತ್ತಿದ್ದರು. ನಾನಕರ ಈ ಉಪದೇಶದ ಪ್ರಭಾವ ಎಲ್ಲಾ ಧರ್ಮದ ಜನಗಳ ಮೇಲೆ ಎಷ್ಟರಮಟ್ಟಿಗೆ ಆಗಿತ್ತೆಂದರೆ ಬಹಳ ಮಂದಿ ಕೂಡಲೇ ಅವರ ಶಿಷ್ಯರಾಗುತ್ತಿದ್ದರು ಮತ್ತು ನಾನಕರಲ್ಲಿ ಆಳವಾದ ನಂಬಿಕೆ ಇಡುತ್ತಿದ್ದರು.

ನಾನಕರು ಉಪದೇಶಿಸುತ್ತಿದ್ದಂತೆಯೇ ವಿಚಿತ್ರ. ಒಮ್ಮೆ ಅರೇಬಿಯಾನಲ್ಲಿದ್ದಾಗ ಮಕ್ಕದ ಕಡೆ ಕಾಲುಮಾಡಿ ಮಲಗಿದರು. ಇದನ್ನು ಕಂಡು ಕಾಜಿಗಳು ಮುಖ ಕೆಂಪಗೆ ಮಾಡಿಕೊಂಡು ಅಲ್ಲಾನ ಮನೆಯ ಕಡೆ ಕಾಲು ಹಾಕಿಕೊಂಡು ಮಲಗ ಬೇಡ ಎಂದರು. ಅಲ್ಲಾನ ಮನೆ ಇರದ ಕಡೆ ತನ್ನ ಕಾಲು ತಿರುಗಿಸಿ ಎಂದು ನಾನಕರು ತಕ್ಷಣ ಉತ್ತರವಿತ್ತರು. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಅವರ ಕಾಲನ್ನು ಯಾವ ಕಡೆಗೆ ತಿರುಗಿಸಬೇಕೆಂದೇ ಅವರಿಗೆ ತೋರಲಿಲ್ಲ. ಕಾರಣ ಪರಮಾತ್ಮ ಸರ್ವಾಂತರ್ಯಾಮಿ ಎಂಬುದು ಅವರಿಗೆ ಗೊತ್ತಿದ್ದಿತು.

ನಾನಕರು ಉಪದೇಶಿಸುತ್ತಿದ್ದ ರೀತಿ ಇದು. ಎಷ್ಟು ಸರಳವಾದ ಭಾಷೆಯಲ್ಲಿ ಸುಂದರವಾಗಿ ಅವರು ತಮ್ಮ ಮಾತನ್ನು ತಿಳಿಸುತ್ತಿದ್ದರು ನೋಡಿ. ಅವರ ಉಪದೇಶದ ಪ್ರಭಾವ ಜನಗಳ ಮೇಲೆ ಬಹಳ ಬೇಗ ಆಗುತ್ತಿತ್ತು. ಜನರು ಅವರ ಮುಂದೆ ತಲೆಬಾಗುತ್ತಿದ್ದರು.

ನಾನಕರ ಮಹತ್ವದ ವಿಷಯವಾಗಿ ಇನ್ನೊಂದು ಘಟನೆ ಪ್ರಚಲಿತವಾಗಿದೆ. ಒಮ್ಮೆ ಅವರ ತಂದೆ ಗುಜರಾಂವಾಲಾ ಜಿಲ್ಲೆಯ ಚೂಹಡಕಾನವೆಂಬ ಹಳ್ಳಿಗೆ ಹೋಗಿ ಉಪ್ಪು ಅರಿಶಿನ ಮುಂತಾದ ಸಾಮಾನನ್ನು ಕೊಂಡು ತರಲು ಹೇಳಿದರು. ದಾರಿಯಲ್ಲಿ ಅವರಿಗೆ ಕೆಲವು ಸಾಧುಗಳು ದೊರಕಿದರು. ಹಣವನ್ನೆಲ್ಲಾ ಅವರಿಗೆ ಖರ್ಚು ಮಾಡಿ ಒಳ್ಳೆಯ ಸಾಮಾನನ್ನೇ ಕೊಂಡೆನೆಂದು ಹೇಳಿಬಿಟ್ಟರು. ಗುರು ನಾನಕರು ಹಿಂದೂ, ಮುಸಲ್ಮಾನ್, ಬೌದ್ಧ, ಜೈನ ಮುಂತಾದ ಎಲ್ಲಾ ಧರ್ಮಗಳ ಪವಿತ್ರ ಸ್ಥಳಗಳನ್ನೂ ಸಂದರ್ಶಿಸಿದ್ದರು. ಎಲ್ಲೆಡೆಯಲ್ಲೂ ಈಶ್ವರನನ್ನು ಸ್ಮರಿಸಲು ಉಪದೇಶವಿತ್ತು ಎಲ್ಲಾ ಧರ್ಮದ ಜನಗಳ ಮೇಲೂ ಒಂದೇ ರೀತಿ ಪ್ರಭಾವ

ಬೀರಿದರು. ಆದ್ದರಿಂದಲೇ ಹಿಂದುವಾಗಲೀ, ಬೌದ್ಧನಾಗಲೀ, ಜೈನನಾಗಲೀ ಅವನನ್ನು ಆದರಿಸುತ್ತಿದ್ದರು ಮತ್ತು ಅನೇಕ ಮಂದಿ ಅವರ ಶಿಷ್ಯರಾದರು.

ನಾನಕರಿಗೆ ಬಾಲ ಮತ್ತು ಮರದಾನ ಎಂಬ ಇಬ್ಬರು ಪ್ರಮುಖ ಶಿಷ್ಯರಿದ್ದರು. ಅವರಿಬ್ಬರೂ ಸದಾ ಗುರುವಿನ ಬಳಿಯೇ ಇರುತ್ತಿದ್ದರು. ಅವರ ಬಗ್ಗೆ ಅನೇಕ ಕಿಂವದಂತಿಗಳು ಪ್ರಸಿದ್ಧವಾಗಿವೆ. ಒಮ್ಮೆ ನಾನಕದೇವನು ಪಂಜಾಬಿನಲ್ಲಿ ಸುತ್ತುತ್ತಾ ಹಸನ ಅಬ್ದಾಲ ಎಂಬ ಪ್ರದೇಶಕ್ಕೆ ತಲಪಿದರು. ಅಲ್ಲಿ ಬಾವಾ ವಲೀ, ಕಂಧಾರಿ ಎಂಬ ಒಬ್ಬ ಅಹಂಕಾರಿ ಫಕೀರನಿದ್ದ. ವಿಧಿವಶಾತ್ ಆ ಪ್ರದೇಶದಲ್ಲಿ ಒಂದೇ ಒಂದು ನಾಲೆಯಿದ್ದು ಅದು ಅವನ ಅಧೀನದಲ್ಲಿತ್ತು. ಬಹಳ ಕೇಳಿಕೊಂಡರೂ ಆತ ನಾನಕರಿಗೆ ನೀರು ಕೊಡಲು ಒಪ್ಪಲಿಲ್ಲ. ನಾನಕರು ಭೂಮಿಯನ್ನು ಸೀಳಿ ಬೇರೆ ನಾಲೆಯನ್ನು ತೆಗೆದರೆಂದು ಹೇಳುವರು. ಅಲ್ಲದೆ ಫಕೀರನ ನಾಲೆ ಬತ್ತಿಹೋಯಿತು. ಆತ ಕೋಪಗೊಂಡು ಪರ್ವತದ ಮೇಲಿಂದ ಒಂದು ಬಂಡೆಯನ್ನು ಉರುಳಿಸಲು ನಾನಕರು ಅದನ್ನು ಕೈಯಿಂದಲೇ ತಡೆದರು. ಕಲ್ಲಿನ ಮೇಲೆ ಅವರ ಕೈಯ ಚಿನ್ಹೆ ಬಿದ್ದಿತು. ಈಗ ಆ ಸ್ಥಳದಲ್ಲಿ ಒಂದು ವಿಶಾಲ ಗುರುದ್ವಾರವಿದೆ.

೨೫ ವರ್ಷ ತಿರುಗಿದನಂತರ ಗುರುನಾನಕರು ಕರತಾರಪುರಕ್ಕೆ ಬಂದು ನೆಲಸಿ ಅಲ್ಲಿ ಉಪದೇಶ ಮಾಡತೊಡಗಿದರು.

ಅಲ್ಲೇ ಕ್ರಿ.ಶ. ೧೫೩೮ರ ಅಶ್ವಿನಿ ತಿಂಗಳ ಶುಕ್ಲ ಪಕ್ಷ ದಶಮಿಯಂದು ಗುರು ನಾನಕರ ಆತ್ಮ ಈ ನಶ್ವರ ದೇಹವನ್ನು ತ್ಯಜಿಸಿ ಪರಲೋಕಕ್ಕೆ ಹೊರಟಿತು. ಅಂತ್ಯ ಕಾಲದಲ್ಲಿ ಅವರ ಅನೇಕ ಮಂದಿ ಶಿಷ್ಯರು ಸಮೀಪವಿದ್ದರು. ಹಿಂದು ಮತ್ತು ಮುಸ್ಲಿಮ್ ಶಿಷ್ಯರ ಮಧ್ಯೆ ನಾನಕರ ಶವಕ್ಕಾಗಿ ಜಗಳ ಪ್ರಾರಂಭವಾಯಿತು. ನಾನಕರು ನಮ್ಮ ಗುರುವಾದ್ದರಿಂದ ಅವರ ಅಂತ್ಯ ಸಂಸ್ಕಾರ ನಮ್ಮ ಧರ್ಮದ ರೀತಿಯಿಂದ ಮಾಡಬೇಕೆಂದು ಹಿಂದು ಹೇಳಿದರೆ, ಮುಸ್ಲಿಮರು ಅವರು ನಮ್ಮ ಗುರುಗಳು ಅವರನ್ನು ಸಮಾಧಿ ಮಾಡುವೆವೆಂದು ಹೇಳುತ್ತಿದ್ದರು.

ಯಾವ ಜಾತಿ ಭೇದ ಅಳಿಸಲು ನಾನಕರು ಜೀವನಪರ್ಯಂತ ಶ್ರಮಿಸಿದರೋ ಅದಕ್ಕಾಗಿ ಶಿಷ್ಯರಲ್ಲಿ ಈ ರೀತಿ ಚರ್ಚೆ ನಡೆಯುವುದು ಉಚಿತವಲ್ಲ. ಹೊದ್ದಿಕೆ ತೆಗೆದು ನೋಡಿದಾಗ ಗುರುವಿನ ಶರೀರ ಇರಲೇ ಇಲ್ಲ ಎಂದು ಹೇಳುವರು. ಕೇವಲ

ಕೆಲವು ಹೂಗಳಿದ್ದುವು. ಎರಡು ಪಂಗಡದವರೂ ಅರ್ಧಾಂಶ ಅರ್ಧಾಂಶ ಹೂವು ತೆಗೆದುಕೊಂಡು ತಮ್ಮ ತಮ್ಮ ಮತಕ್ಕನುಸಾರವಾಗಿ ಸಂಸ್ಕಾರ ಮಾಡಿದರು. ಹೀಗೆಯೇ ಕಬೀರನ ವಿಷಯದಲ್ಲೂ ಹೇಳುವರು.

ಗುರುನಾನಕರು ಕಣ್ಣು ಮರೆಯಾದರೂ ಅವರ ಉಪದೇಶವು ನಮ್ಮ ಮುಂದಿದೆ. ಅವರು ಸರಿಯಾದ ಅರ್ಥದಲ್ಲಿ ತ್ಯಾಗಿ ಮತ್ತು ಮಹಾತ್ಮರಾಗಿದ್ದರು. ಪ್ರಪಂಚದ ವಸ್ತುವೆಲ್ಲಾ ಮಿಥ್ಯ ಮತ್ತು ನಶ್ವರ ಎಂದು ಅವರು ನಂಬಿದ್ದರು. ಮಾನವನಾಗಿ ಹುಟ್ಟಿ ಪರೋಪಕಾರ ಮಾಡದವನ ಜೀವ ವ್ಯರ್ಥವೆನ್ನುತ್ತಿದ್ದರು.

ಶೇರಶಾಹ ಸೂರಿ

ಶೇರಷಾಹನ ನಿಜವಾದ ಹೆಸರು ಫರೀದನೆಂದು. ಆತ ಸಾಧಾರಣ ಜಹಗೀರು ದಾರನ ಮಗ. "ಶೇರಖಾಂ" ಎಂಬ ಹೆಸರನ್ನು ಮುಂದೆ ಆತ ತನ್ನ ಶೌರ್ಯದಿಂದ ಸಂಪಾದಿಸಿದನು.

ಶೇರಷಾಹನ ತಾತ ಸೂರು ಜಾತಿಯ ಅಫಗಾನಿ ಪೆಶಾವರದ ಬಳಿ ಇದ್ದನು. ಅವನ ಉದ್ಯೋಗ ಸಿಪಾಯಿಗಿರಿಯಾದ ಕಾರಣ ಸೈನಿಕನ ಕೆಲಸದ ಅನ್ವೇಷಣೆ ಯಲ್ಲಿ ಪೂರ್ವದ ಕಡೆ ಹೊರಟ. ಆತನ ಪುತ್ರ ಹಸನನು ಅವನನ್ನು ಹಿಂಬಾಲಿಸಿದ. ಇಬ್ಬರೂ ಈಗಿನ ಪಂಜಾಬು ರಾಜ್ಯದ ಹೋಶಿಯಾರ್‌ಪುರದ ಸಮೀಪವಿರುವ ಬೆಜವಾಡದಲ್ಲಿದ್ದರು. ಅಲ್ಲಿಯೇ ಕ್ರಿ.ಶ. ೧೪೭೨ರಲ್ಲಿ ಫರೀದಾ ಜನಿಸಿದ. ಫರೀದಾ ಬಾಲಕನಾಗಿರುವಾಗಲೇ ಹಸನನಿಗೆ ಜೌನಪುರದ ಸುಬೇದಾರನ ಬಳಿ ಕೆಲಸ ದೊರೆಯಿತು. ಜೊತೆಗೆ ತಂದೆಯೂ ಸಾಹಸರಾಮ ಜಹಗೀರನ್ನು ಅವನಿಗೆ ಕೊಟ್ಟನು. ಹಸನ ತನ್ನ ಪರಿವಾರದೊಡನೆ ಜಹಗೀರನ್ನು ತಲುಪಿದನು.

ಫರೀದನಿಗೆ ಒಬ್ಬ ಮಲತಾಯಿಯಿದ್ದಳು. ಹಸನನಾದ ಮೇಲೆ ಜಹಗೀರು ತನ್ನ ಮಗನಿಗೆ ಸಿಗಬೇಕೆಂಬುದು ಅವಳ ಆಕಾಂಕ್ಷೆ. ಆದ್ದರಿಂದಲೇ ಫರೀದಾ ಅವಳ ಕಣ್ಣಿಗೆ ಮುಳ್ಳಾದನು. ಹಸನನ ಮೇಲೂ ಆಕೆ ಸಾಕಷ್ಟು ಪ್ರಭಾವ ಬೀರಿದ್ದಳು. ಆದ್ದರಿಂದ ಫರೀದನೊಡನೆ ದುರ್ವರ್ತನೆ ಪ್ರಾರಂಭವಾಯಿತು. ಇದರಿಂದ ಯುವಕ ಫರೀದನ ಮನಸ್ಸು ಬೇಸರಗೊಳ್ಳುತ್ತಿತ್ತು. ಕೊನೆಗೊಮ್ಮೆ ಆತ ಸಾಹಸರಾಮವನ್ನು ಬಿಟ್ಟು ಜೌನಪುರಕ್ಕೆ ಹೊರಟುಹೋದನು. ಇಲ್ಲಿಂದ ಅವನ ಜೀವನದಲ್ಲಿ ಸಂಘರ್ಷಣೆಯು ಪ್ರಾರಂಭವಾಗಿ ಆತ ಕಷ್ಟಗಳಿಗೆ ಸಿಲುಕಿ ನರಳತೊಡಗಿದನು.

ಫರೀದಾ ಮೊದಲು ತನ್ನ ಶಿಕ್ಷಣವನ್ನು ಮುಗಿಸಿಕೊಳ್ಳಲು ನಿಶ್ಚಯಿಸಿದ. ಫರೀದನ ಪ್ರತಿಭೆಯನ್ನು ನೋಡಿ ಅವನ ಗುರು ಜಮಾಲ ಬಹಳ ಸಂತುಷ್ಟನಾಗಿ ನಿನ್ನ ಮಗ ಬಹಳ ಯೋಗ್ಯ ಅವನಿಂದ ನೀನು ಏಕೆ ಪ್ರಯೋಜನ ಪಡೆಯಬಾರ

ದೆಂದು ಒಮ್ಮೆ ಹಸನನನ್ನು ಕೇಳಲು ಆತನು ಯೋಗ್ಯನೇ? ಎಂದು ಮರುಸವಾಲು ಹಾಕಿದನು ಆಗ ಹೌದು. ಅತ್ಯಂತ ಯೋಗ್ಯ ಅದೃಷ್ಟವಿದ್ದಲ್ಲಿ ಆತ ಮುಂದೆ ಒಳ್ಳೆಯ ಹೆಸರು ಸಂಪಾದಿಸುವನೆಂದು ನಂಬಿರುವೆ ಎಂದು ತಿಳಿಸಿದನು.

ಯಾವ ತಂದೆ ತಾನೆ ಮಗನ ಪ್ರಶಂಸೆಯನ್ನು ಕೇಳಿ ಹಿಗ್ಗುವುದಿಲ್ಲ. ಅದೂ ಅಲ್ಲದೆ ಹಸನ ಜಮಾಲಖಾನನ ಮಾತಿಗೆ ಹೆಚ್ಚು ಮಾನ್ಯತೆ ಕೊಡುತ್ತಿದ್ದನು. ಆತ ಕೂಡಲೇ ಫರೀದನನ್ನು ಕರೆಸಿ ಸಾಹಸರಾಮ ಮತ್ತು ಖ್ವಾಸಪುರದ ಜಹಗೀರನ್ನು ಒಪ್ಪಿಸಿದನು ಫರೀದನು. ಜಹಗೀರನ್ನು ವ್ಯವಸ್ಥೆಗೊಳಿಸಿದ ರೀತಿಯನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡರು. ಆದರೆ ಆತನ ಮಲತಾಯಿಯ ಹೊಟ್ಟೆಗೆ ಬೆಂಕಿ ಸುರಿದಂತೆ ಆಯಿತು. ಬಡಪಾಯಿ ಫರೀದಾ ಮತ್ತೆ ಸಾಹಸರಾಮುವನ್ನು ಬಿಟ್ಟು ಆಗ್ರಾಕ್ಕೆ ಹೋದ. ತಂದೆ ಕಾಲವಾದನಂತರ ಜಹಗೀರು ಪೂರ್ಣವಾಗಿ ಅವನ ವಶವಾಯಿತು. ಕ್ರಿ.ಶ. ೧೫೨೨ರಲ್ಲಿ ಆತ ಬಿಹಾರಿನ ನವಾಬ ಬಹಾರ್‌ಖಾ ಲೋಹಾನಿ ಬಳಿ ಕೆಲಸಕ್ಕೆ ಸೇರಿ ಶೀಘ್ರವೇ ತನ್ನ ಪ್ರಾಮಾಣಿಕತನ ಮತ್ತು ಚಟುವಟಿಕೆಯಿಂದ ಅವನನ್ನು ಒಲಿಸಿಕೊಂಡ. ಬಹಾರ್‌ಖಾ ಒಂದು ದಿನ ಬೇಟೆಯಾಡಲು ಹೊರಟ. ಆಗ ಫರೀದನೂ ಜೊತೆಯಲ್ಲಿದ್ದನು. ಅವರು ಕಾಡನ್ನು ಪ್ರವೇಶಿಸುತ್ತಿದ್ದಂತೆಯೇ ಇದ್ದಕ್ಕಿದ್ದ ಹಾಗೆ ಒಂದು ಸಿಂಹ ಅವರ ಮೇಲೆ ಆಕ್ರಮಣ ಮಾಡಿತು. ಇನ್ನೇನು ಸಿಂಹ ನವಾಬನನ್ನು ತಿನ್ನಬೇಕು ಅಷ್ಟರಲ್ಲಿ ಫರೀದಾ ಧೈರ್ಯದಿಂದ ಮುನ್ನುಗ್ಗಿ ಸಿಂಹವನ್ನು ಕೊಂದು ಹಾಕಿದನು. ಬಹಾರ್ ಖಾ ಪ್ರಸನ್ನನಾಗಿ ಫರೀದನಿಗೆ "ಶೇರಖಾ" ಎಂಬ ಬಿರುದಿತ್ತ. ಅಂದಿನಿಂದ ಫರೀದಾನನ್ನು ಶೇರಖಾ ಎಂದು ಕರೆಯಲಾಯಿತು. ಇಷ್ಟೇ ಅಲ್ಲದೆ ಬಹಾರ್ ಖಾ ಅವನನ್ನು ತನ್ನ ವಕೀಲನನ್ನಾಗಿಯೂ ತನ್ನ ಮಗ ಜಲಾಲ ಖಾನನ ಅಧ್ಯಾಪಕನನ್ನಾಗಿಯೂ ಮಾಡಿಕೊಂಡನು.

ಫರೀದನ ಶತ್ರುಗಳು ನವಾಬನಿಗೆ ಚಾಡಿ ಹೇಳಿದ ಕಾರಣ ಸಾಹಸರಾಮು ಜಹಗೀರನ್ನು ಮತ್ತೆ ಅವನಿಂದ ಕಸಿದುಕೊಳ್ಳಲಾಯಿತು. ಆಗ ಬಾಬರ್ ಡೆಲ್ಲಿಯ ಸಿಂಹಾಸನದಲ್ಲಿದ್ದನು. ಸಮಯ ನೋಡಿ ಶೇರ್‌ಶಾಹ ಮೊಗಲರ ಬಳಿ ಕೆಲಸಕ್ಕೆ ಸೇರಿದನು. ಹೀಗೆ ಸಂಪಾದಿಸಿದ ಅನುಭವವು ಮುಂದೆ ಅವನಿಗೆ ಸಹಾಯಕವಾದುವು.

ಒಂದು ಒಂದೂಕಾಲು ವರ್ಷದೊಳಗೆ ಬಹಾರ್‌ಖಾ ಸತ್ತುಹೋದ.

ಶೇರ್‌ಖಾ ಮತ್ತೆ ಬಿಹಾರಿಗೆ ಬಂದು ತನ್ನ ಶಿಷ್ಯ ಜಲಾಲಖಾನನ ಸಂರಕ್ಷಕನಾಗಿ ಅವನ ಹೆಸರಿನಲ್ಲಿ ರಾಜ್ಯವಾಳತೊಡಗಿದ. ಕ್ರಮೇಣ ನಾಲ್ಕು ವರ್ಷದೊಳಗೆ ಆತ ದೊಡ್ಡ ಸೈನ್ಯವೊಂದನ್ನು ಒಂದುಗೂಡಿಸಿದನು. ಈ ಮಧ್ಯೆ ಚುನಾರಿನ ರಾಜ ತಾಜಾಖಾನನನ್ನು ಅವನ ಮಗನೇ ಕೊಂದುಹಾಕಿದನು. ಅವನ ಪ್ರೀತಿಪಾತ್ರ ಪತ್ನಿ ಮಲ್ಲಿಕಾ ವಿಧವೆಯಾಗಲು ಶೇರ್‌ಖಾನನು ಆಕೆಯನ್ನು ವಿವಾಹವಾದನು. ಆಕೆ ಚುನಾರಿನ ಕೋಟೆಯನ್ನು ಅವನಿಗೆ ಒಪ್ಪಿಸಿದಳು.

ಶೇರ್‌ಖಾನನ ಅಭ್ಯುದಯವನ್ನು ನೋಡಿ ಸ್ವತಃ ಜಮಾಲಖಾನನೇ ಗಾಬರಿಯಾದನು. ಶೇರ್‌ಖಾನನನ್ನು ದೂರ ಮಾಡಲು ಯತ್ನಿಸಿ ವಿಫಲನಾದನು.

ಜಮಾಲಖಾನನು ಹೆದರಿ ಬಂಗಾಳಕ್ಕೆ ಬಂದು ಅಲ್ಲಿಯ ರಾಜ ಮಹಮೂದ ಷಾಹನಿಂದ ಸಹಾಯ ಬೇಡಿದನು. ಮಹಮೂದನು ಷೇರ್‌ಖಾನನ ಅಭ್ಯುದಯವನ್ನು ನೋಡಿ ಹೆದರಿದ್ದನು. ಆದ್ದರಿಂದ ಜಮಾಲಖಾನನಿಗೆ ಸಹಾಯ ಮಾಡಲು ಕೂಡಲೇ ಒಪ್ಪಿದನು. ಇಬ್ಬರೂ ಸೇರಿ ಶೇರ್‌ಖಾನನ ಮೇಲೆ ಆಕ್ರಮಣ ಮಾಡಿದರು. ಸೂರ್ಯಗಡದ ಸಮೀಪ ಯುದ್ಧ ನಡೆದು ಬಂಗಾಳದ ಸುಲ್ತಾನ ಮತ್ತು ಆಫ್ಘಾನಿನ ಸುಲ್ತಾನ ಸೋತರು. ಈ ವಿಜಯವು ಶೇರ್‌ಖಾನನ ಜೀವನದಲ್ಲಿ ಒಳ್ಳೆಯ ಪ್ರಭಾವವನ್ನೇ ಬೀರಿತು. ಈ ಯುದ್ಧದಲ್ಲಿ ಆತ ಗೆಲ್ಲದಿದ್ದ ಪಕ್ಷದಲ್ಲಿ ಖಂಡಿತ ಮುಂದೆ ಎಂದೂ ಮಹಾ ಸಾಮ್ರಾಟನಾಗಲು ಸಾಧ್ಯವಿರುತ್ತಿರಲಿಲ್ಲ.

ಹುಮಾಯೂನ್ ಗುಜರಾತಿನ ಮೇಲೆ ಆಕ್ರಮಣ ಮಾಡಿ ಅಲ್ಲಿಯ ಸುಲ್ತಾನ ಬಹಾದೂರ್ ಷಾರೊಡನೆ ಸೆಣಸುತ್ತಿದ್ದಾಗ ಶೇರ್‌ಖಾ ಗುಟ್ಟಾಗಿ ಬಂಗಾಳದ ಮೇಲೆ ಆಕ್ರಮಣ ಮಾಡಿದ. ಮಹಮೂದ ಷಾನಿಗೆ ಆಫ್ಘಾನರನ್ನು ಎದುರಿಸುವಷ್ಟು ಶಕ್ತಿ ಇರಲಿಲ್ಲ. ಅಲ್ಲದೆ ಷೇರ್‌ಖಾನನ ಶಕ್ತಿಯನ್ನು ಮೊದಲೇ ನೋಡಿದ್ದ. ಆದ್ದರಿಂದ ಆತ ಶೇರ್‌ಖಾನನಿಗೆ ಮೂರು ಲಕ್ಷ ನಾಣ್ಯಗಳನ್ನೂ ಅನೇಕ ಜಿಲ್ಲೆಗಳನ್ನೂ ಕೊಟ್ಟು ಸಂಧಿ ಮಾಡಿಕೊಂಡನು. ಇದರಿಂದ ಶೇರ್‌ಖಾನನ ಶಕ್ತಿ ಮತ್ತು ಪ್ರತಿಷ್ಠೆ ಮೊದಲಿಗಿಂತ ಹೆಚ್ಚಾಯಿತು. ಅತ್ತ ಗುಜರಾತಿನಲ್ಲಿ ಹುಮಾಯೂನ್ ಬಹದೂರ್ ಷಾನನ್ನು ಸೋಲಿಸಿದನು. ಪರಿಣಾಮವಾಗಿ ಅನೇಕ ಮಂದಿ ಆಫ್ಘಾನ್ ಸರದಾರರು ಹೊಸ ನಾಯಕ ಶೇರ್‌ಖಾನನ ಬಳಿ ಬಂದರು.

ಹುಮಾಯೂನ್ ಗುಜರಾತಿನಿಂದ ಹಿಂತಿರುಗಿ ಆಗ್ರಾದಲ್ಲಿ ಕ್ರೀಡಾ ಮಗ್ನನಾಗಿ

ದ್ದಾಗ ಶೇರ್ ಖಾನ್ ತನ್ನ ಆಫ್ಘಾನ್ ಸರದಾರರೊಡನೆ ಬಂಗಾಳದ ಮೇಲೆ ಆಕ್ರಮಣ ಮಾಡಿದನು. ಬಂಗಾಳವನ್ನು ಗೆದ್ದು ತನ್ನ ರಾಜ್ಯದೊಡನೆ ಸೇರಿಸಿಕೊಳ್ಳಬೇಕೆಂದು ಆತ ನಿಶ್ಚಯಿಸಿದ್ದನು. ಮೊದಲು ಬಂಗಾಳದ ರಾಜಧಾನಿ ಗೌಡದ ಮೇಲೆ ಅವನ ಆಕ್ರಮಣ ನಡೆಯಿತು. ಹುಮಾಯೂನನಿಗೆ ಈ ವಿಷಯ ತಿಳಿದಾಗ ಆತ ಕಕ್ಕಾಬಿಕ್ಕಿಯಾದ. ಶೇರ್ ಖಾನ್ ಆಗಿನ ಪರಿಸ್ಥಿತಿಯಿಂದ ಲಾಭ ಪಡೆದು ಕ್ರಿ.ಶ. ೧೫೩೮ರ ಏಪ್ರಿಲ್ ತಿಂಗಳಿನಲ್ಲಿ ಗೌಡವನ್ನು ವಶಪಡಿಸಿಕೊಂಡನು.

ಹುಮಾಯೂನ್ ಚುನಾರನ್ನು ಗೆಲ್ಲಲಾರದೆ ಕ್ರಿ.ಶ. ೧೫೩೮ರ ಜುಲೈ ತಿಂಗಳಲ್ಲಿ ಗೌಡದ ಕಡೆ ಹೊರಟ. ಶೇರ್ ಖಾನನಿಗೆ ಯುದ್ಧದ ಅನುಭವ ಸಾಕಷ್ಟು ದೊರಕಿತ್ತು. ಆತ ಬಂಗಾಳದಲ್ಲಿ ಹುಮಾಯೂನ್‌ನೊಡನೆ ಯುದ್ಧ ಮಾಡಲು ಇಷ್ಟಪಡಲಿಲ್ಲ. ತಾನೇ ಗೌಡದಿಂದ ಸರಿದು ಬಿಹಾರು ಜೌನಪುರ ಮತ್ತು ಕನೋಜದ ಮೊಗಲರ ಪ್ರದೇಶಗಳನ್ನು ಗೆಲ್ಲಲು ಮತ್ತು ಲೂಟಿ ಮಾಡಲು ಪ್ರಾರಂಭಿಸಿದನು.

ಈ ವೇಳೆಗೆ ಮಳೆಗಾಲವು ಮೊದಲಾಯಿತು. ಹುಮಾಯೂನ್ ಸ್ವಭಾವತಃ ಸೋಮಾರಿ ಮತ್ತು ವಿಲಾಸಿ. ಗೌಡ ದೇಶದ ವಿಜಯ ಮಹೋತ್ಸವವನ್ನು ಮಾಡುವುದರಲ್ಲಿ ಮಗ್ನನಾಗಿದ್ದು ಕಣ್ಣು ತೆರೆಯುವ ವೇಳೆಗೆ ಶೇರ್ ಖಾನ್ ಅವನ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ಆಗ್ರಾಕ್ಕೆ ಹೋಗುವ ದಾರಿಯನ್ನು ಮುಚ್ಚಿದನು. ಹುಮಾಯೂನ್ ಆಗ್ರಾಕ್ಕೆ ಹಿಂತಿರುಗಲು ಬೇಗ ಬೇಗ ಬಂಗಾಳ ದಿಂದ ಓಡಿದನು. ಆದರೆ ದಾರಿ ಮುಚ್ಚಿಹೋಗಿದ್ದಿತು. ಇಬ್ಬರಿಗೂ ಭಯಂಕರ ಯುದ್ಧವಾಯಿತು. ಅನೇಕ ಮೊಗಲ ಸೈನಿಕರು ಸೆರೆಯಾದರು ಅಥವಾ ನದಿಯಲ್ಲಿ ಮುಳುಗಿದರು. ಹುಮಾಯೂನನು ತನ್ನ ಕುದುರೆಯನ್ನು ನದಿಗೆ ಹಾಕಿ ಮುಳುಗು ವುದರಲ್ಲಿದ್ದ. ಅಷ್ಟರಲ್ಲಿ ಒಬ್ಬ ನೀರು ಹೊರುವವ ಅವನನ್ನು ರಕ್ಷಿಸಿದನು. ಹುಮಾಯೂನ್ ಬಾದಷಹನಾದಾಗ ತನ್ನ ಮಾತಿನಂತೆ ಬಚ್ಚಿಸಕ್ಕನೆಂಬ ಆ ನೀರು ಹೊರುವವನನ್ನು ಒಂದು ದಿವಸದ ಮಟ್ಟಿಗೆ ರಾಜನನ್ನಾಗಿ ಮಾಡಿದನೆಂದು ಹೇಳುವರು. ಬಚ್ಚಿಸಕ್ಕ ಆ ದಿನ ತನ್ನ ಹೆಸರಿನಲ್ಲಿ ಚರ್ಮದ ನಾಣ್ಯವನ್ನು ಹೊರಡಿ ಸಿದನಂತೆ. ಈ ವೇಳೆಗೆ ಶೇರ್ ಖಾನ್ ಕನೋಜದ ಅಸನು ಮತ್ತು ಚಟಗ್ರಾಮದ ಒಂದು ದೊಡ್ಡ ಪ್ರದೇಶದ ಒಡೆಯನಾದ. ವಿಜಯ ಮಹೋತ್ಸವವನ್ನು ವೈಭವ

ದಿಂದ ಮಾಡಿಕೊಂಡು ಸಾಮ್ರಾಟನೆಂಬ ಬಿರುದು ಪಡೆದು ಶೇರ್‌ಖಾನನ ಬದಲು ಶೇರ್‌ಶಾಹನಾದನು.

ಹುಮಾಯೂನ್ ಬಹಳ ಪ್ರಯತ್ನಪಟ್ಟರೂ ತನ್ನ ಸಹೋದರರ ಸಹಯೋಗ ಪಡೆಯಲಾರದಾದ. ಮರುವರ್ಷವೇ ಆತ ಒಬ್ಬಂಟಿಗನಾಗಿ ಶೇರ್‌ಶಾಹನ ಮೇಲೆ ಆಕ್ರಮಣ ಮಾಡಿದನು. ಕ್ರಿ.ಶ. ೧೫೪೦ರ ಮೇ ೧೭ಕ್ಕೆ ಮೊಗಲ ಮತ್ತು ಆಫ್ಘಾನ್ ಸೈನ್ಯವು ಕನೋಜ ಬಳಿ ಎದುರಾದುವು. ಶೇರ್‌ಶಾಹನ ಬಳಿ ಐವತ್ತು ಸಾವಿರ ಸೈನಿಕರಿದ್ದರೆ ಹುಮಾಯೂನನ ಬಳಿ ಒಂದು ಲಕ್ಷ ಸೈನಿಕರಿದ್ದರು. ಆದರೇನು ಮೊಗಲರ ಸೈನ್ಯಸಂಘಟನೆ ಸರಿಯಿರಲಿಲ್ಲ. ಅಧಿಕಾರಿಗಳು ಸೋಮಾರಿಗಳೂ, ವಿಲಾಸಿಗಳೂ, ಶಕ್ತಿಹೀನರೂ ಆಗಿದ್ದರು. ಒಂದು ಗುಂಡಿನೇಟೂ ಇಲ್ಲದೆ ಆಫ್ಘಾನರು ಜಯಶೀಲರಾದರು. ಹುಮಾಯೂನ್ ಪ್ರಾಣ ಉಳಿಸಿಕೊಂಡು ಓಡಿಹೋಗಿ ಒಂದು ವರ್ಷದವರೆಗೆ ಅತ್ತ ಇತ್ತ ಅಲೆಯುತ್ತಿದ್ದನು. ಶೇರ್‌ಶಾಹ ಗರ್ವದಿಂದ ಡೆಲ್ಲಿಗೆ ಪ್ರವೇಶಿಸಿ ಹಿಂದೂಸ್ತಾನದ ಬಾದಷಹನಾದನು.

ಶೇರ್‌ಶಾಹ ಐದು ವರ್ಷಗಳ ಕಾಲ ರಾಜ್ಯವಾಳಿದನು. ಸಾಧಾರಣ ಜಹಗೀರುದಾರರಿಂದ ಬಾದಷಹನಾದನೆಂದು ಆತ ಮಹಾ ವ್ಯಕ್ತಿಯಾಗಲಿಲ್ಲ. ಸಾಧಾರಣ ಕುಲದಲ್ಲಿ ಜನಿಸಿ ಮುಂದುಬಂದ ಅನೇಕ ವ್ಯಕ್ತಿಗಳ ಹೆಸರು ಇತಿಹಾಸದಲ್ಲಿದೆ. ಅತ್ಯಲ್ಪ ಕಾಲದಲ್ಲಿ ಆತ ನಡೆಸಿದ ಮಹತ್ತ್ವದ ಕೆಲಸಗಳನ್ನು ನೋಡಿ ನಾವು ಆಶ್ಚರ್ಯಗೊಳ್ಳುತ್ತೇವೆ. ಹಿಂದುವಾಗಿದ್ದ ಕಾರಣ ಭಾರತದ ಪರಂಪರೆಯ ಪರಿಚಯ ಅವನಿಗಿದ್ದಿತು. ಸಮಯಕ್ಕನುಸಾರವಾಗಿ ಪರಂಪರೆಯನ್ನು ಹೇಗೆ ಬದಲಿಸಬೇಕೆಂದು ಆತ ಅರಿತಿದ್ದನು. ಪಠಾಣ ಸರದಾರರಲ್ಲದೆ ಹಿಂದುಗಳ ವಿಶ್ವಾಸ ಮತ್ತು ಸಹಯೋಗ ಅವನಿಗಿದ್ದಿತು. ಅವುಗಳ ಸಹಾಯದಿಂದ ಆತ ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ. ಮುಂದೆ ಈ ಸುಧಾರಣೆಗಳ ಆಧಾರದ ಮೇಲೆ ಅಕ್ಬರ್ ತನ್ನ ರಾಜ್ಯಕ್ಕೆ ತಳಪಾಯ ಹಾಕಿಕೊಂಡನು.

ಶೇರ್‌ಶಾಹ ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸಂಚರಿಸಲು ಅನೇಕ ರಸ್ತೆಗಳನ್ನು ಮಾಡಿಸಿದ. ವಾಸ್ತವವಾಗಿ ಈ ರಸ್ತೆಗಳಿಂದಲೇ ದೇಶದ ಐಕ್ಯ ಸಾಧ್ಯವಾಯಿತೆಂದು ಹೇಳಬಹುದು. ಇವುಗಳಲ್ಲಿ ಕಲ್ಕತ್ತೆಯಿಂದ ಪೆಶಾವರದವರೆಗೆ ಇರುವ ಗ್ರಾಂಡ್‌ಟ್ರಂಕ್ ರಸ್ತೆಯನ್ನು ನಾವು ಈಗಲೂ ನೋಡಬಹುದು.

ಆತ ರಸ್ತೆಗಳ ಇಕ್ಕೆಡೆಗಳಲ್ಲೂ ನೆರಳನ್ನೀವ ಮರಗಳನ್ನು ನೆಡಿಸಿ ಯಾತ್ರಿಕರಿಗಾಗಿ ಸತ್ರಗಳನ್ನು ಕಟ್ಟಿಸಿದನು. ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪತ್ರಗಳು ತಲುಪುವಂತೆ ಅಂಚೆ ವ್ಯವಸ್ಥೆಯೂ ಆಯಿತು. ಬಾದಷಹನ ಗುಪ್ತಚಾರರು ದೇಶದ ಎಲ್ಲ ಸಮಾಚಾರವನ್ನೂ ಅವನಿಗೆ ತಿಳಿಸುತ್ತಿದ್ದರು.

ಶೇರ್‌ಶಾಹ ಆಡಳಿತದ ಅನುಕೂಲತೆಗಾಗಿ ರಾಜ್ಯವನ್ನು ನಲವತ್ತೇಳು ಭಾಗ ವಾಗಿ ವಿಂಗಡಿಸಿದ. ಅಧಿಕಾರಿಗಳನ್ನು ಸ್ವತಃ ರಾಜನೇ ನಿರೀಕ್ಷಿಸುತ್ತಿದ್ದ. ದೊಡ್ಡವರು ಯಾವಾಗಲೂ ಕ್ರಿಯಾಶೀಲರಾಗಿರಬೇಕೆಂಬ ನಿಯಮ ಅಶೋಕ ಮತ್ತು ಹರ್ಷ ವರ್ಧನರಂತೆ ಶೇರ್‌ಶಾಹನಿಗೂ ಪ್ರಿಯವಾಗಿತ್ತು.

ದುರದೃಷ್ಟಕ್ಕೆ ಇಷ್ಟು ಯೋಗ್ಯ ಮತ್ತು ಆಡಳಿತಗಾರ ಅಲ್ಪ ವಯಸ್ಸಿನಲ್ಲೇ ಕಣ್ಣು ಮುಚ್ಚಿದನು. ಒಮ್ಮೆ ಶೇರ್‌ಶಾಹ ಕೋಟೆಯೊಂದನ್ನು ಆಕ್ರಮಿಸಿದ್ದಾಗ ಆಕಸ್ಮಿಕವಾಗಿ ಸುರಂಗ ಮಾರ್ಗ ಒಡೆದು ಕ್ರಿ.ಶ. ೧೫೪೫ರಲ್ಲಿ ಆತ ಮೃತನಾದನು.

ಚೈತನ್ಯ ಮಹಾಪ್ರಭು

ಚೈತನ್ಯ ಮಹಾಪ್ರಭುವು ಕ್ರಿ.ಶ. ೧೪೮೫ರ ಕಾಮನಹಬ್ಬದ ದಿನ ಬಂಗಾಳದ ನವದ್ವೀಪ ನಗರದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಪಂಡಿತ ಜಗನ್ನಾಥ ಮಿಶ್ರರು. ತಾಯಿಯ ಹೆಸರು ಶಚೀದೇವಿ.

ಅವರ ಬಾಲ್ಯದ ಹೆಸರು ವಿಶ್ವಂಭರರೆಂದು. ಬಹಳ ಸುಂದರವಾಗಿಯೂ ಬೆಳ್ಳಗೂ ಇದ್ದರು. ಜನಗಳು ಅವರಿಗೆ ಗೌರಾಂಗರೆಂದು ಹೆಸರಿಟ್ಟಿದ್ದರು. ತಾಯಿ ಮಾತ್ರ ಮುದ್ದಿಗೆ 'ನಿಮಾಯಿ' ಎಂದು ಕರೆಯುತ್ತಿದ್ದಳು. ಈ ಬಾಲಕನೇ ಮುಂದೆ ಚೈತನ್ಯ ಮಹಾಪ್ರಭುವೆಂಬ ಸರ್ವಪೂಜ್ಯ ವ್ಯಕ್ತಿಯಾದನು. ಇವನಿಗೊಬ್ಬ ಅಣ್ಣನಿದ್ದ. ಅವನ ಹೆಸರು ವಿಶ್ವರೂಪನೆಂದು.

ನಾಮಕರಣದ ಸಮಯದಲ್ಲಿ ನಿಮಾಯಿಯ ಸ್ವಭಾವದ ಪರೀಕ್ಷೆ ನಡೆಯಿತು. ಅವನ ಮುಂದೆ ವಸ್ತ್ರ, ಆಯುಧ, ರೂಪಾಯಿ, ಪುಸ್ತಕ ಮುಂತಾದವುಗಳನ್ನು ಇಟ್ಟರು. ಮಗು ಬೇಗ ಬೇಗ ಕೈಯೋಡಿಸಿ ಭಾಗವತದ ಮೇಲೆ ಇಟ್ಟಿತು. ಹೀಗೆ ನಿಮಾಯಿ ಬಾಲ್ಯದಲ್ಲೇ ತನ್ನ ಭಗವತ್ಪ್ರೇಮವನ್ನು ವ್ಯಕ್ತಪಡಿಸಿದ್ದನು.

ನಿಮಾಯಿಯು ಬಾಲ್ಯದಲ್ಲೇ ಚುರುಕಾದ ಮತ್ತು ಚಂಚಲ ಸ್ವಭಾವದ ವ್ಯಕ್ತಿ. ಅವನ ಬಾಲ್ಯಲೀಲೆಗಳನ್ನು ನೋಡುವಾಗ ಕೃಷ್ಣನ ಬಾಲ್ಯ ಲೀಲೆಯ ನೆನಪಾಗುತ್ತಿತ್ತು. ಒಂದು ದಿನ ಒಂದು ಕೃಷ್ಣಸರ್ಪವು ಅವರ ಮನೆಗೆ ಬಂದಿತಂತೆ. ನಿಮಾಯಿಯನ್ನು ನೋಡಿ ಅದು ಹೆಡೆಬಿಚ್ಚಿ ಕುಳಿತುಕೊಂಡಿತು. ನಿಮಾಯಿ ಬಾಲಕನಲ್ಲವೆ! ಹೆದರಿಕೆ ಇಲ್ಲದೆ ಹಾವಿನ ಹೆಡೆಯನ್ನು ಸವರತೊಡಗಿದ. ಹಾವು ತೂಗಾಡುತ್ತಿದ್ದರೆ ನಿಮಾಯಿಯು ಕೇಕೆ ಹಾಕಿ ನಗುತ್ತಿದ್ದ. ಆಗ ತಾನೆ ಬಂದ ಅವರ ತಾಯಿ ಮತ್ತು ಅಣ್ಣ ಈ ದೃಶ್ಯವನ್ನು ನೋಡಿ ಹೆದರಿ ನಡುಗತೊಡಗಿದರು. ಏನು ಮಾಡಬೇಕೆಂದು ಹೊಳೆಯಲೇ ಇಲ್ಲ. ನಿಮಾಯಿಯು ತಾಯಿಯನ್ನು ನೋಡಿ ಅವರ ಬಳಿ ಓಡಿದಾಗ ಸರ್ಪವು ತನ್ನ ದಾರಿ ಹಿಡಿಯಿತು.

ಒಮ್ಮೆ ಬ್ರಾಹ್ಮಣನೊಬ್ಬನು ನಿಮಾಯಿಯ ಮನೆಯ ಬಳಿ ಬಂದನು. ತಂದೆ ತಾಯಿಗಳು ಬ್ರಾಹ್ಮಣನಿಗೆ ವಿಶೇಷ ಗೌರವ ತೋರಿಸಿದರು. ಶಚೀದೇವಿಯು

ಅಡಿಗೆಯ ಸಾಮಾನನ್ನು ಕೊಡಲು ಆ ಬ್ರಾಹ್ಮಣ ಅಡಿಗೆ ಮಾಡಿದನು. ಊಟ ಮಾಡುವ ಮುಂಚೆ ಆತ ಕಣ್ಣುಮುಚ್ಚಿ ವಿಷ್ಣುವನ್ನು ಧ್ಯಾನಿಸಿದನು. ಅಷ್ಟರಲ್ಲಿ ಬಾಲಕ ನಿಮಾಯಿ ಎಲ್ಲಿಂದಲೋ ಬಂದು ತಟ್ಟೆಗೆ ಕೈಹಾಕಿ ಊಟ ಮಾಡತೊಡಗಿದನು. ಇದನ್ನು ನೋಡಿ ಬ್ರಾಹ್ಮಣ ಬೇಸರಗೊಂಡು—ಇದು ಯಾರ ಮಗು? ಎಂದು ಕೇಳಿದನು.

ಆ ದಿನಗಳಲ್ಲಿ ಊಟ, ಪಾತ್ರೆ ಮುಂತಾದವುಗಳ ಪವಿತ್ರತೆಯನ್ನು ಜನಗಳು ಬಹಳ ಗಮನಿಸುತ್ತಿದ್ದರು. ಬ್ರಾಹ್ಮಣ ತನ್ನ ಕೈಯಿಂದಲೇ ಊಟ ತಯಾರಿಸಿದ್ದನು. ನಿಮಾಯಿ ಮುಟ್ಟಿದ್ದರಿಂದ ಊಟ ಅಪವಿತ್ರವಾಯಿತು. ಜಗನ್ನಾಥ ಮಿಶ್ರನಿಗೆ ಈ ಸುದ್ದಿ ತಿಳಿದಾಗ ಓಡಿ ಬಂದ. ನಿಮಾಯಿಯನ್ನು ಹೊಡೆಯ ತೊಡಗಿದ. ಆದರೆ ಬ್ರಾಹ್ಮಣ ಅವನನ್ನು ತಡೆದನು.

ಶಚೀದೇವಿಯ ಬೇಡಿಕೆಯ ಮೇಲೆ ಆ ಬ್ರಾಹ್ಮಣ ಮತ್ತೆ ಅಡಿಗೆ ಮಾಡಿದ. ಆಗ ನಿಮಾಯಿಯನ್ನು ದೂರ ಕರೆದುಕೊಂಡು ಹೋಗಿ ಹಗ್ಗದಲ್ಲಿ ಕಟ್ಟಿಹಾಕಿದ್ದರು. ಬ್ರಾಹ್ಮಣ ಮತ್ತೆ ಕಣ್ಣುಮುಚ್ಚಿ ದೇವರನ್ನು ಸ್ಮರಿಸುತ್ತಿದ್ದಾಗ ಇದ್ದಕ್ಕಿದ್ದ ಹಾಗೆ ನಿಮಾಯಿ ಹೇಗೋ ತಪ್ಪಿಸಿಕೊಂಡು ಬಂದು ಊಟ ಮಾಡತೊಡಗಿದ. ಹಗ್ಗವನ್ನು ಹೇಗೆ ಬಿಚ್ಚಿದನೆಂಬುದು ಯಾರಿಗೂ ತಿಳಿಯದು. ಬ್ರಾಹ್ಮಣನ ಊಟ ಮತ್ತೆ ಅಪವಿತ್ರವಾಯಿತು. ಆತ ತನಗೆ ಊಟ ಮಾಡುವ ಭಾಗ್ಯವಿಲ್ಲವೆಂದು ಉಪವಾಸವಿರಲು ನಿಶ್ಚಯಿಸಿದ. ಆದರೆ ಶಚೀದೇವಿ ಮತ್ತು ಮಿಶ್ರರ ಆಗ್ರಹಕ್ಕೆ ಒಳಗಾಗಿ ಮತ್ತೆ ಅಡಿಗೆ ಮಾಡಿಕೊಳ್ಳಬೇಕಾಯಿತು. ನಿಮಾಯಿಯನ್ನು ಮತ್ತೆ ಕಟ್ಟಿಹಾಕಿ ಬಿಚ್ಚಿಕೊಳ್ಳದಿರಲೆಂದು ಅವನ ಅಣ್ಣನನ್ನು ಕಾವಲಿಗೆ ಕೂರಿಸಿದರು.

ಈ ಸಲ ಬ್ರಾಹ್ಮಣ ದೇವರಿಗೆ ನೈವೇದ್ಯ ಮಾಡಲು ಕಣ್ಮುಚ್ಚಿದಾಗ ಒಂದು ವಿಚಿತ್ರ ದೃಶ್ಯವನ್ನು ಕಂಡ. ಸಾಕ್ಷಾತ್ ವಿಷ್ಣುವೇ ಮುಂದೆ ಬಂದು, ನೀನು ಕರೆದ ಮೇಲೆ ಎರಡು ಬಾರಿ ಬಾಲಕನ ರೂಪದಲ್ಲಿ ನಿನ್ನ ಬಳಿ ಬಂದಾಯಿತು. ಆದರೆ ನೀನು ಗುರುತಿಸಲಿಲ್ಲ. ಈಗ ನಿನಗೇನು ಬೇಕು ಹೇಳು—ಎಂದು ಕೇಳಿದಂತಾಯಿತು.

ಈಗ ಬ್ರಾಹ್ಮಣನಿಗೆ ವಿಷಯ ಗೊತ್ತಾಯಿತು. ವಿಷ್ಣುವೇ ನಿಮಾಯಿಯ ರೂಪದಲ್ಲಿ ಪ್ರಸಾದನನ್ನು ಸ್ವೀಕರಿಸಿದ್ದ. ಬ್ರಾಹ್ಮಣ ದೇವರಲ್ಲಿ ಕ್ಷಮಾಯಾಚನೆ ಮಾಡಿದ. ದೇವರು ಬೇಡಿದ ವರವಿತ್ತು ಅದೃಶ್ಯನಾದನು.

ನಿಮಾಯಿಯು ತನ್ನ ಬಾಲ್ಯದ ಚೇಷ್ಟೆಯಿಂದ ಎಲ್ಲರನ್ನೂ ಆಕರ್ಷಿಸುತ್ತಿದ್ದನು. ಅಕ್ಕಪಕ್ಕದವರೊಡನೆ ಜಗಳವಾಡಿ ಸಿಕ್ಕದನ್ನು ಕಿತ್ತು ತಿನ್ನುತ್ತಿದ್ದನು. ಆತ ಜಾತಿ ಭೇದ ಮಾಡುತ್ತಿರಲಿಲ್ಲ.

ನಿಮಾಯಿಯು ಓದುವುದರಲ್ಲಿಯೂ ಮುಂದಿದ್ದನು. ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತದ ವಿದ್ವಾಂಸನಾದನು. ಅವನ ಹನ್ನೊಂದನೆ ವಯಸ್ಸಿನಲ್ಲಿ ತಂದೆ ಕಾಲವಾದರು. ಇದಕ್ಕೆ ಮುಂಚೆ ಅವನ ಅಣ್ಣ ವಿಶ್ವರೂಪ ಮದುವೆಗೆ ಹೆದರಿ ಮನೆ ಬಿಟ್ಟು ಓಡಿದ್ದ. ಆತ ಸನ್ಯಾಸಿಯಾಗಿರುವನೆಂದು ತಿಳಿದು ಬಂದಿತು. ಎಷ್ಟೋ ಹುಡುಕಿದರೂ ಆತ ಮಾತ್ರ ದೊರೆಯಲಿಲ್ಲ.

ಬಾಲಕ ನಿಮಾಯಿಯ ಮೇಲೆ ಮನೆಯ ಭಾರವೆಲ್ಲಾ ಬಿದ್ದಿತು. ಆದರೂ ಆತ ಹೆದರಲಿಲ್ಲ ತಾಯಿಗೆ ಧೈರ್ಯ ಹೇಳಿ ತನುಮನದಿಂದ ಅವಳ ಸೇವೆ ಮಾಡ ತೊಡಗಿದ. ಓದಲೂ ಸಮಯ ಮಾಡಿಕೊಳ್ಳುತ್ತಿದ್ದನು. ನ್ಯಾಯಶಾಸ್ತ್ರದ ಪ್ರಸಿದ್ಧ ವಿದ್ವಾಂಸ ವಾಸುದೇವ ಸಾರ್ವಭೌಮನ ಪಾಠಶಾಲೆಯಲ್ಲಿ ನ್ಯಾಯ ಶಾಸ್ತ್ರವನ್ನು ಓದಿ ಹದಿನಾರನೇ ವಯಸ್ಸಿನಲ್ಲೇ ನ್ಯಾಯಶಾಸ್ತ್ರದ ಮಹಾಪಂಡಿತ ನಾದನು. ದೊಡ್ಡ ದೊಡ್ಡ ವಿದ್ವಾಂಸರೂ ಅವನ ಮುಂದೆ ತಲೆತಗ್ಗಿಸುತ್ತಿದ್ದರು.

ತನ್ನ ವಿದ್ಯಾರ್ಥಿ ಜೀವನದಲ್ಲಿ ನಿಮಾಯಿ ನ್ಯಾಯಶಾಸ್ತ್ರದ ಮೇಲೆ ಒಂದು ಸುಂದರ ಗ್ರಂಥವನ್ನು ಬರೆದನು. ಅವನ ಸಹಪಾಠಿ ರಘುನಾಥ ಶಿರೋಮಣಿಗೆ ಈ ಸಮಾಚಾರ ತಿಳಿದಾಗ ನಿಮಾಯಿಯ ಬಳಿ ಬಂದು ಗ್ರಂಥವನ್ನು ಓದಲು ಕೇಳಿದನು. ನಿಮಾಯಿ ಗೆಳೆಯನ ಕೇಳಿಕೆಯಂತೆ ಪುಸ್ತಕ ಓದಿದ. ಕೇಳುತ್ತಿದ್ದಂತೆಯೇ ರಘುನಾಥನ ಕಣ್ಣಿನಲ್ಲಿ ನೀರು ಬಂದಿತು. ಇದನ್ನು ನೋಡಿ ನಿಮಾಯಿಗೆ ಆಶ್ಚರ್ಯವಾಯಿತು. ಕಾರಣ ಕೇಳಿದಾಗ ಆತ ನಿಮಾಯಿ, ನಾನೂ ನ್ಯಾಯ ಶಾಸ್ತ್ರದ ಮೇಲೆ ಗ್ರಂಥವೊಂದನ್ನು ಬರೆದಿರುವೆ. ನಿನ್ನ ಗ್ರಂಥದ ಮುಂದೆ ಅದನ್ನು ಯಾರೂ ಕೇಳಲಾರರು. ಹೀಗೆ ಯೋಚಿಸಿದಾಗ ಕಣ್ಣೀರು ಬಂದಿತು ಅಷ್ಟೆ ಎಂದುತ್ತರವಿತ್ತನು.

ಪಂಡಿತ ನಿಮಾಯಿಯ ಹೃದಯ ಬಹಳ ಕೋಮಲವಾಗಿದ್ದಿತು. ಎಲ್ಲರನ್ನೂ ತನ್ನವರೆಂದೇ ಭಾವಿಸಿದ್ದನು. ರಘುನಾಥನು ದುಃಖಿತನಾಗಿರುವುದನ್ನು ನೋಡಿ— "ಪ್ರಿಯ ಗೆಳೆಯ, ಇಷ್ಟು ಸಣ್ಣ ಮಾತಿಗೆ ಚಿಂತಿತನಾದೆಯ" ಎಂದು ಹೇಳಿ

ಒಡನೆಯೇ ತನ್ನ ಪುಸ್ತಕವನ್ನು ಗಂಗಾನದಿಗೆ ಎಸೆದುಬಿಟ್ಟನು. ರಘುನಾಥ ಶಿರೋಮಣಿ ನಿಮಾಯಿಯ ಈ ಸ್ನೇಹ ಮತ್ತು ತ್ಯಾಗವನ್ನು ನೋಡಿ ಆಪಕ್ಕಾದ. ನಿಮಾಯಿಯ ಗ್ರಂಥವಂತು ಗಂಗಾನದಿಯ ಅಲೆಯಲ್ಲಿ ಸೇರಿಹೋಯಿತು ಆದರೆ ರಘುನಾಥನ ದೀಧಿತಿ ಎಂಬ ನ್ಯಾಯಶಾಸ್ತ್ರ ಗ್ರಂಥವು ಇಂದೂ ಪ್ರಸಿದ್ಧವಾಗಿದೆ.

ಈ ಘಟನೆಯಾದ ನಂತರ ನಿಮಾಯಿ ಗುರುವಿನ ಬಳಿ ಮತ್ತೆ ಹೋಗಲಿಲ್ಲ. ಮನೆಯಲ್ಲೇ ಕುಳಿತು ಅಧ್ಯಯನ ಮಾಡತೊಡಗಿದನು. ಕೆಲವು ದಿನಗಳಾದ ನಂತರ ಆತ ಸ್ವತಃ ಒಂದು ಪಾಠಶಾಲೆಯನ್ನು ತೆರೆದು ಅನೇಕ ವಿದ್ಯಾರ್ಥಿಗಳನ್ನು ಸೇರಿಸಿ ಕೊಂಡನು.

ಒಂದು ಬಾರಿ ನಿಮಾಯಿ ತಂದೆಯ ಶ್ರಾದ್ಧ ಮಾಡಲು ಗಯೆಗೆ ಹೋದನು. ಅವನು ಹೋದ ಮೇಲೆ ಜನಗಳ ಮುಖದ ಕಾಂತಿಯೇ ಕುಂದಿತು. ಎಲ್ಲೆಲ್ಲೂ ಒಂದು ರೀತಿಯ ಉದಾಸೀನತೆ ತಲೆದೋರಿತು. ಪಟ್ಟಣವೇ ಶೂನ್ಯವಾಯಿತು.

ಕೊನೆಗೆ ಒಂದು ದಿನ ನಿಮಾಯಿ ಶ್ರಾದ್ಧ ಮುಗಿಸಿಕೊಂಡು ಹಿಂತಿರುಗಿದನು. ಆದರೆ ಈಗ ಆತ ಹಿಂದಿನ ನಿಮಾಯಿ ಪಂಡಿತನಾಗಿರಲಿಲ್ಲ. ಅವನಲ್ಲಿ ಒಂದು ವಿಚಿತ್ರ ಬದಲಾವಣೆಯಾಗಿದ್ದಿತು. ಗಯೆಯಿಂದ ಹಿಂತಿರುಗಿದ ಕೆಲವು ದಿನಗಳವರೆವಿಗೆ ಪಾಠಶಾಲೆಯನ್ನು ನಡೆಸಿ ಬೇಗನೇ ಮುಚ್ಚಿಬಿಟ್ಟ. ಏನಾಯಿತೋ ಆತನಂತು ಪಾಠ ಮಾಡುತ್ತಿದ್ದಂತೆಯೇ ಭಾವಪರವಶನಾಗುತ್ತಿದ್ದನು. ಕೆಲವು ಬಾರಿ ಪಾಠ ಮಾಡುವುದನ್ನು ಬಿಟ್ಟು ಎದ್ದು ನೃತ್ಯ ಮಾಡಲು ಪ್ರಾರಂಭಿಸುತ್ತಿದ್ದನು. ನೃತ್ಯ ಮಾಡುತ್ತಾ ಹರಿಕೀರ್ತನೆಗಳನ್ನು ಹೇಳಲು ಪ್ರಾರಂಭಿಸುತ್ತಿದ್ದನು. ದೇವರ ನಾಮವು ಮಧುರ ಸಂಗೀತದ ರೀತಿಯಲ್ಲಿ ಹೊರಬಂದಿತು. ಹರೇಕೃಷ್ಣ! ಹರೇಕೃಷ್ಣ! ಕೀರ್ತನೆ ಹಾಡುತ್ತ ಮತ್ತು ನೃತ್ಯ ಮಾಡುತ್ತಿರುವಾಗ ಆತ ಎಷ್ಟೋ ಬಾರಿ ಜ್ಞಾನತಪ್ಪಿ ಬೀಳುತ್ತಿದ್ದನು ಮತ್ತೆ ಜ್ಞಾನ ಬರುತ್ತಲೇ ನರ್ತಿಸು ತ್ತಿದ್ದನು. ಕೃಷ್ಣನ ವಿರಹದಲ್ಲಿ ಬೆಂದು ಆರ್ತನಾದ ಮಾಡಿ ಮೊರೆ ಇಡುವುದನ್ನು ಕೇಳಿ ಮನುಷ್ಯನ ಹೃದಯವೇನು ಕಲ್ಲೂ ಕರಗುತ್ತಿತ್ತು. ಆಗ ಊಟ ಅಥವಾ ಬಾಯಾರಿಕೆ ಚಿಂತೆ ಇರುತ್ತಿರಲಿಲ್ಲ.

ನೋಡುತ್ತಿದ್ದಂತೆಯೇ ಬಂಗಾಳದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಭಗವದ್ಭಕ್ತಿಯ ಪ್ರವಾಹ ಹರಿಯಿತು. ನಿಮಾಯಿಯ ಜನ್ಮಸ್ಥಾನ

ನವದ್ವೀಪ ಈ ಪ್ರವಾಹಕ್ಕೆ ಉಗಮಸ್ಥಾನವಾಯಿತು. ಮನೆ ಮನೆಯಲ್ಲಿ ಹರಿನಾಮ ಕೀರ್ತನೆಯಾಗತೊಡಗಿತು. ಕೀರ್ತನೆಯ ಗುಂಪು ಪೇಟೆಗೆ ಹೊರಡುತ್ತಿತ್ತು. ಮುಂದೆ ನಿಮಾಯಿ ಹಾಡುತ್ತಾ, ನರ್ತಿಸುತ್ತಾ ಹೋಗುತ್ತಿದ್ದನು. ಜನಗಳು ಅವರ ಮಾರ್ಗದ ಮೇಲೆ ಹೂವನ್ನು ಹರಡುತ್ತಿದ್ದರು. ದೂರ ದೂರದಿಂದ ಭಕ್ತ ಜನರು ನವದೀಪಕ್ಕೆ ಬರತೊಡಗಿದರು. ಪತಂಗವು ದ್ವೀಪಕ್ಕೆ ಮುತ್ತುವಂತೆ ಜನಗಳು ನಿಮಾಯಿಯನ್ನು ಮುತ್ತುತ್ತಿದ್ದರು. ನಿಮಾಯಿಗೆ ಭಗವದ್ಭಕ್ತಿಯೇ ಎಲ್ಲಕ್ಕಿಂತ ದೊಡ್ಡ ಧರ್ಮವಾಗಿತ್ತು. ಆತ ಹೊರಡಿಸಿದ ಧರ್ಮವು ಮೇಲು, ಕೀಳು, ಬಡವ, ಸಾಹುಕಾರ, ಹಿಂದು, ಮುಸ್ಲಿಮ್ ಭೇದಭಾವಗಳನ್ನು ಅಳಿಸಿತು. ಅವನ ಭಕ್ತಿರಸದ ಪ್ರವಾಹ ಎಲ್ಲರಿಗೂ ಸಮಾನವಾಗಿದ್ದಿತು. ಎಲ್ಲರೂ ಯಾವ ರೀತಿಯ ಭೇದ ಭಾವವಿಲ್ಲದೆ ಆ ಪ್ರವಾಹದಲ್ಲೇ ಒಟ್ಟಿಗೇ ಮುಳುಗುತ್ತಿದ್ದರು. ಅವರ ಮನಸ್ಸಿನಿಂದ ದ್ವೇಷ, ಅಸೂಯೆ, ಕೊಳೆ ಕರಗುತ್ತಿತ್ತು.

ನಿಮಾಯಿ ಪಂಡಿತರ ಕೀರ್ತಿ ಎಲ್ಲ ಕಡೆ ಹರಡಿತು. ಶ್ರದ್ಧೆಯಿಂದ ಜನಗಳು ಅವರನ್ನು ಗೌರಾಂಗ ಮಹಾಪ್ರಭುವೆನ್ನುತ್ತಿದ್ದರು. ಕೆಲವು ದ್ವೇಷಿಗಳು ಅವರ ಈ ಪ್ರತಿಷ್ಠೆ ಗೌರವವನ್ನು ನೋಡಿ ಅಸೂಯೆಗೊಂಡರು. ಮುಸಲ್ಮಾನ್ ಕಾಜಿಗೆ ನಿಮಾಯಿಯ ಕೀರ್ತನೆಯಿಂದ ಕೆಲವರು ಬೇಸರಗೊಳ್ಳುತ್ತಿರುವರು. ಅಲ್ಲದೆ ಆತ ಮುಸಲ್ಮಾನರನ್ನೂ ಕೃಷ್ಣಭಕ್ತರನ್ನಾಗಿ ಮಾಡುತ್ತಿರುವರೆಂದು ದೂರಿತ್ತರು.

ಇದನ್ನು ಕೇಳುತ್ತಲೇ ಕಾಜಿ ನಗರದಲ್ಲೆಲ್ಲಾ ಕೀರ್ತನೆಯನ್ನು ನಿಲ್ಲಿಸಬೇಕೆಂದು ಆಜ್ಞೆ ಇತ್ತ. ಆದರೆ ಗೌರಾಂಗ ಮಹಾಪ್ರಭುವು ಉತ್ತರವಾಗಿ ಒಂದು ವಿಚಿತ್ರ ಕೆಲಸ ನೆರವೇರಿಸಿದರು. ಅವರ ಕೀರ್ತನೆಯಲ್ಲಿ ಒಂದು ಆಕರ್ಷಕ ಶಕ್ತಿ ಇದ್ದು ಕಾಜಿಯು ಅರಮನೆಯಿಂದ ಹೊರಬಂದು ಸ್ವತಃ ನರ್ತಿಸತೊಡಗಿದ. ದೂರಿತ್ತವರು ಮನಸ್ಸಿನಲ್ಲೇ ಶಪಿಸಿ ತೆಪ್ಪಗಾದರು. ಹೀಗೆ ನಿಮಾಯಿಯು ಬಂಗಾಳದ ಹಿಂದುಗಳನ್ನೂ ಮುಸಲ್ಮಾನರನ್ನೂ ಒಂದೇ ಸೂತ್ರದಲ್ಲಿ ಬಂಧಿಸಿದ.

ಬಂಗಾಳವಲ್ಲಿ ಕಾಳಿಯ ಪೂಜೆಗಾಗಿ ಅನೇಕ ಪ್ರಾಣಿಗಳನ್ನು ಬಲಿ ಕೊಡುವ ವಾಡಿಕೆ ಇತ್ತು. ಗೌರಾಂಗರು ಪಶುಬಲಿ ತಪ್ಪೆಂದು ತಿಳಿದಿದ್ದರು. ಅವರ ಪ್ರಭಾವದಿಂದ ಈ ರೀತಿಯ ಅನೇಕ ಸಮಾಜದ ದುಷ್ಟ ಪದ್ಧತಿಗಳು ದೂರವಾದವು.

ಒಂದು ದಿನ ಗೌರಾಂಗರು ಸನ್ಯಾಸಿಯಾದರು. ಸನ್ಯಾಸಿಯಾಗುವ ಮೊದಲು

ತಾಯಿಯ ಬಲಾತ್ಕಾರಕ್ಕಾಗಿ ಮೊದಲ ಪತ್ನಿ ತೀರಿಹೋಗಲು ಎರಡನೆ ವಿವಾಹ ಮಾಡಿಕೊಂಡಿದ್ದರು. ಆದರೆ ಗೃಹಸ್ಥ ಜೀವನ ಅವರಿಗೆ ರುಚಿಸಲಿಲ್ಲ. ಸನ್ಯಾಸಿಯಾದ ನಂತರ ಅವರು 'ಚೈತನ್ಯ'ರೆನಿಸಿಕೊಂಡರು. ಚೈತನ್ಯರು ಅಲೆದಲೆದು ವೈಷ್ಣವ ಧರ್ಮ ಅಥವಾ ಭಗವದ್ಭಕ್ತಿಯನ್ನು ಪ್ರಚಾರ ಮಾಡತೊಡಗಿದರು. ಈ ಹುಚ್ಚಿನಲ್ಲೇ ಅವರು ಅರಣ್ಯ ನದಿ ಪರ್ವತಗಳನ್ನು ದಾಟಿ ದಕ್ಷಿಣ ಭಾರತಕ್ಕೆ ಬಂದಿದ್ದರು. ಅವರ ಸಂಪರ್ಕಕ್ಕೆ ಬಂದು ಅನೇಕ ಕೆಟ್ಟ ಜನಗಳು ಒಳ್ಳೆಯ ಮಾರ್ಗಕ್ಕೆ ಬಂದು ಪವಿತ್ರವಾದ ಜೀವನ ನಡೆಸತೊಡಗಿದರು.

ಅವರ ಭಕ್ತಿ ಮತ್ತು ದೇವೋನ್ಮಾದಕ್ಕೆ ಎಲ್ಲೆಯೇ ಇಲ್ಲ. ಈ ಉನ್ಮಾದದ ಮಸ್ತಿನಲ್ಲಿಯೇ ಅವರು ಎರಡು ಬಾರಿ ಸಮುದ್ರದಲ್ಲಿ ದುಮುಕಿದರು. ಅದೃಷ್ಟವಶಾತ್ ಎರಡು ಬಾರಿಯೂ ಬದುಕಿ ಬಂದರು. ಇಪ್ಪತ್ನಾಲ್ಕು ಗಂಟೆಯೂ ಅವರಿಗೆ ಕೃಷ್ಣಭಕ್ತಿಯ ಉನ್ಮಾದ ಏರಿರುತ್ತಿತ್ತು. ತಮ್ಮ ದೇಹದ ಚಿಂತೆಯೇ ಇರುತ್ತಿರಲಿಲ್ಲ.

ಚೈತನ್ಯರ ಮೃತ್ಯು ಜಗನ್ನಾಥಪುರಿಯಲ್ಲಿ ರಥೋತ್ಸವದ ಸಂದರ್ಭದಲ್ಲಾಯಿತು. ಆಗ ಅವರಿಗೆ ಕೇವಲ ನಲವತ್ತೆಂಟು ವರುಷಗಳು. ಅವರ ಅದ್ಭುತ ಜೀವನದ ಪ್ರಭಾವವು ಇಡೀ ಬಂಗಾಳವನ್ನೇ ಆವರಿಸಿತ್ತು.

ಇಷ್ಟೇ ಅಲ್ಲ ಭಾರತದ ಅನ್ಯ ಪ್ರದೇಶದಲ್ಲೂ ಕೃಷ್ಣಭಕ್ತಿಯ ಒಂದು ದೊಡ್ಡ ಅಲೆ ಬಂದು ದೇಶದ ಜನಗಳಲ್ಲಿದ್ದ ಭೇದಭಾವವನ್ನು ಅಳಿಸಿ ನಿರ್ಮಲ ಪ್ರೇಮದ ಧಾರೆಯನ್ನು ಹರಿಸಿತು. ಆ ಧಾರೆ ಇನ್ನೂ ಬತ್ತಿಲ್ಲ.

ಭಾರತ ವರ್ಷದ ಐಕ್ಯ ಭಾವವನ್ನು ಭದ್ರಗೊಳಿಸಲು ಧರ್ಮ ಮತ್ತು ಸಂಸ್ಕೃತಿಯ ದೊಡ್ಡ ಕೈವಾಡವಿದೆ. ಯಾವಾಗಲಾದರೂ ದೇಶದ ಬೇರೆ ಬೇರೆ ಪ್ರದೇಶದ ಜನಗಳನ್ನೇ ಒಬ್ಬರೊಡನೊಬ್ಬರನ್ನು ಸೇರಿಸುವ ಶಕ್ತಿ ಕಡಿಮೆಯಾದಾಗ ಇಂತಹ ವಿಭೂತಿ ಪುರುಷರು ಜನ್ಮ ತಾಳಿ ಜನಗಳಿಗೆ ಧರ್ಮೈಕ್ಯದ ಸಂದೇಶವಿತ್ತು ಸರಿಯಾದ ದಾರಿಗೆ ತರುವರು. ಇಂತಹ ವಿಭೂತಿ ಪುರುಷರಲ್ಲಿ ಚೈತನ್ಯ ಮಹಾಪ್ರಭುವಿಗೆ ಮಹತ್ವಪೂರ್ಣ ಸ್ಥಾನವಿದ್ದು ಅವರ ಹೆಸರನ್ನು ಭಾರತೀಯರಾದ ನಾವೆಲ್ಲ ಆದರದಿಂದ ಸ್ಮರಿಸುವೆವು.

ಮೀರಾಬಾಯಿ

ಮೀರಾಬಾಯಿ ಹಿಂದಿಯ ಅತ್ಯಧಿಕ ಪ್ರಸಿದ್ಧ ಭಕ್ತ ಸ್ತ್ರೀ ಕವಿಯಾಗಿದ್ದಾಳೆ. ಅವಳು ರಾಜಸ್ಥಾನದ ನಿವಾಸಿಯಾಗಿದ್ದಳು. ಅವಳ ಜೀವನಕ್ಕೆ ಸಂಬಂಧಿಸಿದ ಹೆಚ್ಚು ಅಂಶಗಳು ಗೊತ್ತಿಲ್ಲ. ಅವಳ ಜನ್ಮ ಮುಂತಾದುವುಗಳ ಬಗ್ಗೆ ನಿಶ್ಚಯ ಪೂರ್ವಕವಾಗಿ ಏನನ್ನೂ ಹೇಳಲಾಗುವುದಿಲ್ಲ. ಅವಳು ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿದ್ದಳೆಂಬುದು ಮಾತ್ರ ಖಚಿತವಾಗಿ ಗೊತ್ತಾಗಿದೆ.

ರಾಜಸ್ಥಾನದ ಜೋಧಪುರ ನಗರದ ಹೆಸರನ್ನು ನೀವು ಕೇಳಿರಬಹುದು. ಇದನ್ನು ರಾವ್ ಜೋಧಾಜಿಯವರು ಸ್ಥಾಪಿಸಿದರು. ಮೀರಾ ಇದೇ ರಾವ್ ಜೋಧಾಜಿಯ ವಂಶೋತ್ಪನ್ನಳು. ಜೋಧಾಜಿಯವರು ರಾಠೌರ್ ವಂಶದವರು. ಅವರ ಪುತ್ರ ರಾವ್ ದೂದಾ ಎಂಬುವರು ಮೇಡಕಾದಲ್ಲಿ ರಾಜ್ಯವನ್ನು ಸ್ಥಾಪಿಸಿದರು. ರಾವ್ ದೂದಾ ಅವರ ಪುತ್ರ ರಾವ್ ರತ್ನಸಿಂಹನಿಗೆ ಅವನ ಜೀವನ ನಿರ್ವಾಹಕ್ಕಾಗಿ ಮೇಡತಾ ರಾಜ್ಯದಿಂದ ಹನ್ನೆರಡು ಗ್ರಾಮಗಳನ್ನು ಕೊಟ್ಟಿದ್ದರು. ಆ ಗ್ರಾಮ ಗಳಲ್ಲಿಯೇ ಕುಡಕಿಯೆಂಬ ಗ್ರಾಮದಲ್ಲಿ ರಾವ್ ರತ್ನಸಿಂಹನ ಮನೆಯಲ್ಲಿ ಮೀರಾ ಬಾಯಿಯು ಜನ್ಮ ತಾಳಿದಳು. ಅವಳ ತಾಯಿಯ ಹೆಸರು ಕುಸುಮಕುವರ್ ಎಂದು. ಅವಳು ಟಾಂಕನಿಯ ರಜಪೂತ ಜಾತಿಯವಳಾಗಿದ್ದಳು.

ಮೀರಾಬಾಯಿ ಬಾಲ್ಯದಲ್ಲಿಯೇ ಬೊಂಬೆಯ ಆಟದಲ್ಲಿ ಮದುವೆಯ ಆಟ ವನ್ನು ಆಡುವಾಗ ಕೃಷ್ಣನ ವಿಗ್ರಹದ ಪಕ್ಕದಲ್ಲಿ ವಧುವಿನ ಸ್ಥಾನದಲ್ಲಿ ಕುಳಿತು ಕೊಳ್ಳಲು ಇಚ್ಛಿಸುತ್ತಿದ್ದಳೆಂದು ಜನಶ್ರುತಿಯಿದೆ.

ಅವಳ ಬಾಲ್ಯದಲ್ಲಿಯೇ ಮೀರಾಬಾಯಿಯ ತಂದೆ ತಾಯಿಗಳು ತೀರಿ ಕೊಂಡರು. ತಂದೆ ಕಾಲವಾದಾಗ ಅವಳಿಗೆ ಮೂರು ವರ್ಷ, ತಾಯಿ ಕಾಲ ವಾದಾಗ ಹತ್ತು ವರ್ಷವೆಂದು ಊಹಿಸಲಾಗಿದೆ. ತಾಯಿಯು ಮೃತಿ ಹೊಂದಿದ ನಂತರ ಅವಳು ತನ್ನ ತಾತ ರಾವ್ ದೂದಾ ಅವರ ಬಳಿಗೆ ಬಂದು ಮೇಡತಾದಲ್ಲಿ ಇರತೊಡಗಿದಳು. ಮೇಡತಾ ಮಾರವಾಡದಲ್ಲಿದ್ದಿತು. ಅಲ್ಲಿಯೇ ಅವಳ ಲಾಲನೆ

ಪಾಲನೆ ಮತ್ತು ವಿದ್ಯಾಭ್ಯಾಸ ಮುಂತಾದುವು ನಡೆದುವು. ರಾವ್ ದೂದಾ ಪರಮ ವೈಷ್ಣವ ಭಕ್ತರು. ಅವರು ಸಾಧುಸಂತರನ್ನು ಬಹಳ ಆದರಿಸುತ್ತಿದ್ದರು. ಕ್ರಮ ಕ್ರಮೇಣ ಮೀರಾಬಾಯಿಯೂ ಕೂಡ ಕೃಷ್ಣಭಕ್ತಿಯಿಂದ ಪ್ರಭಾವಿತಳಾದಳು.

ಆದರೆ ಸ್ವಲ್ಪ ಕಾಲದನಂತರ ರಾವ್ ದೂದಾ ಕೂಡ ಮರಣ ಹೊಂದಿದರು. ಅವರ ಮರಣದ ಅನಂತರ ಅವರ ಜ್ಯೇಷ್ಠಪುತ್ರ ವೀರಮದೇವಜಿ ರಾಜ್ಯ ಸಿಂಹಾಸನ ವನ್ನು ಏರಿದರು. ಮೀರಾ ಈಗ ಪ್ರಾಪ್ತ ವಯಸ್ಕಳಾಗಿದ್ದಳು. ವೀರಮದೇವಜಿಗೆ ಅವಳಿಗಾಗಿ ಯೋಗ್ಯನಾದ ವರನನ್ನು ಹುಡುಕುವ ಚಿಂತೆ ಉಂಟಾಯಿತು. ಆ ಕಾಲದಲ್ಲಿ ಚಿತ್ತೂರಿನ ಸಿಸೋದಿಯಾ ವಂಶದವರ ಕೀರ್ತಿ ನಾಲ್ಕು ಕಡೆಗಳಲ್ಲಿಯೂ ಹರಡುತ್ತಿತ್ತು. ಸಿಸೋದಿಯಾ ವಂಶದ ಮುಖ್ಯಸ್ಥ ರಾಣಾ ಸಾಂಗಾ ಅವರು ಅತ್ಯಂತ ಪ್ರತಾಪಶಾಲಿಗಳಾದ ರಾಜನಾಗಿದ್ದರು. ಅವರ ವೀರತೆ ಪರಾಕ್ರಮಗಳು ಎಲ್ಲೆಲ್ಲಿಯೂ ಪ್ರಭಾವ ಬೀರಿದ್ದುವು ವೀರಮದೇವನು ಮೀರಾಬಾಯಿಯ ವಿವಾಹ ವನ್ನು ರಾಣಾ ಸಾಂಗಾರವರ ಜ್ಯೇಷ್ಠ ರಾಜಕುಮಾರ ಭೋಜರಾಜನೊಡನೆ ಮಾಡಿ ನೆರವೇರಿಸಿದನು. ಈ ರೀತಿ ಮೀರಾಬಾಯಿ ಮಾರವಾಡದ ಪುತ್ರಿಯಾಗಿ ಮೇವಾ ಢಲ್ಲಿ ಮದುವೆಯಾದಳು.

ರಾಣಾ ಸಾಂಗಾಜಿಯವರ ವಂಶವು ತನ್ನ ಪರಾಕ್ರಮ ಮತ್ತು ದೈವಭಕ್ತಿ ಎರಡಕ್ಕೂ ವಿಖ್ಯಾತವಾಗಿತ್ತು. ಮೀರಾಬಾಯಿಯ ದೊಡ್ಡಪ್ಪನಾದ ವೀರಮ ದೇವನು ಅವಳು ಸೇರಿದ ಮನೆ ಅವಳ ಮನಸ್ಸಿಗೆ ಒಪ್ಪಿತವಾಗಿ ಅವಳು ಸುಖಿ ಯಾಗುವಳೆಂದು ಯೋಚಿಸಿದ್ದರು. ಆದರೆ ಮೀರಾಳ ಅದೃಷ್ಟದಲ್ಲಿ ಸುಖ ಬರೆದಿರ ಲಿಲ್ಲ. ಮೀರಾಬಾಯಿಗೆ ತನ್ನ ಪತಿ ರಾಣಾ ಭೋಜರಾಜನ ಪ್ರೀತಿ ಮತ್ತು ಸನ್ಮಾನ ಪೂರ್ಣ ರೂಪದಲ್ಲಿ ದೊರಕಿತ್ತೆಂದು ಹೇಳುತ್ತಾರೆ. ಆದರೆ ಹೆಚ್ಚು ದಿನ ಗಳವರೆಗೆ ಮೀರಾ ಈ ಸುಖವನ್ನು ಅನುಭವಿಸಲಾರದೆ ಹೋದಳು. ಅಲ್ಪ ವಯಸ್ಸಿನಲ್ಲೇ ಭೋಜರಾಜನು ಮೃತನಾದನು. ಬಾಬರನಿಂದ ಸೋತ ರಾಣಾ ಸಾಂಗಾ ಕೂಡ ಬಹಳ ದುಃಖಿತರಾಗಿ ಸ್ವರ್ಗಸ್ಥರಾದರು. ಮೀರಾಬಾಯಿಯ ಮೇಲೆ ವಿಪತ್ತುಗಳ ಪರ್ವತವೇ ಮುರಿದುಬಿದ್ದಿತು.

ಮೀರಾಬಾಯಿಯ ಹೃದಯದಲ್ಲಿ ಕೃಷ್ಣಭಕ್ತಿಯ ಅಂಕುರವೇನೋ ಆಗಲೇ ಹುಟ್ಟಿದ್ದಿತು. ಮೇಲೆ ಹೇಳಿದ ಘಟನೆಗಳು ಅವಳ ದುಃಖಿತ ಹೃದಯವನ್ನು ಬಹಳ

ವಾಗಿ ಕಲಕಿದುವು. ಅವಳು ವಿಹ್ವಲಳಾಗಿ ತನ್ನ ಆರಾಧ್ಯ ದೇವನಾದ ಕೃಷ್ಣನ ಪಾದಾರವಿಂದದಲ್ಲಿ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡುಬಿಟ್ಟಳು. ವಿರಹವೇದನೆ ಗೀತೆಗಳ ರೂಪದಲ್ಲಿ ಹರಿಯಿತು. ಕೃಷ್ಣ ಭಗವಂತನನ್ನು ತನ್ನ ಸರ್ವಸ್ವವೆಂದು ತಿಳಿದು ಮೀರಾ ಹಾಡಿದಳು :—

ಪ್ರಿಯತಮನೆ! ನೀನು ಮುರಿದರೂ ನಾನು ಸ್ನೇಹವನ್ನು ಮುರಿಯಲಾರೆ।
ನಿನ್ನ ಸ್ನೇಹವನ್ನು ಬಿಟ್ಟು ನಾನು ಯಾರ ಯಾರ ಸಂಗಡ ಅದನ್ನು ಜೋಡಿಸಲಿ॥
ನೀನು ತರುವರನಾದರೆ ನಾನು ಪಕ್ಷಿಯಾದೆ।
ನೀನು ಸರಸ್ಸಾದರೆ ನಾನು ಅದರ ಒಳಗಿನ ಮೀನಾದೆ॥
ನೀನು ಗಿರಿವರನಾದರೆ ನಾನು ಅದರ ಮೇಲಿನ ಮಯೂರವಾದೆ।
ನೀನು ಚಂದ್ರನಾದರೆ ನಾನು ಚಕೋರವಾದೆ॥
ಪ್ರಭೋ! ನೀನು ಮುತ್ತಾದರೆ ನಾನು ದಾರವಾದೆ।
ನೀನು ಸುವರ್ಣವಾದರೆ ನಾನು ಬಿಳಗಾರವಾದೆ॥
ಮೀರೆಯ ಪ್ರಭುವಾದ ಬ್ರಜವಾಸಿಯಾದ ಕೃಷ್ಣನೆ।
ನೀನು ನನ್ನ ಪ್ರಭು, ನಾನು ನಿನ್ನ ದಾಸಿ॥

ರಾಣಾ ಸಾಂಗಾ ಅವನ ಮರಣಾನಂತರ ಭೋಜರಾಜನ ತಮ್ಮನಾದ ರತ್ನಸಿಂಹ ಮೇವಾಡದ ರಾಜನಾದನು. ಅವನೂ ಹೆಚ್ಚು ದಿನ ಜೀವಿಸಿರಲಿಲ್ಲ. ಆಗ ರತ್ನಸಿಂಹನ ಮಲತಮ್ಮನಾದ ವಿಕ್ರಮಾದಿತ್ಯನು (ವಿಕ್ರಮಾಜೀತ) ರಾಜನಾದನು. ಮೇವಾಡದ ರಾಜಕೀಯ ಪರಿಸ್ಥಿತಿ ಅದರಲ್ಲೂ ಚಿತ್ತೂರಿನ ರಾಜಮನೆತನದ ಸ್ಥಿತಿ ಬದಲಾದ ಹಾಗೆಲ್ಲ ಮೀರಾಬಾಯಿಯ ಮನಸ್ಸೂ ಜಗತ್ತಿನ ವ್ಯವಹಾರಗಳಿಂದ ಬೇಸರಗೊಂಡು ಹೆಚ್ಚು ಹೆಚ್ಚು ಪ್ರಭುವಿನ ಚರಣಗಳಲ್ಲಿ ಲೀನವಾಗತೊಡಗಿತು. ಸಾಧು ಸಮಾಗಮ, ಹರಿಕಥೆ ಮತ್ತು ಕೃಷ್ಣಕೀರ್ತನದ ಆಧ್ಯಾತ್ಮಿಕ ಪ್ರವಾಹದಲ್ಲಿ ಮೀರಾಬಾಯಿಯು ಉಳಿದ ಎಲ್ಲವನ್ನೂ ನಿಸ್ಸಾರವೆಂದು ತಿಳಿಯತೊಡಗಿದಳು.

ಮೆಲ್ಲಮೆಲ್ಲಗೆ ಅರಮನೆಯಲ್ಲಿಯೂ ಹೊರಗೂ ಪಿಸುಮಾತುಗಳು ಆರಂಭವಾದುವು. ಎಷ್ಟು ಬಾಯಿಗಳೋ, ಅಷ್ಟು ಮಾತುಗಳು! ಜನರು ಮೀರಾಬಾಯಿಯ ವಿಚಾರವಾಗಿ ಬಗೆಬಗೆಯ ಮಾತನ್ನು ಆಡತೊಡಗಿದರು. ಆದರೆ ಕೃಷ್ಣಗೋಪಾಲ ಸ್ಥಾಪಿಸಿಕೊಂಡಿದ್ದ ಪ್ರೇಮಸಂಬಂಧವನ್ನು ಅವಳು ಏನಾದರೂ

ಒಡೆಯಲು ತಯಾರಾಗಿರಲಿಲ್ಲ. ಅವಳು ಈಗ ಬಹಳ ಮುಂದುವರಿದಿದ್ದಳು. ಲೋಕಲಜ್ಜೆಯ ಚಿಂತೆ ಅವಳಿಗೆ ಇನ್ನು ಇರಲಿಲ್ಲ.

ಗಿರಿಧರ ಗೋಪಾಲನೇ ನನ್ನವರು, ಬೇರೆ ಯಾವನೂ ಅಲ್ಲ।
ಯಾರ ತಲೆಯಲ್ಲಿ ಮಯೂರ ಮುಕುಟವಿದೆಯೊ, ಅವನೇ ನನ್ನ ಪತಿ।
ತಂದೆ, ತಾಯಿ, ಭ್ರಾತೃ, ಬಂಧು ಯಾರೂ ನನಗಿಲ್ಲ॥

ಕುಲದ ಮರ್ಯಾದೆಯನ್ನು ನಾನು ಬಿಟ್ಟೆ, ನನ್ನನ್ನು ಯಾರು ಏನು ಮಾಡುವರು।
ಸಂತರ ಬಳಿ ಕುಳಿತು ಕುಳಿತು ನಾನು ಲೋಕಲಜ್ಜೆ ತ್ಯಜಿಸಿದೆ.
ಚುನಡಿ ಸೀರೆಯ ನಾನು ಹರಿದೆಸೆದೆ, ಉಣ್ಣೆ ಹೊದಿಕೆಯ ನಾನು ಹೊದೆದೆ
ಮುತ್ತು ಹವಳ ತೆಗೆದು ವನಮಾಲೆ ಧರಿಸಿದೆ॥

ಅಶ್ರುಜಲವನ್ನು ಸುರಿಸಿ ಪ್ರೇಮದ ಬಳ್ಳಿಯನ್ನು ಬೆಳೆಸಿದ್ದೇನೆ।
ಈಗ ಬಳ್ಳಿ ಹರಡಿದೆ, ಆನಂದದ ಫಲ ಕೊಡುವುದು॥

ಕಡೆಗೋಲನ್ನು ಹಾಕಿ ನಾನು ಕೆನೆ ಹಾಲನ್ನು ಕಡೆದಿರುವೆ।
ಬೆಣ್ಣೆಯನ್ನು ತೆಗೆದಾದ ಮೇಲೆ ಮಜ್ಜಿಗೆಯನ್ನು ಯಾರಾದರೂ ಕುಡಿಯಲಿ॥
ಭಕ್ತಿಗೋಸ್ಕರ ನಾನು ಬಂದೆ, ಜಗತ್ತನ್ನು ನೋಡಿ ಮೋಹಿತಳಾದೆ।
ಗಿರಿಧರ ಪ್ರಭುವೆ! ದಾಸಿ ಮೀರಾಬಾಯಿಯನ್ನು ಉದ್ಧಾರ ಮಾಡು॥

ಆದರೆ ಲೋಕಲಜ್ಜೆಯ ಚಿಂತೆ ಮೀರಾಬಾಯಿಯ ಮೈದುನನಾದ ರಾಣಾ ವಿಕ್ರಮಾದಿತ್ಯನಿಗಿದ್ದಿತು. ರಾಜಮನೆತನದ ವಿಧವೆಯಾದ ಸೊಸೆ–ಅದರಲ್ಲೂ ಯುವತಿ ಮತ್ತು ಅತೀವ ಸುಂದರಿಯಾದವಳು–ಸಾಧಾರಣ ಸಾಧುಸಂತರ ಜೊತೆಯಲ್ಲಿ ಭಜನ ಕೀರ್ತನದಲ್ಲಿ ಸೇರುವುದು ಅವನಿಗೆ ಸ್ವಲ್ಪವೂ ಸಹಿಸಲಿಲ್ಲ. ಅವನು ಮೀರಾಬಾಯಿಗೆ ಹೇಳಿ ಅವಳಿಗೆ ಸರಿಯಾದ ತಿಳುವಳಿಕೆ ಕೊಡಲು ಪ್ರಯತ್ನಪಟ್ಟನು. ಅವಳ ಬಳಿಗೆ ಅನೇಕ ಸ್ತ್ರೀಯರನ್ನು ಕಳುಹಿಸಿದನು. ತನ್ನ ಸಹೋದರಿಯಾದ ಊದಾಬಾಯಿಯನ್ನೇ ಅವಳಲ್ಲಿಗೆ ಹೋಗಿ ಇರುವಂತೆ ಹೇಳಿಕಳುಹಿಸಿದನು. ಆದರೆ ಇದರಿಂದ ಯಾವ ವಿಧದ ಫಲವೂ ಆಗಲಿಲ್ಲ. ಮೀರಾಬಾಯಿಯ ಪ್ರೇಮೋನ್ಮಾದ ಇಳಿಯಲೇ ಇಲ್ಲ. ಅವಳು ಹೀಗೆ ಹಾಡಿದಳು :—

ಯೋಗಿ! ಹೋಗಬೇಡ, ಹೋಗಬೇಡ. ನಾನು ನಿನ್ನ ದಾಸಿ,
ನಿನ್ನ ಕಾಲಿಗೆ ಬೀಳುವೆನು।
ಪ್ರೇಮ ಭಕ್ತಿಗಳ ದಾರಿಯೇ ಬೇರೆ, ನಮಗೆ ಆ ದಾರಿಯನ್ನು ತೋರಿಸಿಹೋಗು॥

ಅಗುರು ಮತ್ತು ಚಂದನದ ಕಟ್ಟಿಗೆಗಳಿಂದ ಚಿತೆಯನ್ನು ರಚಿಸುತ್ತೇನೆ,
ನಿನ್ನ ಕೈಗಳಿಂದ ದಹಿಸಿ ಹೋಗು ||
ಸುಟ್ಟು, ದಹಿಸಿ ಭಸ್ಮದ ರಾಶಿಯಾದೆ, ನಿನ್ನ ಅಂಗಗಳಿಗೆ ಭಸ್ಮ
ಹಚ್ಚಿಕೊಂಡು ಹೋಗು ||
ಮೀರಳ ಪ್ರಭುವಾದ ಚತುರ ಗಿರಿಧರನೆ! ಜ್ಯೋತಿಯಲ್ಲಿ ಜ್ಯೋತಿಯನ್ನು
ಸೇರಿಸಿ ಹೋಗು ||

ಕೋಪಗೊಂಡು ರಾಣನು ಮೀರಾಬಾಯಿಗೆ ದೇವರ ಚರಣಾಮೃತದ ರೂಪದಲ್ಲಿ ವಿಷವನ್ನೂ ಪೆಟ್ಟಿಗೆಯಲ್ಲಿ ಕೃಷ್ಣಸರ್ಪವನ್ನೂ ಕಳುಹಿಸಿದನು. ಆದರೆ ಮೀರಾಬಾಯಿಯನ್ನು ಸ್ವಯಂ ಕೃಷ್ಣಪರಮಾತ್ಮನು ರಕ್ಷಿಸುತ್ತಿದ್ದನು. ಅವಳಿಗೆ ಸ್ವಲ್ಪವೂ ತೊಂದರೆಯಾಗಲಿಲ್ಲ. ಈ ಹೆದರಿಕೆ-ಬೆದರಿಕೆ ಮತ್ತು ಕಷ್ಟಗಳಿಂದ ಮೀರಾಬಾಯಿಯ ಮೇಲೆ ಅಪೇಕ್ಷೆಪಟ್ಟುದಕ್ಕೆ ವ್ಯತಿರಿಕ್ತವಾಗಿ ಪ್ರಭಾವ ಉಂಟಾಯಿತು. ನೀಲ ಮೇಘ ಶಾಮನಾದ ಕೃಷ್ಣನ ಮೇಲೆ ಅವಳ ಪ್ರೇಮವು ದಿನಂಪ್ರತಿ ಹೆಚ್ಚುತ್ತಲೇ ಹೋಯಿತು. ತನಗೆ ಕೊಡುತ್ತಿದ್ದ ಕಷ್ಟ ಪರಂಪರೆಗಳ ಬಗ್ಗೆಯೂ ಮೀರಾಬಾಯಿ ಅರಿತಿದ್ದಳು :—

ನನ್ನ ಅತ್ತೆ ಜಗಳವಾಡಿದಳು, ನಾದಿನಿಯರು ರೇಗಿಸಿದರು,
ರಾಣನು ಕ್ರೋಧಗೊಂಡನು ।
ಪಹರೆಯವರನ್ನಿಟ್ಟರು, ಕಾವಲುಗಾರರನ್ನು ಕೂರಿಸಿದರು, ಬೀಗ ಹಾಕಿಸಿದರು ||

ಅವಳ ಶರೀರ ಅರಮನೆಯಲ್ಲಿದ್ದರೂ ಅವಳ ಮನಸ್ಸು ಬೇರೆ ಕಡೆ ಇರುತ್ತಿದ್ದಿತು. ಅವಳು ತನ್ನ ನೋವನ್ನು ನಕ್ಕು ಸಹಿಸಿಕೊಳ್ಳುವುದರಲ್ಲಿ ಸಮರ್ಥಳಾಗಿದ್ದಳು :—

ಗೆಜ್ಜೆ ಕಟ್ಟಿಕೊಂಡು ಮೀರಾ ಕುಣಿಯುತ್ತಾಳೆ,
ಜನರು ಮೀರಾ ಹುಚ್ಚಳಾದಳೆನ್ನುತ್ತಾರೆ,
ಅತ್ತೆಯವರು ಇವಳು ಕುಲನಾಶಿನಿಯೆನ್ನುತ್ತಾರೆ,
ರಾಣನು ವಿಷವನ್ನು ಬಟ್ಟಲಲ್ಲಿ ಕಳುಹಿಸಿದ್ದನು,
ಮೀರಾ ಅದನ್ನು ಕುಡಿದು ನಕ್ಕಳು.

ಕೃಷ್ಣಭಕ್ತಿಯಲ್ಲಿ ಮೀರಾಬಾಯಿಯ ಆತ್ಮ ಲೀನವಾಗಿ ಹೋಗಿ ಉಚ್ಚಸ್ಥಿತಿಗೆ ತಲುಪಿ ಜಗತ್ತಿನ ಅಸ್ತಿತ್ವದ ಎಲ್ಲೆಯ ಪರಿಜ್ಞಾನ ಅವಳಿಗೆ ಉಂಟಾಗಿಹೋಗಿದ್ದಿತು.

ರಾಜನು ಕೋಪಗೊಂಡರೆ ತನ್ನ ರಾಜ್ಯವನ್ನು ತಾನು ಇಟ್ಟುಕೊಳ್ಳುವನು ಮತ್ತು ಹೆಚ್ಚೆಂದರೆ ರಾಜ್ಯದಿಂದ ಹೊರಕ್ಕೆ ಓಡಿಸಿಬಿಡುವನು ಎಂಬ ಮಾತು ಅವಳಿಗೆ ತಿಳಿದುಹೋಗಿದ್ದಿತು. ಆದರೆ ಭಗವಂತನು ಕೋಪಗೊಂಡರೆ ಎಲ್ಲಿಗೆ ಹೋಗುವುದು? ಆದುದರಿಂದ ಮೀರಾಬಾಯಿ ರಾಣನ ಆಜ್ಞೆಯನ್ನು ತಿರಸ್ಕರಿಸಿ ಕೃಷ್ಣನ ಗುಣ ಗಾನ ಮಾಡುವುದರಲ್ಲಿ ತನ್ನ ಮನಸ್ಸನ್ನು ಇನ್ನೂ ತೀವ್ರವಾಗಿ ಲೀನಗೊಳಿಸಿದಳು.

ನಾನು ಗೋವಿಂದನ ಗುಣವನ್ನು ಹಾಡುವೆನು.
ರಾಜನು ಕೋಪಗೊಂಡರೆ ತನ್ನ ರಾಜ್ಯವನ್ನು ಇಟ್ಟುಕೊಳ್ಳುವನು,
ಹರಿ ಕೋಪಗೊಂಡರೆ ಎಲ್ಲಿಗೆ ಹೋಗುವುದಕ್ಕಾಗುತ್ತದೆ?
ಪೆಟ್ಟಿಗೆಯಲ್ಲಿ ಕೃಷ್ಣಸರ್ಪವನ್ನು ಕಳುಹಿಸಿದನು,
ಸಾಲಿಗ್ರಾಮವೆಂದು ನಾನು ಅದನ್ನು ತಿಳಿದೆ.

ರಾಣಾ ವಿಕ್ರಮಾದಿತ್ಯ ಮತ್ತು ಮೀರಾ ಇವರ ಮಾರ್ಗಗಳು ಬೇರೆ ಬೇರೆ ಯಾಗಿದ್ದುವು. ರಾಣನು ಲೋಕಲಜ್ಜೆ ಮತ್ತು ವಂಶದ ಮರ್ಯಾದೆಯ ಮೇಲೆ ನಿಶ್ಚಲರಾಗಿ ನಿಂತಿದ್ದನು; ಮೀರಾಬಾಯಿಯಾದರೋ ಈ ಪ್ರಪಂಚದ ಮಾತುಗಳ ನಿಸ್ಸಾರತೆಯನ್ನರಿತು ಅವುಗಳನ್ನು ಅತಿಕ್ರಮಿಸಿ ಮುಂದೆ ಹೋಗಿದ್ದಳು. ಈಗ ಅವಳು ತನ್ನ ಸ್ವತಂತ್ರ ಮಾರ್ಗವನ್ನು ಆರಿಸಿಕೊಳ್ಳುವ ಸನ್ನಿವೇಶ ಬಂದು ಒದಗಿತು. ರಾಣನು ಕೊಡುತ್ತಿದ್ದ ಕಷ್ಟಗಳನ್ನು ಸಹಿಸುವುದೆ ಅಥವಾ ಅರಮನೆಯ ಸಂಬಂಧವನ್ನು ತ್ಯಜಿಸಿ ಸ್ವತಂತ್ರಳಾಗುವುದೆ?

ಮೀರಾಬಾಯಿ ಈ ಉಭಯ ಸಂಕಟದಲ್ಲಿದ್ದಾಗ ಅವಳ ದೊಡ್ಡಪ್ಪನಾದ ವೀರಮದೇವನು ಅವಳ ಕಷ್ಟಗಳನ್ನರಿತು ಅವಳನ್ನು ಚಿತ್ತೂರಿನಿಂದ ಮೇವಾಡಕ್ಕೆ ಕರೆಸಿಕೊಂಡನು ಮತ್ತು ಅವಳನ್ನು ಪ್ರೇಮದಿಂದ ತನ್ನ ಬಳಿ ಇಟ್ಟುಕೊಂಡನು. ಚಿತ್ತೂರನ್ನು ಅವಳು ಬಿಟ್ಟ ಮೇಲೆ ಅದು ವಿಪತ್ತಿಯ ಮೇಲೆ ವಿಪತ್ತಿಯನ್ನೆದುರಿಸ ಬೇಕಾಯಿತು. ಗುಜರಾತಿನ ಸುಲ್ತಾನನಾದ ಬಹಾದೂರ್ ಷಾಹನು ಅದನ್ನು ಕಿತ್ತುಕೊಂಡುಬಿಟ್ಟನು. ಕಡೆಗೆ ವಿಕ್ರಮಾದಿತ್ಯನು ಕೂಡ ಸತ್ತನು.

ಅಲ್ಲಿ ಮೇವಾಡದ ಮೇಲೂ ವಿಪತ್ತಿಯ ಮೋಡಗಳು ಕವಿದುವು. ಜೋಧ ಪುರದ ರಾವ್ ಮಾಲದೇವನು ವೀರಮದೇವನಿಂದ ಮೇವಾಡವನ್ನು ಕಿತ್ತುಕೊಂಡು ಬಿಟ್ಟನು. ಈ ಸ್ಥಿತಿಯಲ್ಲಿ ಮೀರಾಬಾಯಿ ತೀರ್ಥಯಾತ್ರೆಗೆ ಹೊರಡಲು ನಿಶ್ಚಯಿಸಿ ದಳು. ಅವಳು ಮೇವಾಡವನ್ನು ಬಿಟ್ಟು ಹೊರಟಳು. ಮನಸ್ಸಿನಲ್ಲಿ ಪ್ರೇಮದ ಪೀಡೆ

ಮೊದಲಿನಿಂದಲೂ ಇದ್ದಿತು. ಮೀರಾ ಕಾಡುಗಳಲ್ಲಿ ಅಲೆಯುತ್ತ ಹಾಡ ತೊಡಗಿದಳು :—

ನನಗೆ ಪ್ರೇಮದ ಹುಚ್ಚು ಹಿಡಿದಿದೆ, ನನ್ನ ನೋವನ್ನು ಯಾರೂ ತಿಳಿಯರು।
ಮುಳ್ಳುಗಳ ಮೇಲೆ ನನ್ನ ಹಾಸಿಗೆ, ನಾನು ಹೇಗೆ ಮಲಗಲಿ।
ಗಗನ ಮಂಡಲದ ಮೇಲೆ ಪ್ರಿಯನ ಶಯ್ಯೆ, ನಾನು ಅವನನ್ನು ಹೇಗೆ ಸೇರಲಿ॥
ಘಾಯಪಟ್ಟವನ ಸ್ಥಿತಿ ಘಾಯಪಟ್ಟವನು ತಿಳಿದಿರುವನು,
ಅಥವಾ ಸೃಷ್ಟಿಕರ್ತನು ಬಲ್ಲನು।
ರತ್ನಪರೀಕ್ಷಕನ ಬೆಲೆ, ಮತ್ತು ರತ್ನದ ಬೆಲೆ ರತ್ನಪರೀಕ್ಷಕನಿಗೆ ತಾನೆ ಗೊತ್ತು॥
ಪ್ರೇಮದ ನೋವಿನಿಂದ ನರಳುತ್ತ ಕಾಡಿನಲ್ಲಿ ಅಲೆಯುತ್ತಿದ್ದೇನೆ,
ಯಾವ ವೈದ್ಯನೂ ಸಿಕ್ಕಲಿಲ್ಲ।
ಶ್ಯಾಮಸುಂದರ ಕೃಷ್ಣನು ವೈದ್ಯನಾದರೆ ಮೀರಾಬಾಯಿಯ ನೋವು ನಿಲ್ಲುವುದು॥

ತನ್ನನ್ನು ಗೋಪಿಕೆ ಎಂದು ತಿಳಿದುಕೊಂಡಿದ್ದ ಮೀರಾ ಶ್ಯಾಮಸುಂದರನನ್ನು ಹುಡುಕುತ್ತಾ ವ್ರಜಭೂಮಿಯ ಕಡೆಗೆ ಹೊರಟು ಬೃಂದಾವನವನ್ನು ತಲಪಿದಳು. ಬೃಂದಾವನದ ಕುಂಜಯುಕ್ತವಾದ ಮಾರ್ಗಗಳಲ್ಲಿ ಕೃಷ್ಣಲೀಲೆಯ ಪದಗಳನ್ನು ಹಾಡುತ್ತಾ ತನ್ನ ಆರಾಧ್ಯ ದೇವತೆಯನ್ನು ಸಂತೋಷಪಡಿಸಲೆತ್ನಿಸಿದಳು.

ಶ್ಯಾಮಸುಂದರನೆ, ನನ್ನನ್ನು ನಿನ್ನ ದಾಸಿಯನ್ನಾಗಿ ಇಟ್ಟುಕೊ।
ಗಿರಿಧಾರಿಯೆ, ನನ್ನನ್ನು ನಿನ್ನ ಆಳಾಗಿ ಇಟ್ಟುಕೊ॥
ನಿನ್ನ ದಾಸಿಯಾಗಿ, ತೋಟದಲ್ಲಿ ಕೆಲಸ ಮಾಡುತ್ತಾ ಪ್ರತಿ ದಿನವೂ ಎದ್ದು
ನಿನ್ನ ದರ್ಶನ ಮಾಡುವೆನು॥
ಬೃಂದಾವನದ ಕುಂಜಯುತ ಮಾರ್ಗಗಳಲ್ಲಿ ನಿನ್ನ ಲೀಲೆಗಳನ್ನು ಹಾಡುವೆನು।
ನಿನ್ನ ಕೆಲಸಗಳನ್ನು ಮಾಡುತ್ತಾ ನಿನ್ನ ದರ್ಶನ ಹೊಂದುವೆನು,
ಸ್ಮರಣೆ ಮಾಡುವೆನು॥
ಭಾವಭಕ್ತಿ ಎಂಬ ಜಹಗೀರನ್ನು ಹೊಂದುವೆನು।
ಮಯೂರ ಮುಕುಟ, ಪೀತಾಂಬರ, ಕತ್ತಿನಲ್ಲಿ ವೈಜಯಂತಿ ಮಾಲೆ
ಇವು ಶೋಭಿಸುತ್ತವೆ।
ಮೋಹನನಾದ, ಮುರಳೀಧರನು ಬೃಂದಾವನದಲ್ಲಿ ಹಸುಗಳನ್ನು ಮೇಯಿಸುತ್ತಾನೆ॥
ನಿತ್ಯವೂ ತೋಟದ ಕೆಲಸ ಮಾಡುವೆನು, ಮಧ್ಯೆ ಮಧ್ಯೆ ಪಾತಿಯನ್ನು ಬೆಳೆಸುವೆನು।
ಕೆಂಪು ಸೀರೆಯನ್ನುಟ್ಟು ಶ್ಯಾಮಸುಂದರನ ದರ್ಶನವನ್ನು ಹೊಂದುವೆನು॥

ಯೋಗವನ್ನಭ್ಯಾಸ ಮಾಡುವುದಕ್ಕೆ ಯೋಗಿ ಬಂದನು, ತಪ ಮಾಡುವುದಕ್ಕೆ
ಸನ್ಯಾಸಿ ಬಂದನು।
ಹರಿಭಜನೆಗೆ ಸಾಧು ಬಂದನು, ಬೃಂದಾವನದ ನಿವಾಸಿಗಳೆಲ್ಲಾ ಬಂದರು।
ಪ್ರಭುವು ಅರ್ಧ ರಾತ್ರಿಯ ವೇಳೆಯಲ್ಲಿ ಪ್ರೇಮನದಿಯ ತಟದಲ್ಲಿ ದರ್ಶನವಿತ್ತನು॥

ಆದರೆ ಬೃಂದಾವನದಲ್ಲಿ ಇರುವುದೂ ಮೀರಾಬಾಯಿಗೆ ಕಷ್ಟವಾಗಿದ್ದಿತು. ಕೃಷ್ಣನು ತನ್ನ ಜೀವಿತವನ್ನು ಕಳೆದ ಸ್ಥಳಗಳನ್ನೆಲ್ಲಾ ಅವಳು ಸುತ್ತಾಡಿ ನೋಡ ಬೇಕೆಂದು ಇಚ್ಛಿಸಿದಳು. ಆದುದರಿಂದ ಅವಳು ಬೃಂದಾವನದಿಂದ ದ್ವಾರಕೆಗೆ ಹೊರಟಳು. ದ್ವಾರಕೆಯಲ್ಲೂ ಕೂಡ ಅವಳು ತನ್ನ ಆರಾಧ್ಯ ದೇವನನ್ನು ಕುರಿತು ಗೀತೆಗಳನ್ನು ರಚಿಸಿದಳು. ಏತನ್ಮಧ್ಯೆ ಚಿತ್ತೂರು ಮತ್ತು ಮೇಡತಾ ದೇಶಗಳು ಪುನಃ ಸಮೃದ್ಧ ಸ್ಥಿತಿಗೆ ಬಂದಿದ್ದವು. ಮೀರಾಬಾಯಿಯನ್ನು ಕರೆದುಕೊಂಡು ಬರಲು ಅಲ್ಲಿಂದ ಜನರನ್ನು ಕಳುಹಿಸಿದರು. ಮೀರಾ ಮೊದಲು ಹಿಂತಿರುಗುವುದಿಲ್ಲ ವೆಂದು ಹೇಳುತ್ತಿದ್ದವಳು ಕಡೆಗೆ ಹಿಂತಿರುಗಲು ಒಪ್ಪಿದಳು. ಆದರೆ ದ್ವಾರಕಾ ಪುರಿಯಿಂದ ಹೊರಡಲು ತಯಾರಾಗಿ ಅವಳು ರಣಛೋಡಜೀಯ ಮಂದಿರಕ್ಕೆ ಪೂಜೆ ಮಾಡುವುದಕ್ಕೆ ಹೋದಾಗ ಪೂಜೆಯಲ್ಲಿ ತನ್ಮಯಳಾಗಿ ಹೋದಳು ಆಗ ದೇವವಿಗ್ರಹವು ಅವಳನ್ನು ತನ್ನಲ್ಲಿ ಲೀನಪಡಿಸಿಕೊಂಡುಬಿಟ್ಟಿತೆನ್ನುವರು. ಈ ರೀತಿ ಮೀರಾಬಾಯಿಯ ಇಹಲೀಲೆ ಗುಜರಾತಿನಲ್ಲಿ ಕೊನೆಗೊಂಡಿತು.

ಮೀರಾಬಾಯಿ ತನ್ನ ಪದಗಳಲ್ಲಿ ರೈದಾಸನನ್ನೂ ತನ್ನ ಗುರು ಎಂಬುದಾಗಿ ಒಪ್ಪಿದ್ದಾಳೆ. ಉದಾಹರಣೆಗಾಗಿ

ನನ್ನ ಮನಸ್ಸು ಹರಿಯಲ್ಲಿ ಸಿಲುಕಿಹೋಗಿದೆ, ನಾನಿನ್ನು ತಡೆಯುವುದಿಲ್ಲ,
ಗುರುತಾಗಿ ನನಗೆ ರೈದಾಸರು ದೊರೆತರು, ಅವರು ನನಗೆ ಜ್ಞಾನದ
ಗುಳಿಗೆಯನ್ನು ಕೊಟ್ಟರು।

ಮೀರಾಬಾಯಿ ಜೀವ ಗೋಸ್ವಾಮಿಯವರಿಂದ ದೀಕ್ಷೆಯನ್ನು ಗ್ರಹಣ ಮಾಡಿದ್ದಳು ಎಂಬುದು ಪ್ರಸಿದ್ಧವಾಗಿದೆ. ಈ ಪ್ರಕಾರ ಅವಳು ಒಂದು ಕಡೆ ಸುಗುಣ ಮಾರ್ಗಿ ಭಕ್ತರೊಡನೆಯೂ, ಇನ್ನೊಂದು ಕಡೆ ನಿರ್ಗುಣ ಮಾರ್ಗಿ ಭಕ್ತರೊಡನೆಯೂ ಸಂಬಂಧ ಹೊಂದಿದ್ದಳು. ಅವಳ ಭಜನೆಗಳಲ್ಲಿ ಒಬ್ಬ ನಾಥ ಪಂಥದವನಾದ ಗುರುವಿನ ಚರ್ಚೆ ಸಹ ಇದೆ. ಆದ್ದರಿಂದ ಮೀರಾಬಾಯಿ ಯಾವ ವಿಶೇಷಕ್ಕೂ ಸೇರಿರಲಿಲ್ಲ ಎಂದು ವ್ಯಕ್ತವಾಗುತ್ತದೆ. ಭಕ್ತಿ ಅಥವಾ ಭಾವಗಳ

ಭಂಡಾರ ದೊರಕುತ್ತಿದ್ದ ಸ್ಥಳಗಳಿಂದೆಲ್ಲಾ ಅವಳು ಏನನ್ನಾದರೂ ಆರಿಸಿಕೊಂಡು ಸಂಗ್ರಹಿಸಿಕೊಳ್ಳುತ್ತಿದ್ದಳು.

ಅನ್ಯ ಸಂತ ಕವಿಗಳಂತೆ ಮೀರಾಬಾಯಿಯೂ ಕೂಡ ಭಾರತಕ್ಕೆ ಅಮರವಾದ ಸಾಹಿತ್ಯವನ್ನು ಕೊಟ್ಟಳು. ಅವಳ ಭಾಷೆ ಸರಳವೂ ಹೃದಯಸ್ಪರ್ಶಿಯೂ ಆಗಿದೆ. ಅವಳ ಜೀವನ ಮಾರವಾಡ, ಮೇವಾಡ, ವ್ರಜಭೂಮಿ ಮತ್ತು ಗುಜರಾತು ಈ ಪ್ರದೇಶಗಳಲ್ಲಿ ಕಳೆದಿದ್ದಿತು. ಆದುದರಿಂದ ಈ ನಾಲ್ಕು ಪ್ರದೇಶಗಳ ಭಾಷೆಗಳು ಅವಳ ಕಾವ್ಯ ಭಾಷೆಯ ಮೇಲೆ ಪ್ರಭಾವ ಬೀರಿವೆ. ಮೀರಾಬಾಯಿಯ ಗೀತೆಗಳಲ್ಲಿ ವಿಚಿತ್ರ ಪ್ರಭಾವವಿದೆ. ನಾವು ಅದರಲ್ಲಿ ತನ್ಮಯರಾಗಿ ಹೋಗುತ್ತೇವೆ. ಇದೇ ಕಾರಣದಿಂದ ಇಂದು ಸಹ ಮೀರಾಬಾಯಿಯ ಪದಗಳನ್ನು ಮನೆ ಮನೆಯಲ್ಲಿ ಹಾಡಿ ಆನಂದಪಡುತ್ತಾರೆ.

ಕೃಷ್ಣದೇವರಾಯ

ಕೃಷ್ಣದೇವರಾಯ ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯದ ಒಬ್ಬ ಹಿರಿಯ ಸಾಮ್ರಾಟನಾಗಿದ್ದ. ಅಶೋಕ ಮತ್ತು ಚಂದ್ರಗುಪ್ತನಂತೆ ಆತನೂ ರಾಜ್ಯದ ಅಭ್ಯುದಯ ಮತ್ತು ಪ್ರಜೆಗಳ ಹಿತರಕ್ಷಣೆಯ ಕಡೆ ವಿಶೇಷ ಗಮನ ನಿತ್ತನು. ಆದ್ದರಿಂದಲೇ ಅವನ ಕಾಲವನ್ನು ಸ್ವರ್ಣಯುಗವೆನ್ನುವರು.

ಕೃಷ್ಣದೇವರಾಯನ ರಾಜ್ಯಾಭಿಷೇಕದ ಸಮಯಕ್ಕಾಗಲೇ ವಿಜಯನಗರದ ಸಾಮ್ರಾಜ್ಯವು ಒಡೆದು ಚೂರು ಚೂರಾಗಿದ್ದಿತು. ಆದರೆ ಈ ಮಹಾವ್ಯಕ್ತಿ ಹತ್ತು ವರುಷದ ಒಳಗೆ ವಿಜಯನಗರದ ಪ್ರಭುತ್ವವನ್ನು ದಕ್ಷಿಣ ಭಾರತದಲ್ಲೆಲ್ಲಾ ಹರಡಿದ. ಕೃಷ್ಣದೇವರಾಯನ ಮೊದಲ ಕೆಲಸವೆಂದರೆ ಧರ್ಮರಕ್ಷಣೆಯ ನೆಪದಲ್ಲಿ ಪ್ರತಿ ವರುಷ ಲೂಟಿ ಮಾಡಲು ಬರುತ್ತಿದ್ದ ಯವನರನ್ನು ಸೋಲಿಸುವುದು ಮತ್ತು ಸಾಮ್ರಾಜ್ಯವನ್ನು ವಿಸ್ತರಿಸುವುದು.

ಬಿಜಾಪುರದ ಅಂತಃಕಲಹದಿಂದ ಲಾಭ ಪಡೆದು ಕೃಷ್ಣದೇವರಾಯ ರಾಯಚೂರನ್ನು ಗೆದ್ದ ನಂತರ ಗುಲ್ಬರ್ಗ ಮತ್ತು ಬಿದರೆಯನ್ನು ವಶಪಡಿಸಿಕೊಂಡ ಕೆಲವೇ ದಿನಗಳಲ್ಲಿ ಉದಯಗಿರಿಯೂ ಅವನ ವಶವಾಯಿತು. ಈ ಯುದ್ಧದಲ್ಲಿ ಒರಿಸ್ಸಾದ ರಾಣಿ ಮತ್ತು ರಾಜ ಪರಿವಾರದ ಕೆಲವು ಮಂದಿಯನ್ನು ಸೆರೆಹಿಡಿಯಲಾಯಿತು. ಕೃಷ್ಣದೇವರಾಯ ಯಾರಿಗೂ ಅವಮಾನ ಮಾಡಲಿಲ್ಲ. ಗಜಪತಿಯ ರಾಜ ಕುಮಾರ ವೀರಭದ್ರನನ್ನು ಸೆರೆಹಿಡಿದು ಪ್ರಾಂತ್ಯ ಒಂದರ ರಾಜ್ಯಪಾಲನನ್ನಾಗಿ ಮಾಡಿ ತನ್ನ ರಾಜನೀತಿ ಕೌಶಲವನ್ನು ವ್ಯಕ್ತಪಡಿಸಿದನು. ಅವನ ಸೈನ್ಯ ಕಳಿಂಗದ ರಾಜಧಾನಿ ಕಟಕದ ವರೆಗೆ ತಲುಪಿದಾಗ ಅಲ್ಲಿಯ ರಾಜ ಕೃಷ್ಣದೇವರಾಯನೊಡನೆ ಸಂಧಿ ಮಾಡಿಕೊಂಡು ತನ್ನ ಪುತ್ರಿಯನ್ನು ಅವನಿಗೆ ವಿವಾಹ ಮಾಡಿಕೊಟ್ಟ. ಕೃಷ್ಣದೇವರಾಯನೂ ಗೆದ್ದ ರಾಜ್ಯವನ್ನು ಅವನಿಗೆ ಹಿಂತಿರುಗಿ ಕೊಟ್ಟನು.

ಅಕ್ಬರ ಮಹಾಶಯನಂತೆ ಕೃಷ್ಣದೇವರಾಯನೂ ಸರ್ವ ಧರ್ಮವನ್ನು ಸನ್ಮಾನಿಸುವುದು ಒಳ್ಳೆಯ ನೀತಿ ಎಂದು ತಿಳಿದಿದ್ದನು. ಜೈನ ಧರ್ಮವು ಅವನಿಂದ

ವಿಸ್ತಾರಗೊಂಡಿತು. ವೈಷ್ಣವ ಧರ್ಮವು ಯಾವಾಗಲೂ ಜೈನ ಧರ್ಮದ ಸಹಕಾರಿಯಾಗಿರುವುದೆಂಬುದು ವಿಜಯನಗರ ಸಾಮ್ರಾಟನ ಘೋಷಣೆಯಾಗಿದ್ದಿತು.

ದಕ್ಷಿಣ ಭಾರತಕ್ಕೆ ಪೋರ್ಚುಗೀಸರು ಬಂದಂತೆ ಕ್ರೈಸ್ತ ಧರ್ಮವು ಹರಡ ತೊಡಗಿತು. ಕೃಷ್ಣದೇವರಾಯ ಕ್ರೈಸ್ತ ಪಾದರಿಗಳನ್ನು ಗೌರವದಿಂದ ಆಸ್ಥಾನಕ್ಕೆ ಆಹ್ವಾನಿಸಿ ಅವರ ಧರ್ಮದ ವಿಷಯಗಳನ್ನು ಕೇಳುತ್ತಿದ್ದನು. ತಮ್ಮ ಧರ್ಮದ ಪ್ರಚಾರ ಮಾಡಲು ಮತ್ತು ಚರ್ಚನ್ನು ಕಟ್ಟಲು ಅವರಿಗೆ ಅವಕಾಶವಿತ್ತನು. ಹೆಚ್ಚು ಮಂದಿ ಮುಸಲ್ಮಾನರು ಅವನ ಸೈನ್ಯದಲ್ಲಿದ್ದರು. ಅವನ ಕಾಲದಲ್ಲಿ ಹಿಂದುಗಳು ಮುಸಲ್ಮಾನರಿಗಾಗಿ ಮಸೀದಿಯನ್ನು ಕಟ್ಟಿದರೆಂದು ತಿಳಿದುಬಂದಿದೆ. ಕೃಷ್ಣದೇವರಾಯ ಸ್ವತಃ ವೈಷ್ಣವನಾಗಿದ್ದರೂ ಶಿವಮಂದಿರಕ್ಕೆ ಆರ್ಥಿಕ ಸಹಾಯ ವೀಯುತ್ತಿದ್ದ. ಆದರೂ ಆತನಿಗೆ ವೈಷ್ಣವ ಧರ್ಮದಲ್ಲಿ ಹೆಚ್ಚು ಗೌರವ ಇದ್ದ ಕಾರಣ ಆ ಧರ್ಮದ ಸಾಹಿತ್ಯಕಾರರು, ಕಲಾವಿದರು, ಶಿಲ್ಪಕಾರರು ಮುಂತಾದವ ರಿಗೆ ಹೆಚ್ಚು ಆದರವಿತ್ತನು.

ಕೃಷ್ಣದೇವರಾಯ ಕುಶಲ ಆಡಳಿತಗಾರ ಮತ್ತು ರಾಜನೀತಿಜ್ಞ. "ನಿಮ್ಮ ಎಲ್ಲೆಯ ಸಮಾಪವಿರುವ ಪ್ರಾಂತ್ಯಗಳನ್ನು ಗೆಲ್ಲಬಹುದೆಂಬ ನಂಬಿಕೆ ಇದ್ದರೆ ಮುನ್ನುಗ್ಗಿ, ಹಾಗಿಲ್ಲದಿದ್ದರೆ ಅಕ್ಕಪಕ್ಕದ ರಾಜರೊಡನೆ ಸ್ನೇಹ ಬೆಳಸಿ ಮತ್ತು ಆ ಸ್ನೇಹಕ್ಕೆ ಎಂದೂ ಧಕ್ಕೆ ತರಬೇಡಿ. ನಂಬಿಕೆಯುಳ್ಳ ಮಂತ್ರಿಯೂ ಕೆಲವು ವೇಳೆ ಮೋಸ ಮಾಡುವ ಸಂಭವವುಂಟು. ಆದ ಕಾರಣ ರಾಜ ತನ್ನ ಮಂತ್ರಿಗಳ ಮೇಲೆ ಗುಪ್ತಚಾರರನ್ನು ಇಡಬೇಕು" ಎಂದು ಹೇಳುತ್ತಿದ್ದ.

ಆತ ಮನುಷ್ಯನ ಸ್ವಭಾವವನ್ನು ಎಷ್ಟು ಸೂಕ್ಷ್ಮವಾಗಿ ಪರೀಕ್ಷಿಸಿದ್ದನೆಂಬುದು ಇದರಿಂದ ತಿಳಿದುಬರುವುದು. ಆತನ ಆಡಳಿತ ವಿಚಕ್ಷಣೆಗೆ ಇನ್ನೊಂದು ಉದಾ ಹರಣೆ ನೋಡಿ. ಆತ ವಿದೇಶೀ ರಾಜದೂತರೊಡನೆ ಬಹಳ ಚೆನ್ನಾಗಿ ನಡೆದು ಕೊಳ್ಳುತ್ತಿದ್ದ. ಅನ್ಯ ರಾಜನ ರಾಜದೂತನನ್ನು ಸನ್ಮಾನಿಸುವುದರಿಂದ ಶತ್ರು ರಾಜನನ್ನೂ ಮಿತ್ರನನ್ನಾಗಿ ಮಾಡಿಕೊಳ್ಳಬಹುದೆಂದು ಆತ ಪೂರ್ಣ ನಂಬಿದ್ದ. ತಾನೂ ಈ ನೀತಿಯನ್ನು ಅವಲಂಬಿಸಿ ಬಿರಾರ್, ಬಿದರೆ ಮತ್ತು ಗೋಲ್ಕಂಡದ ಸುಲ್ತಾನರು ದೂತರ ಮೂಲಕ ಎಚ್ಚರಿಕೆಯ ಪತ್ರ ಕಳುಹಿಸಿದ್ದರೂ ಅವರಿಗೆ ಅನೇಕ ಉಪಾಯನವಿತ್ತು ಗೌರವಿಸಿದ್ದನು.

ಕೃಷ್ಣದೇವರಾಯನ ದರಬಾರಿನ ವೈಖರಿಯನ್ನು ವಿದೇಶೀ ದೂತರು ಮತ್ತು ಯಾತ್ರಿಕರು ಬಹಳ ಕೊಂಡಾಡಿದ್ದಾರೆ. ಅವರು ಬರೆದಿರುವ ವಿಜಯನಗರದ ವೈಭವ, ಉತ್ಸವ, ಸೈನ್ಯಶಕ್ತಿ ಮತ್ತು ರಾಜನ ಶೌರ್ಯದ ವರ್ಣನೆಯನ್ನು ಓದಿಯೇ ಆನಂದಿಸಬೇಕು.

ದಕ್ಷಿಣ ಭಾರತದ ಹೆಚ್ಚು ಭಾಗ ಕೃಷ್ಣದೇವರಾಯನ ಅಧೀನದಲ್ಲಿದ್ದಿತು. ಪ್ರಾಂತ್ಯಗಳಲ್ಲಿ ಆತ ರಾಜ್ಯಪಾಲರನ್ನು ಇರಿಸಿದ್ದ. ಆ ರಾಜ್ಯಪಾಲರು ನಿಯತ ಸಂಖ್ಯೆಯಲ್ಲಿ ಆನೆ, ಕುದುರೆ, ಕಾಲಾಳುಗಳನ್ನು ಇರಿಸಿಕೊಂಡು ವರ್ಷದ ಆದಾಯ ದಲ್ಲಿ ಸ್ವಲ್ಪ ಭಾಗವನ್ನು ಸಾಮ್ರಾಟನಿಗೆ ಒಪ್ಪಿಸಬೇಕಾಗಿತ್ತು. ಕೃಷ್ಣದೇವರಾಯ ತನ್ನ ಅಧೀನನಾದ ಯಾವ ರಾಜನಿಗೂ ಪ್ರಾಣ ದಂಡನೆ ವಿಧಿಸಲಿಲ್ಲ. ಶತ್ರು ಗಳೊಡನೆಯೂ ದಯೆಯಿಂದ ನಡೆದುಕೊಳ್ಳುತ್ತಿದ್ದ. ಅಲ್ಲದೆ ಗೆದ್ದ ಪಟ್ಟಣದ ನಾಗರಿಕರನ್ನು ಎಂದೂ ಪೀಡಿಸುತ್ತಿರಲಿಲ್ಲ. ಅವನ ಅದ್ಭುತ ಸೈನ್ಯಶಕ್ತಿ, ಆಕರ್ಷಕ ವ್ಯಕ್ತಿತ್ವ ವಿನಮ್ರತೆ ಮತ್ತು ಪ್ರಜಾ ಕಲ್ಯಾಣ ಭಾವನೆಗಳು ಅವನನ್ನು ಲೋಕಪ್ರಿಯ ವ್ಯಕ್ತಿಯಾಗಿಸಿದುವು.

ಕೃಷ್ಣದೇವರಾಯನಿಗೆ ಹನ್ನೆರಡು ಮಂದಿ ರಾಣಿಯರಿದ್ದರೆಂದೂ ಅವರಲ್ಲಿ ಮೂವರು ಪ್ರಮುಖರಾಗಿದ್ದರೆಂದೂ ಹೇಳುವರು. ಅವರೆಲ್ಲರ ಪುತ್ರರನ್ನೂ ರಾಜ ಕುಮಾರರೆಂದೇ ಪರಿಗಣಿಸಲಾಗುತ್ತಿತ್ತು.

ಕೃಷ್ಣದೇವರಾಯ ಆಡಂಬರದ ಜೀವನವನ್ನು ನಡೆಸುತ್ತಿದ್ದನು. ಒಮ್ಮೆ ಬಳಸಿದ ವಸ್ತುವನ್ನು ಮತ್ತೆ ಹೆಚ್ಚು ಬಾರಿ ಉಪಯೋಗಿಸುತ್ತಿರಲಿಲ್ಲ. ಸಾಮಾನ್ಯ ವಾಗಿ ಬಿಳಿ ಬಟ್ಟೆಯಲ್ಲಿ ಸುವರ್ಣದ ಹೂವು ಹಾಕಿರುವುದನ್ನೇ ಉಡುತ್ತಿದ್ದನು. ರೇಶ್ಮೆ ಬಟ್ಟೆಗಳೂ ಅವನಿಗೆ ಬಹಳ ಪ್ರಿಯವಾಗಿದ್ದವು. ಯುದ್ಧಭೂಮಿಗೆ ಬರು ವಾಗ ಕವಚದ ಮೇಲೆ ರತ್ನ ವೈಡೂರ್ಯ ಮತ್ತು ಚಿನ್ನದಿಂದ ಅಲಂಕೃತವಾದ ಬಟ್ಟೆಗಳನ್ನು ಧರಿಸುತ್ತಿದ್ದನು. ಬಹು ಮೂಲ್ಯ ವಸ್ತು ಮತ್ತು ಉತ್ತಮ ಸುಗಂಧವೆಂದರೆ ಅವನಿಗೆ ಪ್ರಾಣ. ಮಾಂಸಾಹಾರಿಯಾದ ಕಾರಣ ವಿಧ ವಿಧವಾದ ಮಾಂಸವನ್ನು ಆಸೆಯಿಂದ ತಿನ್ನುತ್ತಿದ್ದನು.

ರಾಜನು ಸೂರ್ಯೋದಯಕ್ಕೆ ಮುಂಚೆ ಸುಮಾರು ಅರ್ಧ ಸೇರು ಎಳ್ಳೆಣ್ಣೆ ಯನ್ನು ಕುಡಿದು ಮೈಗೆಲ್ಲಾ ಎಣ್ಣೆಯನ್ನು ಹಚ್ಚಿಕೊಳ್ಳುತ್ತಿದ್ದನು. ಕತ್ತಿ ವರಸೆ

ಮಾಡುತ್ತಿದ್ದ ಕಾರಣ ಕುಡಿದ ಎಣ್ಣೆಯ ಅರ್ಧಾಂಶ ರೋಮಗಳ ರಂಧ್ರದ ಮೂಲಕ ಹೊರಬರುತ್ತಿತ್ತು. ನಂತರ ಒಬ್ಬ ಪೈಲ್ವಾನನೊಡನೆ ಕುಸ್ತಿ ಮಾಡಿ ಬಿಸಿಲು ಬರುವ ತನಕ ಕುದುರೆ ಸವಾರಿ ಮಾಡುತ್ತಿದ್ದನು. ಅನಂತರ ಸ್ನಾನ ಮಾಡಿ ಪೂಜೆ ಮೊದಲಾದುವನ್ನು ಮುಗಿಸಿ ಆಸ್ಥಾನಕ್ಕೆ ಬಂದು ರಾಜ್ಯದ ಮುಖ್ಯ ಅಧಿಕಾರಿಗಳೊಡನೆ ಮಾತುಕತೆ ನಡೆಸುತ್ತಿದ್ದನು.

ಕೃಷ್ಣದೇವರಾಯನಿಗೆ ಕುಸ್ತಿ ಬಹಳ ಪ್ರಿಯವಾದುದು. ಪೈಲ್ವಾನರುಗಳ ಕುಸ್ತಿ ನೋಡುವುದೆಂದರೂ ಅವನಿಗೆ ಆಸೆ. ಅವನ ಬಳಿ ಸಾವಿರ ಪೈಲ್ವಾನರಿದ್ದರು. ಪ್ರಾಣಿಗಳ ಕುಸ್ತಿ ಮತ್ತು ಪಂದ್ಯವೂ ಅವನಿಗೆ ಪ್ರಿಯವಾಗಿದ್ದವು.

ಕೃಷ್ಣದೇವರಾಯನ ರಾಜ್ಯ ಕಾಲವನ್ನು ಸ್ವರ್ಣಯುಗವೆಂದು ಕರೆಯಲಾಗುವುದೆಂದು ಮೊದಲೇ ಹೇಳಲಾಗಿದೆ. ಅವನ ಆಸ್ಥಾನದಲ್ಲಿ ಸಂಸ್ಕೃತ, ತೆಲುಗು, ತಮಿಳು ಮತ್ತು ಕನ್ನಡದ ವಿದ್ವಾಂಸರಿದ್ದರು. ಸ್ವತಃ ಲೇಖಕನಾಗಿದ್ದು ಇತರ ಲೇಖಕರಿಗೂ ಪ್ರೋತ್ಸಾಹವೀಯುತ್ತಿದ್ದ. ತೆಲುಗು ಭಾಷೆಯಲ್ಲಿ ಅವನಿಗೆ ವಿಶೇಷ ಅಭಿರುಚಿ ಇದ್ದಿತು. ತೆಲುಗಿನಲ್ಲಿ ರಚಿಸಿರುವ 'ಆಮುಕ್ತ ಮಾಲ್ಯದಾ' ಎಂಬ ತನ್ನ ಸರ್ವೋತ್ತಮ ಕೃತಿಗೆ ಮುಂಚೆ ಸುಮಾರು ಹನ್ನೆರಡು ಪುಸ್ತಕಗಳನ್ನು ಸಂಸ್ಕೃತದಲ್ಲಿ ಬರೆದಿದ್ದನು.

ಅವನ ದರಬಾರಿನಲ್ಲಿ ಅಷ್ಟ ದಿಗ್ಗಜರೆನಿಸಿಕೊಳ್ಳುತ್ತಿದ್ದ ಸಾಮ್ರಾಜ್ಯದ ಎಂಟು ಮಹಾ ಕವಿಗಳಿದ್ದರು. ರಾಜ ಈ ಕವಿಗಳನ್ನು ಹೆಚ್ಚು ಗೌರವಿಸುತ್ತಿದ್ದ. ತೆಲುಗು ಭಾಷೆಯಲ್ಲಿ ಬರೆದಿರುವ ಅವನ 'ಆಮುಕ್ತ ಮಾಲ್ಯದ' ಎಂಬ ಕಾವ್ಯ ತೆಲುಗು ಭಾಷೆಯ ಐದು ಮಹಾ ಕಾವ್ಯಗಳಲ್ಲಿ ಒಂದಾಗಿದೆ. ಆತ ತನ್ನ ಗ್ರಂಥದಲ್ಲಿ ಪ್ರಕೃತಿಯನ್ನು ಸುಂದರವಾಗಿ ವರ್ಣಿಸಿದ್ದಾನೆ. ಋತುಗಳನ್ನು ವರ್ಣಿಸುವಾಗ ಬರುವ ಸೂರ್ಯ ಮತ್ತು ಚಂದ್ರರ ಉದಯಾಸ್ತ ವರ್ಣನೆಯೂ ಆಕರ್ಷಕವಾಗಿದೆ. ಅಲ್ಲದೆ ಮಹಾ ಸಾಮ್ರಾಟನ ಆಡಳಿತ ಕಾಲದಲ್ಲಿ ಕೇವಲ ವೈದ್ಯಶಾಸ್ತ್ರದ ಮೇಲೆ ಅಷ್ಟೇ ಅಲ್ಲ ಆ ಪಾಕಶಾಸ್ತ್ರದ ಮೇಲೂ ಪುಸ್ತಕಗಳು ಹೊರಬಂದವು.

ಕೃಷ್ಣದೇವರಾಯನ ಆಡಳಿತ ಕಾಲದಲ್ಲಿ ಕಟ್ಟಡ ನಿರ್ಮಾಣ ಕಲೆ ಮೂರ್ತಿ ಮತ್ತು ಚಿತ್ರಕಲೆಗಳು ಅಭ್ಯುದಯ ಹೊಂದಿದವು. ಅವರ ಅರಮನೆಯ ಬಾಗಿಲಿ

ನಲ್ಲಿ ಅವನ ಅಥವಾ ಅವನ ತಂದೆಯ ಚಿತ್ರವಿರುತ್ತಿತ್ತು. ಅರಮನೆಯ ಒಳಗೆ ನೃತ್ಯದ ಅನೇಕ ಭಂಗಿಗಳನ್ನು ಗೋಡೆಗಳ ಮೇಲೆ ಚಿತ್ರಿಸಲಾಗಿತ್ತು. ಇದರಿಂದ ನೃತ್ಯ ಕಲೆಯಲ್ಲೂ ಅವನಿಗಿದ್ದ ಅಭಿರುಚಿ ವ್ಯಕ್ತವಾಗುವುದು. ಗೋಡೆಗಳ ಮೇಲಿದ್ದ ವಿಭಿನ್ನ ಪಕ್ಷಿಗಳ ಚಿತ್ರವು ಸುಂದರವಾಗಿಯೂ ಆಕರ್ಷಕವಾಗಿಯೂ ಇದ್ದವು. ಶ್ರೇಷ್ಠ ಕಟ್ಟಡಗಳ ನಿರ್ಮಾಣದ ದೃಷ್ಟಿಯಿಂದ ಹೇಳುವುದಾದರೆ ಅವನನ್ನು ಮೊಗಲ್ ಸಾಮ್ರಾಟರೊಡನೆ ಹೋಲಿಸಬಹುದು. ಆತ ರಾಜಧಾನಿಯ ಸೌಂದರ್ಯವನ್ನು ಹೆಚ್ಚಿಸಿದ. ದೇವಸ್ಥಾನ ಮತ್ತು ಅರಮನೆಗಳನ್ನು ಕಟ್ಟಿಸಿದ. ಪೋರ್ಚುಗೀಸ್ ಇಂಜಿನಿಯರುಗಳ ಸಹಾಯದಿಂದ ವಿಜಯನಗರದ ಸಮೀಪದ ಜೌಗು ಭೂಮಿಯಲ್ಲಿ ನೀರಾವರಿಯ ವ್ಯವಸ್ಥೆ ಮಾಡಿಸಿದ. ಆತನ ತಾಯಿ ನಗಲ ದೇವಿಯ ಹೆಸರಿನಲ್ಲಿ ನಗಲಪುರವೆಂಬ ದೊಡ್ಡ ಪಟ್ಟಣವೂ ನಿರ್ಮಾಣವಾಯಿತು. ಈ ನಗರಕ್ಕೆ ಹೊಸ ಕೆರೆಯೊಂದರಿಂದ ನೀರು ಬರುತ್ತಿತ್ತು. ವಿಠಲಸ್ವಾಮಿ ದೇವಸ್ಥಾನದಲ್ಲಿ ಆತ ಹೂವಿನ ಅತಿ ಸುಂದರ ಆಕೃತಿಯನ್ನು ಮಾಡಿಸಿದ. ಈ ದೇವಸ್ಥಾನದಲ್ಲಿ ಅನೇಕ ವರುಷಗಳವರೆಗೆ ಚಿತ್ರ ಕಾರ್ಯ ನಡೆಯುತ್ತಿತ್ತು.

ನಲವತ್ತನೇ ವರುಷದಲ್ಲಿ ಕೃಷ್ಣದೇವರಾಯ ತನ್ನ ಆರು ವರ್ಷದ ಬಾಲಕನನ್ನು ರಾಜನನ್ನಾಗಿ ಮಾಡಿ ತಾನು ಮಂತ್ರಿಯ ಕೆಲಸ ಮಾಡತೊಡಗಿದನು. ಆತ ಈ ವಯಸ್ಸಿನಗೇ ಮುದುಕನೇನೂ ಆಗಿರಲಿಲ್ಲ. ಮುಕ್ಕಾಲುಪಾಲು ಯಾವುದಾದರೂ ರೋಗಕ್ಕೆ ಗುರಿಯಾಗಿದ್ದು ಮೃತ್ಯುವಿನ ಭಯವಿದ್ದಿರಬೇಕು. ಬಾಲಕ ಸಿಂಹಾಸನದ ಅಧಿಕಾರಿಯಾದದ್ದು ಕೃಷ್ಣದೇವರಾಯನ ದುಷ್ಟ ಮಂತ್ರಿ ಸಾಳುವ ತಿಮ್ಮನ ಮಹತ್ವಾಕಾಂಕ್ಷೆಗೆ ಮಣ್ಣೆರಚಿದಂತಾಗಿ ಆತ ಮೋಸದಿಂದ ಮಗುವಿಗೆ ವಿಷ ಹಾಕಲು ಯತ್ನಿಸಿದನು. ಆ ಸಂದರ್ಭದಲ್ಲಿ ಕೃಷ್ಣದೇವರಾಯ ಮೃತ್ಯುಶಯ್ಯೆಯಲ್ಲಿದ್ದನು. ಆತ ತುಂಬಿದ ಸಭೆಯಲ್ಲಿ ಸಾಳುವ ತಿಮ್ಮನ ಮೇಲೆ ಆರೋಪ ಮಾಡಿ ಅವನನ್ನು ಪರಿವಾರ ಸಮೇತ ಬಂದೀಖಾನೆಗೆ ಹಾಕಿಸಿದನು.

ಕೃಷ್ಣದೇವರಾಯ ಸಿಂಹಾಸನದಲ್ಲಿ ಕುಳಿತಿರುವವರೆಗೆ ಯಾವನಿಗೂ ವಿಜಯನಗರದ ಮೇಲೆ ಕಣ್ಣೋಡಿಸಲೂ ಧೈರ್ಯ ಬರಲಿಲ್ಲ. ಅವನ ಮೃತ್ಯುವಾಗುತ್ತಲೇ ಶತ್ರುಗಳು ನಾಲ್ಕು ದಿಕ್ಕಿನಿಂದಲೂ ಆಕ್ರಮಣ ಮಾಡಿದರು. ಅವನ ಪುತ್ರನೂ ಶೀಘ್ರವೇ ಕಾಲವಾದ. ವಿಜಯನಗರ ರಾಜ್ಯ ಅಶಕ್ತವಾಯಿತು. ವಿಜಯನಗರದ ಸೂರ್ಯ ಅಸ್ತನಾದನು.

ಪುರಂದರದಾಸ

ಕರ್ನಾಟಕವು ಪ್ರಕೃತಿ ಸೌಂದರ್ಯದಲ್ಲಿ ಅದ್ವಿತೀಯವಾಗಿರುವಂತೆ ಸಾಹಿತ್ಯ ಮತ್ತು ಕಲೆಗಳ ದೃಷ್ಟಿಯಿಂದಲೂ ಪ್ರಸಿದ್ಧವಾಗಿದೆ. ಕರ್ನಾಟಕವು ಮಧ್ವಾಚಾರ್ಯರ ಜನ್ಮಭೂಮಿಯಾದಂತೆ ಶಂಕರಾಚಾರ್ಯರು, ರಾಮಾನುಜಾಚಾರ್ಯರು ಮುಂತಾದ ಪ್ರಸಿದ್ಧ ಧರ್ಮಗುರುಗಳ ಮತ್ತು ಸಂತರ ಪ್ರಚಾರ ಭೂಮಿಯಾಗಿದೆ. ಈ ಸಂತರ ಸಮೂಹದಲ್ಲಿ ಭಕ್ತಕವಿ ಪುರಂದರದಾಸರ ಹೆಸರು ಉಲ್ಲೇಖನೀಯವಾದುದು. ಅವರು ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ಭಕ್ತಿಗೀತೆಗಳನ್ನು ರಚಿಸಿ ಮಧುರ ಸ್ವರದಲ್ಲೂ ಹಾಡಿ ಭಕ್ತರನ್ನು ಆನಂದ ಪರವಶರಾಗಿಸುತ್ತಿದ್ದರೆಂದು ಹೇಳುವರು. ಈ ಕೀರ್ತನೆಗಳು ವಿಧವಿಧವಾದ ರಾಗಗಳಲ್ಲಿವೆ. ಸಂಗೀತಕ್ಕೆ ಇದೊಂದು ಅಮೂಲ್ಯ ನಿಧಿ.

ಪುರಂದರ ದಾಸರು ವ್ಯಾಸರಲ್ಲಿ ಗುರುದೀಕ್ಷೆ ಪಡೆದರು. ದೀಕ್ಷೆ ಪಡೆಯುವ ಮೊದಲು ಅವರ ಹೆಸರು ಶ್ರೀನಿವಾಸ ನಾಯಕನೆಂದಿತ್ತು. ಅವರ ತಂದೆ ವರದಪ್ಪ ಒಬ್ಬ ವ್ಯಾಪಾರಿ. ಮಗನೂ ತನ್ನ ವೃತ್ತಿಯನ್ನು ಆಶ್ರಯಿಸಲೆಂದು ಆತ ಆಶಿಸಿದ. ಸರಸ್ವತಿ ಎಂಬ ಕನ್ಯೆಯೊಡನೆ ಅವರಿಗೆ ವಿವಾಹವೂ ಆಯಿತು. ಶ್ರೀನಿವಾಸ ಲೌಕಿಕ ಸುಖವನ್ನು ಅನುಭವಿಸುತ್ತಿದ್ದನು. ಪ್ರಪಂಚದ ವಸ್ತುವಿನಿಂದ ಬೇಸರಗೊಳ್ಳುವಂತಹ ಘಟನೆಯೊಂದು ನಡೆಯಿತು.

ಒಮ್ಮೆ ಶ್ರೀನಿವಾಸನ ಮನೆಗೆ ಸ್ವತಃ ಭಗವಂತನೇ ಬ್ರಾಹ್ಮಣ ವೇಷದಲ್ಲಿ ಬಂದು—ಅಪ್ಪಾ ನನ್ನ ಮಗನಿಗೆ ಉಪನಯನ ಮಾಡಬೇಕು ಈ ಮುಗ್ಗಟ್ಟಿನ ಸಮಯದಲ್ಲಿ ಸ್ವಲ್ಪ ಹಣ ಕೊಟ್ಟು ನನ್ನಂತಹ ಬಡವನಿಗೆ ಸಹಾಯ ಮಾಡಪ್ಪ ಎಂದು ಅಂಗಲಾಚಿ ಬೇಡಿದನು.

ಶ್ರೀನಿವಾಸನಾಯಕ ಬಹಳ ಜಿಪುಣ. ಬ್ರಾಹ್ಮಣನನ್ನು ಆತ ಓಡಿಸಿದ. ನಿರಾಶೆಗೊಂಡ ಬ್ರಾಹ್ಮಣ ಶ್ರೀನಿವಾಸನ ಪತ್ನಿ ಸರಸ್ವತಿಯ ಬಳಿ ಹೋದ. ಅವನ ಹೀನಸ್ಥಿತಿಯನ್ನು ಕಂಡು ಸರಸ್ವತಿ ದುಃಖಿತಳಾದಳು. ಆದರೆ ಅವಳ ಕೈಯ್ಯಲ್ಲಿ

ನಗದು ಹಣವಿರಲಿಲ್ಲ. ತನ್ನ ಮೂಗಿನ ತುಂಬ ಜೆಲಿಬಾಳುವ ಮೂಗುತಿಯನ್ನು ಬ್ರಾಹ್ಮಣನಿಗೆ ಕೊಟ್ಟು ಇದನ್ನು ಒತ್ತೆ ಇಟ್ಟು ಹಣ ತೆಗೆದುಕೋ ಎಂದು ಹೇಳಿದಳು.

ಬ್ರಾಹ್ಮಣ ಆ ಮೂಗುತಿಯನ್ನು ಶ್ರೀನಿವಾಸನ ಅಂಗಡಿಗೇ ತೆಗೆದುಕೊಂಡು ಹೋಗಿ—ಇದನ್ನು ಒತ್ತೆ ಇಟ್ಟುಕೊಂಡು ಮನಗ ಉಪಯನದ ಬಗ್ಗೆ ಸ್ವಲ್ಪ ಹಣ ಕೊಡೆಂದು ಕೇಳಿದನು.

ಶ್ರೀನಿವಾಸ ಮೂಗುತಿಯನ್ನು ಹಿಂದುಮುಂದು ತಿರುಗಿಸಿ ನೋಡಿದಾಗ ಅದು ತನ್ನ ಪತ್ನಿಯದಿರಬಹುದೆಂಬ ಸಂದೇಹ ಹುಟ್ಟಿತು. ಸಂದೇಹವನ್ನು ಪರಿಹರಿಸಲು, ಬ್ರಾಹ್ಮಣನನ್ನು ಅಂಗಡಿಯಲ್ಲೇ ಕುಳ್ಳಿರಿಸಿ ಮನೆಗೆ ಹೋಗಿ ಪತ್ನಿಯನ್ನು "ಸರಸ್ವತಿ ನಿನ್ನ ಮೂಗುತಿ ಎಲ್ಲಿ ಸ್ವಲ್ಪ ಕೆಲಸವಿದೆ ತೋರಿಸು" ಎಂದು ಕೇಳಿದ.

ಸರಸ್ವತಿಗೆ ಪತಿಯ ಗುಣದ ಪರಿಚಯವಿದ್ದಿತು. ಅವನಿಗೆ ಪತ್ನಿಗಿಂತ ಹೆಚ್ಚಾಗಿ ಬಿಡಿಗಾಸು ಪ್ರಿಯವಾಗಿತ್ತು. ಆಕೆ ಹೆದರಿ ಅಪಮಾನವಾಗುವುದಕ್ಕಿಂತ ವಿಷ ಕುಡಿದು ಸಾಯುವುದು ಮೇಲೆಂದು ತಿಳಿದು ಕೋಣೆಗೆ ಹೋಗಿ ವಿಷ ಕದಡಿ ದೇವರ ಮೂರ್ತಿಯ ಮುಂದೆ ನಿಂತು ಹರಿನಾಮ ಕೀರ್ತನೆ ಮಾಡತೊಡಗಿದಳು. ವಿಷ ಕುಡಿಯಲು ಆಕೆ ಕಣ್ಣು ತೆರೆದಾಗ ಬಟ್ಟಲಲ್ಲಿ ಮೂಗುತಿಯನ್ನು ನೋಡಿ ಅಚ್ಚರಿಗೊಂಡಳು.

ಆಕೆಯ ಪತಿ ಹಿಂದೆ ನಿಂತು ಈ ಘಟನೆಯನ್ನು ನೋಡಿದ್ದ. ಆತ ಮೂಗುತಿಯನ್ನು ತೆಗೆದುಕೊಂಡು ಅಂಗಡಿಗೆ ಹೋಗಿ ಪೆಟ್ಟಿಗೆಯನ್ನು ತೆಗೆಯುವಾಗ ಬ್ರಾಹ್ಮಣ ಕೊಟ್ಟ ಮೂಗುತಿ ಅಲ್ಲಿಲ್ಲ. ಬ್ರಾಹ್ಮಣನೂ ಮಾಯವಾಗಿದ್ದ. ಈ ಚಮತ್ಕಾರಪೂರ್ಣ ಘಟನೆಯಿಂದ ಶ್ರೀನಿವಾಸನ ಕಣ್ಣು ತೆರೆಯಿತು. ದೇವರಿಗೆ ಜೀವನ ಸಮರ್ಪಣೆ ಮಾಡಿ ಜೀವಿಸುವುದರಿಂದಲೇ ಜೀವನ ಸಫಲವಾಗುವುದೆಂದು ನಂಬಿ ತನ್ನ ಸಂಪತ್ತನ್ನೆಲ್ಲಾ ಬಡವರಿಗೆ ಹಂಚಿ ಪತ್ನಿ ಪುತ್ರರ ಜೊತೆ ವ್ಯಾಸತೀರ್ಥರ ಮಠವನ್ನು ಸೇರಿದ. ಅವನಿಗೆ ದೇವರಲ್ಲಿದ್ದ ಆಸಕ್ತಿಯನ್ನು ನೋಡಿ ಮುನಿವ್ಯಾಸರು ಮಂತ್ರೋಪದೇಶವಿತ್ತು ಅವನಿಗೆ ಪುರಂದರದಾಸರೆಂದು ಹೆಸರಿಟ್ಟರು.

ಇಲ್ಲಿಂದ ಪುರಂದರದಾಸರ ಜೀವನದ ದಿಕ್ಕು ಬದಲಿಸಿತು. ಭಗವದ್ಭಕ್ತಿಯಲ್ಲಿ ತಲ್ಲೀನರಾಗಿ ತಮ್ಮ ಇಷ್ಟ ದೈವದ ಸ್ತುತಿಯಲ್ಲಿ ಪ್ರತಿದಿನ ಹೊಸ ಕೀರ್ತನೆಗಳನ್ನು ರಚಿಸುತ್ತಿದ್ದರು. ಪ್ರಾರಂಭದ ಕೆಲವು ಕೀರ್ತನೆಗಳಲ್ಲಿ ಪತ್ನಿಯನ್ನು ಪ್ರಶಂಸಿಸಿರು

ವರು. ಆಕೆಯ ಸಹವಾಸದಿಂದ ಅವರಿಗೆ ಜ್ಞಾನ ದೊರೆತದ್ದೇ ಇದಕ್ಕೆ ಕಾರಣ. ತಮ್ಮ ಕೀರ್ತನೆಗಳನ್ನು ರಾಗ ರಾಗದಲ್ಲಿ ಮಧುರವಾಗಿ ಹಾಡಿ ಭಕ್ತರನ್ನು ಗದ್ಗದರನ್ನಾಗಿ ಮಾಡಿ ಧರ್ಮಾವಲಂಬಿಗಳನ್ನಾಗಿ ಮಾಡಿದರು. ವಿಜಯನಗರ ರಾಜ್ಯದ ರಾಜಧಾನಿಯಾದ ಹಂಪೆಯೇ ಅವರ ವಾಸಸ್ಥಾನವಾಯಿತು. ಇಂದೂ ಹಂಪೆಯ ಭಗ್ನಾವಶೇಷಗಳ ಮಧ್ಯೆ ಪುರಂದರದಾಸರ ಮಂಟಪವು ತಲೆ ಎತ್ತಿ ನಿಂತಿದೆ.

ಪುರಂದರದಾಸರಿಗೆ ನಾಲ್ವರು ಪುತ್ರರಿದ್ದರು. ಈ ನಾಲ್ವರೂ ತಂದೆಯಂತೆಯೇ ಒಳ್ಳೆಯ ಭಕ್ತರಾಗಿದ್ದು ಕೀರ್ತನೆಗಳನ್ನು ರಚಿಸುವುದರಲ್ಲಿ ಚತುರರಾಗಿದ್ದರು. ಪುರಂದರದಾಸರು ತಮ್ಮ ಕೀರ್ತನೆಗಳಿಂದ ಸಂಗೀತವನ್ನು ಲೋಕಪ್ರಿಯವಾಗಿಸಿ ಮಾಯೆಯ ನಿಸ್ಸಾರತೆಯನ್ನು ತಿಳಿಸಿದರು. ಜಾತಿ ಭೇದವನ್ನು ಅಳಿಸಲು ಪ್ರಯತ್ನ ನಡೆಯಿತು. ಪುರಂದರರು ವಿಠಲನ ಗುಣಗಾನ ಮಾಡಿ ಭಕ್ತಿಯ ಗಂಗೆಯನ್ನೇ ಹರಿಸಿದರು.

ಪುರಂದರದಾಸರು ಸಂಗೀತದಲ್ಲಿ ಕರ್ನಾಟಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ಅವರ ಶೈಲಿ ಮತ್ತು ಭಾಷೆ ಸುಂದರವಾಗಿವೆ. ತಮ್ಮ ವಿಚಾರಗಳಿಗೆ ಸಂಗೀತದ ಆವರಣವನ್ನಿತ್ತು ಪ್ರಕಟಿಸಿದರು. ಇವರು ಕೃಷ್ಣನ ಬಾಲಲೀಲೆಯ ವರ್ಣನೆಯನ್ನು ಬಹಳ ಸುಂದರ ಮತ್ತು ಸಜೀವವಾಗಿ ಮಾಡಿರುವರು.

ಪುರಂದರದಾಸರು ಪ್ರಾತಃಕಾಲದೊಳೆದ್ದು ತಂಬೂರಿಯನ್ನು ಹಿಡಿದು ದೇವರನಾಮ ಹಾಡುತ್ತಾ ತಮ್ಮ ಪತ್ನೀ ಪುತ್ರರೊಡನೆ ಮನೆ ಮನೆಗೂ ಭಿಕ್ಷೆಗೆ ಹೋಗುತ್ತಿದ್ದರು. ಕೋಟ್ಯಾಧೀಶ್ವರ ಶ್ರೀನಿವಾಸ ಪುರಂದರದಾಸರಾಗಿ ಭಿಕ್ಷೆ ಬೇಡುತ್ತಾ ತಿರುಗುವುದನ್ನು ನೋಡಿ ಗ್ರಾಮವಾಸಿಗಳು ಆಶ್ಚರ್ಯಚಕಿತರಾಗುತ್ತಿದ್ದರು. ಮೊದಲಿನ ಜಿಪುಣತನ ಮತ್ತು ಅಹಂಕಾರ ಈಗ ಅವರಿಂದ ಬಹು ದೂರ ಓಡಿದ್ದವು. ಭಿಕ್ಷೆಯಿಂದ ದೊರೆತುದರಲ್ಲಿ ತನ್ನ ಹೊಟ್ಟೆ ತುಂಬುವುದಲ್ಲದೆ ಸ್ವಲ್ಪ ಭಾಗವನ್ನು ಬಡಬಗ್ಗರಿಗೂ ಕೊಡುತ್ತಿದ್ದರು.

ಪುರಂದರದಾಸರು ತಮ್ಮ ಭಕ್ತರಿಗೆ ಒಳ್ಳೆಯ ನಡತೆಯಿಂದಿರಲು ಉಪದೇಶವಿತ್ತರು. ಸಾಲ ಮಾಡಬೇಡ, ಲೋಭಿಯಾಗಬೇಡ, ಅಸಂತುಷ್ಟನಾಗಬೇಡ ಎಂದು ಹೇಳುತ್ತಿದ್ದರು. ಅವರು ಎಂದೂ ನಾಳೆಯ ಚಿಂತೆ ಮಾಡುತ್ತಿರಲಿಲ್ಲ. ಯಾವನಾದರೂ ಯಾಚಕನು ಅವರ ಬಳಿ ಬಂದರೆ ತಮ್ಮಲ್ಲಿದ್ದಷ್ಟನ್ನು ಕೊಟ್ಟು

ಬಿಡುತ್ತಿದ್ದರು. ಮನೆಯಲ್ಲಿ ಏನನ್ನೂ ಶೇಖರಿಸುತ್ತಿರಲಿಲ್ಲ ಅವರ ಈ ನಿಸ್ವಾರ್ಥ ಬುದ್ಧಿಯೇ ಎಲ್ಲರನ್ನೂ ವಶಪಡಿಸಿಕೊಂಡಿತ್ತು.

ಪುರಂದರದಾಸರು ಕೃಷ್ಣದೇವರಾಯನ ಸಮಕಾಲೀನರು. ಒಮ್ಮೆ ರಾಜನೇ ದಾಸರ ದರ್ಶನ ಪಡೆಯಲು ಬಂದು ಅವರನ್ನು ಅರಮನೆಗೆ ಕರೆದೊಯ್ದರೆಂದು ಹೇಳುವರು. ಮಾತಿನ ಸರಣಿಯಲ್ಲಿ ಹಣದ ಮಾತು ಬಂದಾಗ ಪುರಂದರದಾಸರು– ದೊರೆ ಈ ರಾಜವೈಭವ ಭಕ್ತರ ವೈಭವಕ್ಕೆ ಸರಿತೂಗಲಾರದು. ನಿನ್ನ ಲಕ್ಷ್ಮಿ ಚಂಚಲೆ ಕ್ಷಣ ಭಂಗುರ. ಕಳ್ಳರು ಕದಿಯಬಹುದು. ಆದರೆ ನಮ್ಮ ಭಕ್ತರ ನಿಧಿ ಸ್ವತಃ ದೇವರೇ. ನಾವು ಭಗವದ್ಭಕ್ತಿಯನ್ನು ಸಂಪಾದಿಸಿರುವೆವು. ಹರಿನಾಮವೇ ನಮಗೆ ಸ್ಪರ್ಶಮಣಿ-ಎಂದರು. ಅವರ ಉಪದೇಶದ ಪ್ರಭಾವ ರಾಜನ ಮೇಲಾಗಿ ಆತ ಅವರ ಪ್ರಶಂಸಕನಾದನಂತೆ.

ಪುರಂದರದಾಸರು ಒಬ್ಬ ಹಿರಿಯ ಸಮಾಜಸೇವಕರು. ಅವರು ಜನರಿಗೆ ಭಗವದ್ಭಕ್ತಿ ಮತ್ತು ಒಳ್ಳೆಯ ನಡತೆಯ ಉಪದೇಶ ಮಾತ್ರವಲ್ಲ ಆದರ್ಶಪೂರ್ಣ ಜೀವನ ನಡೆಸಲೂ ಕಲಿಸಿದರು. ಅವರ ಕಷ್ಟ ಸುಖಗಳಲ್ಲಿ ಪಾಲುಗಾರರಾಗು ತ್ತಿದ್ದರು. ದಿನಕ್ಕೆ ಒಂದು ಬಾರಿ ಊರೆಲ್ಲಾ ಸುತ್ತಿ ಜನಗಳ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದರು. ಇದರಿಂದ ಅವರು ಇನ್ನೂ ಲೋಕಪ್ರಿಯರಾದರು. ಅವರ ಭಜನೆಗೆ ಜನರು ಅಧಿಕ ಸಂಖ್ಯೆಯಲ್ಲಿ ಬರತೊಡಗಿದರು. ಇದನ್ನು ನೋಡಿ ರಾಜ್ಯದ ಕೆಲವು ಅಧಿಕಾರಿಗಳು ಅವರ ಲೋಕಪ್ರಿಯತೆ ದೇಶದ ಶಾಂತಿಗೆ ಭಾದಕ ವೆಂದು ತಿಳಿದು ಹಿಂಸಿಸತೊಡಗಿದರು. ಇದರಿಂದ ಜನರಿಗೆ ಅವರಲ್ಲಿ ಇನ್ನೂ ಹೆಚ್ಚು ವಿಶ್ವಾಸವೇರ್ಪಟ್ಟಿತು.

ಪುರಂದರದಾಸರ ಉಪದೇಶದಿಂದ ಜನರಿಗೆ ಶಾಂತಿ ದೊರೆಯುತ್ತಿದ್ದಿತು. ಜನಗಳ ಭ್ರಮೆಯನ್ನು ದೂರ ಮಾಡಿ ವಿದ್ಯೆ ಇಲ್ಲದ ವಿನಯ ಅಧಿಕಾರ ವಿಲ್ಲದ ಸತ್ಯ ಇವೆಲ್ಲವೂ ನಿಷ್ಪ್ರಯೋಜಕವೆಂದು ಅವರು ಹೇಳುತ್ತಿದ್ದರು. ಅವರು ಸಮಾಜ ಸುಧಾರಕರನ್ನು ಹಾಗು ಧರ್ಮಗುರುಗಳನ್ನು ಹಾಸ್ಯ ಮಾಡುತ್ತಾ —ನಿಮ್ಮ ನಡತೆ ಸರಿಯಾಗುವ ತನಕ ಬೇರೆಯವರನ್ನು ಉದ್ಧಾರ ಮಾಡುವು ದಾಗಲಿ ಉಪದೇಶ ಕೊಡುವುದಾಗಲಿ ಅರ್ಥವಿಲ್ಲದ ಮಾತೆನ್ನುತ್ತಿದ್ದರು. ವಿಚಾರ ಮತ್ತು ವ್ಯವಹಾರಗಳ ಶುದ್ಧಿಯಿಲ್ಲದೆ ತೀರ್ಥಸ್ನಾನ ಗಂಧ, ನಾಮ ಇವೆಲ್ಲವೂ

ವ್ಯರ್ಥ. ಗುರುಗಳ ಸನ್ಮಾನ, ಜನತಾ ಜನಾರ್ದನ ಸೇವೆ, ಹಸಿದವನಿಗೆ ಅನ್ನ ನೀಯುವುದೇ ಎಲ್ಲಕ್ಕಿಂತ ಪುಣ್ಯಕಾರ್ಯವೆಂದು ಅವರ ಅಭಿಪ್ರಾಯ.

ಅನ್ಯ ಸಂತರಂತೆ ಪುರಂದರದಾಸರ ಜೀವನದಲ್ಲೂ ಕೆಲವು ಚಮತ್ಕಾರಯುಕ್ತ ಘಟನೆಗಳು ಜರುಗಿದವು. ಭಾರತದ ಪರ್ಯಟನ ಮಾಡುತ್ತಾ ಒಮ್ಮೆ ಅವರು ತಿರುಪತಿಗೆ ಹೋಗಿ ಅಲ್ಲಿ ಸಂತರಿಗೂ ಭಕ್ತರಿಗೂ ಸಂತರ್ಪಣೆ ಮಾಡಿದರು. ಆಗ ತುಪ್ಪ ಸಾಲದಾಯಿತು. ದೇವರು ತನ್ನ ಭಕ್ತನ ಮಾನ ಉಳಿಸಲು ಸ್ವತಃ ಬಂದು ತುಪ್ಪ ಬಡಿಸಿದನೆಂದು ಹೇಳುವರು.

ಪುರಂದರದಾಸರ ಕೀರ್ತನೆಗಳ ರಸಾಸ್ವಾದವನ್ನು ಈಗ ಹಿಂದೀ ಭಾಷೆಯಲ್ಲೂ ಮಾಡಬಹುದು. ಬಾಬುರಾವ್ ಕುಮಠೇಕರ್ ಅವರು ಪುರಂದರದಾಸರ ಕೀರ್ತನೆಗಳನ್ನು ಪದ್ಯ ರೂಪದಲ್ಲಿ ಹಿಂದಿಗೆ ಅನುವಾದ ಮಾಡಿರುವರು. ಪುರಂದರದಾಸರ ಕೆಲವು ಭಕ್ತಿಗೀತೆಗಳನ್ನು ಕೆಳಗೆ ಕೊಡಲಾಗಿದೆ :

ಪ್ರಾರ್ಥನೆ

ನಾನಿನ್ನೊಳನ್ಯ ಬೇಡುವುದಿಲ್ಲ ರಂಗ ।
ಹೃದಯಕಮಲದೊಳು ನಿಂದಿರೋ ಹರಿಯೇ ॥
ಶಿರ ನಿನ್ನ ಚರಣಕೆ ಎರಗಲಿ ರಂಗ ।
ಎನ್ನ ಚಕ್ಷು ಸದಾ ನಿನ್ನ ನೋಡಲಿ ಹರಿಯೇ ॥
ಕರ್ಣ ಗೀತಂಗಳ ಕೇಳಲಿ ನಿನ್ನ ।
ನಿರ್ಮಾಲ್ಯವ ನಾಸ ಘ್ರಾಣಿಸಲಿ ಹರಿಯೇ ॥೧॥
ನಾಲಿಗೆ ನಿನ್ನ ಕೊಂಡಾಡಲಿ ರಂಗ ।
ಎನ್ನ ಕರಗಳೆರಡು ನಿನ್ನನರ್ಚಿಸಲಿ ಹರಿಯೇ ॥
ಚರಣ ತೀರ್ಥಯಾತ್ರೆ ಮಾಡಲಿ ।
ಎನ್ನ ಮನ ಅನುದಿನ ನಿನ್ನ ಸ್ಮರಿಸಲಿ ಹರಿಯೇ ॥೨॥
ಬುದ್ಧಿ ನಿನ್ನೊಳು ಮುಳುಗಾಡಲಿ ।
ಎನ್ನ ಚಿತ್ತ ನಿನ್ನೊಳು ಸ್ಥಿರವಾಗಲಿ ಹರಿಯೇ ॥
ಭಕ್ತ ಜನರ ಸಂಗ ದೊರಕಲಿ ।
ಪುರಂದರ ವಿಠ್ಠಲನೆ ಇಷ್ಟೆ ದಯ ಮಾಡೋ ॥೩॥

ಅಪಮಾನವಾದರೆ ಒಳ್ಳಿತು

ಅಪಮಾನವಾದರೆ ಒಳ್ಳಿತು ।
ಅಪರೂಪ ಹರಿನಾಮ ಜಪಿಸುವ ಮನುಜಗೆ ॥ ॥ಪ॥

ಮಾನದಿಂದ ಅಭಿಮಾನ ಪುಟ್ಟುವುದು ।
ಮಾನದಿಂದ ತಪಹಾನಿಯಾಗುವುದು ॥

ಮಾನಿ ದುರ್ಯೋಧನಗೆ ಹಾನಿಯಾಯಿತು ।
ಅನುಮಾನವಿಲ್ಲ ಮಾನಾಪಮಾನಸಮನಿಗೆ ॥೧॥

ಅಪಮಾನದಿಂದಲಿ ತಪವೃದ್ಧಿಯಾಗ್ವದು ।
ಅಪಮಾನದಿಂದ ಪುಣ್ಯಸಫಲಾಗ್ವದು ॥

ಅಪಮಾನದಿಂದಲಿ ನೃಪಧ್ರುವರಾಯಗೆ ।
ಕಪಟನಾಟಕ ಕೃಷ್ಣ ಅಪರೋಕ್ಷನಾದನು ॥೨॥

ನಾನೇನು ಮಾಡಲಿ ಯಾರಲ್ಲಿ ಪೋಗಲಿ ।
ಕಾನನ ಚರಾರಾಧ್ಯ ನೀನಿರಲು ॥

ದೀನ ರಕ್ಷಕ ನಮ್ಮ ಪುರಂದರ ವಿಠಲ ।
ಏನು ಬೇಡೆನಗೆ ಅಪಮಾನವೇ ಸಾಕು ॥೩॥

ಜೀವನ

ಈಸಬೇಕು । ಇದ್ದು । ಜಯಿಸಬೇಕು ॥ಪ॥

ಹೇಸಿಗೆ ಸಂಸಾರದಲ್ಲಿ । ಆಸೆ ಲೇಶ ಇಡದ್ಹಾಗೆ ॥ಅ॥

ತಾಮರಸ ಜಲದಂತೆ । ಪ್ರೇಮವಿಟ್ಟು ಭವದೊಳು ॥
ಸ್ವಾಮಿ ರಾಮ ಎನುತ ಪಾಡಿ । ಕಾಮಿತ ಕಯ್ಗೊಂಬರೆಲ್ಲ ॥೧॥

ಗೇರುಹಣ್ಣಿನ ಬೀಜ । ಸೇರಿದಂತೆ ಸಂಸಾರದಿ ॥
ಮೀರಿಯಾಸೆ ಮಾಡದಲೆ । ದೀರ ಕೃಷ್ಣನ ಭಕುತರೆಲ್ಲ ॥೨॥

ಮಾಂಸದಾಸೆಗೆ ಮತ್ಸ್ಯ ಸಿಲುಕಿ । ಹಿಂಸೆಪಟ್ಟ ಪರಿಯಂತೆ ॥
ಮೋಸಹೋಗದ್ಹಾಗೆ ಜಗ । ದೀಶ ಪುರಂದರ ವಿಠಲನ ನೆನೆಯ ॥೩॥

ಧ್ಯಾನದರ್ಶನ

ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿರೆ ||ಪ||

ಮಸ್ತಕದಲಿ ಮಾಣಿಕದ ಕಿರೀಟ
ಕಸ್ತುರಿ ತಿಲಕವು ಹೊಳೆವ ಲಲಾಟ ||
ಹಸ್ತದಿ ಕೊಳಲನೂದುವ ಓರೆನೋಟ
ಕೌಸ್ತುಭದೆಡಬಲದೊಳು ಲೋಲಾಟ ||೧||

ಮಘಮಘಿಸುವ ಸೊಬಗಿನ ಸುಳಿಗುರುಳು
ಚಿಗುರು ತುಳಸಿವನ ಮಾಲೆಯಿಟ್ಟ ಕೊರಳು ||
ಉಗುರಿಗೆ ಹೊನ್ನ ಮುದ್ರಿಕೆಯಿಟ್ಟ ಬೆರಳು
ಸೊಬಗಿನ ನಾಭಿಯು ತಾವರೆ ಅರಳು ||೨||

ಉಡುದಾರ ಒಡ್ಯಾಣ ಸಕಲಾಭರಣ
ಬೆಡಗಿನ ಪೀತಾಂಬರ ರವಿಕಿರಣ ||
ಕಡಗ ಗಗ್ಗರ ಗೆಜ್ಜೆ ಇಕ್ಕಿದ ಚರಣ
ಒಡೆಯ ಶ್ರೀ ಪುರಂದರವಿಠಲನ ಕರುಣ ||೩||

ವಿನಾಯಕ ಸ್ತೋತ್ರ

ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು ।
ಆವ ಬಗೆ ಕಾರ್ಯತತಿ ಸಿದ್ಧಿಗೊಳಿಸಿ ।
ಮೋದದಿಂ ಸಲಿಸುವ ಮನದಿಷ್ಟವ ।
ಸಾಧುಜನರೆಲ್ಲ ಕೇಳಿ ಸಕಲ ಸುರರಿಂಗೆ ।
ಮಾಧವನೇ ನೇಮಿಸಿಪ್ಪ ಈ ಅಧಿಕಾರವ ।
ಆದರದಿಂದ ಅವರವರೊಳು ನಿಂದು ।
ಭೇದಗೊಳಿಸದೆ ಕಾರ್ಯ ಮಾಳ್ಪ ಪುರಂದರ ವಿಠಲ ||

ತುಳಸೀದಾಸ

ತುಳಸೀದಾಸರು ಹಿಂದೀ ಸಾಹಿತ್ಯದ ಸರ್ವಶ್ರೇಷ್ಠ ಕವಿ. ಇಷ್ಟೇ ಅಲ್ಲದೆ ಅವರು ದೊಡ್ಡ ಭಕ್ತ ಮತ್ತು ಸುಧಾರಕರೂ ಆಗಿದ್ದರು. ಅವರು ಭಗವಾನ್ ರಾಮಚಂದ್ರನ ಗುಣಗಳ ಪ್ರಚಾರವನ್ನು ಮಾಡಿದರು. ಅವರು ತಮ್ಮ ಜೀವನಕ್ಕೆ ಸಂಬಂಧಿಸಿದಂತೆ ಸ್ವಂತವಾಗಿ ಏನೂ ಹೇಳಿಲ್ಲ. ಆದರೆ ಅವರು ತಮ್ಮ ಪುಸ್ತಕಗಳಲ್ಲಿ ತಮ್ಮ ಜೀವನದ ವಿಷಯವಾಗಿ ಉಲ್ಲೇಖಿಸಿರುವ ಅಂಶಗಳಿಂದ ಮತ್ತು ಅವರ ಜೀವನಕ್ಕೆ ಸಂಬಂಧಿಸಿದ ಪ್ರಚಲಿತವಾದ ಕಿಂವದಂತಿಗಳ ಆಧಾರದ ಮೇಲೆ ಅವರ ಜೀವನದ ಘಟನೆಗಳನ್ನು ನಾವು ತಿಳಿಯಬಹುದು.

೧೬ನೆಯ ಶತಮಾನದ ಮಧ್ಯ ಭಾಗದ ಸಮಯ. ಭಾರತದ ಮೇಲೆ ಮೊಗಲರು ರಾಜ್ಯಭಾರ ಮಾಡುತ್ತಿದ್ದರು. ಬಾಂದಾ ಜಿಲ್ಲೆಯಲ್ಲಿ ರಾಜಾಪುರ ಎಂಬ ಗ್ರಾಮವಿತ್ತು. ಅಲ್ಲಿ ಆತ್ಮಾರಾಮನೆಂಬ ಅತ್ಯಂತ ಧಾರ್ಮಿಕನಾದ ಬ್ರಾಹ್ಮಣನಿದ್ದನು. ಅವನಿಗೆ ಪುತ್ರರತ್ನನು ಹುಟ್ಟಿದಾಗ ಅವನ ಆನಂದಕ್ಕೆ ತುದಿ ಮೊದಲಿರಲಿಲ್ಲ. ಅವನು ಮಗುವಿಗೆ "ರಾಮಜೋಲಾ" ಎಂದು ನಾಮಕರಣ ಮಾಡಿದನು. ಇವನೇ ದೊಡ್ಡವನಾಗಿ ತುಳಸೀದಾಸನಾದನು.

ತುಳಸೀದಾಸರು ಅತ್ಯಂತ ಪರೋಪಕಾರಿಯಾದ ವ್ಯಕ್ತಿ. ಅವರು ಉದಾರರೂ ದಾನಶೀಲರೂ ಆಗಿದ್ದರು. ಅವರು ತಮ್ಮ ಕೈಲಾದಷ್ಟು ಬಡಬಗ್ಗರಿಗೆ ಸಹಾಯ ಮಾಡಲು ಸಿದ್ಧರಾಗಿರುತ್ತಿದ್ದರು. ಒಂದು ಸಾರಿ ಬಡ ಬ್ರಾಹ್ಮಣನೊಬ್ಬನು ತನ್ನ ಮಗಳ ಮದುವೆಗಾಗಿ ಧನ ಸಹಾಯಕ್ಕಾಗಿ ಅವರ ಬಳಿಗೆ ಬಂದನು. ತುಳಸೀದಾಸರು ಅವನನ್ನು ತಮ್ಮ ಮಿತ್ರ, ಅಕಬರನ ದರಬಾರಿನ ಸರದಾರನಾದ ಕವಿ ಅಬ್ದುಲ್ ರಹೀಮ್ ಖಾನಖಾನಾ ಎಂಬುವನ ಹತ್ತಿರ ಕಳುಹಿಸಿಬಿಟ್ಟರು. ರಹೀಮನು ಬ್ರಾಹ್ಮಣನಿಗೆ ಅಪಾರ ಹಣವನ್ನು ಕೊಟ್ಟನು. ಬಳಿಕ ಅವನಿಗೆ ಒಂದು ಕಾಗದ ಬರೆದುಕೊಟ್ಟು ತುಳಸೀದಾಸನ ಬಳಿಗೆ ಕಳುಹಿಸಿದನು. ಆ ಕಾಗದದಲ್ಲಿ ತುಳಸಿಯನ್ನು ಹೊಗಳಿ ಹೀಗೆ ಬರೆದಿದ್ದಿತು.

ಗೋದ್ ಮೇ ಹುಲಸೀ ಫಿರೇ ತುಲಸಿ ಸೋ ಸುತ ಹೋಯ್ ।

ಇದರಿಂದ ತುಳಸೀದಾಸನ ತಾಯಿಯ ಹೆಸರು ಹುಲಸಿಯೆಂದು ಭಾವಿಸಬಹುದು. ತುಳಸೀದಾಸನು ತನ್ನ ಪುಸ್ತಕ "ಕವಿತಾವಳಿ"ಯಲ್ಲಿ ಹೀಗೆ ಬರೆದಿದ್ದಾನೆ:

ಮಾತು ಪಿತಾ ಜಗಜಾಯ ತಜ್ಯೋಂ, ವಿಧಿಹೂ ನ ಲಿಖೀ ಕಛು ಭಾಲ ಭಲಾಯೀ ।

ಮತ್ತು

ನ ಜಾಯೋ ಕುಲ ಮಂಗಳ ಬಧಾವನೋ ಬಜಾಯೋ ಸುನಿ,
ಭಯೋ ಪರಿತಾಪ ಪಾಪ ಜನನೀ ಜನಕ ಕೋ ।

"ತಂದೆ-ತಾಯಿಗಳು ಹುಟ್ಟಿದ ಕೂಡಲೆ ನನ್ನನ್ನು ತ್ಯಜಿಸಿಬಿಟ್ಟರು. ದೇವರು ಜನ್ಮತಾಳುತ್ತಲೆ ನನ್ನ ಅದೃಷ್ಟದಲ್ಲಿ ಕೆಟ್ಟದ್ದನ್ನು ಬರೆದುಬಿಟ್ಟನು. ಜನ್ಮ ಸಮಯದಲ್ಲಿ ಮಂಗಳವಾದ್ಯಗಳು ಮೊಳಗುತ್ತಿರಲು ನನ್ನ ತಂದೆತಾಯಿಗಳಿಗೆ ಅಪಾರ ದುಃಖವುಂಟಾಯಿತು."

ಬಾಲ್ಯದಲ್ಲಿ ಅವರಿಗೆ ತಂದೆತಾಯಿಗಳ ಸುಖ ದೊರಕಲಿಲ್ಲವೆಂಬುದು ವೇದ್ಯವಾಗಿಯೇ ಇದೆ. ಆದರೆ ತಂದೆತಾಯಿಗಳು ಅವರನ್ನು ತ್ಯಜಿಸಿದ ಬಗ್ಗೆ ಅನೇಕ ಕಿಂವದಂತಿಗಳು ಪ್ರಚಲಿತವಾಗಿವೆ.

ಅವರ ಜನನವು ಅಭುಕ್ತ ಮೂಲನಾ ನಕ್ಷತ್ರದಲ್ಲಿ ಉಂಟಾಗಿತ್ತೆಂದೂ, ಆದ್ದರಿಂದ ಅಶುಭವೆಂದು ತಿಳಿದು ತಂದೆ ತಾಯಿಗಳು ಅವರನ್ನು ಬಿಟ್ಟುಬಿಟ್ಟರೆಂದೂ ಕೆಲವರು ಹೇಳುತ್ತಾರೆ. ಅವರ ಗ್ರಹಗತಿ ತಂದೆಗೆ ಮೃತ್ಯುಕಾರಕವಾಗಿತ್ತೆಂದೂ, ಆದ್ದರಿಂದ ತಂದೆ ಅವರನ್ನು ತ್ಯಜಿಸಿಬಿಟ್ಟನೆಂದೂ ಮತ್ತೆ ಕೆಲವರು ಹೇಳುತ್ತಾರೆ. ಜನನದ ಸಮಯದಲ್ಲಿ ಅವರ ಅಲೌಕಿಕ ರೂಪವನ್ನು ನೋಡಿ ಅವರ ತಾಯಿ ಭಯಭೀತಳಾಗಿ ದಾಸಿಯೊಬ್ಬಳ ಸಂಗಡ ಅವರನ್ನು ತನ್ನ ಮಾವನ ಮನೆಗೆ ಕಳುಹಿಸಿಬಿಟ್ಟಳು. ಅಲ್ಲಿಯೇ ತುಳಸೀದಾಸರು ಚಿಕ್ಕಂದಿನಲ್ಲಿ ಬೆಳೆದರು ಎಂದೂ ಕೆಲವರು ಹೇಳುತ್ತಾರೆ.

ತುಳಸಿಗೆ ತಂದೆತಾಯಿಗಳ ಸುಖವು ಪ್ರಾಪ್ತವಿರಲಿಲ್ಲ, ಅವರ ಬಾಲ್ಯ ಬಹಳ ಬಡತನದಿಂದ ಕಳೆಯಿತು ಎಂಬ ಮಾತು ಸ್ಪಷ್ಟವಾಗಿದೆ. ಚುನಿಯಾ ಎಂಬ ದಾಸಿಯು ತುಳಸೀದಾಸರನ್ನು ಬಹಳ ಪ್ರೀತಿಯಿಂದ ಸಾಕಿದಳೆಂದು ಹೇಳುತ್ತಾರೆ. ಆದರೆ ಐದು ವರ್ಷಗಳಾದ ಮೇಲೆ ಅವಳೂ ಈ ಅಸಾರ ಜಗತ್ತನ್ನು ತ್ಯಜಿಸಿ

ಹೊರಟುಹೋದಳು ಮತ್ತು ಐದು ವರ್ಷದ ನಿಸ್ಸಹಾಯಕನಾದ ಬಾಲಕ ತುಳಸೀ ಧಾಸನು ಜಗತ್ತಿನಲ್ಲಿ ಒಬ್ಬಂಟಿಗನಾಗಿ ಅಲೆದಾಡುತ್ತಿದ್ದನು.

ಮನೆಮನೆಗೂ ಅಲೆದಾಡಿ ಭಿಕ್ಷಾಟನೆ ಮಾಡುತ್ತಿದ್ದ ತುಳಸಿಯ ಮೇಲೆ ಒಂದು ದಿನ ಅಕಸ್ಮಾತ್ತಾಗಿ ನರಹರಿ ಶಾಸ್ತ್ರಿ ಎಂಬ ವಿದ್ವಾಂಸನ ದೃಷ್ಟಿ ಬಿದ್ದಿತು. ಅವರು ಆ ಬಾಲಕನಲ್ಲಿ ಪ್ರಸುಪ್ತವಾಗಿದ್ದ ಪ್ರತಿಭೆಯನ್ನು ಗುರುತಿಸಿ ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಸ್ವಲ್ಪ ಕಾಲದ ಮೇಲೆ ಅವರು ಅವನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಿ ಉಪನಯನ ಸಂಸ್ಕಾರವನ್ನು ಮಾಡಿಸಿದರು. ತುಳಸಿಯು ಯಾರೂ ಕಲಿಸದೆಯೇ ಗಾಯತ್ರೀ ಮಂತ್ರೋಚ್ಚಾರಣೆ ಮಾಡಲು ಪ್ರಾರಂಭಿಸಿದುದನ್ನು ನೋಡಿ ಎಲ್ಲರಿಗೂ ಮಹದಾಶ್ಚರ್ಯವಾಯಿತು. ನರಹರಿ ಶಾಸ್ತ್ರಿಗಳು ತುಳಸಿಗೆ ಪಂಚ ಸಂಸ್ಕಾರಗಳನ್ನೂ ಮಾಡಿಸಿ ಅವರಿಗೆ ರಾಮಮಂತ್ರವನ್ನು ಉಪದೇಶ ಮಾಡಿದರು ಮತ್ತು ಸಂಸ್ಕೃತ ಸಾಹಿತ್ಯದ ಅಧ್ಯಯನವನ್ನು ಪ್ರಾರಂಭಿಸಿದರು.

ತುಳಸೀದಾಸರ ಬುದ್ಧಿ ಬಹಳ ಚುರುಕು. ಅವರು ಗುರುವಿನ ಉಪದೇಶ ಗಳನ್ನು ಬೇಗ ಗ್ರಹಿಸಿ ಕಂಠಪಾಠ ಮಾಡುತ್ತಿದ್ದರು. ಗುರುಗಳಿಗೆ ಅವರನ್ನು ಕಂಡರೆ ಬಹಳ ಸಂತೋಷ. ಇದಾದ ನಂತರ ಕಾಶಿಯಲ್ಲಿ ಅವರು ಶೇಷಸನಾತನರ ಒಟ್ಟಿಗಿದ್ದು ಹದಿನೈದು ವರ್ಷಗಳವರೆಗೆ ವೇದಪುರಾಣಗಳ ಅಧ್ಯಯನ ಮಾಡುತ್ತಿದ್ದ ರಂತೆ. ಒಂದು ದಿನ ತುಳಸಿಯ ಮನಸ್ಸು ಗ್ರಾಮದ ಮನೆಗೆ ಹೋಗಲು ಅವರನ್ನು ಬಹಳವಾಗಿ ಎಳೆಯಿತು. ತಮ್ಮ ಗುರುವಿನಿಂದ ಅಪ್ಪಣೆ ಪಡೆದು ಅವರು ತಮ್ಮ ಜನ್ಮಭೂಮಿಯ ಕಡೆಗೆ ಹೊರಟರು. ತಮ್ಮ ಗ್ರಾಮಕ್ಕೆ ಹೋಗಿ, ಅಲ್ಲಿ ತಮ್ಮ ಹಿಂದಿನ ಮನೆಯ ಸ್ಥಿತಿಯನ್ನು ನೋಡಿ ಅವರಿಗೆ ಬಹಳ ವಿಷಾದವಾಯಿತು. ತಾಯಿ ಮೊದಲೇ ಸ್ವರ್ಗಸ್ಥಳಾಗಿದ್ದಳು. ತಂದೆ ಸ್ವಲ್ಪ ಕಾಲದ ಕೆಳಗೆ ತೀರಿ ಕೊಂಡಿದ್ದರು. ಮನೆಯೆಲ್ಲಾ ಬಿದ್ದುಹೋಗಿ ಭಗ್ನಾವಸ್ಥೆಯಲ್ಲಿದ್ದಿತು. ಧೈರ್ಯ ಧಾರಣ ಮಾಡಿ ಅವರು ತಮ್ಮ ತಂದೆಯ ಶ್ರಾದ್ಧಾದಿ ಕರ್ಮಗಳನ್ನು ಮಾಡಿ ಅದೇ ಮುರುಕು ಮನೆಯನ್ನು ಸರಿಪಡಿಸಿಕೊಂಡು ಇರತೊಡಗಿದರು. ಅಲ್ಲಿ ಅವರು ಪ್ರತಿ ನಿತ್ಯವೂ ಶ್ರೀರಾಮನ ಕಥೆಯನ್ನು ಓದುತ್ತಿದ್ದರು. ಅದರಲ್ಲಿ ಏನು ಸಂಪಾದನೆಯಾಗುತ್ತಿತ್ತೋ, ಅದರಿಂದಲೇ ಅವರು ತಮ್ಮ ಜೀವನ ನಡೆಸುತ್ತಿದ್ದರು.

ತುಳಸೀದಾಸರ ವಿವಾಹದ ವಿಚಾರವಾಗಿ ಸರಿಯಾಗಿ ತಿಳುವಳಿಕೆಯಿಲ್ಲ. ಅವರ ಹೆಂಡತಿ ರತ್ನಾವಳಿಯ ಸಂಬಂಧವಾಗಿ ಪ್ರಚಲಿತವಾಗಿರುವ ಕಥೆ ಹೀಗಿದೆ :

ತುಳಸಿಗೆ ತನ್ನ ಪತ್ನಿಯೆಂದರೆ ಬಹಳ ಪ್ರೀತಿ. ಅವರು ಅವಳನ್ನು ತವರು ಮನೆಗೆ ಹೋಗಲು ಕೂಡ ಬಿಡುತ್ತಿರಲಿಲ್ಲ. ಒಂದು ದಿನ ತುಳಸಿಯು ಮನೆಯಲ್ಲಿಲ್ಲದ ವೇಳೆಯಲ್ಲಿ ರತ್ನಾವಳಿಯ ಸಹೋದರನು ಅವಳನ್ನು ಕರೆದುಕೊಂಡು ಹೋಗಲು ಬಂದನು. ರತ್ನಾವಳಿಯು ತಂದೆಯ ಮನೆಗೆ ಹೋಗುವ ಇಚ್ಛೆಯನ್ನು ತಡೆಯಲಾರದೆ ಹೋದಳು ಮತ್ತು ತನ್ನ ಪತಿಯ ಅಪ್ಪಣೆ ಪಡೆಯದೆಯೇ ಸಹೋದರನೊಡನೆ ಹೊರಟುಬಿಟ್ಟಳು. ಸಾಯಂಕಾಲದಲ್ಲಿ ತುಳಸಿ ಮನೆಗೆ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ. ರತ್ನಾವಳಿಯು ತವರುಮನೆಗೆ ಹೊರಟುಹೋದಳೆಂದು ತುಳಸಿಗೆ ಅಕ್ಕಪಕ್ಕದ ಮನೆಯವರಿಂದ ತಿಳಿಯಿತು.

ಕೃಷ್ಣಪಕ್ಷದ ರಾತ್ರಿಯ ಗಾಢಾಂಧಕಾರ ಮತ್ತು ವರ್ಷಾಕಾಲದ ದಿನಗಳು ! ಮಾರ್ಗದಲ್ಲಿ ನದಿಯಿದ್ದಿತು. ಮಳೆಯ ಕಾರಣದಿಂದ ಪ್ರವಾಹ ಪೂರ್ಣವಾಗಿದ್ದಿತು. ಆದರೆ ತುಳಸೀದಾಸರು ಲೆಕ್ಕಿಸದೆ, ಹಿಂದುಮುಂದು ನೋಡದೆ ಆ ನದಿಯನ್ನು ಈಜಿಕೊಂಡು ದಾಟಿ ಆ ಕರೆಯನ್ನು ತಲಪಿದರು. ಬಟ್ಟೆಬರೆಗಳು ತೊಯ್ದುಹೋಗಿವೆ ಎಂಬ ಅರಿವು ಕೂಡ ಅವರಿಗಿರಲಿಲ್ಲ. ಅದೇ ಸ್ಥಿತಿಯಲ್ಲಿ ತಮ್ಮ ಮಾವನ ಮನೆಗೆ ಹೋಗಿ ಮುಟ್ಟಿದರು. ಗಂಡನನ್ನು ಈ ಸ್ಥಿತಿಯಲ್ಲಿ ನೋಡಿ ರತ್ನಾವಳಿಗೆ ಬಹಳ ನಾಚಿಗೆ ಮತ್ತು ಕೋಪವುಂಟಾಯಿತು. ಅವಳು ತನ್ನ ಗಂಡನನ್ನು ಮೂದಲಿಸುತ್ತ ಹೀಗೆ ಹೇಳಿದಳು :

> ಅಸ್ಥಿ ಚರ್ಮಮಯ ದೇಹ ಮಮ, ತಾಮೇ ಐಸೀ ಪ್ರೀತಿ ।
> ಐಸೀ ಜೋ ಶ್ರೀರಾಮ ಮೇ ಹೋತ ನ ತಬ ಭವ ಭೀತಿ ॥

ಅರ್ಥಾತ್ ಅಸ್ಥಿ, ಚರ್ಮದಿಂದ ಕೂಡಿದ ನನ್ನ ದೇಹದ ಮೇಲೆ ಇಟ್ಟಿರುವ ಪ್ರೀತಿಯನ್ನು ಶ್ರೀರಾಮಚಂದ್ರನಲ್ಲಿ ಇಟ್ಟಿದ್ದರೆ ನೀವು ಭವಭೀತಿಯಿಂದ ಮುಕ್ತರಾಗುತ್ತಿದ್ದಿರಿ. ಈ ಕಥೆಯಲ್ಲಿ ಸತ್ಯಾಂಶವೆಷ್ಟಿದೆ ಎಂದು ಹೇಳುವುದು ಕಷ್ಟ. ಈ ದ್ವಿಪದಿ ತುಳಸೀದಾಸರು ರಚಿಸಿದ್ದಲ್ಲ ಎಂದು ಮಾತ್ರ ಹೇಳಬಹುದು.

ಪತ್ನಿಯ ಈ ಮೂದಲಿಕೆಯಿಂದ ತುಳಸಿಯ ಮನಸ್ಸು ಕಲಕಿಹೋಯಿತೆಂದು ಹೇಳುತ್ತಾರೆ. ಅವರಲ್ಲಿ ಸುಪ್ತಾವಸ್ಥೆಯಲ್ಲಿದ್ದ ವೈರಾಗ್ಯಭಾವ ಎಚ್ಚರಗೊಂಡಿತು.

ಅವರು ಒಡನೆಯೇ ಅಲ್ಲಿಂದ ಹಿಂತಿರುಗಿದರು, ಪ್ರಪಂಚದ ಮಾಯಾ ಮೋಹವನ್ನು ಬಿಟ್ಟು ರಾಮಭಕ್ತಿಯಲ್ಲಿ ತಮ್ಮ ಮನಸ್ಸನ್ನು ವಿನಿಯೋಗಿಸಿದರು. ಆಗಿನಿಂದ ಅವರು ಭಗವಾನ್ ರಾಮಚಂದ್ರನ ಭಜನೆಯಲ್ಲಿ ಲೀನರಾಗಿ ಯಾತ್ರಾಕ್ಷೇತ್ರಗಳಲ್ಲಿ ಸುತ್ತಾಡಲು ಪ್ರಾರಂಭಿಸಿದರು.

ತುಳಸೀದಾಸರ ಜೀವನವು ಅನೇಕ ಸಂಕಷ್ಟಗಳಿಂದ ಕೂಡಿದ್ದಿತು. ಅವರು ಬಾಲ್ಯದಲ್ಲಿಯೇ ಅನಾಥರಾಗಿದ್ದರು. ಭಿಕ್ಷೆ ಬೇಡಿ ಅವರು ತಮ್ಮ ಹೊಟ್ಟೆಹೊರ ಕೊಳ್ಳುತ್ತಿದ್ದರು. ದಾರಿದ್ರ್ಯದ ಕಾರಣದಿಂದ ಅವರು ಅನೇಕ ಬಾರಿ ಅಪಮಾನಿತ ರಾದರು. ಸಮಾಜದಲ್ಲಿ ಕೇವಲ ಧನಿಕರ ಪ್ರಭಾವವಿತ್ತು. ಹೊಟ್ಟೆಗೋಸ್ಕರ ಜನರು ಒಳ್ಳೆಯದು, ಕೆಟ್ಟದ್ದು ಏನನ್ನು ಬೇಕಾದರೂ ಮಾಡಲು ಸಿದ್ಧವಾಗಿದ್ದರು. ಅನೇಕರು ತಮ್ಮ ಮಕ್ಕಳನ್ನು ಕೂಡ ಮಾರಿಬಿಡುತ್ತಿದ್ದರು. ಸಮಾಜದ ಮುಂದೆ ಯಾವ ಉಚ್ಚ ಆದರ್ಶವೂ ಇರಲಿಲ್ಲ. ವಿದ್ಯಾವಂತರ ಪ್ರಪಂಚ ಸಾಮಾನ್ಯ ಜನರ ಪ್ರಪಂಚದಿಂದ ಬೇರೆಯಾಗಿ ಹೋಗಿದ್ದಿತು. ಅನೇಕ ಪಂಡಿತರ ಪರಿಹಾಸ್ಯಕ್ಕೆ ತುಳಸೀದಾಸರು ಗುರಿಯಾದರು. ಆದರೂ ಅವರು ನಿರಾಶರಾಗಲಿಲ್ಲ ಅವರ ಕವಿತೆಯಲ್ಲಿ ಆಶೆ ಮತ್ತು ವಿಶ್ವಾಸದ ಧ್ವನಿ ಕೇಳಬರುತ್ತದೆ. ಅವರು ರಚಿಸಿದ ಸಾಹಿತ್ಯದಿಂದ ತಿಳಿಯುವಂತೆ ಅವರ ಸ್ವಭಾವದಲ್ಲಿ ಮೂರು ವೈಶಿಷ್ಟ್ಯಗಳಿದ್ದುವು. ಅವರು ಬಹಳ ನಮ್ರ ಸ್ವಭಾವದವರು, ಭಾವುಕರು ಮತ್ತು ಶ್ರೀರಾಮಚಂದ್ರನಲ್ಲಿ ನಿಶ್ಚಲ ವಿಶ್ವಾಸವಿದ್ದವರು.

ಪ್ರಾರಂಭದಲ್ಲಿ ತುಳಸೀದಾಸರು ಸಂಸ್ಕೃತದಲ್ಲಿ ತಮ್ಮ ಕವಿತೆಗಳನ್ನು ರಚಿಸಿ ದರು ಎಂದು ಹೇಳುತ್ತಾರೆ. ಆಗಿನ ಕಾಲದ ವಿದ್ವಾಂಸರೆಲ್ಲಾ ಸಂಸ್ಕೃತದಲ್ಲೇ ತಮ್ಮ ಗ್ರಂಥಗಳನ್ನು ರಚಿಸುತ್ತಿದ್ದರು. ಆದರೆ ಸಾಧಾರಣ ಜನರಿಗೆ ಸಂಸ್ಕೃತದ ಅಭ್ಯಾಸವಿರಲಿಲ್ಲ. ಆದುದರಿಂದ ಲೋಕಕಲ್ಯಾಣಕ್ಕಾಗಿ ಅವರು ಜನತೆಯ ಭಾಷೆ ಯಲ್ಲಿಯೇ ತಮ್ಮ ಗ್ರಂಥಗಳನ್ನು ರಚಿಸಿದರು.

ಕಾಶಿಯಿಂದ ತುಳಸೀದಾಸರು ಅಯೋಧ್ಯೆಗೆ ಹೊರಟುಹೋದರು. ಮತ್ತು ೧೫೭೪ನೇ ಇಸವಿ ರಾಮನವಮಿ ದಿನ ಅವರು ತಮ್ಮ ರಾಮಚರಿತ ಮಾನಸವನ್ನು ರಚಿಸಲು ಪ್ರಾರಂಭಿಸಿದರು. ಈ ಗ್ರಂಥವು ಎರಡು ವರ್ಷ ಏಳು ತಿಂಗಳು ೨೬ ದಿನಗಳಲ್ಲಿ ಬರೆದು ಸಮಾಪ್ತವಾಯಿತು. ತುಳಸೀದಾಸರ ಜಗತ್ಪ್ರಸಿದ್ಧವಾದ

ಈ ಗ್ರಂಥವು ಅವಧೀ ಭಾಷೆಯಲ್ಲಿ ರಚಿತವಾಗಿದೆ. ಈ ಗ್ರಂಥವನ್ನು ಜನರು ರಾಮಾಯಣ ಎಂದು ಹೇಳುತ್ತಾರೆ.

ತುಳಸೀದಾಸರ ಸಮಯದಲ್ಲಿ ಜನರಲ್ಲಿ ಪರಸ್ಪರ ಭೇದಭಾವವು ಹರಡಿದ್ದಿತು. ಧರ್ಮದ ಕ್ಷೇತ್ರದಲ್ಲಿ ಒಬ್ಬನು ಶಿವನನ್ನು ಪೂಜಿಸಿದರೆ ಇನ್ನೊಬ್ಬನು ವಿಷ್ಣುವನ್ನು ಪೂಜಿಸುತ್ತಿದ್ದನು. ಜನರು ಪರಸ್ಪರ ಜಗಳವನ್ನು ಆಡುತ್ತಿದ್ದರು. ಆದುದರಿಂದ ತುಳಸಿಯು ಅವರಲ್ಲಿ ಶಾಂತಿಯನ್ನು ಏರ್ಪಡಿಸುವುದಕ್ಕಾಗಿ ಒಂದೇ ಭಗವಾನನ ಸ್ವರೂಪದಲ್ಲಿ ಅನೇಕ ದೇವಿದೇವತೆಗಳನ್ನು ಸಮಾವೇಶಗೊಳಿಸಬಹುದಾದ ಒಂದು ಮಾರ್ಗವನ್ನು ಹುಡುಕಿದರು. ಅವರು ರಾಮನನ್ನು ಭಗವಂತನ ಸ್ವರೂಪದವನನ್ನಾಗಿ ಮಾಡಿ ಅವನಿಂದ ಶಿವನ ಉಪಾಸನೆಯನ್ನು ಮಾಡಿಸಿದರು. ಮತ್ತು ಶಿವನನ್ನು ರಾಮಚಂದ್ರನ ಭಕ್ತನನ್ನಾಗಿ ಮಾಡಿ ಜನರಲ್ಲಿದ್ದ ಶಿವ-ವಿಷ್ಣು ಸಂಬಂಧವಾದ ಭಿನ್ನಾಭಿಪ್ರಾಯವನ್ನು ಸಾಕಾದಷ್ಟು ಹೋಗಲಾಡಿಸಿದರು.

ತುಳಸೀದಾಸರು ಹಿಂದೂ ಸಮಾಜದಲ್ಲಿ ಪ್ರಚಲಿತವಾಗಿದ್ದ ದೋಷಗಳನ್ನು ಮತ್ತು ಅತ್ಯಾಚಾರಗಳನ್ನು ಜನತೆಗೆ ಹೇಳಿದರು. ಜನರ ಮನಸ್ಸಿನಲ್ಲಿ ಅವರು ಭಗವಂತನ ವಿಚಾರವಾಗಿ ನಂಬಿಕೆ ಮತ್ತು ಆತ್ಮಬಲವನ್ನು ಉಂಟುಮಾಡಿದರು. "ರಾಮಚರಿತ ಮಾನಸ"ದ ಜೊತೆಗೆ ಇವರು ಬೇರೇ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕವಿತಾವಳಿ, ಗೀತಾವಳಿ, ಕೃಷ್ಣ ಗೀತಾವಳಿ, ವಿನಯ ಪತ್ರಿಕಾ ಮುಂತಾದವು ಮುಖ್ಯ.

ತುಳಸೀದಾಸರು ಸೂರದಾಸರ ಸಮಕಾಲೀನರು. ಇಬ್ಬರು ಕವಿಗಳು ಪರಸ್ಪರ ಭೇಟಿಯೂ ಆಗಿದ್ದರೆಂದು ಹೇಳುವರು. ಆಗ ಸೂರದಾಸರು ಬಹಳ ವೃದ್ಧರಾಗಿ ಹೋಗಿದ್ದರು. ಮತ್ತು ಬಹಳ ಕಡಿಮೆ ಕಾವ್ಯರಚನೆ ಮಾಡುತ್ತಿದ್ದರು. ತುಳಸೀದಾಸರು ಇನ್ನೂ ಯುವಾವಸ್ಥೆಯಲ್ಲಿದ್ದರು. ಮತ್ತು ತಮ್ಮ ಕಾವ್ಯಗಳನ್ನು ರಚಿಸಲು ಆಗ ತಾನೆ ಪ್ರಾರಂಭಿಸಿದ್ದರು.

ತುಳಸೀದಾಸರಿಗೆ ಚಿತ್ರಕೂಟ, ಅಯೋಧ್ಯೆ ಮತ್ತು ಕಾಶಿ ಈ ಸ್ಥಳಗಳು ಬಹಳ ಪ್ರಿಯವಾಗಿದ್ದುವು. ಇವರು ತಮ್ಮ ಕಡೆಯ ದಿನಗಳನ್ನು ಕಾಶಿಯಲ್ಲಿ ಕಳೆದರು. ಅಲ್ಲಿ ಇವರಿಗೆ ತೋಳು ನೋವುಂಟಾಗಿ ಬಹಳ ಬಾಧೆಪಡುತ್ತಿದ್ದರು. ಆ ಸಮಯದಲ್ಲಿ ಕಾಶಿಯಲ್ಲಿ ಯಾವುದೋ ಭಯಂಕರ ರೋಗ ಹರಡಿತ್ತೆಂದು

ಹೇಳುತ್ತಾರೆ. ಆ ರೋಗವು ಬಹುಶಃ ಪ್ಲೇಗ್ ಆಗಿರಬಹುದು. ಈ ರೋಗದಿಂದ ಅನೇಕ ಜನರು ನರಳಿ ನರಳಿ ಸಾಯುತ್ತಿದ್ದರು. ಸನ್ ೧೬೨೩ನೇ ಶ್ರಾವಣ ಮಾಸದಲ್ಲಿ ಅವರು ಕಾಲವಾದರು. ಅವರ ಸಾವಿನ ವಿಷಯದಲ್ಲಿ ಕೆಳಗೆ ಕೊಟ್ಟಿರುವ ದ್ವಿಪದಿ ಪ್ರಸಿದ್ಧವಾಗಿದೆ :—

ಸಂವತ್ ಸೋರಹ ಸೌಲಿಸೀ, ಅಸೀ ಗಂಗ ಕೇ ತೀರ್ ॥
ಸಾವನ ಶುಕ್ಲಾ ಸಪ್ತಮಿಾ, ತುಲಸೀ ತಜ್ಯೋ ಶರೀರ್ ॥

ಆದರೆ ಕೆಲವು ವಿದ್ವಾಂಸರು ಈ ಮೃತ್ಯು ತಿಥಿಯನ್ನು ಒಪ್ಪುವುದಿಲ್ಲ. ಕೃಷ್ಣ ಪಕ್ಷದ ತೃತೀಯೆಯ ದಿನ ಅವರು ಮೃತ್ಯುವನ್ನೈದಿದರು ಎಂದು ಅವರು ಹೀಗೆ ಹೇಳುತ್ತಾರೆ :—

ಸಂವತ್ ಸೋರಹ ಸೌಲಿಸೀ, ಅಸೀ ಗಂಗ ಕೇ ತೀರ್ ।
ಸಾವನ್ ಸ್ಯಾಮಾ ತೀಜ ಸನಿ, ತುಲಸೀ ತಜೇ ಶರೀರ್ ॥

ತುಳಸೀದಾಸರ ಕೆಳಗೆ ಕೊಟ್ಟಿರುವ ಪದವು ಗಾಂಧೀಜಿಯವರಿಗೆ ಬಹಳ ಪ್ರಿಯವಾಗಿತ್ತು. ಅವರು ತಮ್ಮ ಪ್ರಾರ್ಥನೆಯಲ್ಲಿ ಸಾಮಾನ್ಯವಾಗಿ ಇದನ್ನು ಹಾಡುತ್ತಿದ್ದರು.

ಜನನೀ ಸಮಜಾನಹಿ ಪರನಾರೀ । ಧನಪರಾಯ ವಿಷತೇ ವಿಷಭಾರೀ ॥
ಜೇ ಹರಷಹಿ ಪರಸಂಪತಿ ದೇಖೀ । ದುಖಿತ ಹೋಯಿ ಪರವಿಪತಿ ವಿಸೇಖೀ ॥
ಜಿನಹಿ ರಾಮ ತುಮ ಪ್ರಾಣ ಪಿಯಾರೇ । ಕಿನ್ಹಕೇ ಮನಸುಭ ಸದನ ತುಮ್ಹಾರೇ ॥

ಸ್ವಾಮಿ ಸಖಾ ಪಿತು ಮಾತು ಗುರು, ಜಿನ್ಹಕೇ ಸಬ್ ತುಮ ತಾತ ।
ಮನ ಮಂದಿರ ತಿನ್ಹಕೇ ಬಸಹು, ಸೀಯಸಹಿತ ದೊವು ಭ್ರಾತ ॥

(ರಾಮಚರಿತ ಮಾನಸದಿಂದ)

ಸೂರದಾಸ

ಹಿಂದಿಯ ಭಕ್ತಕವಿಗಳಲ್ಲಿ ಸೂರದಾಸರ ಸ್ಥಾನ ತುಲಸೀದಾಸರಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ. ಹಿಂದೀ ಸಾಹಿತ್ಯಕ್ಕೆ ಸೂರದಾಸರು ಕೊಟ್ಟ ಕಾಣಿಕೆ ಬಹಳ ಕಡಿಮೆ. ಆ ವಿಷಯವನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ.

ಸೂರದಾಸರು ಯಾವಾಗ ಹುಟ್ಟಿದ್ದು, ಯಾವಾಗ ತೀರಿಹೋದ್ದೆಂದು ಸರಿಯಾಗಿ ಹೇಳಬರುವುದಿಲ್ಲ. ಆದರೆ ಅಕ್ಬರ ಬಾದಶಹನ ಕಾಲದಲ್ಲಿದ್ದರೆಂಬುದರಲ್ಲಿ ಸಂದೇಹ ವಿಲ್ಲ. "ಆಯಿನೆ ಅಕ್ಬರಿ" ಎಂಬ ಗ್ರಂಥದಲ್ಲಿ ಅವರ ವಿಚಾರವಾಗಿ ಹೇಳಲಾಗಿದೆ. ಆದರೆ ಈಗ ಹೇಗೆ ಸ್ವಲ್ಪ ಸ್ವಲ್ಪ ಹಾಡಬಲ್ಲ ಕುರುಡನನ್ನು ಸೂರದಾಸನೆಂದು ಕರೆಯಲಾಗುತ್ತದೋ ಹಾಗೆಯೇ ಆ ಕಾಲದಲ್ಲಿಯೂ, ಅನೇಕ ಕುರುಡರೋ, ಒಂದು ಕಣ್ಣುಳ್ಳವರೋ ತಮ್ಮ ಭಜನೆ ಕೀರ್ತನೆಗಳಿಂದಾಗಿ ಸೂರದಾಸರೆಂದು ಕರೆಯಲ್ಪಡುತ್ತಿದ್ದರು. ಇವರಲ್ಲಿ ಮೂವರು ಸೂರದಾಸರು ಪ್ರಸಿದ್ಧರು.

ಈ ಸೂರದಾಸರಲ್ಲಿ ಒಬ್ಬರು ಬಿಲ್ವಮಂಗಲರು. ಅವರು ತಮ್ಮ ಎರಡು ಕಣ್ಣುಗಳನ್ನೂ ಸೂಜಿಯಿಂದ ಚುಚ್ಚಿಕೊಂಡು ಸೂರದಾಸನಾದರಂತೆ. ಎರಡನೆಯ ಸೂರದಾಸರ ನಿಜವಾದ ಹೆಸರು ಮದನ ಮೋಹನ. ಅವರು ಅಕ್ಬರನ ಆಸ್ಥಾನದಲ್ಲಿ ಹಾಡಿ ಕುಣಿಯುತ್ತಿದ್ದರು. ಅಲ್ಲದೆ ಸೂರಧ್ವಜರಾದ ಕಾರಣ ಸೂರ ನೆಂದು ಇವನನ್ನು ಕರೆಯತೊಡಗಿದರು. ಮೂರನೆಯ ಸೂರದಾಸರು ಹುಟ್ಟು ಕುರುಡರಾಗಿದ್ದರು. ಆದರೂ ಇವರು "ಸೂರಸಾಗರ" ಎಂಬ ಗ್ರಂಥವನ್ನು ರಚಿಸಿ ದ್ದರು. ಆದಕಾರಣ ಇವರ ಹೆಸರು ಹಿಂದೀ ಸಾಹಿತ್ಯದಲ್ಲಿ ಅಮರವಾಯಿತು. ಇವರ ಜನ್ಮ ಅಥವಾ ಮರಣದ ವಿಷಯದಲ್ಲಿ ಇಂದು ನಿಶ್ಚಯವಾಗಿ ಏನೂ ಹೇಳಬರುವು ದಿಲ್ಲ. ಆದರೆ ಈವರೆಗೆ ದೊರೆತ ಆಧಾರಗಳಿಂದ ಸೂರದಾಸರ ಜನ್ಮ ಕ್ರಿ. ಶ. ೧೪೮೩ರಲ್ಲಾಯಿತು. ಇವರು ಕ್ರಿ. ಶ. ೧೫೮೫ರಲ್ಲಿ ತೀರಿಕೊಂಡರೆಂದು ಹೇಳ ಬಹುದು. ಹೀಗೆ ಸೂರದಾಸರು ಹೆಚ್ಚು ಕಡಿಮೆ ೧೦೨ ವರ್ಷ ಬದುಕಿದ್ದರೆಂದು ಗೊತ್ತಾಗುತ್ತದೆ.

ಇಷ್ಟಲ್ಲದೆ ಸೂರದಾಸರು ಬರೆದ ಇನ್ನೆರಡು ಗ್ರಂಥಗಳೂ ದೊರೆಯುತ್ತವೆ. ಒಂದರ ಹೆಸರು "ಸೂರಸಾರಾವಲಿ" ಇನ್ನೊಂದರ ಹೆಸರು "ಸಾಹಿತ್ಯಲಹರೀ" ಎಂದು.

ಸಾಹಿತ್ಯಲಹರಿಯಲ್ಲಿ ಸೂರದಾಸರು ತಮ್ಮ ವಂಶದ ಸಂಕ್ಷೇಪ ಪರಿಚಯ ಕೊಟ್ಟಿದ್ದಾರೆ. ಇದು ಪೌರಾಣಿಕ ಶೈಲಿಯಲ್ಲಿದೆ. ಇದರಲ್ಲಿ ಒಮ್ಮೆ ಪೃಥು ಮಹಾರಾಜ ಯಜ್ಞ ಮಾಡಿದ್ದ. ಇದರಿಂದ ಒಬ್ಬ ದಿವ್ಯಪುರುಷ ಎದ್ದು ಬಂದ. ಬ್ರಹ್ಮ ಇವನಿಗೆ ಬ್ರಹ್ಮರಾಯ ಎಂದು ಹೆಸರಿಟ್ಟ. ಈ ಬ್ರಹ್ಮರಾಯನ ವಂಶದಲ್ಲಿ ಚಂದ್ರಭಟ್ಟನೆಂಬುವನು ಹುಟ್ಟಿದ. ಇವನಿಗೆ ಚಂದ್ರವರದಾಯಿ ಎಂದೂ ಹೆಸರಿತ್ತು. ದೆಹಲಿಯ ಚಕ್ರವರ್ತಿ ಪೃಥ್ವೀರಾಜನ ಆಸ್ಥಾನದಲ್ಲಿ ಚಂದ್ರಭಟ್ಟನಿಗೆ ತುಂಬ ಮನ್ನಣೆ ಇತ್ತು. ಇವನು "ಪೃಥ್ವೀರಾಜರಾಸ" ಎಂಬ ಗ್ರಂಥವನ್ನು ರಚಿಸಿದ. ಈ ಚಂದ್ರಭಟ್ಟನ ವಂಶದಲ್ಲಿ ಹರಚಂದ್ರನೆಂಬುವನು ಜನ್ಮ ತಾಳಿದ. ಈ ಹರಚಂದ್ರನೇ ಸೂರದಾಸರ ಪಿತಾಮಹ. ಸೂರದಾಸರ ನಿಜವಾದ ಹೆಸರು ಸೂರಜ್‌ಚಂದ್ರರೆಂದು. ಇವರಿಗೆ ಏಳು ಮಂದಿ ಸಹೋದರರಿದ್ದರು. ಇವರಲ್ಲಿ ಸೂರದಾಸ್ ಎಲ್ಲರಿಂದ ಕಿರಿಯವರು. ಹುಟ್ಟುಕುರುಡರು. ಇವರ ಆರು ಮಂದಿ ಸಹೋದರರು ಯುದ್ಧದಲ್ಲಿ ಮಡಿದರು. ಆಮೇಲೆ ಸೂರಜಚಂದ್ರರು ವಿರಕ್ತರಾಗಿ ಒಬ್ಬರೇ ಮನೆಯಿಂದ ಹೊರಟುಹೋದರು. ಕುರುಡರಾದ ಕಾರಣ ರಸ್ತೆಯಲ್ಲಿ ದಾರಿಗಾಣದೆ ಒಂದು ಬಾವಿಯಲ್ಲಿ ಬಿದ್ದರು. ಏಳು ದಿನಗಳವರೆಗೆ ಅಲ್ಲೇ ಬಿದ್ದಿದ್ದರು. ಏಳನೇ ದಿನ ಭಗವಾನ್ ಕೃಷ್ಣ ಅವರನ್ನು ಮೇಲಕ್ಕೆತ್ತಿ ದಿವ್ಯದೃಷ್ಟಿಯಿತ್ತ ನೆಂದು ಹೇಳಿಕೆ ಇದೆ. ಅಂದಿನಿಂದ ಸೂರದಾಸರು ವ್ರಜಭೂಮಿಯಲ್ಲಿ ವಾಸಮಾಡ ತೊಡಗಿ ಭಗವಾನ್ ಕೃಷ್ಣನ ಭಕ್ತಿಯಲ್ಲಿ ಲೀನರಾದರು ಎಂದೂ ಹೇಳಲಾಗಿದೆ.

ಮೇಲಿನ ಕತೆಯನ್ನು ಸೂರದಾಸರೇ ಹೇಳಿದ್ದು. ಈ ಕತೆಯ ಪೌರಾಣಿಕತೆಯ ಮುಸುಕನ್ನು ತೆಗೆದು ಊಹಿಸಿ ನೋಡಿದರೆ, ಸೂರದಾಸರ ಹಿರಿಯರು ಬ್ರಹ್ಮ ಅಂದರೆ ಜ್ಞಾನ ಪ್ರಚಾರ ಮಾಡುತ್ತಿದ್ದ ಬ್ರಾಹ್ಮಣರಾಗಿರಬೇಕೆಂದು ಊಹಿಸ ಬಹುದು. ಸೂರಜ್‌ಚಂದ್ರ ಹುಟ್ಟುಕುರುಡರಾಗಿದ್ದು ಅಜ್ಞಾನದ ಕೆಸರಲ್ಲಿ ಮುಳುಗಿದ್ದರು. ಭಗವಾನ್ ಕೃಷ್ಣ ಅವರ ಮೇಲೆ ಕರುಣೆಯಿಂದ, ಅವರಿಗೆ ದಿವ್ಯ ದೃಷ್ಟಿ ಇತ್ತು ಅಜ್ಞಾನದ ಕೆಸರಿನಿಂದ ಮೇಲಕ್ಕೆತ್ತಿದ. ಹೀಗೆ, ದಿವ್ಯದೃಷ್ಟಿ ಹೊಂದಿ

ಅವರು ಒಂದು ಲಕ್ಷ ಪದ್ಯಗಳನ್ನು ರಚಿಸಿದರು. ಒಂದು ಲಕ್ಷ ಪದ್ಯಗಳನ್ನು ಬರೆದ ಬಳಿಕ ಅವರು 'ಸೂರ ಸಾರಾವಲಿ'ಯಲ್ಲಿ ತಾನೇ—

ತಾ ದಿನ ತೇಂ ಹರಿ ಲೀಲ ಗಾಹೇ ಏಕ ಲಕ್ಷ ಪದ ಬಂದ್

ಎಂದು ಬರೆದಿದ್ದಾರೆ.

ಆದರೆ ಸೂರದಾಸರು ಬರೆದ ಏಳು ಸಾವಿರ ಪದ್ಯಗಳು ಸಿಗುತ್ತವೆ. 'ಏಕಲಕ್ಷ ಪದ' ಅಂದರೆ ಒಂದು ಲಕ್ಷ ಪದಗಳು ಇವರ ಪದ್ಯಗಳಲ್ಲಿವೆಯೆಂದು ಅರ್ಥ ಮಾಡಲೂಬಹುದು. ಆದರೂ ಏಳು ಸಾವಿರ ಪದ್ಯಗಳೆಂದರೆ ಏನೂ ಕಡಿಮೆ ಯಲ್ಲ. ಇವರ ಸಂಗ್ರಹಕ್ಕೆ 'ಸೂರಸಾಗರ' ಎಂಬ ಹೆಸರು ಸಾರ್ಥಕವಾಗಿದೆ.

ಸೂರದಾಸರು ಅಕ್ಬರ ಬಾದಶಾಹನ ಕಾಲದಲ್ಲಿದ್ದರೆಂದು ಮೇಲೆ ಹೇಳಲಾಗಿದೆ. ಒಮ್ಮೆ ಅಕ್ಬರ ತಾನಸೇನನಿಂದ ಸೂರದಾಸರ ಹಾಡನ್ನು ಕೇಳಿ, ಅವರನ್ನು ಭೇಟಿಯಾಗಬೇಕೆಂದು ಬಯಸಿದನಂತೆ. ಆಗ ಸೂರದಾಸರು ಮಥುರಾದಲ್ಲಿದ್ದರು. ಅಕ್ಬರ ಅಲ್ಲಿ ಹೋಗಿ ಸೂರದಾಸರನ್ನು ಭೇಟಿಯಾದರೆಂದು ಸೂರದಾಸ ಸಾಹಿತ್ಯದಲ್ಲಿ ವಿದ್ವಾಂಸರಾದವರು ಹೇಳುತ್ತಾರೆ. ಸೂರದಾಸರು ಮತ್ತು ಅಕ್ಬರ ಇವರೊಳಗಿನ ಭೇಟಿ ದೆಹಲಿಯಲ್ಲಾಗಿತ್ತೆಂದು ಕೆಲವು ವಿದ್ವಾಂಸರ ಮತ. ಅಕ್ಬರ ಕೋಟೆ ಮತ್ತು ಅಣೆಕಟ್ಟು ಕಟ್ಟಿಸಲು ಗಯೆಗೆ ಹೋದಾಗ ಅಲ್ಲಿ ಸೂರದಾಸರ ಭೇಟಿಯಾಯಿತೆಂದು ಇನ್ನೂ ಕೆಲವರ ಅಭಿಪ್ರಾಯ.

ಅಕ್ಬರನಿಗೆ ಬಿಲ್ವಮಂಗಲ ಸೂರದಾಸರಿಂದಾಗಲಿ ಮದನಮೋಹನ ಸೂರದಾಸ ರಿಂದಾಗಲಿ ಸಂತೋಷವಾಗಿದ್ದಿಲ್ಲವೆಂದು ತಿಳಿದು ಬಂದಿದೆ. "ಸೂರಸಾಗರ"ದ ಕರ್ತೃವಾದ ಸೂರದಾಸರ ಕೀರ್ತಿ ಅಕ್ಬರನ ಕಿವಿಗೆ ತಲುಪಿದಾಗ ಅವರನ್ನು ದೆಹಲಿಗೆ ಕರೆದು ತನ್ನ ಆಸ್ಥಾನದಲ್ಲಿರಿಸಬೇಕೆಂದು ಅಕ್ಬರ ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಸೂರದಾಸರು ತನ್ನ ಜೀವನವನ್ನು ಭಗವಾನ್ ಕೃಷ್ಣನ ಸೇವೆ ಯಲ್ಲಿ ಅರ್ಪಣೆ ಮಾಡಿದ್ದರು.

ಆ ಕಾಲದಲ್ಲಿ ಒಬ್ಬ ಮಹಾಪುರುಷರಿದ್ದರು. ಅವರು ಸೂರದಾಸರಿಗೆ ಅಕ್ಬರನಿಗಿಂತಲೂ ದೊಡ್ಡವರಾಗಿದ್ದರು. ಸೂರದಾಸರಿಗೆ ಅವರ ಸೇವೆಯಲ್ಲಿರು ವುದು ತುಂಬ ಇಷ್ಟವಾಗಿತ್ತು. ಆ ಮಹಾಪುರುಷರೇ ವಲ್ಲಭಾಚಾರ್ಯರು. ಅವರು ವೈಷ್ಣವ ಧರ್ಮದ ಮಹಾಪ್ರಚಾರಕರಾಗಿದ್ದರು. ಅವರು ದಕ್ಷಿಣದಲ್ಲಿ ದಿಗ್ವಿಜಯ

ಮಾಡಿ, ಉತ್ತರಕ್ಕೆ ಬಂದಾಗ, ಸೂರದಾಸರ ಕೀರ್ತಿಯನ್ನು ಕೇಳಿ ಅವರ ಭೇಟಿಗೆ ಬಂದರು. ಆ ಸಮಯದಲ್ಲಿ ಸೂರದಾಸರು ಗೋಘಾಟಿನಲ್ಲಿ ಸನ್ಯಾಸಿಯಾಗಿದ್ದರು. ಈ ಸ್ಥಳ ಆಗ್ರಾ ಮತ್ತು ಮಥುರೆಯ ನಡುವೆ ಇದೆ. ವಲ್ಲಭಾಚಾರ್ಯರು ತಮ್ಮ ಇಷ್ಟದೇವತೆಯ ಆರಾಧನೆಗಾಗಿ ಗೋವರ್ಧನದಲ್ಲಿ ಒಂದು ಚಿಕ್ಕ ದೇವಾಲಯ ವನ್ನು ಕಟ್ಟಿಸಿದ್ದರು. ಆ ದೇವಾಲಯ "ಶ್ರೀನಾಥ ಮಂದಿರ" ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಇದರಲ್ಲಿ ಪೂಜೆ, ಆರಾಧನೆಗಳಿಗೆ ಎಲ್ಲಾ ಏರ್ಪಾಡಿತ್ತು. ಕೀರ್ತನೆಗೆ ಏರ್ಪಾಡು ಮಾಡುವುದು ಬಾಕಿ ಇತ್ತು. ಇದರಿಂದಲೇ ಸೂರದಾಸರ ಭೇಟಿಗಾಗಿ ವಲ್ಲಭಾಚಾರ್ಯರು ಗೋಘಾಟಕ್ಕೆ ತಲಪಿದರು.

ಆಚಾರ್ಯರು ಸೂರದಾಸರನ್ನು ಹತ್ತಿರ ಕುಳ್ಳಿರಿಸಿ ಕೀರ್ತನೆ ಮಾಡಲು ಹೇಳಿದರು. ಸೂರದಾಸರು "ಹೋಂ ಹರಿ ಸಬ್ ಪತಿತನ್ ಕೋ ನಾಯಕ್" ಎಂಬ ಪದ್ಯವನ್ನು ಹಾಡಿದರು.

ಆಗ ಆಚಾರ್ಯರು ಸೂರನಾಗಿ ಹೀಗೆ ಹಾಡುತ್ತೀಯೇನು? ಭಗವಂತನ ಯಾವುದಾದರೂ ಒಂದು ಲೀಲೆಯನ್ನು ಏಕೆ ವರ್ಣಿಸುವುದಿಲ್ಲ? ಎಂದರು.

ಇದಕ್ಕೆ ಸೂರದಾಸರು "ಮಹಾರಾಜ್ ನನಗೆ ಏನೂ ತಿಳಿಯುವುದಿಲ್ಲ" ಎಂದರು.

ಆಮೇಲೆ ಆಚಾರ್ಯರು ಸೂರದಾಸರಿಗೆ ದೀಕ್ಷೆ ಕೊಟ್ಟರು. ಅಲ್ಲದೆ ಭಾಗವತದ ಕೆಲವು ಭಾಗವನ್ನು ಶ್ರವಣ ಮಾಡಿಸಿದರಲ್ಲದೆ "ಪುರುಷೋತ್ತಮ ಸಹಸ್ರನಾಮ"ವನ್ನು ಶ್ರವಣ ಮಾಡಿಸಿದರು. ಈಗ ಸೂರದಾಸರ ಹೃದಯದಲ್ಲಿ ಭಗವಂತನ ಲೀಲೆ ಸಂಪೂರ್ಣವಾಗಿ ಖಚಿತವಾಯಿತು. ಸೂರದಾಸರು ಆಚಾರ್ಯ ರಿಂದ ದೀಕ್ಷೆ ಪಡೆದ ಮೇಲೆ ತನ್ನ ಶಿಷ್ಯರಿಗೆಲ್ಲ ದೀಕ್ಷೆ ಕೊಡಿಸಿ ಅವರೊಡನೆ ವ್ರಜಕ್ಕೆ ಹೋದರು. ಗೋವರ್ಧನಕ್ಕೆ ತಲಪಿದ ಮೇಲೆ ಸೂರದಾಸರಿಗೆ ಆಚಾರ್ಯರು ಶ್ರೀನಾಥಮಂದಿರದ ದರ್ಶನ ಮಾಡಿಸಿದರು. ಆಗ ಸೂರದಾಸರು "ಅಬ್ ಮೈ ನಾಚ್ಯೋ ಬಹುತ್ ಗೋಪಾಲ್" ಎಂಬ ಗೀತೆಯನ್ನು ಹಾಡಿದರು.

ಇದನ್ನು ಕೇಳಿ ಆಚಾರ್ಯರಿಗೆ ತುಂಬ ಸಂತೋಷವಾಗಿ "ಸೂರದಾಸ್, ಈಗ ನಿನ್ನಲ್ಲಿ ಅಜ್ಞಾನದ ಲೇಶವೂ ಇಲ್ಲ" ಎಂದರು.

ಇಷ್ಟರವರೆಗೆ ಸೂರದಾಸ ವಿನಯಮಗ್ನನಾಗಿದ್ದ. ತಮ್ಮನ್ನು ಈಶ್ವರನ

ದಾಸನನ್ನಾಗಿಸಿಕೊಂಡು ಭಕ್ತಿ ಗೀತೆಗಳನ್ನು ರಚಿಸಿ ಹಾಡುತ್ತಿದ್ದರು. ಈಗ ಭಗವಾನ್ ಕೃಷ್ಣನ ಜನ್ಮ ಹಾಗು ಲೀಲೆಗಳನ್ನು ವರ್ಣಿಸತೊಡಗಿದರು.

ಸೂರದಾಸರ ಪದಗಳನ್ನೆಲ್ಲ ಎರಡು ವಿಭಾಗಗಳನ್ನಾಗಿ ಮಾಡಬಹುದು. ಪ್ರಥಮ ಭಾಗದಲ್ಲಿ ವಿನಯದ ಪದ್ಯಗಳನ್ನು ಸೇರಿಸಬಹುದು. ಇವೆಲ್ಲವೂ ವಲ್ಲಭಾಚಾರ್ಯರ ಭೇಟಿಯ ಮೊದಲು ಬರೆದುವು. ದ್ವಿತೀಯ ಭಾಗದಲ್ಲಿ ಹರಿಲೀಲೆಗಳ ಕುರಿತಾದ ಪದ್ಯಗಳಿವೆ. ಇವು ವಲ್ಲಭಾಚಾರ್ಯರ ಭೇಟಿಯಾದ ನಂತರ ರಚಿತವಾದುವು. "ಸೂರಸಾಗರ"ದಲ್ಲಿ ಸಾವಿರ ಪದ್ಯಗಳಿವೆ. ಇವೆಲ್ಲ ಹರಿಲೀಲಾ ಪದ್ಯಗಳು. ಇವನ್ನು ಇಂದು ಕೂಡ ಭಜನೆಗಳ ರೂಪದಲ್ಲಿ ಹಾಡುತ್ತಾರೆ.

ಸೂರದಾಸರು ಸ್ವಾಮಿ ಅಥವಾ ಸಖನ ರೂಪದಲ್ಲಿ ಮಾತ್ರವಲ್ಲ, ಪುತ್ರನ ರೂಪದಲ್ಲಿಯೂ ಭಗವಂತನನ್ನು ಆರಾಧಿಸಿದ್ದರು. ಆತನ ಆರಾಧನೆ ವಾತ್ಸಲ್ಯರಸ ದಿಂದ ತುಂಬಿದೆ. ಭಗವಾನ್ ಕೃಷ್ಣನ ವರ್ಣನೆಯನ್ನು ಸೂರದಾಸರು ಅಷ್ಟು ಸೊಗಸಾಗಿ ಮಾಡಿದ್ದಾರೆ. ಇದನ್ನು ಕೇಳಿದರೆ ಮುದ್ದು ಮಕ್ಕಳ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ನಾವು ಸಾಧಾರಣ ಬಾಲಕನಲ್ಲಿಯೂ ಭಗವಂತನ ದರ್ಶನ ಮಾಡತೊಡಗುತ್ತೇವೆ. ಸೂರದಾಸರು ಈ ಪದ್ಯಗಳಲ್ಲಿ ಭಾರತೀಯ ಸಮಾಜ ದಲ್ಲಿ ಬಾಲಕ-ಬಾಲಕಿಯರಿಗೆ ತುಂಬ ಮಹತ್ವ ಕೊಟ್ಟಿದ್ದಾರೆ. ಇದರಿಂದ ತಂದೆ ತಾಯಿಗಳು ತಮ್ಮ ಮುದ್ದು ಮಕ್ಕಳಲ್ಲಿಯೂ ಈ ಗುಣಗಳನ್ನೂ ಕಾಣ ತೊಡಗುತ್ತಾರೆ. ಹೀಗೆ ಈ ಪದ್ಯಗಳಿಂದ ಮಕ್ಕಳನ್ನು ಶ್ರೇಷ್ಠ ನಾಗರಿಕರನ್ನಾಗಿ ಮಾಡುವುದಕ್ಕೆ ಸಹಾಯ ದೊರೆಯುತ್ತದೆ.

ಸೂರದಾಸರು ತಮ್ಮ ಸಮಸ್ತ ಜೀವನವನ್ನೂ ಶ್ರೀ ಕೃಷ್ಣ ಭಗವಂತನ ಸೇವೆಯಲ್ಲಿ ತೊಡಗಿಸಿದ್ದರು. ಅವರು ಬೆಳಗ್ಗಿನಿಂದ ಸಂಜೆಯತನಕ ಕೃಷ್ಣನ ಸ್ವರೂಪ-ಪೂಜೆಯಲ್ಲಿ ತನುಮನಗಳನ್ನು ಅರ್ಪಿಸುತ್ತಿದ್ದರು. ವೈಷ್ಣವರು ಈ ಪೂಜಾವಿಧಿಯನ್ನು "ಪುಷ್ಟಿಮಾರ್ಗ" ಎನ್ನುತ್ತಾರೆ. ಮಹಾತ್ಮಾ ಸೂರದಾಸರು ವೈಷ್ಣವರ ಸೇವಾ-ಭಾವದ ಗೀತೆಗಳಲ್ಲಿ ಪರಿಣರಾಗಿದ್ದರು. ಅವರು ತಮ್ಮ ಗೀತೆಗಳಲ್ಲಿ ತಮ್ಮನ್ನು ಯಶೋದೆಯನ್ನಾಗಿ ಕಲ್ಪಿಸಿಕೊಂಡು ಬಾಲಕೃಷ್ಣನನ್ನು ಎಬ್ಬಿಸುತ್ತಾರೆ, ಕುಣಿಸುತ್ತಾರೆ, ಆಡಿಸುತ್ತಾರೆ—

ಜಾಗಿಯೇ ಗುಪಾಲ್ ಲಾಲ್ ಭೋರ್ ಭಯೋ ಪ್ಯಾರೇ

*　　　　*　　　　*

ಅಬ್‌ಯಿಸಾ ಯಶೋದಾ ಮಾಖನ್ ಲಾಯಿಸಾ

*　　　　*　　　　*

ಜಸುಮತಿ ಜಬಹಿ ಕಹ್ಯೋ ಅನ್ಹಾವನ್ ರೋಯ್
ಗಯೋ ಹರಿ ಲೋಟತ್ ರೀ

*　　　　*　　　　*

ಜೇಂವತ್ ಕಾನ್ಹ ನಂದ ಕೀ ಕನಿಯಾ

ಸೂರ ಎಂದರೆ ಸೂರ್ಯನೆಂದರ್ಥ. "ಸೂರಸಾಗರ"ದ ಪದ್ಯಗಳಲ್ಲಿ ಸೂರದಾಸ ತನ್ನ ಹೆಸರನ್ನು "ಸೂರ್" "ಸೂರಜ್" ಅಥವಾ "ಸೂರಜ್ ದಾಸ್" ಎಂದು ಕೊಟ್ಟಿದ್ದರು. ಸೂರ ಶಬ್ದ ಚಿಕ್ಕದಾದ ಕಾರಣ ಎಲ್ಲಕ್ಕಿಂತ ಹೆಚ್ಚು ಪ್ರಸಿದ್ಧವಾಯಿತು. ಅಲ್ಲದೆ ಆತ ಹುಟ್ಟುಕುರುಡನಾದ ಕಾರಣ ಕುರುಡ ಪದಕ್ಕೆ ಪರ್ಯಾಯ ಪದವಾಗಿ ಪರಿಣಮಿಸಿತು. ಇಂದು ಕೂಡ ಕುರುಡನನ್ನು ಸೂರದಾಸ ಎಂದರೆ ಆತನಿಗೆ ತುಂಬ ಸಂತೋಷವಾಗುತ್ತದೆ. ಹೀಗೆ ಸೂರದಾಸ ಎಂಬ ಪದ ಕಣ್ಣಿದ್ದವರಿಗೆ ಸಂತೋಷವನ್ನುಂಟುಮಾಡುವಂತೆ ಜೀವನದಲ್ಲಿ ಕಣ್ಣಿಲ್ಲದವರಿಗೇ ದಾರಿ ತೋರಿಸುತ್ತದೆ. ಈತನ ಜೀವನದಿಂದ ಕಣ್ಣಿಲ್ಲದಿದ್ದರೂ ಭಗವಂತನ ಭಜನೆ ಮಾಡಿ ತನ್ನ ಜೀವನವನ್ನು ಸಾರ್ಥಕಗೊಳಿಸಲು ಸಾಧ್ಯವಿದೆಯೆಂದು ತಿಳಿಯುತ್ತದೆ